ಸಂವಾದ

ಏಪ್ರಿಲ್ ೨೦೦೭ ರೂ. ೨೦

ಗೋದ್ರಾ ಹತ್ಯಾಕಾಂಡ:
ಐದು ವರ್ಷಗಳ ಬಳಿಕ

ಕಾವೇರಿ ವಿವಾದ
ಕೊನೆಗೂ ಕೊನೆ ಹೇಗೆ?

ಅಂಬೇಡ್ಕರ್ ಹುಟ್ಟುಹಬ್ಬದ ನೆನಪಿನಲ್ಲಿ...

ಕಂಬಾಲಪಲ್ಲಿಯ ಸುಟ್ಟ ಬೂದಿಯಲ್ಲಿ



ನ್ಯಾಯ ಚಿಗುರಲಿ

ಸಂವಾದ

ಮಾಸ ಪತ್ರಿಕೆ

ಸಂಪುಟ ೫ ಸಂಚಿಕೆ ೬
ಏಪ್ರಿಲ್ ೨೦೦೭

ಸಂಪಾದಕ :
ಇಂದೂಧರ ಹೊನ್ನಾಪುರ

ಸಂಪಾದಕೀಯ ಬಳಗ :
ಡಾ॥ ನಟರಾಜ್ ಹುಳಿಯಾರ್
ಪ್ರೊ॥ ರಹಮತ್ ತರೀಕೆರೆ
ಡಾ॥ ಕೆ. ಪುಟ್ಟಸ್ವಾಮಿ
ಡಾ॥ ಡಿ. ಡೊಮಿನಿಕ್
ಬಿ.ಯು.ಸುಮಾ
ಡಾ॥ ಜೆ. ಪಾಂಡುನಾಯಕ್
ಎನ್. ಕೆ. ಹನುಮಂತಯ್ಯ

ವಿಳಾಸ: ಸ್ಫೂರ್ತಿಧಾಮ
ಅಂಜನಾನಗರ, ಮಾಗಡಿ ರಸ್ತೆ.
ವಿಶ್ವನೀಡಂ ಅಂಚೆ
ಬೆಂಗಳೂರು-೫೬೦ ೦೯೧
© ೨೩೨೮೭೯೪೩/೯೪೪೮೦ ೪೮೩೦೬
ಇ-ಮೇಲ್ : samvaada@hotmail.com
honnapura@yahoo.co.in

PRINTED AND PUBLISHED BY
S.R. GOVINDU
ON BEHALF OF SPOORTHIDHAMA
ANJANA NAGAR, MAGADI ROAD
VISHWANEEDAM POST
BANGALORE - 560 091
© 080-23287943, 94480 48306
e-mail: samvaada@hotmail.com
honnapura@yahoo.co.in

EDITOR :
INDUDHARA HONNAPURA

ಒಳಪುಟಗಳಲ್ಲಿ

- ಪತ್ರಗಳು ೩
- ಹೊಸ ಪುಸ್ತಕ ೪
- ಅಂತರಂಗ ೫
- ಗೋಧ್ರಾ ಹತ್ಯಾಕಾಂಡ: ಐದು ವರ್ಷಗಳ ಬಳಿಕ ೬
  - ಸತ್ಯಪ್ರಕಾಶ್ ಎಂ. ಆರ್.
- ಇಂಗ್ಲಿಷ್ ಭಾಷಾ ಕಲಿಕೆ ೮
  - ಮೇಟಿಮಲ್ಲಿಕಾರ್ಜುನ
- ಕರಾಳವಾಗಲಿದೆ ಗ್ರಾಮಾಂತರ ಪ್ರದೇಶ ೧೦
  - ಡಾ॥ ಅಮರೇಶ ನುಗಡೋಣಿ



- ಕಂಬಾಲಪಲ್ಲಿಯ ಸುಟ್ಟ ಬೂದಿಯಲ್ಲಿ ನ್ಯಾಯ ಚಿಗುರಲಿ ೧೪
- ಅಸ್ಪೃಶ್ಯರು ಮತ್ತು ಸಾಮಾಜಿಕ ನ್ಯಾಯ ಚಿಂತನೆಗಳು ೧೮
  - ಲಕ್ಕೂರು ಸಿ. ಆನಂದ
- ಮತ್ತೆ ಕಾವೇರಿದ ಕಾವೇರಿ ೨೨
  - ನಾ. ದಿವಾಕರ
- ಕಾವೇರಿ ವಿವಾದ ಕೊನೆಗೂ ಕೊನೆ ಹೇಗೆ ೨೪
  - ದೇವನೂರು ಮಹಾದೇವ
- ರಾಷ್ಟ್ರೀಯ ಜಲನೀತಿಯೊಂದೇ ಪರಿಹಾರ ೨೮
  - ಜ. ಹೊ. ನಾರಾಯಣಸ್ವಾಮಿ

- ಉದ್ದೇಶ ಮರೆತ ವಿಧಾನ ಪರಿಷತ್ ೩೦
  - ಟಿ.ಕೆ. ತ್ಯಾಗರಾಜ್
- ದಲಿತರು ಮತ್ತು ಕೋಮುವಾದ ೩೫
  - ನರಸಿಂಹ ಗುಂಜಹಳ್ಳಿ
- ದಲಿತ್ ಡೈರಿ ೩೬
  - ಚಂದ್ರ ಭಾನ್ ಪ್ರಸಾದ್
- ಬುದ್ಧಾಯಣ ೪೨
  - ಸಿ. ಎಚ್. ರಾಜಶೇಖರ್

ಕವನಗಳು : ಹೊತ್ತಾರೆ ಬರುತ್ತಿದ್ದ ನೀಲಗಾರರೊಂದಿಗೆ ೨೧

ಮುಖಪುಟ ಕಲೆ: ಬಿ. ಸಿ. ಶಿವಕುಮಾರ್, ವಿನ್ಯಾಸ: ರಾಠೋಡ್
(ಇಲ್ಲಿನ ಲೇಖನಗಳಲ್ಲಿ ಪ್ರಕಟವಾಗಿರುವ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದವು.)

ಪತ್ರಗಳು

ಸಂಪರ್ಕ ಭಾಷೆ ಇಂಗ್ಲಿಷ್ ಸರಿ

ಪ್ರೀತಿಯ ಇಂದೂಧರ್ ಸರ್,

ಸಂಪರ್ಕ ಭಾಷೆಯಾಗಿ ಸಂಸ್ಕೃತವನ್ನು ಪ್ರತಿಷ್ಠಾಪಿಸಬೇಕೆನ್ನುವ ಪೇಜಾವರರ ಗ್ಯಾಂಗಿಗೆ ಸೋಲು ಕಟ್ಟಿಟ್ಟ ಬುತ್ತಿಯಾಗುವುದು ಗ್ಯಾರಂಟಿ. ಸಂಸ್ಕೃತ ಕೇವಲ ಸತ್ತ ಭಾಷೆಯಲ್ಲಿ ಪೋಷಕ ಭಾಷೆ ಕೂಡ. ಭಾರತದ ಬಹುಜನರನ್ನು ನಿರ್ಜೀವ ಶವಗಳನ್ನಾಗಿ ಮಾಡಿದ ಭಾಷೆ ಅದು. ಅದು ಯಾವ ಕಾರಣಕ್ಕೂ ಸಂಪರ್ಕ ಭಾಷೆಯಾಗುವ ಅರ್ಹತೆಯನ್ನು ಪಡೆದಿಲ್ಲ.

ಈಗಿನ ಸಾಮಾಜಿಕ ಸಂದರ್ಭದಲ್ಲಿ ಸಾಮರಸ್ಯ ಹಾಗೂ ಸಹಜೀವನಕ್ಕೆ ಹತ್ತಿರವಾದ ಭಾಷೆ ಇಂಗ್ಲಿಷ್ ಮಾತ್ರ. ಆದ್ದರಿಂದ ಇಂಗ್ಲಿಷ್ ಮಾತ್ರ ಸಂಪರ್ಕ ಭಾಷೆಯಾಗಬಲ್ಲದು. ಆಗಬೇಕು.

ಸುಜಾತ ಅವಳಂಬೆ
ಗುಲ್ಬರ್ಗ

ಚಂದಾ ವಿವರ

ಬಿಡಿ ಪ್ರತಿ ರೂ.೨೦/-

೧ ವರ್ಷಕ್ಕೆ ೩ ವರ್ಷಕ್ಕೆ ೫ ವರ್ಷಕ್ಕೆ

ವಿದ್ಯಾರ್ಥಿಗಳು/ಕಾರ್ಯಕರ್ತರಿಗೆ
ರೂ.೧೦೦/- ರೂ.೩೦೦/- ರೂ.೫೦೦/-

ನೌಕರರು ಮತ್ತು ವೃತ್ತಿಪರರಿಗೆ
ರೂ.೨೦೦/- ರೂ.೫೦೦/- ರೂ.೮೦೦/-

ಸಂಘ-ಸಂಸ್ಥೆಗಳು/ಉದ್ಯಮಿಗಳಿಗೆ
ರೂ.೨೫೦/- ರೂ.೬೦೦/- ರೂ.೧೦೦೦

ವಿಶೇಷ ಹಿತೈಷಿ ಚಂದದಾರರಿಗೆ
ರೂ.೫೦೦/- ರೂ.೧೫೦೦/- ರೂ.೨೫೦೦/-

ಆಜೀವ ಚಂದಾ ರೂ.೫,೦೦೦/-
ಪೋಷಕ ಚಂದಾ ರೂ.೧೦,೦೦೦/-

ವಿ.ಸೂ: ಬೆಂಗಳೂರು ನಗರ ವ್ಯಾಪ್ತಿಯ ಹೊರಗಿನ ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ಎಂ.ಓ./ಡಿ.ಡಿ. ಮಾತ್ರ ಕಳುಹಿಸಬೇಕು.

ಸಜ್ಜನರೆಲ್ಲ ನಕ್ಷಲೀಯರಾಗುತ್ತಾರೆ!

ಮಾನ್ಯ ಸಂಪಾದಕರೆ,

ಶ್ರೀ ಎನ್.ಎಸ್. ಶಂಕರ್ ಅವರ 'ಆಕಾಶರಾಯರ ಒಡ್ಡೋಲಗ' ಮಾಧ್ಯಮಗಳ ಜವಾಬ್ದಾರಿ ಕುರಿತಾದ ಸಕಾಲಿಕ ವಿಮರ್ಶಾ ಲೇಖನವಾಗಿದೆ. ಪತ್ರಿಕೆಗಳು ಹುಟ್ಟಿದ್ದೇ ನ್ಯಾಯಕ್ಕಾಗಿ ಗಾಂಧಿ, ಅಂಬೇಡ್ಕರ್ ಅವರಿಂದ ಹಿಡಿದು ಈ ಹೊತ್ತಿನ ಎಲ್ಲ ಹೋರಾಟಗಾರರೂ ನ್ಯಾಯಕ್ಕಾಗಿ ಆಗ್ರಹಿಸುವ ಒಂದು ಅಸ್ತ್ರವಾಗಿಯೇ ಪತ್ರಿಕೆಗಳನ್ನು ತರುತ್ತಿದ್ದಾರೆ.

ಆದರೆ ಇಂಥ ಎಲ್ಲಾ ಪತ್ರಿಕೆಗಳು ಸೇರಿದರೂ ಸಮಾಜದ ಮೇಲೆ ತಕ್ಷಣದ ಪ್ರಭಾವ ಬೀರಲು ಆಗುತ್ತಿಲ್ಲ. ಪ್ರಭಾವ ಬೀರುವ ಎಲ್ಲಾ ಪತ್ರಿಕೆಗಳು ಕೇವಲ ವ್ಯಾಪಾರಕ್ಕೆ ನಿಂತಿವೆ. ಗ್ರಾಹಕರು ಕೇಳಿದ ವಸ್ತುವನ್ನು ಉತ್ಪಾದಿಸುವ ಕಂಪನಿಗಳಂತೆ ಪತ್ರಿಕೆಗಳು ಕೂಡ ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಮರೆತು ಓದುಗರ ಕ್ಷಣಿಕ ಲಾಲಸೆಗಳನ್ನು ಪೂರೈಸಲು ಮುಂದಾಗಿವೆ. ದೃಶ್ಯ ಮಾಧ್ಯಮಗಳಂತೂ ಹರಾಜಿಗಿಟ್ಟು ವಸ್ತುವಿನಂತಾಗಿವೆ. ಜನರ ಭಾವನೆಯನ್ನು ಕೆರಳಿಸುವ ಮೂಲಕ ತಮ್ಮ ಟಿಆರ್‌ಪಿ ದರ ಹೆಚ್ಚಿಸಿಕೊಳ್ಳುವುದರಲ್ಲೇ ತಲ್ಲೀನವಾಗಿವೆ.

ಪತ್ರಕರ್ತರಲ್ಲೂ ಹಿಂದೆ ಇದ್ದಂತಹ ಸಾಮಾಜಿಕ ಜವಾಬ್ದಾರಿ ಈಗ ಕಾಣುತ್ತಿಲ್ಲ. ಒಂದು ರೀತಿಯ ಹತಾಷೆ ಮತ್ತು ಜನಾಂಗೀಯ ಭಾವನೆ ಹೆಚ್ಚಾಗುತ್ತಿದೆ. ಔದಾರ್ಯ ಇರಬೇಕಾದ ಕಡೆ ಸಣ್ಣತನ ಅಸೂಯೆಗಳು ಬೆಳೆಯುತ್ತಿವೆ. ಎಲ್ಲವೂ ಮಾರ್ಕೆಟ್ ಮಯವಾಗುತ್ತಿರುವುದರಿಂದ ಪತ್ರಕರ್ತರೂ ಅದಕ್ಕೆ ತಕ್ಕಂತೆ ಮಾರುಕಟ್ಟೆ ಅಗತ್ಯವನ್ನು ಪೂರೈಸುವ ನಿರ್ಜೀವ ಸರಕುಗಳಾಗುತ್ತಿದ್ದಾರೆ.

ಬಹಳ ನೋವಿನ ವಿಚಾರ ಅಂದರೆ ಸದಾ ಸಮತೋಲನ ಕಾಯ್ದುಕೊಳ್ಳುತ್ತಿದ್ದ 'ಪ್ರಜಾವಾಣಿ' ಅಂತ ಪತ್ರಿಕೆ ಕೂಡ ಈಚೆಗೆ ತನ್ನ ನಿಲುವು ಬದಲಾಯಿಸಿಕೊಂಡು ಎಡಬಿಡಂಗಿಯಾಗುತ್ತಿದೆ. ಅದಕ್ಕೆ ಈಗ ಯಾವುದೇ ಸಿದ್ಧಾಂತವಾಗಲಿ ಸಮತೋಲನವಾಗಲಿ ಇದ್ದಂತಿಲ್ಲ. 'ವ್ಯಕ್ತಿತ್ವ'ವೇ ಇಲ್ಲದ ಪತ್ರಿಕೆಯಾಗಿ 'ಪ್ರಜಾವಾಣಿ' ಈಗ ಹೊರ ಬರುತ್ತಿದೆ. ಹಿಂದೆ ಬರುತ್ತಿದ್ದ ರಾಜಕೀಯ ವಿಶ್ಲೇಷಣೆಗಳಾಗಲಿ, ತನಿಖಾ ವರದಿಗಳಾಗಲಿ ಈಗ ಕಾಣಿಸುತ್ತಿಲ್ಲ. ಇದೇನು ಕಾಲದ ಮಹಿಮೆಯೋ ಪತ್ರಕರ್ತರ ಅನುಕೂಲ ಸಿಂಧು ನೀತಿಯೋ ಅಥವಾ ಬದ್ಧತೆ ಇರುವ ಪತ್ರಕರ್ತರ ಕೊರತೆಯೋ ಅರ್ಥವಾಗುತ್ತಿಲ್ಲ.

ನಮ್ಮ ಸಮಾಜವೇ ಹಾಗಾಗುತ್ತಿದೆ ಅನ್ನುವ ಭಿನ್ನತೆ ನನ್ನನ್ನು ಕಾಡಿಸುತ್ತಿದೆ. ಒಳ್ಳೆಯದಕ್ಕೆ ಸಜ್ಜನಿಕೆಗೆ ನೀತಿ ಸಿದ್ಧಾಂತಕ್ಕೆ ಸಮಾಜದಲ್ಲಿ ಬೆಲೆಯೇ ಇಲ್ಲ. ಕಳ್ಳಕಾಕರೇ ನಿರಂತರವಾಗಿ ರಾಜ್ಯವಾಳುತ್ತಿರುವುದೇ ಇದಕ್ಕೆ ಬಹುದೊಡ್ಡ ಸಾಕ್ಷಿ. ಪ್ರಜಾಪ್ರಭುತ್ವ ಎನ್ನುವುದು ಕೇವಲ ನಗೆ ಪಾಟಲ ಕ್ರಿಯೆಯಾಗಿ ನಮ್ಮನ್ನು ಈಗ ಅಣಕಿಸುತ್ತಿದೆ. ನಕ್ಷಲಿಯ ಚಳವಳಿ, ಭಯೋತ್ಪಾನೆ ಇವೆಲ್ಲ ಪ್ರಜಾಪ್ರಭುತ್ವದ ವೈಫಲ್ಯದ ಫಲಗಳು. ಆದ್ದರಿಂದಲೇ ಅವುಗಳು ಯುವ ಜನರನ್ನು ಸೆಳೆಯುತ್ತಿವೆ. ನಕ್ಷಲೀಯ ಚಳವಳಿಗೆ ಹಿಂದೆಂದೂ ಸಿಗದ ಮಾನ್ಯತೆ ಸಾಮಾನ್ಯ ಜನರಲ್ಲಿ ಈಗ ಸಿಗುತ್ತಿದೆ.

ಪರಿಸ್ಥಿತಿ ಹೀಗೇ ಮುಂದುವರೆದಲ್ಲಿ ಸಜ್ಜನರೆಲ್ಲ ಮುಂದೆ ನಕ್ಷಲ್‌ವಾದಿಗಳಾಗುವುದು ಅನಿವಾರ್ಯವಾಗಬಹುದು!

ನಿರಂಜನ ಆರಾಧ್ಯ
ತುಮಕೂರು

ಕಾವೇರಿ: ನ್ಯಾಯ ದಾರಿ ತಪ್ಪಿದೆ

ಮಾನ್ಯ ಸಂಪಾದಕರೆ,

ಕಾವೇರಿ ನ್ಯಾಯ ಮಂಡಲಿ ತೀರ್ಪು ದಾರಿ ತಪ್ಪಿರುವುದು ಲೋಕಕ್ಕೇ ಗೊತ್ತಾಗಿದೆ. ಆದರೂ ರಾಜಕೀಯ ಎಲ್ಲಕ್ಕಿಂತಲೂ ದೊಡ್ಡದ್ದಾದ್ದರಿಂದ ಯಾರೂ ಎನು ಮಾಡಲೂ ಆಗುತ್ತಿಲ್ಲ. ಪ್ರೀತಿ, ಸಹನೆಗಳು ಮಾತ್ರ ನಮ್ಮನ್ನು ಕಾಪಾಡಬಲ್ಲವು.

ಕುಮಾರಿ ಬಿ.ಎನ್,ಬೆಂಗಳೂರು

ಕ್ಯಾಸ್ಟ್ ಕೆಮಿಸ್ಟ್ರಿ ಸೂಪರ್!

ಮಾನ್ಯ ಸಂಪಾದಕರೆ,

ಡಾ॥ ಸಿ.ಜಿ. ಲಕ್ಷ್ಮೀಪತಿಯವರ ಕ್ಯಾಸ್ಟ್ ಕೆಮಿಸ್ಟ್ರಿ ಸೂಪರ್ ಆಗಿದೆ. ಬ್ರಾಹ್ಮಣ-ಬ್ರಾಹ್ಮಣ್ಯ-ವೈದಿಕ-ಸನಾತನಿ ಮುಂತಾದ ಹತ್ತು ಹಲವು ಪದನಾಮಗಳಿಂದ ಕರೆಯಲ್ಪಡುವ ಒಂದು ಜನಾಂಗ ಹೇಗಿ ಇಡೀ ಭಾರತೀಯ ಸಮಾಜವನ್ನು ಹೊಸಕಿ ಹಾಕಿದೆ ಮತ್ತು ಹಾಕುತ್ತಿದೆ ಎನ್ನುವುದರ ವಿವರಗಳು ಅದ್ಭುತವಾಗಿವೆ.

ಹ್ಯಾಟ್ಸ್ ಆಫ್ ಟು ಲಕ್ಷ್ಮೀಪತಿ! ದಯವಿಟ್ಟು ನಿಮ್ಮ ಲೇಖನ ಮಾಲೆ ಮುಂದುವರೆಯಲಿ.

ಆರ್. ಸೋಮಶೇಖರ್,
ಮಳವಳ್ಳಿ

ಕಂಬಾಲಪಲ್ಲಿ: ಉತ್ತರಗಳಿವೆಯೆ?

ಪ್ರೀತಿಯ ಸಂಪಾದಕರಿಗೆ,

ಮಾರ್ಚ್ ತಿಂಗಳ ಸಂಚಿಕೆಯಲ್ಲಿ ಶ್ರೀ ಅರವಿಂದ ಮಾನೆ ಅವರ ಪತ್ರ ಓದಿದೆ. ರಾತ್ರಿ ಇಡೀ ನಿದ್ರೆ ಬರಲಿಲ್ಲ. ಮಾನೆ ಅವರ ನೋವು, ಯಾತನೆ, ಆಕ್ರೋಶ ನನ್ನ ರಕ್ತದ ಕಣಕಣದಲ್ಲಿ ಹರಿದಾಡಿದಂತಾಗಿ ಚಡಪಡಿಸಿದೆ. ಮಾನೆಯವರ ಪ್ರಶ್ನೆಗಳಿಗೆ ಉತ್ತರಗಳು ಇವೆಯೆ? ಎಂದು ಯೋಚಿಸುತ್ತಿದ್ದೇನೆ. ಬಹುಷಃ ಇರಲಾರವೇನೋ ಎಂಬ ಅಳುಕು ನನ್ನನ್ನು ಮತ್ತಷ್ಟು ಭಯ ಭೀತನನ್ನಗಿಸಿವೆ.

ದಲಿತ ಚಳವಳಿಯ ವಿವಿಧ ಬಣಗಳ ಮುಖಂಡರಿಂದ ಮಾನೆಯವರು ಉತ್ತರ ಬಯಸಿದ್ದಾರೆ. ಆದರೆ ನನಗೆ ಅವರುಗಳು 'ಸಂವಾದ'ದಂತ ಪತ್ರಿಕೆಯನ್ನು ಓದುತ್ತಿರುವ ಬಗ್ಗೆ ಕೂಡ ಅನುಮಾನಗಳಿವೆ. ಯಾಕೆಂದರೆ ದಲಿತ ಚಳವಳಿ, ಸಾಹಿತ್ಯ-ಸಂಸ್ಕೃತಿ-ವೈಚಾರಿಕ ನೆಲೆಗಟ್ಟನ್ನು ತೊರೆದು ದಶಕಗಳೇ ಆಗಿವೆ. ನನ್ನ ಅನುಮಾನ ನಿಜವಾಗದಿರಲಿ ಎಂದಷ್ಟೇ ನಾನು ಪ್ರಾರ್ಥಿಸುತ್ತೇನೆ.

ಎಂ.ವಿ. ಚಂದ್ರಶೇಖರ ಮೂರ್ತಿ
ಬೆಂಗಳೂರು

ವಿಷಾದ

ಡಾ॥ ಸಿ.ಜಿ. ಲಕ್ಷ್ಮೀಪತಿ ಅವರು ಪ್ರತಿ ತಿಂಗಳೂ ಬರೆಯುತ್ತಿದ್ದ 'ಕ್ಯಾಸ್ಟ್ ಕೆಮಿಸ್ಟ್ರಿ' ಲೇಖನ ಮಾಲೆಯನ್ನು ಅನಿವಾರ್ಯ ಕಾರಣಗಳಿಂದಾಗಿ ಪ್ರಕಟಿಸಲು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ವಿಷಾಧಿಸುತ್ತೇವೆ -ಸಂಪಾದಕರು

ಹೊಸ ಪುಸ್ತಕ

ಬೇರು ಬಿಳಲು
ಲೇ: ಡಿ.ಎಸ್. ನಾಗಭೂಷಣ
ಬೆಲೆ: ೧೦೦/-

ಕನ್ನಡದ ಬಹುಮುಖ್ಯ ಸಮಾಜವಾದಿ ಚಿಂತಕರಲ್ಲೊಬ್ಬರಾದ ನಾಗಭೂಷಣ ಅವರ ಈಚಿನ ಕೃತಿ ಇದು. ಸಮಾಜವಾದಿ ವಿಚಾರಧಾರೆಯ ಇಲ್ಲಿನ ಲೇಖನಗಳಲ್ಲಿ ವರ್ತಮಾನದ ಹಲವು ಸಮಸ್ಯೆಗಳನ್ನು ಲೇಖಕರು ತಮ್ಮ ಸ್ಪಷ್ಟ ಹಾಗೂ ನಿಷ್ಠುರ ವ್ಯಾಖ್ಯಾನುಗಳ ಮೂಲಕ ವಿಶ್ಲೇಷಿಸಿದ್ದಾರೆ. ಜನಪ್ರಿಯ ಮಾದರಿಗಳ ಹೊರತಾಗಿ ವಸ್ತುನಿಷ್ಠವಾಗಿ ಚಿಂತಿಸುವ, ಹಾಗೂ ಖಚಿತ ಸೈದ್ಧಾಂತಿಕ ನೆಲೆಗಟ್ಟಿನ ವಿಶ್ಲೇಷಣೆಗಳು ಇಲ್ಲಿವೆ. ಲೇಖನಗಳ ಸಾರ್ವಕಾಲಿಕ ಅಂತಃಸತ್ವ ಕೃತಿಯ ಪ್ರಾಮುಖ್ಯತೆಯನ್ನು ಹೆಚ್ಚಿಸಿದೆ.

ಪ್ರಕಾಶಕರು: ರೂಪ ಪ್ರಕಾಶನ
ಕುವೆಂಪುನಗರ, ಮೈಸೂರು.



ಪರಂಪರೆ ಪರಿವರ್ತನೆ
ಲೇ: ಮಹೇಶ ತಿಪ್ಪಶೆಟ್ಟಿ
ಬೆಲೆ: ರೂ. ೧೦೦/-

ಲಿಂಗಾಯತ ಮತ್ತು ವೀರಶೈವ ಚಿಂತನೆಗಳನ್ನೊಳಗೊಂಡ ವಿವಿಧ ಲೇಖನಗಳ ಸಂಗ್ರಹ ಇದು. ಇಲ್ಲಿನ ಲೇಖನಗಳಲ್ಲಿ ವಚನ ಸಾಹಿತ್ಯ ಹಾಗೂ ವಚನ ಸಾಹಿತ್ಯ ದಾಚೆಗಿನ ಸಾಮಾಜಿಕ ಜಿಜ್ಞಾಸೆಗಳು ವ್ಯಾಪಕವಾಗಿ ಚರ್ಚೆಗೊಳಗಾಗಿವೆ. ಪುರೋಹಿತಶಾಹಿಯ ವಿರುದ್ಧ ನಡೆದ ಒಂದು ದೊಡ್ಡ ಸಾಮಾಜಿಕ ಕ್ರಾಂತಿ ಇಂದು ವಿವಿಧ ಮತಗಳ ಮೂಲಕ ವಿವಿಧ ಗುಂಪುಗಳಾಗಿ ಅದೇ ಪುರೋಹಿತಶಾಹಿಯನ್ನು ಓಲೈಸುತ್ತಿರುವ ದುರಂತ ಸನ್ನಿವೇಶದಲ್ಲಿ ಈ ಕೃತಿ ನಿಜಕ್ಕೂ ಆತ್ಮಾವಲೋಕನಕ್ಕೆ ದಾರಿ ಮಾಡಿ ಕೊಡುತ್ತದೆ.

ಪ್ರಕಾಶಕರು: ದಾಳಿಂಬ ಪ್ರಕಾಶನ
ಹುನಗುಂದ-೫೮೭೧೧೮.

ಮಹಿಳೆ ಸಮಾಜ ಕಾನೂನು
ಲೇ: ಡಾ|| ಗೀತಾ ಕೃಷ್ಣಮೂರ್ತಿ
ಬೆಲೆ: ರೂ. ೪೫/-

ಮಹಿಳೆಯರ ಜಾಗೃತಿ ಮತ್ತು ಹಕ್ಕಿನ ಬಗ್ಗೆ ನಮ್ಮಲ್ಲಿನ್ನೂ ತಿಳವಳಿಕೆ ಕಡಿಮೆ. ಈ ಕೊರತೆ ನೀಗಿಸುವ ಉತ್ತಮ ಪ್ರಯತ್ನ ಈ ಕೃತಿ. ಮಹಿಳೆಯರ ವಿರುದ್ಧ ನಡೆಯುತ್ತಿರುವ ಶೋಷಣೆ, ಅತ್ಯಾಚಾರ, ವರದಕ್ಷಿಣೆ ಕಿರುಕುಳ, ಕೌಟಂಬಿಕ ಕ್ರೌರ್ಯ, ಹೆಣ್ಣು ಭ್ರೂಣ ಹತ್ಯೆ, ಇತ್ಯಾದಿಗಳ ಬಗೆಗೆ ಕೃತಿಯಲ್ಲಿ ವ್ಯಾಪಕವಾದ ಚರ್ಚೆ ಮತ್ತು ತಿಳವಳಿಕೆ ನೀಡಲಾಗಿದೆ. ಕಾನೂನು ತನ್ನ ಪರವಾಗಿದೆ ಎಂಬ ವಿಶ್ವಾಸ ಮಹಿಳೆಗೆ ಈ ಕೃತಿಯಿಂದ ಮುಡುತ್ತದೆ.

ಪ್ರಕಾಶಕರು: ನವಕರ್ನಾಟಕ ಪ್ರಕಾಶನ
ಎಂಬೆಸಿ ಸೆಂಟರ್, ಬೆಂಗಳೂರು-೧





ಸಬಲೀಕರಣ
ಸಂ: ಮಂಗ್ಳೂರ ವಿಜಯ
ಬೆಲೆ: ರೂ. ೧೨೫/-

ವಿವಿಧ ಕಾಲ ಘಟ್ಟದಲ್ಲಿ ಮತ್ತು ಸಂದರ್ಭಗಳಲ್ಲಿ 'ಸಮಾಜವಾದಿ ಮಾತು ಕತೆ' ಪತ್ರಿಕೆಗಾಗಿ ಬರೆದ ಲೇಖನಗಳು ಇಲ್ಲಿವೆ. ಲೇಖನಗಳಲ್ಲಿ ಆಳ ಅಭ್ಯಾಸದ ಕೊರತೆ ಕಂಡು ಬಂದರೂ ಅವುಗಳಲ್ಲಿ ವ್ಯಕ್ತವಾಗಿರುವ ಕಾಳಜಿ ಮತ್ತು ಸಮಾನ ಬದುಕಿನ ಆಶಯಗಳು ಓದುಗರನ್ನು ಚಿಂತನೆಗೆ ಹಚ್ಚುತ್ತವೆ. ಕೆಲವು ಅನುವಾದ-ಲೇಖನಗಳೂ ಇಲ್ಲಿವೆ. ದಲಿತ ಹೋರಾಟದ ವಿವಿಧ ಮುಖ ಮತ್ತು ವಿವಿಧ ಸಮಸ್ಯೆಗಳು ಇಲ್ಲಿ ಎದ್ದು ಕಾಣುತ್ತವೆ. ಬಹುತೇಕ ಲೇಖನಗಳ ಮೂಲ ಆಶಯ ಒಂದೇ ಆದರೂ ಅವು ವ್ಯಕ್ತವಾಗುವ ಬಗೆ ಮಾತ್ರ ಭಿನ್ನವಾಗಿದೆ.

ಪ್ರಕಾಶಕರು: ಸಂಬುದ್ಧ ಪ್ರಕಾಶನ
ವಿ. ನಾಗೇನಹಳ್ಳಿ,
ಬೆಂಗಳೂರು-೫೬೦೦೩೨



ನಾಗಸಂಪಿಗೆ
ಲೇ: ಎಸ್. ಲಿಂಗಯ್ಯ
ಬೆಲೆ: ರೂ. ೬೦/-

ಮೇಲುನೋಟಕ್ಕೆ ಜೀವನ ಚರಿತ್ರೆಯಂತೆ ತೋರುವ ಈ ಕೃತಿ ಇಪ್ಪತ್ತನೇ ಶತಮಾನದ ಮೊದಲರ್ಧ ಭಾಗದ ಗ್ರಾಮೀಣ ಭಾರತದ ಜೀವನ ಗಾಥೆಯಂತಿದೆ. ಕೃತಿಯ ಕೇಂದ್ರ ಬಿಂದು ಲಿಂಗೇಗೌಡ ಜನರ ಪ್ರೀತಿಯ ದೊಡ್ಡಣ್ಣನಾದ ರೀತಿ, ಆ ಕಾಲಮಾನದ ಆದರ್ಶ, ಜೀವನ ಪ್ರೀತಿ, ಜಾತಿ ಮತಗಳಾಚೆಗಿನ ಸಂಬಂಧ-ಇವುಗಳ ನಿರ್ಲಿಪ್ತ ದಾಖಲೆ ಅನನ್ಯವಾಗಿದೆ. ಆತ್ಮ ರತಿ-ಮುಖಸ್ತುತಿ-ಹಾಗೂ ನಿಂದನೆಗಳಿಂದ ಹೊರತಾದ ಅಪರೂಪದ ಜೀವನ ಪರಿಚಯ ಈ ಕೃತಿಯ ಹೆಗ್ಗಳಿಕೆ.

ಪ್ರಕಾಶಕರು: ಹಸಿರು ಪ್ರಕಾಶನ,
ಜೆ.ಪಿ. ನಗರ, ಬೆಂಗಳೂರು-೫೬೦೦೭೮

ಆಪರೇಷನ್ ಸ್ಯಾಂಡಲ್ ಫಾಕ್ಸ್
ಲೇ: ಟಿ.ಕೆ. ತ್ಯಾಗರಾಜ್
ಬೆಲೆ: ರೂ. ೮೦/-

ಕಳೆದ ಒಂದೂವರೆ ಎರಡು ದಶಕಗಳ ಕ್ರಿಯಾಶೀಲ ಪತ್ರಕರ್ತರಲ್ಲಿ ಒಬ್ಬರಾದ ಟಿ.ಕೆ. ತ್ಯಾಗರಾಜ್ ಅವರ ೨೬ ಬರಹಗಳ ಸಂಗ್ರಹ ಈ ಕೃತಿ. ಲಂಕೇಶ್ ಅವರ ಗರಡಿಯಲ್ಲಿ ಪಳಗಿದ ತ್ಯಾಗರಾಜ್ ನಿಜವಾದ ಅರ್ಥದಲ್ಲಿ 'ಕಾರ್ಯನಿರತ ಪತ್ರಕರ್ತ'. ಅವರ ಬರಹ, ವರದಿ ಎಲ್ಲವೂ ಆಯಾ ಕಾಲಮಾನದ ನಿಜವಾದ ಸ್ಪಂದನೆಗಳೇ ಆಗಿದ್ದವು ಎಂಬುದು ಈ ಕೃತಿಯಲ್ಲಿನ ಬರಹಗಳನ್ನು ಓದಿದರೆ ವೇದ್ಯವಾಗುತ್ತದೆ.

ಪ್ರಕಾಶಕರು: ಚೇತನ ಬುಕ್ ಹೌಸ್
ರೇಣುಕಾಚಾರ್ಯ ದೇವಸ್ಥಾನ
ರಸ್ತೆ ಮೈಸೂರು-೫೭೦೦೨೪

ಸಂಪಾದಕೀಯ



ಅಂತರಂಗ



ಕೋಮುವಾದಿಗಳ ಬಜೆಟ್

* ರಾಮಾಜೋಯಿಸರ ರಾಜನೀತಿ ಸಂಶೋಧನೆಗೆ –2 ಕೋಟಿ
* ರಾಜಧರ್ಮ ಮತ್ತು ನ್ಯಾಯದರ್ಶನ ಅಧ್ಯಯನಕ್ಕೆ –2 ಕೋಟಿ
* ರಾಮಚಂದ್ರಾಪುರ ಮಠದ ಗೋಸಂರಕ್ಷಣೆಗೆ –2 ಕೋಟಿ
* ಮಲ್ಲಿಕಾರ್ಜುನ ದೇವಸ್ಥಾನದ ಅಭಿವೃದ್ಧಿಗೆ –2 ಕೋಟಿ
* ಹುಬ್ಬಳ್ಳಿ ಸಿದ್ಧಾರೂಢ ಮಠ ಅಭಿವೃದ್ಧಿಗೆ –2 ಕೋಟಿ
* ಗಂಗಾಂಬಿಕೆ ಐಕ್ಯ ಮಂಟಪ ಅಭಿವೃದ್ಧಿಗೆ – 5 ಕೋಟಿ
* ಬಸವ ಪೀಠ ಅಭಿವೃದ್ಧಿಗೆ –2 ಕೋಟಿ
* ಸಿದ್ಧಗಂಗಾ ಮಠದ ವಿದ್ಯಾರ್ಥಿನಿಲಯ ನೈರ್ಮಲ್ಯ ಮತ್ತು ಮೂಲಸೌಕರ್ಯಕ್ಕೆ– 10 ಕೋಟಿ
* ಸಿದ್ಧ ಗಂಗಾ ಮಠದ ದಾಸೋಹ ಭವನ ಮತ್ತು ಇತರ ಅಭಿವೃದ್ಧಿ ಕಾಮಗಾರಿಗೆ – 10 ಕೋಟಿ
* ಇಂಗಳೇಶ್ವರ ಅಭಿವೃದ್ಧಿಗೆ – 2 ಕೋಟಿ
* ಆರ್.ಎಸ್.ಎಸ್. ಒಡೆತನದ ಸ್ವಾಮಿ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥೆಗೆ – 2 ಕೋಟಿ
* ಮಾನಸ ಸರೋವರ ಯಾತ್ರೆಗೆ – 2 ಕೋಟಿ
* ಆರಾಧನಾ ಯೋಜನೆಗೆ ನೀಡಲಾಗುತ್ತಿದ್ದ ವಾರ್ಷಿಕ ಅನುದಾನ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ 5 ಲಕ್ಷದಿಂದ 10 ಲಕ್ಷಕ್ಕೆ ಏರಿಕೆ
* ಇದರ ಜೊತೆಗೆ ಬಿಜೆಪಿ ಪ್ರಾಬಲ್ಯವಿರುವ ಭಾಗಗಳಿಗೆ ವಿಶೇಷ ನೆರವು. ಅದರಲ್ಲೂ ಉಪಮುಖ್ಯಮಂತ್ರಿ ಯಡಿಯೂರಪ್ಪನವರ ತವರು ಜಿಲ್ಲೆ ಶಿವಮೊಗ್ಗ ಮತ್ತು ಮುಖ್ಯಮಂತ್ರಿ ಕುಮಾರಸ್ವಾಮಿ ಅವರ ಕ್ಷೇತ್ರ ರಾಮನಗರ, ಅವರ ಅಣ್ಣ ರೇವಣ್ಣ ಅವರ ಉಸ್ತುವಾರಿಯಲ್ಲಿರುವ ಜಿಲ್ಲೆ ಹಾಗೂ ಅಪ್ಪ ದೇವೇಗೌಡರ ಲೋಕಸಭಾ ಕ್ಷೇತ್ರವಾದ ಹಾಸನ ಜಿಲ್ಲೆಗೆ ಕೇಳಿದಷ್ಟು ಹಣ. ಹಲವಾರು ಯೋಜನೆಗಳ ಮಂಜೂರಾತಿ!

ಪಟ್ಟಿ ಹೀಗೆ ಬೆಳೆಯುತ್ತಾ ಹೋಗುತ್ತದೆ. ಇದು 'ಕರ್ನಾಟಕ ಅಭಿವೃದ್ಧಿ ರಂಗ' ಎನ್ನುವ ಹೆಸರಿನ ಕೋಮುವಾದಿ–ಜಾತಿವಾದಿ ಸರ್ಕಾರದ ಹಣಕಾಸು ಸಚಿವ ಯಡಿಯೂರಪ್ಪ ಅವರ ಬಜೆಟ್ ಸ್ಪೆಷಲ್! ಬಹುಷಃ ಯಡಿಯೂರಪ್ಪ ಅವರು ಬಜೆಟ್ ಅಂದರೆ ರಾಮ–ಕೃಷ್ಣರ ಲೆಕ್ಕ ಅಂದುಕೊಂಡಿರಬೇಕು. ಇಲ್ಲದಿದ್ದರೆ ಇಂಥ ವಲವಾರದ ಕಳಪೆ ಬಜೆಟ್ ಅನ್ನು ಅವರು ಮಂಡಿಸುತ್ತಿರಲಿಲ್ಲ.

ರೈತರ ಸಾಲಮನ್ನಾದಿಂದ ನಿಜವಾಗಿಯೂ ಯಾವ ರೈತನಿಗೆ ಲಾಭವಾಗುತ್ತದೆ ಎನ್ನುವುದನ್ನು ದುರ್ಬೀನು ಹಾಕಿ ಹುಡುಕಬೇಕು. ಇನ್ನು ಸಾರಾಯಿ ನಿಷೇಧ ಕೇವಲ ಹೆಸರಿನ ಬದಲಾವಣೆಯೇ ಹೊರತು ಬೇರೇನಲ್ಲ. ಸಾರಾಯಿಯಷ್ಟೇ ಸುಲಭವಾಗಿ, ಅದೇ ಬೆಲೆಗೆ ಸಿಗುವ ಬೇರೆ ಗುಂಡನ್ನು ರೆಡಿಮಾಡಿಕೊಂಡ ಮೇಲೆಯೇ ಇವರು ಸಾರಾಯಿ ರದ್ದು ಪಡಿಸಿದ್ದಾರೆ. ಅಂದರೆ ಬಿಳಿ ಸಾರಾಯಿಗೆ ಬದಲು ಬಣ್ಣದ ಸಾರಾಯಿ ಬೇರೆ ಹೆಸರಿನಲ್ಲಿ ಲಭ್ಯ! ಒಟ್ಟಾರೆ ಜನರಿಗೆ ಟೋಪಿ ಹಾಕುವುದರಲ್ಲಿ ಯಡಿಯೂರಪ್ಪ–ಕುಮಾರಸ್ವಾಮಿ ಜಂಟಿ ಕಾರ್ಯಾಚರಣೆ ಯಶಸ್ವಿಯಾಗಿದೆ.

ಕರ್ನಾಟಕದ ಇತ್ತೀಚಿನ ಬಜೆಟ್ ನಾಡುಕಟ್ಟುವ ಕೆಲಸಕ್ಕೆ ಮೀಸಲಾಗಿ ಬಹಳ ವರ್ಷಗಳೇ ಆದವು. ನೀರಾವರಿಗಾಗಲಿ, ವಿದ್ಯುತ್ ಉತ್ಪಾದನೆಗಾಗಲಿ, ನಿರುದ್ಯೋಗ ನಿವಾರಣೆಗಾಗಲಿ ಬಜೆಟ್ ಮೂಲ ಆಧಾರ. ಸರ್ಕಾರದ ಆಶ್ವಾಸನೆಗಳು ವ್ಯಕ್ತವಾಗಬೇಕಾದ್ದು ಬಜೆಟ್ ಮೂಲಕ. ಬೀದಿ ಭಾಷಣಗಳಲ್ಲಿ ಅಲ್ಲ. ಕುಡಿಯುವ ನೀರು, ಕೃಷಿ, ವಿದ್ಯುತ್, ಶಿಕ್ಷಣ, ಕೈಗಾರಿಕೆ ಇವು ಯಾವುದೇ ಸರ್ಕಾರದ ಅಭಿವೃದ್ಧಿಯ ಸಂಕೇತಗಳು ಆದರೆ ಕುಮಾರಸ್ವಾಮಿ–ಯಡಿಯೂರಪ್ಪ ಅವರಿಗೆ ಹಾಗೆನಿಸಿಯೇ ಇಲ್ಲ. ಅವರ ಲೆಕ್ಕದಲ್ಲಿ ದೇವಸ್ಥಾನ, ಮಠ, ಗೋಸಂರಕ್ಷಣೆ ಇವೇ ಅಭಿವೃದ್ಧಿಯ ಸಂಕೇತಗಳು. ಇವರ ಅವಿವೇಕ ಮತ್ತು ಪ್ರಚಾರದ ಹುಚ್ಚಿಗೆ ಇಡೀ ನಾಡಿಗೆ ನಾಡೇ ಬಲಿಯಾಗುತ್ತಿದೆ. ಸಾರ್ವಜನಿಕರ ಹಣ ಲೂಟಿ ಮಾಡಲೆಂದೇ ಇರುವ ಮಠ, ಮಂದಿರಗಳಿಗೆ ಮನಸೋ ಇಚ್ಛೆ ಇವರು ಹಣ ಹಂಚುತ್ತಾರೆಂದರೆ ನೀವೇ ಊಹಿಸಿ!

ಕುಡಿಯುವ ನೀರಿಲ್ಲದೆ ನಾಡಿನಾದ್ಯಂತ ಜನ ಒದ್ದಾಡುತ್ತಿದ್ದಾರೆ. ಅನ್ನ ನೀರಿಲ್ಲದೆ ಉತ್ತರ ಕರ್ನಾಟಕದಾದ್ಯಂತ ಜನ–ಜಾನುವಾರುಗಳು ಗುಳೆ ಹೋಗುತ್ತಿದ್ದಾರೆ. ಇವರು ಗೋಸಂರಕ್ಷಣೆಗೆ ಅಂತ ರಾಮಚಂದ್ರಾಪುರ ಮಠಕ್ಕೆ 2 ಕೋಟಿ ನೀಡುತ್ತಾರೆ! ಗೋಸಂರಕ್ಷಣೆ ಯಾರು ಮಾಡುತ್ತಾರೆ ಎಂಬುದು ಮಣ್ಣಿನ ಮೊಮ್ಮಗನಿಗೇ ಗೊತ್ತಾಗದಿದ್ದರೆ ಏನು ಮಾಡುವುದು. ಬಹುಷಃ ಈ ಅಜ್ಞಾನವೇ ಅವರನ್ನು ಹಳ್ಳಿಗಳ ವಾಸ್ತವ್ಯಕ್ಕೆ ಪ್ರೇರೇಪಿಸಿರಬೇಕು! ಇನ್ನು ನಾಡಿನ ಬಹುಸಂಖ್ಯಾತರಾದ ದಲಿತರು ಹಿಂದುಳಿದವರು ಮತ್ತು ಅಲ್ಪ ಸಂಖ್ಯಾತರಿಗೆ ಇವರು ನೀಡಿರುವ ಒಟ್ಟು ಹಣ ಕೇವಲ ಶೇ. 6 ಮಾತ್ರ. ಇದರಲ್ಲಿ ಶೇ. 23 ರ ದಲಿತರು, ಶೇ. 32 ರ ಹಿಂದುಳಿದ ವರ್ಗ ಹಾಗೂ ಶೇ. 15 ರ ಅಲ್ಪಸಂಖ್ಯಾತರು ಅಂದರೆ ಒಟ್ಟು ಶೇ. 70 ಭಾಗದ ಜನರ ಅಭಿವೃದ್ಧಿಯಾಗಬೇಕು. ಹೇಗಿದೆ. ಕುಮಾರಸ್ವಾಮಿ–ಯಡಿಯೂರಪ್ಪನವರ ಲೆಕ್ಕಾಚಾರ!

ಕಳೆದ ವರ್ಷವೂ ಇದೇ ಪ್ರಮಾಣದ ಬಜೆಟ್ ಅನ್ನು ಸಮಾಜ ಕಲ್ಯಾಣ ಇಲಾಖೆಗೆ ನಿಗಧಿ ಪಡಿಸಿದ್ದಕ್ಕಾಗಿ ರಾಷ್ಟ್ರೀಯ ಯೋಜನಾ ಆಯೋಗ ರಾಜ್ಯ ಸರ್ಕಾರಕ್ಕೆ ನೋಟೀಸ್ ನೀಡಿತ್ತು. ಯೋಜನಾ ಆಯೋಗದ ನೀತಿಯಂತೆ ತಳ ಸಮುದಾಯ ಹಾಗೂ ಹಿಂದುಳಿದ ಜನಾಂಗಗಳಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣ ಹಂಚಿಕೆಯಾಗಬೇಕೆಂಬ ನಿರ್ದೇಶನವಿದೆ. ಯೋಜನಾ ಆಯೋಗದ ನೋಟೀಸ್‌ಗೆ ಕಳೆದ ವರ್ಷ ಉತ್ತರ ನೀಡಿದ ಸರ್ಕಾರ ಮುಂದಿನ ಬಜೆಟ್‌ನಲ್ಲಿ ಈ ಅಸಮತೋಲನವನ್ನು ಸರಿಪಡಿಸುವುದಾಗಿ ಆಯೋಗಕ್ಕೆ ಸಮಜಾಯಿಸಿ ನೀಡಿತ್ತು. ಆದರೆ ಯಡಿಯೂರಪ್ಪನವರಿಗೆ ಅದು ನೆನಪಾಗಿಲ್ಲ.

ಸಮಾಜ ಕಲ್ಯಾಣ ಇಲಾಖೆಯಂತೂ ಯಾವ ದುಃಸ್ಥಿತಿಯಲ್ಲಿದೆ ಎಂದರೆ, ತನ್ನ ಮೂಲ ಉದ್ದೇಶಗಳಲ್ಲಿ ಒಂದನ್ನೂ ಪ್ರಾಮಾಣಿಕತೆಯಿಂದ ಈಡೇರಿಸಲು ಸಾಧ್ಯವಾಗುತ್ತಿಲ್ಲ. ಸರ್ಕಾರ ನಡೆಸುವ ನೂರಕ್ಕೆ ತೊಂಬತ್ತು ವಿದ್ಯಾರ್ಥಿನಿಲಯಗಳು ಕೊಳೆತು ನಾರುತ್ತಿವೆ. ವಿದ್ಯಾರ್ಥಿವೇತನಗಳನ್ನು ಕಳೆದ ಮೂರು–ನಾಲ್ಕು ವರ್ಷಗಳಿಂದ ನೀಡಿಲ್ಲ. ಪರಿಶಿಷ್ಟ ಜಾತಿ/ವರ್ಗಗಳ ಕಾರ್ಪೊರೇಷನ್ ಅಲ್ಲಿನ ನೌಕರರಿಗೂ ಸಂಬಳವಿಲ್ಲದ ಸ್ಥಿತಿ ಮುಟ್ಟಿದೆ. ಗಂಗಾ ಕಲ್ಯಾಣ ಯೋಜನೆ ಅಡಿ ಹಾಕಿದ ಕೊಳವೆ ಬಾವಿಗಳಿಗೆ 5–6 ವರ್ಷ ಕಳೆದರೂ ವಿದ್ಯುತ್ ಸಂಪರ್ಕ ಕಲ್ಪಿಸಲಾಗದೆ ಬಾವಿಗಳು ಮುಚ್ಚಿ ಹೋಗುತ್ತಿವೆ. ನೇರ ಸಾಲದ ಮೂಲಕ ಕೊಂಡುಕೊಂಡ ವಾಹನಗಳೆಲ್ಲ ಆರು ತಿಂಗಳಿಗೆ ಗುಜರಿ ಸೇರಿ ಮೊದಲೇ ಕಂಗೆಟ್ಟಿದ್ದ ದಲಿತ ಯುವಕರನ್ನು ಸಾಲದ ಸುಳಿಗೆ ಸಿಕ್ಕಿಸಿವೆ.

ಹೇಳುತ್ತಾ ಹೋದರೆ ಇದು ಮುಗಿಯುವುದೇ ಇಲ್ಲ. 'ಉರಿವ ಮನೆಯಲ್ಲಿ ಗಳು ಹಿರಿಯುವ ಕೆಲಸ'ವೊಂದನ್ನು ಬಿಟ್ಟರೆ ಈ ಅಭಿವೃದ್ಧಿ ರಂಗದ ಬಜೆಟ್ ಬೇರೇನನ್ನೂ ಮಾಡಿಲ್ಲ. ಇದೇ ಸ್ಥಿತಿ ಮುಂದುವರೆದರೆ ಬಜೆಟ್ ಕೇವಲ ಕಿರಾಣಿ ಅಂಗಡಿಯ ರಾಮ–ಕೃಷ್ಣರ ಲೆಕ್ಕ ಮಾತ್ರವಾಗಿ ಉಳಿಯುವುದರಲ್ಲಿ ಯಾವುದೇ ಸಂದೇಹವಿಲ್ಲ.

○ ಇಂದೂಧರ ಹೊನ್ನಾಪುರ

ಗೋಧ್ರಾ ಹತ್ಯಾಕಾಂಡ: ಐದು ವರ್ಷಗಳ ಬಳಿಕ

ಸತ್ಯಪ್ರಕಾಶ್ ಎಂ. ಆರ್

"ಇಲ್ಲಿ ಬೆಳಕು ಕೂಡ ಇಲ್ಲ. ನಾವು ರಾತ್ರಿ ಹೊತ್ತು ದೀಪ ಹಚ್ಚುತ್ತೇವೆ," ಎನ್ನುತ್ತಾರೆ ಕೌ-ಅಮ್ಲಾಯ್ ಗ್ರಾಮದ ಮೆಹದಿ. "ನನ್ನ ಮೂವರು ಹೆಣ್ಣು ಮಕ್ಕಳು ಮನೆಗೆಲಸ ಮಾಡುವ ಮೂಲಕ ತಿಂಗಳಿಗೆ ತಲಾ ಒಬ್ಬೊಬ್ಬರು ೨೦೦ ರೂ ಗಳಿಸುತ್ತಾರೆ. ಇದೇ ನಮ್ಮ ಜೀವನಾಂಶಕ್ಕೆ ಆಧಾರವಾಗಿದೆ." ೨೦೦೨ರಲ್ಲಿ ನಡೆದ ಗಲಭೆಯ ಸಂದರ್ಭದಲ್ಲಿ ಆತನ ಗ್ರಾಮದ ಸುಮಾರು ೬೨ ಮನೆಗಳಿಗೆ ಬೆಂಕಿ ಇಟ್ಟಾಗ ಮೆಹದಿ ಹತ್ತಿರದ ಮೊದಸಾ ಪಟ್ಟಣಕ್ಕೆ ಆಶ್ರಯ ಅರಸಿ ಸ್ವಂತ ಗ್ರಾಮ ಬಿಡಬೇಕಾಯಿತು. ಅಂದಿನಿಂದ ಮೆಹದಿ ತನ್ನೂರಿಗೆ ಮತ್ತೆ ಹಿಂದಿರುಗಲಾಗಿಲ್ಲ. ಸ್ಥಳೀಯ ಮುಸ್ಲಿಂ ಸಂಘ ಸಂಸ್ಥೆಗಳು ನಿರಾಶ್ರಿತರಿಗಾಗಿ ೧೦x೧೦ ಅಡಿ ಕೊಠಡಿಗಳನ್ನು ಇಲ್ಲಿ ನಿರ್ಮಿಸಿವೆ. ಮೆಹದಿ ಈಗಲೂ ಕೊಠಡಿ ಹಂಚಿಕೆಯ ನಿರೀಕ್ಷೆಯಲ್ಲಿದ್ದಾರೆ. ಕಳೆದ ಐದು ವರ್ಷಗಳಿಂದ ಅಂಧಕಾರದಲ್ಲಿಯೇ ಕ್ಯಾಂಪ್ ಹೂಡಿದ್ದಾರೆ ಮೆಹದಿ ಹುಸೇನ್.

ನಾವು ಬಹಳಷ್ಟು ಮಂದಿ ಪ್ರತಿದಿನದ ಒತ್ತಡಗಳಿಂದ ಮುಕ್ತಿ ಪಡೆಯಲು ಪ್ರವಾಸಿ ಕ್ಯಾಂಪ್‌ಗಳನ್ನು ಹಾಕುತ್ತೇವೆ. ಆದರೆ ಮೆಹದಿ ಹುಸೇನ್ ವಂಜಾರಾಗೆ ಇದೇ ಜೀವನವಾಗಿಬಿಟ್ಟಿದೆ. ಉತ್ತರ ಗುಜರಾತ್‌ನ ಮೊದಸಾ ಪಟ್ಟಣದಲ್ಲಿ ಸಾಕಷ್ಟು ಧೂಳು, ಮಾಲಿನ್ಯದಿಂದ ಕೂಡಿರುವ ಹೊರವಲಯಗಳಲ್ಲಿ ನಿರ್ಮಿಸಲಾಗಿರುವ ನಿರಾಶ್ರಿತರ ಶಿಬಿರದ ಟೆಂಟ್ ಸೂರಿನಡಿ ಕಳೆದ ಐದು ವರ್ಷಗಳಿಂದ ಈತ ಮತ್ತು ಎಂಟು ಮಂದಿ ಸದಸ್ಯರನ್ನೊಳಗೊಂಡ ಈತನ ಕುಟುಂಬ ಕಾಲ ದೂಡುತ್ತಿದೆ.

"ಇಲ್ಲಿ ಬೆಳಕು ಕೂಡ ಇಲ್ಲ. ನಾವು ರಾತ್ರಿ ಹೊತ್ತು ದೀಪ ಹಚ್ಚುತ್ತೇವೆ," ಎನ್ನುತ್ತಾರೆ ಮೂಲತಃ ಕೌ-ಅಮ್ಲಾಯ್ ಗ್ರಾಮದ ಮೆಹದಿ. "ನನ್ನ ಮೂವರು ಹೆಣ್ಣು ಮಕ್ಕಳು ಮನೆಗೆಲಸ ಮಾಡುವ ಮೂಲಕ ತಿಂಗಳಿಗೆ ತಲಾ ಒಬ್ಬೊಬ್ಬರು ೨೦೦ ರೂ ಗಳಿಸುತ್ತಾರೆ. ಇದೇ ನಮ್ಮ ಜೀವನಾಂಶಕ್ಕೆ ಆಧಾರವಾಗಿದೆ." ೨೦೦೨ರಲ್ಲಿ ನಡೆದ ಗಲಭೆಯ ಸಂದರ್ಭದಲ್ಲಿ ಆತನ ಗ್ರಾಮದ ಸುಮಾರು ೬೨ ಮನೆಗಳಿಗೆ ಬೆಂಕಿ ಇಟ್ಟಾಗ ಮೆಹದಿ ಹತ್ತಿರದ ಮೊದಸಾ ಪಟ್ಟಣಕ್ಕೆ ಆಶ್ರಯ ಅರಸಿ ಸ್ವಂತ ಗ್ರಾಮ ಬಿಡಬೇಕಾಯಿತು. ಅಂದಿನಿಂದ ಮೆಹದಿ ತನ್ನೂರಿಗೆ ಮತ್ತೆ ಹಿಂದಿರುಗಲಾಗಿಲ್ಲ. ಸ್ಥಳೀಯ ಮುಸ್ಲಿಂ ಸಂಘ ಸಂಸ್ಥೆಗಳು ನಿರಾಶ್ರಿತರಿಗಾಗಿ ೧೦x೧೦ ಅಡಿ ಕೊಠಡಿಗಳನ್ನು ಇಲ್ಲಿ ನಿರ್ಮಿಸಿವೆ. ಮೆಹದಿ ಈಗಲೂ ಕೊಠಡಿ ಹಂಚಿಕೆಯ ನಿರೀಕ್ಷೆಯಲ್ಲಿದ್ದಾರೆ. ಕಳೆದ ಐದು ವರ್ಷಗಳಿಂದ ಅಂಧಕಾರದಲ್ಲಿಯೇ ಕ್ಯಾಂಪ್ ಹೂಡಿದ್ದಾರೆ ಮೆಹದಿ ಹುಸೇನ್.

ಸುಮಾರು ೩೦,೦೦೦ ನಿರಾಶ್ರಿತರಿಗೆ ಆಶ್ರಯತಾಣವಾಗಿ ಸುಮಾರು ೮೧ ನಿರಾಶ್ರಿತರ ಶಿಬಿರಗಳು ಇಂದಿಗೂ ಗುಜರಾತ್‌ನಲ್ಲಿ ಅಸ್ತಿತ್ವದಲ್ಲಿವೆ. ಈ ಶಿಬಿರಗಳಲ್ಲಿ ನೆಲೆಸಿರುವ ನಿವಾಸಿಗಳು ಸ್ಥಳೀಯ ತೆರಿಗೆ ಪಾವತಿಸುತ್ತಾ ಬಂದಿದ್ದರೂ ಇವರಿಗೆ ನೀರು ಮತ್ತು ವಿದ್ಯುಚ್ಛಕ್ತಿಯಂತಹ ಮೂಲಭೂತ ಸೌಕರ್ಯ ಇನ್ನೂ ಲಭ್ಯವಾಗಿಲ್ಲ. ಮೊದಸಾ ಪಟ್ಟಣದಲ್ಲಿ ನಿರಾಶ್ರಿತರು ಸ್ಥಳೀಯ ಗುತ್ತಿಗೆದಾರರಿಗೆ ನೀರಿಗಾಗಿ ತಿಂಗಳಿಗೆ ೩೦ ರೂ. ಪಾವತಿಸುತ್ತಿದ್ದಾರೆ. "ಬಟ್ಟೆ ಒಗೆಯುವುದಕ್ಕಾಗಿ ಸೂಕ್ತ ಸ್ಥಳಾವಕಾಶವಿಲ್ಲ. ಕೊಳಚೆ ಮೋರಿಗಳಿಲ್ಲ. ಇದರಿಂದಾಗಿ ಸಾಕಷ್ಟು ಜಗಳಗಳು ಉದ್ಭವಿಸಿದರೂ, ನಾವು ಸದ್ಯ ಸುರಕ್ಷಿತವಾಗಿದ್ದೇವೆ" ಎಂದು ಮುಮ್ತಾಜ್ ಬೇಗ್ ಶೇಖ್ ತಿಳಿಸಿದರು.



೨೦೦೨ರ ಫೆಬ್ರವರಿ ೨೭ರಂದು ಸಾಬರಮತಿ ಎಕ್ಸ್‌ಪ್ರೆಸ್ ಗೋಧ್ರಾ ನಿಲ್ದಾಣದಲ್ಲಿ ಬಂದು ನಿಂತಾಗ ರೈಲಿಗೆ ಬೆಂಕಿ ಹೊತ್ತಿಕೊಂಡು ೫೯ ಪ್ರಯಾಣಿಕರು ಸಜೀವವಾಗಿ ಸುಟ್ಟು ಭಸ್ಮವಾದರು. ಬೆಂಕಿ ತಗುಲಿದ ಕಾರಣ ಇದುವರೆವಿಗೂ ಇತ್ಯರ್ಥವಾಗಿಲ್ಲ. ರೈಲ್ವೆ ಸಚಿವಾಲಯದ ವರದಿ ಪ್ರಕಾರ ಇದು ಒಂದು ಅಪಘಾತ. ಆದರೆ ಗುಜರಾತ್ ಪೊಲೀಸರ ಪ್ರಕಾರ, ಈ ಘಟನೆ, ಅಯೋಧ್ಯೆ ರಾಮ ಮಂದಿರದ ಮಹಾಯಜ್ಞದಲ್ಲಿ ಪಾಲ್ಗೊಳ್ಳಲು ವಿಶ್ವ ಹಿಂದೂ ಪರಿಷತ್ ಕಳುಹಿಸಿದ ಕರಸೇವಕರನ್ನು ಕೊಲ್ಲಲು ಹೂಡಿದ ಒಂದು ಭಯೋತ್ಪಾದಕ ಕೃತ್ಯ.

ಗೋಧ್ರಾ ದುರ್ಘಟನೆ ನಡೆದ ಕೆಲವೇ ಗಂಟೆಗಳ ಬಳಿಕ ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಇದೊಂದು ಭಯೋತ್ಪಾದಕ ಕೃತ್ಯವೆಂದು ಘೋಷಿಸಿಬಿಟ್ಟರು. ನಂತರ ಗುಜರಾತ್‌ನ ಎಲ್ಲೆಡೆ 'ರಕ್ತಕ್ಕೆ ರಕ್ತ' ಎಂಬ ಕರೆ ಮೊಳಗಿತು. ಮರುದಿನವೇ ಯೋಜನಾಬದ್ಧವಾಗಿ ಸುಮಾರು ಎರಡು ತಿಂಗಳ ಕಾಲ ನಡೆದ ಜನಾಂಗೀಯ ಹತ್ಯಾಕಾಂಡದಲ್ಲಿ ೧,೦೦೦ಕ್ಕೂ ಹೆಚ್ಚು ಮುಸ್ಲಿಮರನ್ನು ಹತ್ಯೆ ಮಾಡಲಾಯಿತು ಹಾಗೂ ೨೦,೦೦೦ಕ್ಕೂ ಹೆಚ್ಚು ಮಂದಿ ನಿರಾಶ್ರಿತರಾದರು.

ಐದು ವರ್ಷಗಳ ಬಳಿಕ, ಈಗ ಹಿಂಸಾಚಾರ ನಿಂತಿದೆ. ಆದರೆ ಭಯ ಮತ್ತು ತಾರತಮ್ಯದ ವಾತಾವರಣ ಈಗಲೂ ದಟ್ಟವಾಗಿ ಮನೆಮಾಡಿದೆ. ಘಟನೆಯ ಮೂಲಕ ಅಲ್ಪಸಂಖ್ಯಾತರಿಗೆ 'ತಕ್ಕ ಪಾಠ ಕಲಿಸಲಾಯಿತು.' 'ಹಿಂದೂ ರಾಷ್ಟ್ರ' ನಿರ್ಮಾಣದ ನಿಟ್ಟಿನಲ್ಲಿ 'ಹಿಂದುತ್ವ ಪ್ರಯೋಗಾಲಯ'ವಾಗಿ ಬದಲಾಗಿರುವ ಗುಜರಾತ್‌ನಲ್ಲಿ ಅಲ್ಪಸಂಖ್ಯಾತರು ಎರಡನೆಯ ದರ್ಜೆ ನಾಗರಿಕರಾಗಿ ಬದುಕಬೇಕಾಗಿದೆ. ಅಲ್ಪಸಂಖ್ಯಾತರನ್ನು ಪ್ರತ್ಯೇಕಗೊಳಿಸಿರುವ ಗುಜರಾತ್ ಸಮಾಜ ಒಡೆದು ಚೂರಾಗಿದೆ. ಅಲ್ಪಸಂಖ್ಯಾತರು ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರಕ್ಕೆ ಒಳಗಾಗಿದ್ದಾರೆ ಮತ್ತು ಸದಾ ತಮ್ಮ ಸುರಕ್ಷತೆಯ ಬಗ್ಗೆ ಚಿಂತಿಸುತ್ತಾ ಆತಂಕದಲ್ಲಿಯೇ ದಿನ ದೂಡುವಂತಾಗಿದೆ. ಮುಸ್ಲಿಮರು

ಬಲವಂತವಾಗಿ ಕಾಲೋನಿಗಳಲ್ಲಿ ಬದುಕುವಂತಾಗಿದೆ. ಅಹಮದಾಬಾದ್‌ನ ಅತಿದೊಡ್ಡದಾದ ಜುಹಾಪುರ ಕಾಲೋನಿಯಲ್ಲಿ ಯಾವುದೇ ಮೂಲಭೂತ ಸೌಕರ್ಯಗಳಿಲ್ಲದೆಯೂ ಸುಮಾರು ೩೦,೦೦೦ಕ್ಕೂ ಹೆಚ್ಚು ಮಂದಿ ನೆಲೆಸಿದ್ದಾರೆ. ತೀರ ಇತ್ತೀಚೆಗಷ್ಟೆ ಜುಹಾಪುರ ಕಾಲೋನಿ ನಗರ ಮುನಿಸಿಪಲ್ ವ್ಯಾಪ್ತಿಗೆ ಸೇರ್ಪಡೆಯಾಗಿದೆ. ಬಹಳಷ್ಟು ಮಂದಿ ಉನ್ನತ ವರ್ಗದ ಮುಸ್ಲಿಮರು– ನ್ಯಾಯಾಧೀಶರು, ವೈದ್ಯರು, ವಕೀಲರು, ವ್ಯಾಪಾರಸ್ಥರು– ಜುಹಾಪುರಕ್ಕೆ ಬಲವಂತವಾಗಿ ಕಳುಹಿಸಲ್ಪಟ್ಟಿದ್ದಾರೆ. "ಹಿಂದೂ ಬಡಾವಣೆ"ಗಳಲ್ಲಿ ಹೆಚ್ಚಿನ ಹಣ ತರಲು ತಯಾರಿದ್ದರೂ ಯಾರೂ ಮುಸ್ಲಿಮರಿಗೆ ಫ್ಲ್ಯಾಟ್‌ಗಳನ್ನು ಮಾರಾಟ ಮಾಡುವುದಿಲ್ಲ. ಜುಹಾಪುರದಲ್ಲಿ ಒಂದೇ ಒಂದು ಬ್ಯಾಂಕ್ ಕೂಡ ಇಲ್ಲ. ರಾಜ್ಯ ರಸ್ತೆ ಸಾರಿಗೆಯ ಒಂದು ಬಸ್ ಕೂಡ ಈ ಮಾರ್ಗವಾಗಿ ಸಂಚರಿಸುವುದಿಲ್ಲ.

೨೦೦೨ರ ಹಿಂಸಾಚಾರದ ನಂತರ ನಗರದಲ್ಲಿ ಬಹಳಷ್ಟು ಇತರ ಕಾಲೋನಿಗಳು ಹಾಗೂ ಮೊದಸಾದಂತಹ ಸಣ್ಣ ಪಟ್ಟಣಗಳು ಹುಟ್ಟಿಕೊಂಡವು. ನಿರಾಶ್ರಿತರು ನೆಲೆಸಿದ ಸ್ಥಳಗಳು ಈಗ ಮುಸ್ಲಿಂ ಕಾಲೋನಿಗಳಾಗಿ ಮಾರ್ಪಾಟಾಗುತ್ತಿವೆ. ಹಿಂಸಾಚಾರದಲ್ಲಿ ಬದುಕುಳಿದ ಕೆಲವರು ಅಹಮದಾಬಾದ್‌ನ ಹೊರವಲಯದಲ್ಲಿ ತ್ಯಾಜ್ಯ ವಸ್ತುಗಳನ್ನು ಹಾಕಲು ಬಳಸುವ ಪ್ರದೇಶದ ಪಕ್ಕದಲ್ಲಿ ನೆಲೆಸಿದ್ದಾರೆ. ಈ ಮಂದಿ ಕಸದಗುಡ್ಡೆಗಳ ಅಂಚಿನಲ್ಲಿ ಹೊಗೆಯ ನಡುವೆ, ತಲೆಯ ಮೇಲೆ ಸುತ್ತುವ ಕಾಗೆಗಳ ಮಧ್ಯೆ, ಹತ್ತಿರದ ವರ್ಕ್‌ಷಾಪ್‌ಗಳಿಂದ ಬರುವ ಹೊಗೆಯ ಜತೆಗೆ ಬದುಕುತ್ತಿದ್ದಾರೆ. ಈ ಹೊಸ ಪಟ್ಟಣಕ್ಕೆ "ಸಿಟಿಝನ್ ನಗರ" ಎಂದು ಹೆಸರಿಟ್ಟಿರುವುದು ಪರಿಸ್ಥಿತಿಯ ವ್ಯಂಗ್ಯ. ದಬ್ಬಾಳಿಕೆ ನಡೆಸುವವರು ಅಧಿಕಾರದಲ್ಲಿದ್ದಾರೆ. ಬಲಿಪಶುಗಳು ಸೆರೆಮನೆಯಲ್ಲಿದ್ದಾರೆ. ಇದಕ್ಕೆ ಇಲ್ಲೊಂದು ಉತ್ತಮ ನಿದರ್ಶನ ಇಲ್ಲಿದೆ: ಮಹಿಳೆಯರು ಮತ್ತು ಮಕ್ಕಳನ್ನು ಅಮಾನವೀಯವಾಗಿ ಬಲಿ ತೆಗೆದುಕೊಂಡ ನರೋಡಾ ಪಾಟಿಯಾದಂತಹ ಹೀನಾಯ ಕೇಸ್‌ನಲ್ಲಿ ಬಾಬು ಭಜರಂಗಿ ಆಪಾದಿತ. ಆದರೆ ಇಂದು ಈತ ಸ್ವಯಂ ಘೋಷಿತ ಹಿಂದೂ ಪರಿಪಾಲಕ. ಈತ ಸಮುದಾಯದಿಂದ ಹೊರಗೆ ವಿವಾಹವಾಗಿರುವ ಪಟೇಲ್ ಸಮುದಾಯದ ಹೆಣ್ಣು ಮಕ್ಕಳನ್ನು ಬಲವಂತವಾಗಿ ಅಪಹರಣ ಮಾಡಿ ಕರೆದು ತರುತ್ತಾನೆ. ಆತನೇ ಹೇಳುವ ಪ್ರಕಾರ ಇಲ್ಲಿಯವರೆಗೆ ಸುಮಾರು ೭೦೬ ಮಂದಿ ಹುಡುಗಿಯರನ್ನು "ಉಳಿಸಿ"ದ್ದಾನೆ. ಇತ್ತೀಚೆಗೆ ಬಾಬು ಭಜರಂಗಿ ಹಿಂಸೆಯ ಬೆದರಿಕೆ ಒಡ್ಡಿದ್ದರಿಂದ ಗುಜರಾತ್‌ನ ಚಿತ್ರಮಂದಿರದ ಮಾಲೀಕರು "ಪರ್ಝಾನಿಯಾ" ಚಿತ್ರವನ್ನು ಪ್ರದರ್ಶಿಸಲು ನಿರಾಕರಿಸಿದ್ದರು.

ಬಾಬುಭಾಯಿ ಇವತ್ತು ಸ್ವತಂತ್ರ. ಆದರೆ ಬಹಳಷ್ಟು ಮಂದಿ ಪ್ರತ್ಯಕ್ಷ ಸಾಕ್ಷ್ಯಗಳು ಇಂದು ಜೀವವನ್ನು ಕೈಯಲ್ಲಿ ಹಿಡಿದುಕೊಂಡು ಬದುಕುವಂತಾಗಿದೆ. ಇವರೆಲ್ಲರಿಗೂ ನ್ಯಾಯಾಲಯದಲ್ಲಿ ಸಾಕ್ಷ್ಯಾಧಾರ ಒದಗಿಸದಿರುವಂತೆ ಬೆದರಿಕೆ ಒಡ್ಡಲಾಗುತ್ತಿದೆ. ಈ ಜನಗಳಿಗೆ ದಿಕ್ಕೇ ತೋಚದಂತಾಗಿದೆ. ಪೊಲೀಸರ ಮೊರೆ ಹೋಗುವ ಧೈರ್ಯ ಮಾಡಿದರೆ ಜೈಲಿನ ಸರಳುಗಳ ಹಿಂದೆ ದಬ್ಬಲ್ಪಡುವ ಭಯ. ನರೋಡಾ ಪಾಟಿಯಾ ಕೇಸ್‌ಗೆ ಸಂಬಂಧಿಸಿದಂತೆ ಪೊಲೀಸ್ ಹೇಳಿಕೆಗಳಲ್ಲಿ ಪ್ರಮುಖ ಹಿಂದುತ್ವ ನಾಯಕರನ್ನು ಗುರುತಿಸಿದ ಪ್ರತ್ಯಕ್ಷ ಸಾಕ್ಷ್ಯಗಳನ್ನು ಕೊಲೆ ಮೊಕದ್ದಮೆಗಳಲ್ಲಿ ಸಿಲುಕಿಸಿ ಆರು ತಿಂಗಳಿಗೂ ಹೆಚ್ಚು ಅವಧಿ

೨೦೦೨ರ ಹಿಂಸಾಚಾರದ ನಂತರ ನಗರದಲ್ಲಿ ಬಹಳಷ್ಟು ಇತರ ಕಾಲೋನಿಗಳು ಹಾಗೂ ಮೊದಸಾದಂತಹ ಸಣ್ಣ ಪಟ್ಟಣಗಳು ಹುಟ್ಟಿಕೊಂಡವು. ನಿರಾಶ್ರಿತರು ನೆಲೆಸಿದ ಸ್ಥಳಗಳು ಈಗ ಮುಸ್ಲಿಂ ಕಾಲೋನಿಗಳಾಗಿ ಮಾರ್ಪಾಟಾಗುತ್ತಿವೆ. ಹಿಂಸಾಚಾರದಲ್ಲಿ ಬದುಕುಳಿದ ಕೆಲವರು ಅಹಮದಾಬಾದ್‌ನ ಹೊರವಲಯದಲ್ಲಿ ತ್ಯಾಜ್ಯ ವಸ್ತುಗಳನ್ನು ಹಾಕಲು ಬಳಸುವ ಪ್ರದೇಶದ ಪಕ್ಕದಲ್ಲಿ ನೆಲೆಸಿದ್ದಾರೆ. ಈ ಮಂದಿ ಕಸದಗುಡ್ಡೆಗಳ ಅಂಚಿನಲ್ಲಿ ಹೊಗೆಯ ನಡುವೆ, ತಲೆಯ ಮೇಲೆ ಸುತ್ತುವ ಕಾಗೆಗಳ ಮಧ್ಯೆ, ಹತ್ತಿರದ ವರ್ಕ್‌ಷಾಪ್‌ಗಳಿಂದ ಬರುವ ಹೊಗೆಯ ಜತೆಗೆ ಬದುಕುತ್ತಿದ್ದಾರೆ. ಈ ಹೊಸ ಪಟ್ಟಣಕ್ಕೆ "ಸಿಟಿಝನ್ ನಗರ" ಎಂದು ಹೆಸರಿಟ್ಟಿರುವುದು ಪರಿಸ್ಥಿತಿಯ ವ್ಯಂಗ್ಯ. ದಬ್ಬಾಳಿಕೆ ನಡೆಸುವವರು ಅಧಿಕಾರದಲ್ಲಿದ್ದಾರೆ. ಬಲಿಪಶುಗಳು ಸೆರೆಮನೆಯಲ್ಲಿದ್ದಾರೆ. ಗುಜರಾತ್ ಹತ್ತಿ ಉರಿಯುತ್ತಿದ್ದರೂ ಸತ್ಯ ಮರೆ ಮಾಚುವುದರಲ್ಲಿ ಗುಜರಾತ್ ಸರ್ಕಾರ ನಿರತವಾಗಿದೆ ಎಂದು ಉಚ್ಚ ನ್ಯಾಯಾಲಯ ಟೀಕೆ ಮಾಡಿತು. ಆದರೂ ಪ್ರಮುಖ ವ್ಯಕ್ತಿಗಳಿಗೆ ಇನ್ನೂ ಶಿಕ್ಷೆಯಾಗಿಲ್ಲ.

ಜೈಲಿನಲ್ಲಿ ಕೊಳೆಯುವಂತೆ ಮಾಡಲಾಗಿದೆ. ಇಂಥಹಾ ಇನ್ನೂ ಬಹಳ ಮಂದಿ ಇದ್ದಾರೆ. ಪ್ರತಿದಿನದ ಬೆದರಿಕೆ ಹಾಗೂ ಒತ್ತಡಗಳ ನಡುವೆಯೂ ಪ್ರತ್ಯಕ್ಷ ಸಾಕ್ಷಿಗಳು ನ್ಯಾಯಕ್ಕಾಗಿ ಹೋರಾಡಲು ಇನ್ನೂ ಆತ್ಮಸ್ಥೈರ್ಯ ಉಳಿಸಿಕೊಂಡು ಬಂದಿರುವುದು ಮಾತ್ರ ಆಶ್ಚರ್ಯಕರ ಸಂಗತಿ.

ಮಾಧ್ಯಮಗಳಿಂದ ಸಾಕಷ್ಟು ಪ್ರಚಾರ ಗಿಟ್ಟಿಸಿದ ಬೆಸ್ಟ್ ಬೇಕರಿ ಪ್ರಕರಣ ದುರದೃಷ್ಟವಶಾತ್ ವಿಷಾದ ಅಂತ್ಯ ಕಾಣಬೇಕಾಯಿತು. ಬಹಳಷ್ಟು ಏರಿಳಿತಗಳ ನಂತರ ಸ್ಥಳೀಯ ಆಪಾದಿತರು ಜೈಲುವಾಸ ಅನುಭವಿಸಿದರೂ ಪ್ರಮುಖ ಪ್ರತ್ಯಕ್ಷದರ್ಶಿ ಝಹೀರಾ ಶೇಖ್ ನ್ಯಾಯಾಂಗ ನಿಂದನೆಗೆ (perjury) ಗುರಿಯಾಗಿ ಶಿಕ್ಷೆಗೆ ಒಳಗಾದರು. ಝಹೀರಾ ವಡೋದರ ಜಿಲ್ಲಾ ನ್ಯಾಯಾಲಯದಲ್ಲಿ ತಮ್ಮ ಹೇಳಿಕೆಯನ್ನು ಹಿಂತೆಗೆದುಕೊಂಡರು. ಬಿಜೆಪಿ ಶಾಸಕ ತನ್ನ ಕುಟುಂಬವನ್ನು ಒಪ್ಪಂದದ ನಿರ್ಧಾರಕ್ಕೆ ಬರುವಂತೆ ಬಲವಂತಪಡಿಸಿದ್ದರಿಂದ ಜಿಲ್ಲಾ ನ್ಯಾಯಾಲಯದಲ್ಲಿ ಸುಳ್ಳು ಹೇಳಬೇಕಾಯಿತು ಎಂದು ನಂತರ ಆಕೆ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದರು. ಆದರೆ ಮರು–ವಿಚಾರಣೆಯಲ್ಲಿ ಮತ್ತೆ ಆಕೆ ತನ್ನ ಹೇಳಿಕೆ ಹಿಂಪಡೆದಾಗ ನ್ಯಾಯಾಲಯ ನ್ಯಾಯಾಂಗ ನಿಂದನೆ (ರಿಜಡಿರಿಣಡಿಥಿ) ಕಾರಣ ಜೈಲು ಶಿಕ್ಷೆ ವಿಧಿಸಿತು. ಝಹೀರಾ ತನ್ನ ಹೇಳಿಕೆ ಬದಲಿಸುವುದರಲ್ಲಿ ಸ್ಥಳೀಯ ಬಿಜೆಪಿ ಶಾಸಕನ ಪಾತ್ರ ಕುರಿತು ಇದುವರೆಗೂ ಯಾವುದೇ ವಿಚಾರಣೆಗೆ ಆದೇಶ ನೀಡಲಾಗಿಲ್ಲ.

ಗುಜರಾತ್ ಹತ್ತಿ ಉರಿಯುತ್ತಿದ್ದರೂ ಸತ್ಯ ಮರೆ ಮಾಚುವುದರಲ್ಲಿ ಗುಜರಾತ್ ಸರ್ಕಾರ ನಿರತವಾಗಿದೆ ಎಂದು ಉಚ್ಚ ನ್ಯಾಯಾಲಯ ಟೀಕೆ ಮಾಡಿತು. ಆದರೂ ಪ್ರಮುಖ ವ್ಯಕ್ತಿಗಳಿಗೆ ಇನ್ನೂ ಶಿಕ್ಷೆಯಾಗಿಲ್ಲ. ಮಾಜಿ ಸಂಸದ ಅಹ್ಸಾನ್ ಜಫ್ರಿ ಪತ್ನಿ ಝಕಿಯಾ ಜಫ್ರಿ ಮುಖ್ಯಮಂತ್ರಿ ಹಾಗೂ ಇತರ ೬೨ ಮಂದಿಯ ವಿರುದ್ಧ ದೂರು ದಾಖಲಿಸಿದ್ದಾರೆ. ಆದರೆ ಮೋದಿ ಅವರ ಮನೆಯಿಂದ ಕೆಲವೇ ಹೆಜ್ಜೆಗಳ ಅಂತರದಲ್ಲಿರುವ ಪೊಲೀಸ್ ಠಾಣೆಯಲ್ಲಿ ದೂರು ತಣ್ಣಗೆ ಕಡತಗಳಲ್ಲಿ ನಿದ್ರೆ ಮಾಡುತ್ತಿದೆ.

ಗುಜರಾತ್‌ನಲ್ಲಿ ನ್ಯಾಯದ ದಾರಿ ಕಲ್ಲು ಬಂಡೆಗಳಿಂದ ಕೂಡಿದೆ. ಜಿಲ್ಲಾ ನ್ಯಾಯಾಲಯಗಳಲ್ಲಿ ಮಹಿಳೆಯರು ತಾವು ಅತ್ಯಾಚಾರಗೊಂಡ ಬಗ್ಗೆ ವಿವರಿಸುವಾಗ ಆಪಾದಿತರು ಎಗ್ಗಿಲ್ಲದೆ ಅಸಹ್ಯಕರ ಹೇಳಿಕೆಗಳನ್ನು ನೀಡುತ್ತಾರೆ. ಲುನಾವಾಡಾದ ನಿರಾಶ್ರಿತರು ತಮ್ಮ ಸಂಬಂಧಿಕರನ್ನು ಮಣ್ಣು ಮಾಡಲಾಗಿರುವ ಸಾಮೂಹಿಕ ಸಮಾಧಿ ಸ್ಥಳಗಳನ್ನು ಕೆತ್ತಿದರೆ, ಪೊಲೀಸರು ಅವರ ವಿರುದ್ಧ ಮೊಕದ್ದಮೆ ದಾಖಲು ಮಾಡಿಕೊಳ್ಳುತ್ತಾರೆ. ಅಧಿಕಾರದಲ್ಲಿರುವ ರಾಜಕಾರಣಿಗಳ ಕೃಪಾ ಕಟಾಕ್ಷವಿಲ್ಲದಿದ್ದರೆ ನೀವು ಗುಜರಾತ್ ಪೊಲೀಸರನ್ನು ನಂಬಲು ಸಾಧ್ಯವೇ ಇಲ್ಲ. ಕೋಮು ಹಿಂಸಾಚಾರಕ್ಕೆ ಸಂಬಂಧಿಸಿದ ಸುಮಾರು ೪,೨೫೨ ಕೇಸ್‌ಗಳಲ್ಲಿ ಅರ್ಧಕ್ಕಿಂತ ಹೆಚ್ಚು ಕೇಸ್‌ಗಳನ್ನು "ಸತ್ಯ, ಆದರೆ ಸಾಕ್ಷ್ಯಾಧಾರಗಳಿಲ್ಲ' ಎಂಬ ಕಾರಣಕ್ಕಾಗಿ ಮುಚ್ಚಿ ಹಾಕಲಾಗಿದೆ. ಸಾಕಷ್ಟು ಪುರಾವೆಗಳಿಲ್ಲದ ಕಾರಣ ಚಾರ್ಜ್‌ಷೀಟ್ ದಾಖಲು ಮಾಡಿಲ್ಲ ಎಂದು ಪೊಲೀಸರು ಹೇಳುತ್ತಾರೆ. ಆದರೆ ಪೊಲೀಸರೇ ಸಾಕಷ್ಟು ಪುರಾವೆಗಳನ್ನು ಮರೆಮಾಚಿರುವುದು ಅಥವಾ ಮೂಲೆಗುಂಪು ಮಾಡಿರುವುದು ನಿಜಾಂಶ. ಸುಪ್ರೀಂ ಕೋರ್ಟ್ ಈ ಕೇಸ್‌ಗಳನ್ನು ಮರುವಿಚಾರಣೆಗೆ ಒಳಪಡಿಸಬೇಕೆಂದು ಆದೇಶ ನೀಡಿದೆ. ಆದರೆ ಇನ್ನೂ ಪೊಲೀಸರು ಆದೇಶ ಪಾಲಿಸದೇ ಇರುವುದರಿಂದ ಮಾನವ ಹಕ್ಕುಗಳ ಸಂಸ್ಥೆಗಳು ಕಾನೂನು ನೋಟೀಸ್ ಕೂಡ ಸಲ್ಲಿಸಿವೆ. ಈಗಾಗಲೇ ತಿಲಾಂಜಲಿ ಇಟ್ಟಿದ್ದ ಸುಮಾರು ೨೦೦೦ಕ್ಕೂ ಅಧಿಕ ಕೇಸ್‌ಗಳನ್ನು ಪೊಲೀಸರು ಕಳೆದ ವರ್ಷ ಮತ್ತೆ ತೆರೆದಿದ್ದಾರೆ. ಆದರೆ ಕೇಸ್‌ಗಳನ್ನು ಅರ್ಧಕ್ಕೆ ಕೈಬಿಟ್ಟು ನ್ಯಾಯ ಪ್ರಕ್ರಿಯೆಗೆ ಮಾರಕವಾದ ಯಾರೊಬ್ಬರಿಗೂ ಶಿಕ್ಷೆಯಾಗಲೇ ಇಲ್ಲ.

ಗುಜರಾತ್‌ನಲ್ಲಿ ಇವೆಲ್ಲವೂ ಚರ್ಚೆಗೂ ಯೋಗ್ಯವಲ್ಲದ 'ಸೂಕ್ಷ್ಮ' ವಿಚಾರಗಳಾಗಿ ಪರಿಗಣಿಸಲ್ಪಟ್ಟಿವೆ. ಆದದ್ದನ್ನೆಲ್ಲಾ ಮರೆತು ಮುಂದುವರೆಯಬೇಕು ಎನ್ನುವ ಒತ್ತಡ. ಈ ಹಿಂಸಾಚಾರದ ದಳ್ಳುರಿಯನ್ನು ಮರೆಯಬೇಕಿರುವುದು, ಇದರಿಂದ ನೊಂದ ಬಲಿಪಶುಗಳು. ಆದರೆ ಮರೆವಿಗೆ ಅವಕಾಶವನ್ನೇ ನೀಡಲಾಗುತ್ತಿಲ್ಲ. ಶಾಸನಾತ್ಮಕ ಆಡಳಿತ ಯಂತ್ರ ಮತ್ತು ನ್ಯಾಯ ದೊರಕದೆ ಶಾಂತಿ ಮತ್ತು ಪುನರ್ನಿರ್ಮಾಣ ಕಾರ್ಯ ಸಾಧ್ಯವಿಲ್ಲ. ಜನ ಈಗಲೂ ಕೂಡ ಕರಾಳ ಕನಸಿನಲ್ಲಿ ಜೀವಿಸುತ್ತಿದ್ದಾರೆ. ಕೆಲವು ಕಠಿಣ ಪ್ರಶ್ನೆ

(೩೨ನೇ ಪುಟಕ್ಕೆ)

ಇಂಗ್ಲಿಷ್ ಭಾಷಾ ಕಲಿಕೆ ಮತ್ತು ಭಾಷಾ ನೀತಿ

ಮೇಟಿಮಲ್ಲಿಕಾರ್ಜುನ

ಇಂದು ಇಂಗ್ಲಿಷ್ ಕೇವಲ ವಸಾಹತುಶಾಹಿ ಅಥವಾ ಸಾಮ್ರಾಜ್ಯಶಾಹಿ ಭಾಷೆಯಾಗಿರದೆ ಆ ಎಲ್ಲ ಧೋರಣೆಗಳಿಗೆ ತಕ್ಕ ಪ್ರತಿರೋಧವನ್ನು ಒಡ್ಡುವ ಆಯುಧವಾಗಿಯೂ ನಮಗೆ ಲಭ್ಯವಾಗಿದೆ ಎನ್ನುವುದು ಮಹತ್ವದ ಅಂಶವಾಗಿದೆ. ಒಂದು ರಾಷ್ಟ್ರದ ಭಾಷಾನೀತಿ ಮತ್ತು ಯೋಜನೆ ಬಹಳ ಪ್ರಮುಖವಾದ ಸಂವಿಧಾನಾತ್ಮಕ ನಿರ್ಧಾರವಾಗುತ್ತದೆ. ಆದರೆ, ಭಾರತದಂತಹ ಬಹುಭಾಷಿಕ ಸನ್ನಿವೇಶದಲ್ಲಿ ಈ ತರಹದ ನಿರ್ಧಾರಗಳು ಇನ್ನು ಎಚ್ಚರಿಕೆ ಮತ್ತು ವಿವೇಕದಿಂದ ತೆಗೆದುಕೊಳ್ಳಬಹುದಾದಂತಹ ನಿಲುವುಗಳಾಗುತ್ತವೆ. ಆದ್ದರಿಂದ, ಇಂಗ್ಲಿಷನ್ನು ಒಂದನೆಯ ತರಗತಿಯಿಂದ ಕಲಿಸಬೇಕು ಎನ್ನುವ ತೀರ್ಮಾನಕ್ಕೂ ಮತ್ತು ಭಾಷಾ ನೀತಿಗೆ ಯಾವುದೇ ಸಂಬಂಧವಿಲ್ಲವೆನ್ನುವ ವಾದ ಸೂಕ್ತವಾದುದಲ್ಲ, ಹಾಗಂತ ಇಂಗ್ಲಿಷ್‌ನ್ನು ಒಂದನೇ ತರಗತಿಯಿಂದ ಕಲಿಸಕೂಡದು ಎನ್ನುವ ವಾದವೂ ಕೂಡಾ ಅಷ್ಟೆ ಅಸಮಂಜಸವಾದಂತಹದು.

ಒಂದು ಸಮುದಾಯದ ಶೈಕ್ಷಣಿಕ-ಸಾಂಸ್ಕೃತಿಕ ನಿಲುವುಗಳನ್ನು ನಿರ್ಧರಿಸುವ ಪ್ರಭುತ್ವ ಯಾರಿಗೆ ಸೇರಿದ್ದು ಎನ್ನುವ ಅಂಶವನ್ನು ಕುರಿತು ಯೋಚಿಸುವ ಕ್ರಮವೇ ದಿಗ್ಭ್ರಮೆಯನ್ನುಂಟುಮಾಡುವಂತಹದು. ಕಾರಣ, ಕರ್ನಾಟಕದ ದಲಿತ, ಶೂದ್ರ ಮತ್ತು ಇನ್ನುಳಿದ ಹಿಂದುಳಿದ ಸಮುದಾಯದ ಮಕ್ಕಳಿಗೆ ಇಂಗ್ಲಿಷನ್ನು ಒಂದನೆ ತರಗತಿಯಿಂದ ಕಲಿಸಬೇಕು ಎನ್ನುವ ಬೇಡಿಕೆ ಸಾಮಾಜಿಕ-ಆರ್ಥಿಕವಾಗಿ ಮಹತ್ವವನ್ನು ಪಡೆದುಕೊಂಡಿದೆ. ಇದಕ್ಕೆ ವ್ಯತಿರಿಕ್ತವಾಗಿ, ಕೆಲವು ಬುದ್ಧಿ ಜೀವಿಗಳು (ಇಂಗ್ಲಿಷಿನ ಲಾಭವನ್ನು ಪಡೆದುಕೊಂಡವರು) ಒಂದನೆ ತರಗತಿಯಿಂದ ಇಂಗ್ಲಿಷ್ ಕಲಿಕೆ ತಪ್ಪು ಎನ್ನುವ ವಾದವನ್ನು ಮುಂದೊಡ್ಡಿದ್ದಾರೆ. ಈಗ, ನಾವು ಒಂದು ಪ್ರಮುಖ ಪ್ರಶ್ನೆಯೊಂದಿಗೆ ನಮ್ಮ ಚರ್ಚೆಯನ್ನು ಮುಂದುವರಿಸೋಣ; ಯಾವುದೆ ಸಮುದಾಯದ ಶಿಕ್ಷಣ ಭಾಷೆ ಮತ್ತು ಶಿಕ್ಷಣದಲ್ಲಿ ಕಲಿಸಬೇಕಾದ ಭಾಷೆಗಳು ಯಾವುವು? ಮತ್ತು ಈ ಭಾಷಾ ನೀತಿಯ ಆಧಾರದ ಮೇಲೆ ಒಂದು ಸಮುದಾಯದ ಭವಿಷ್ಯ ನಿರ್ಧಾರವಾಗುತ್ತದೆ ಎನ್ನುವ ಅಂಶವನ್ನು ಮನಗಾಣದಿರುವುದು ವಿಪರ್ಯಾಸದ ಸಂಗತಿ. ಯಾಕೆಂದರೆ, ಶಿಕ್ಷಣ ಕ್ರಮವೂ ಕೂಡ ನಮ್ಮ ಸಾಂಸ್ಕೃತಿಕ ಅಂತಃಸತ್ವವನ್ನು ಕಾಪಾಡಬಹುದು ಅಥವಾ ನಾಶಮಾಡಬಹುದು ಎನ್ನುವ ಸಾಮಾನ್ಯ ಎಚ್ಚರವನ್ನು ಕಳೆದುಕೊಂಡು ಯೋಚಿಸುವ ಸ್ಥಿತಿ ಅಪಾಯಕಾರಿ. ಹಾಗಾಗಿ ಪ್ರತಿಯೊಂದು ಸಮುದಾಯದ ಸಾಂಸ್ಕೃತಿಕ, ಶೈಕ್ಷಣಿಕ ನಿಲುವುಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಸಾಂಸ್ಕೃತಿಕ ವಿವೇಕ ಮತ್ತು ಎಚ್ಚರದಿಂದ ನಿರ್ಧರಿಸಬೇಕು ಎನ್ನುವ ಅಂಶ ಗಮನಾರ್ಹವಾದುದು. ಈ ಎಲ್ಲ ಚರ್ಚೆಯನ್ನು ಇವತ್ತಿನ ಇಂಗ್ಲಿಷ್ ಕಲಿಕೆಯ ತೀರ್ಮಾನಕ್ಕೆ ಪೂರಕವಾಗಿ ಬಳಸಿಕೊಳ್ಳಬೇಕು.

ಒಂದು ವಸಾಹತುಶಾಹಿ, ಸಾಮ್ರಾಜ್ಯಶಾಹಿ ಭಾಷೆಯನ್ನು ಕಲಿಸಬೇಕೋ ಬೇಡವೋ ಎನ್ನುವ ಕುರಿತು ಸುಮಾರು ಆರು ದಶಕಗಳಿಂದ ಚರ್ಚೆ ನಡೆಯುತ್ತಲೇ ಇದೆ. ಆದರೆ, ಇಂದು ಇಂಗ್ಲಿಷ್ ಕೇವಲ ವಸಾಹತುಶಾಹಿ ಅಥವಾ ಸಾಮ್ರಾಜ್ಯಶಾಹಿ ಭಾಷೆಯಾಗಿರದೆ ಆ ಎಲ್ಲ ಧೋರಣೆಗಳಿಗೆ ತಕ್ಕ ಪ್ರತಿರೋಧವನ್ನು ಒಡ್ಡುವ ಆಯುಧವಾಗಿಯೂ ನಮಗೆ ಲಭ್ಯವಾಗಿದೆ ಎನ್ನುವುದು ಮಹತ್ವದ ಅಂಶವಾಗಿದೆ. ಒಂದು ರಾಷ್ಟ್ರದ ಭಾಷಾನೀತಿ ಮತ್ತು ಯೋಜನೆ ಬಹಳ ಪ್ರಮುಖವಾದ ಸಂವಿಧಾನಾತ್ಮಕ ನಿರ್ಧಾರವಾಗುತ್ತದೆ. ಆದರೆ, ಭಾರತದಂತಹ ಬಹುಭಾಷಿಕ ಸನ್ನಿವೇಶದಲ್ಲಿ ಈ ತರಹದ ನಿರ್ಧಾರಗಳು ಇನ್ನು ಎಚ್ಚರಿಕೆ ಮತ್ತು ವಿವೇಕದಿಂದ ತೆಗೆದುಕೊಳ್ಳಬಹುದಾದಂತಹ ನಿಲುವುಗಳಾಗುತ್ತವೆ. ಆದ್ದರಿಂದ, ಇಂಗ್ಲಿಷನ್ನು ಒಂದನೆಯ ತರಗತಿಯಿಂದ ಕಲಿಸಬೇಕು ಎನ್ನುವ ತೀರ್ಮಾನಕ್ಕೂ ಮತ್ತು ಭಾಷಾ ನೀತಿಗೆ ಯಾವುದೇ ಸಂಬಂಧವಿಲ್ಲವೆನ್ನುವ ವಾದ ಸೂಕ್ತವಾದುದಲ್ಲ, ಹಾಗಂತ ಇಂಗ್ಲಿಷ್‌ನ್ನು ಒಂದನೇ ತರಗತಿಯಿಂದ ಕಲಿಸಕೂಡದು ಎನ್ನುವ ವಾದವೂ ಕೂಡಾ ಅಷ್ಟೆ ಅಸಮಂಜಸವಾದಂತಹದು. ಇಂತಹ ಸಂದರ್ಭದಲ್ಲಿ ಭಾಷಾ ನೀತಿಯನ್ನು ರೂಪಿಸುವಾಗ ಶಿಕ್ಷಣ ಕ್ರಮ ಮತ್ತು ಸಾಂಸ್ಕೃತಿಕ ಎಚ್ಚರದಿಂದ ತೀರ್ಮಾನಗಳನ್ನು ತೆಗೆದುಕೊಳ್ಳುವ ಜರೂ

ರತ್ತು ಇದೆ. ಹಾಗಾಗಿ, ಇಂದು ಸರ್ಕಾರಿ ಶಾಲೆಗಳಲ್ಲಿ ಓದುವ ಸಾಮಾನ್ಯ ಪ್ರಜೆಗಳ ಮಕ್ಕಳಿಗೆ ಇಂಗ್ಲಿಷನ್ನು ಕಲಿಸುವ ಕ್ರಮ ತಪ್ಪು ಎನ್ನುವುದು ಕೇವಲ ಹುಸಿ ಆದರ್ಶವಾದೀತು? ಪಕ್ಕದ ಕಾನ್ವೆಂಟ್ ಶಾಲೆಗಳಲ್ಲಿ ಮೇಲುವರ್ಗದ ಮತ್ತು ಶ್ರೀಮಂತ ಮಕ್ಕಳು ಒಂದನೆ ತರಗತಿಗಿಂತಲೂ ಮುಂಚೆ ಇಂಗ್ಲಿಷನ್ನು ಸುಲಲಿತವಾಗಿ, ಸ್ಫುಟವಾಗಿ ಕಲಿಯುವುದಕ್ಕೆ ಸಾಧ್ಯವಾದಾಗ, ಅದೇಕೆ ಸರಕಾರಿ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಅಸಾಧ್ಯ ಎಂಬ ಪ್ರಶ್ನೆ ಆಶ್ಚರ್ಯವನ್ನು ಮೂಡಿಸುವಂತಹದು.

ಜನಸಾಮಾನ್ಯರಿಗೆ ಭಾಷಾ ನೀತಿಯಂತಹ ಪರಿಕಲ್ಪನೆಯೇ ಅಪರಿಚಿತವಾದಂತಹದು. ಹಾಗಾಗಿ, ಯಾವುದೇ ಕೆಲವು ಬುದ್ಧಿಜೀವಿಗಳು ತೀರಾಭಾವಾತಿರೇಕದಿಂದ ಮಾತನಾಡುವ ಮೂಲಕ ಇಂತಹ ಜನಗಳ ಸಮ್ಮತಿಯನ್ನು ಪಡೆದುಕೊಳ್ಳುತ್ತಾರೆ. ಆ ಮೂಲಕ ತಮ್ಮ ಹುಸಿ ತರ್ಕ ಮತ್ತು ಆದರ್ಶವನ್ನು ಸಮರ್ಥಿಸಿಕೊಳ್ಳುತ್ತಾರೆ. ಅಂದರೆ ಯಾವುದೆ ಸಮುದಾಯವು ಇಂಗ್ಲಿಷ್‌ನ್ನು ಕಲಿಯುವುದರ ಮೂಲಕ ಸಾಮಾಜಿಕ, ಸಾಂಸ್ಕೃತಿಕ ಐಕ್ಯತೆಯನ್ನು ಒಡೆದಾಳಲು ನವವಸಾಹತುಶಾಹಿ ರೂಪದಲ್ಲಿ ಪ್ರಯತ್ನಿಸುತ್ತದೆ ಎನ್ನುವುದು ಕೂಡಾ ಅಪ್ಪಟ ಸುಳ್ಳು. ಇದು ಕೇವಲ ಒಂದನೆ ತರಗತಿಯಿಂದ ಇಂಗ್ಲಿಷ್ ಕಲಿತರೆ ಆಗುತ್ತದೆ ಎನ್ನುವ ತರ್ಕ ಎಷ್ಟು ಸೂಕ್ತ? ಎನ್ನುವುದು ಕೂಡ ಪರಿಗಣಿಸಬೇಕಾದ ಅಂಶ. ಶಿಕ್ಷಣದ ಮೂಲ ಸ್ವರೂಪದಲ್ಲೇ ದೋಷಗಳಿವೆ, ಹಾಗಾಗಿ, ಇವತ್ತು ಇಂಗ್ಲಿಷ್‌ನ್ನು ಒಂದು ಭಾಷೆಯಾಗಿ ಓದುವುದರ ಮೂಲಕ ಇಂತಹ ಸಾಂಸ್ಕೃತಿಕ ಅಪಾಯಗಳು ಜರುಗುತ್ತವೆ ಎನ್ನುವುದು ಹಸಿ ಸುಳ್ಳು. ಬದಲಾಗಿ, ಇಂಗ್ಲಿಷ್ ಜನಸಾಮಾನ್ಯರಿಗೆ ವ್ಯಾವಹಾರಿಕ ಲಾಭ ಮತ್ತು ಆತ್ಮಸ್ಥೈರ್ಯವನ್ನು ಕೊಡುತ್ತದೆ ಎನ್ನುವುದು ಕೂಡ ಪ್ರಮುಖವಾದ ಅಂಶ. ಇವತ್ತಿನ ಅಗತ್ಯ ಮತ್ತು ಆಧುನಿಕ ಜ್ಞಾನವನ್ನು ಪಡೆದುಕೊಳ್ಳಲು ಇಂಗ್ಲಿಷ್ ಸುಲಭವಾಗಿ ನಮಗೆ ಅಂತಹ ಜ್ಞಾನದ ಮೂಲಗಳನ್ನು ಒದಗಿಸಿ ಕೊಡುತ್ತದೆ.

ಇಂಗ್ಲಿಷ್ ಮಾಧ್ಯಮ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಎರಡು ಅಥವಾ ಮೂರನೆ ವಯಸ್ಸಿಗೆ ಇಂಗ್ಲಿಷ್‌ನ್ನು ರೂಢಿಸಿಕೊಳ್ಳಲು ಸಮಸ್ಯೆಯಾಗದಿದ್ದಾಗ, ಅದೇಕೆ ಕನ್ನಡ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಹೊರೆಯಾಗುತ್ತದೆ ಎನ್ನುವ ವಿಚಾರ ಗಮನಾರ್ಹವಾಗಿದೆ. ಮನೋಭಾಷಾವಿಜ್ಞಾನದ ಪ್ರಕಾರ ಪ್ರತಿಯೊಂದು ಸಾಮಾನ್ಯ ಮಗುವೂ ಜೈವಿಕ ಮತ್ತು ಮಾನಸಿಕವಾಗಿ ಭಾಷೆಯನ್ನು ರೂಢಿಸಿಕೊಳ್ಳುವ ಸ್ಥಿತಿಯನ್ನು ಪಡೆದುಕೊಂಡಿರುತ್ತದೆ. ಇದಕ್ಕಿಂತ ಹೆಚ್ಚಾಗಿ ನಮ್ಮ ದೇಶದ ಬಹುತೇಕ ಸಮುದಾಯಗಳು ದ್ವಿಭಾಷಾ ಸಮುದಾಯಗಳು (Bilingual groups) ಆಗಿರುವವು. ಈ ಸಮುದಾಯದ ಮಕ್ಕಳು ತಮ್ಮ ಎಳೆ ವಯಸ್ಸಿನಲ್ಲಿ ಸ್ಫುಟವಾಗಿ ಆ ಎರಡು ಭಾಷೆಗಳನ್ನು ಮಾತನಾಡುವ ಸಾಮರ್ಥ್ಯವನ್ನು ಪಡೆದುಕೊಳ್ಳುವರು. ಇವತ್ತಿನ ಜಾಗತೀಕರಣದ ಎಲ್ಲಾಸಾಧ್ಯತೆಗಳನ್ನು ಒಪ್ಪಿಕೊಂಡು ಅವುಗಳ ಮಧ್ಯ ನಮ್ಮ ಸಾಂಸ್ಕೃತಿಕ ವೈವಿಧ್ಯತೆ ಮತ್ತು ಚಹರೆಗಳನ್ನು ಉಳಿಸಿಕೊಳ್ಳುವ ಪ್ರಯತ್ನದಂತೆ, ಇಂಗ್ಲಿಷ್ ಕಲಿಕೆಯ ಸಂದರ್ಭದಲ್ಲಿಯೂ ಕೂಡ ನಾವು ನಮ್ಮ ಭಾಷಿಕ ಚಹರೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ವೈವಿಧ್ಯತೆಗಳನ್ನು ಕಾಪಾಡಿಕೊಳ್ಳುವ ಸಾಮರ್ಥ್ಯವನ್ನು ದಕ್ಕಿಸಿಕೊಳ್ಳಬೇಕು ಎನ್ನುವ ವಾದವನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು.

ಜನಸಾಮಾನ್ಯರಿಗೆ ಭಾಷಾ ನೀತಿಯಂತಹ ಪರಿಕಲ್ಪನೆಯೇ ಅಪರಿಚಿತವಾದಂತಹದು. ಹಾಗಾಗಿ, ಯಾವುದೇ ಕೆಲವು ಬುದ್ಧಿಜೀವಿಗಳು ತೀರಾಭಾವಾತಿರೇಕದಿಂದ ಮಾತನಾಡುವ ಮೂಲಕ ಇಂತಹ ಜನಗಳ ಸಮ್ಮತಿಯನ್ನು ಪಡೆದುಕೊಳ್ಳುತ್ತಾರೆ. ಆ ಮೂಲಕ ತಮ್ಮ ಹುಸಿ ತರ್ಕ ಮತ್ತು ಆದರ್ಶವನ್ನು ಸಮರ್ಥಿಸಿಕೊಳ್ಳುತ್ತಾರೆ. ಅಂದರೆ ಯಾವುದೆ ಸಮುದಾಯವು ಇಂಗ್ಲಿಷ್‌ನ್ನು ಕಲಿಯುವುದರ ಮೂಲಕ ಸಾಮಾಜಿಕ, ಸಾಂಸ್ಕೃತಿಕ ಐಕ್ಯತೆಯನ್ನು ಒಡೆದಾಳಲು ನವವಸಾಹತುಶಾಹಿ ರೂಪದಲ್ಲಿ ಪ್ರಯತ್ನಿಸುತ್ತದೆ ಎನ್ನುವುದು ಕೂಡಾ ಅಪ್ಪಟ ಸುಳ್ಳು. ಹಾಗಿರುವಾಗ ಇದು ಕೇವಲ ಒಂದನೆ ತರಗತಿಯಿಂದ ಇಂಗ್ಲಿಷ್ ಕಲಿತರೆ ಆಗುತ್ತದೆ ಎನ್ನುವ ತರ್ಕ ಎಷ್ಟು ಸೂಕ್ತ? ಶಿಕ್ಷಣದ ಮೂಲ ಸ್ವರೂಪದಲ್ಲೇ ದೋಷಗಳಿವೆ, ಹಾಗಾಗಿ, ಇವತ್ತು ಇಂಗ್ಲಿಷ್‌ನ್ನು ಒಂದು ಭಾಷೆಯಾಗಿ ಓದುವುದರ ಮೂಲಕ ಇಂತಹ ಸಾಂಸ್ಕೃತಿಕ ಅಪಾಯಗಳು ಜರುಗುತ್ತವೆ ಎನ್ನುವುದು ಹಸಿ ಸುಳ್ಳು. ಬದಲಾಗಿ, ಇಂಗ್ಲಿಷ್ ಜನಸಾಮಾನ್ಯರಿಗೆ ವ್ಯಾವಹಾರಿಕ ಲಾಭ ಮತ್ತು ಆತ್ಮಸ್ಥೈರ್ಯವನ್ನು ಕೊಡುತ್ತದೆ.

ಇವತ್ತಿನ ಜಗತ್ತಿನಲ್ಲಿ, ತಂತ್ರಜ್ಞಾನ, ವಿಜ್ಞಾನ, ವೈದ್ಯಕೀಯ ಮುಂತಾದ ಆಧುನಿಕ ಜ್ಞಾನ ಶಾಖೆಗಳ ಆವಿಷ್ಕಾರ, ಅನುಭವ, ಜ್ಞಾನ ತಕ್ಷಣಕ್ಕೆ ನಮಗೆ ಲಭ್ಯವಾಗುವುದು ಇಂಗ್ಲಿಷಿನ ಮುಖಾಂತರ ಎನ್ನುವ ಎಚ್ಚರ/ಕಾಳಜಿಯನ್ನು ಕೂಡ ನಾವು ಬಹಳ ಪ್ರಜ್ಞಾಪೂರಕವಾಗಿ ನೋಡಬೇಕು. ಈ ಎಲ್ಲಾ ಜ್ಞಾನ ಸಾಧ್ಯತೆಗಳನ್ನು ನಾವು ನಮ್ಮ ಭಾಷೆಯಿಂದ ಪಡೆದುಕೊಳ್ಳುವುದಕ್ಕೆ ಆ ಸಾಮರ್ಥ್ಯವನ್ನು, ನಾವು ನಮ್ಮ ಭಾಷೆಯೊಂದಿಗೆ ಕೂಡಿಸಿಕೊಂಡಿಲ್ಲ ಎನ್ನುವ ತಿಳುವಳಿಕೆಯೂ ಕೂಡ ನಮಗಿರಬೇಕು. ನಿಜ, ಯಾವುದೇ ಭಾಷೆ ಆಧುನಿಕ ಜಗತ್ತಿನ ಸವಾಲುಗಳಿಗೆ ಪ್ರತಿಸ್ಪಂದಿಸಲು ಮುಖ್ಯವಾಗಿ ಎಲ್ಲಾ ಕ್ರಿಯಾತ್ಮಕ (Functional Domains) ರಂಗಗಳಲ್ಲಿ ಬಳಕೆಯಾಗಬೇಕು. ಶಿಕ್ಷಣವನ್ನೊಳಗೊಂಡು ಹಾಗಾಗಿ, ಕಾಲ-ದೇಶಕ್ಕೆ ತಕ್ಕ ಹಾಗೆ ನಮ್ಮ ಶಿಕ್ಷಣ ಕ್ರಮ ಮತ್ತು ಭಾಷಾ ನೀತಿಗಳು ರೂಪುಗೊಳ್ಳಬೇಕು. ಇಲ್ಲಿ ಇಂಗ್ಲಿಷ್ ಕೇವಲ ಒಂದು ಭಾಷೆಯಾಗಿ ಬೋಧಿಸಲಾಗುವುದು. ಇದರ ಮುಖ್ಯ ಉದ್ದೇಶ ಭಾಷಾ ಕೌಶಲಗಳನ್ನು ರೂಢಿಸಿಕೊಳ್ಳುವಲ್ಲಿ ಸಫಲವಾಗಬೇಕು ಎನ್ನುವುದು ಕೂಡ ಮುಖ್ಯ ಕಾಳಜಿಯಾಗಬೇಕು. ಶಿಕ್ಷಣ ಮಾಧ್ಯಮವಾಗಿ ಇಂಗ್ಲಿಷ್ ಭಾಷೆ ಮತ್ತು ಕೇವಲ ಭಾಷಾ ಕಲಿಕೆಯಾಗಿ ಇಂಗ್ಲಿಷ್ ಇದರ ನಡುವೆ ಶೈಕ್ಷಣಿಕ ಮತ್ತು ತಾತ್ತ್ವಿಕ ವ್ಯತ್ಯಾಸಗಳಿವೆ. ಇದನ್ನ ಮರೆಮಾಚಿ ಜನಸಾಮಾನ್ಯರನ್ನು ದ್ವಂದ್ವಕ್ಕಿಡು ಮಾಡಬಾರದು.

ಚಾರಿತ್ರಿಕ ದಾಖಲೆ ಮತ್ತು ವಿವರಗಳನ್ನು ಪರಿಶೀಲಿಸಿದಾಗ, ಕನ್ನಡ ನಾಡು, ನುಡಿ ಮತ್ತು ಜನ ಹಲವಾರು ಸಾಂಸ್ಕೃತಿಕ ಸ್ಥಿತ್ಯಂತರ ಮತ್ತು ಪಲ್ಲಟಗಳಿಗೆ ಒಳಗಾಗಿದ್ದಾರೆ. ಅಂತಹ ಸಂಕಷ್ಟಗಳಲ್ಲಿಯೂ ಕೂಡಾ ನಾವು ನಮ್ಮ ಭಾಷೆ, ಸಾಹಿತ್ಯ, ಸಂಸ್ಕೃತಿ, ಸಂಗೀತ ಮುಂತಾದವುಗಳನ್ನು ಬಹಳ ಜತನದಿಂದ ಕಾಪಾಡಿಕೊಂಡು ಬಂದಿರುವುದು ಚಾರಿತ್ರಿಕವಾಗಿ ಮಹತ್ವವನ್ನು ಪಡೆದುಕೊಳ್ಳುತ್ತದೆ. ಆದ್ದರಿಂದ, ಇವತ್ತು ೭೦% ಪ್ರತಿಶತ ಜನ ಸುಶಿಕ್ಷಿತರಾಗಿದ್ದರಿಂದ, ನಾವು ನಮ್ಮ ಸಾಂಸ್ಕೃತಿಕ, ಚಾರಿತ್ರಿಕ ಮತ್ತು ರಾಜಕೀಯ ಪ್ರಜ್ಞೆಯನ್ನು ಜಾಗೃತಗೊಳಿಸಿಕೊಂಡಿದ್ದರಿಂದ ಇಂಗ್ಲಿಷ್‌ನಂತ ಭಾಷೆಯಿಂದ ನಮಗೆ ಯಾವುದೆ ಸಾಂಸ್ಕೃತಿಕ ಅಪಾಯಗಳು ಅಷ್ಟಾಗಿ ಆಗಲಾರವು ಎನ್ನುವುದನ್ನು ನಾವು ಮನವರಿಕೆ ಮಾಡಿಕೊಳ್ಳಬೇಕು.

ಇವತ್ತು ನಮ್ಮ ಹಲವಾರು ಬುಡಕಟ್ಟು ಭಾಷೆ, ಸಂಸ್ಕೃತಿ ಮತ್ತು ಸಾಮುದಾಯದ ನಾಶಕ್ಕೆ ನೇರವಾಗಿ ಇಂಗ್ಲಿಷನ್ನು ಹೊಣೆಮಾಡುವುದು ಸೂಕ್ತವಾದದ್ದಲ್ಲ. ಯಾಕೆಂದರೆ, ಭಾರತದಂತಹ ಒಂದು ಉಪಖಂಡದಲ್ಲಿ ಹಲವಾರು ದೇಶಗಳು ಯಾವುದೆ ಒಂದು ಪಟ್ಟಭದ್ರ ಹಿತಾಸಕ್ತಿ ಮತ್ತು ಪುರೋಹಿತಶಾಹಿಯ ಯಜಮಾನ್ಯದ ಪ್ರಾಬಲ್ಯ ಮತ್ತು ದೌರ್ಜನ್ಯದಿಂದ ನಶಿಸಿ ಹೋಗಿವೆ ಎನ್ನುವುದನ್ನು ನಾವು ಮನಗಾಣಬೇಕು. ಬಹುರಾಷ್ಟ್ರೀಯ ಕಂಪನಿಯ ಎಲ್ಲಾ ಸಾಧ್ಯತೆಗಳನ್ನು ಮತ್ತು ಲಾಭವನ್ನು ಪಡೆದುಕೊಳ್ಳುವ ಜನರು ಇಂಗ್ಲಿಷ್ ಕಲಿಕೆ ಬೇಡ ಎನ್ನುವುದು ಯಾವ ತಾತ್ವಿಕ ಸಮರ್ಥನೆ ಎನ್ನುವುದು ವಿಚಿತ್ರವಾಗಿ ತೋರುವುದು. ಪ್ರಸ್ತುತ ಆರ್ಥಿಕ ಉದಾರಿಕರಣ, ಜಾಗತೀಕರಣ ಮತ್ತು ಅಂತಾರಾಷ್ಟ್ರೀಯತೆಯ ಪರಿಣಾಮದಿಂದ ಇಂಗ್ಲಿಷ್ ಎಲ್ಲ ಜನಸಾಮಾನ್ಯರ ಬದುಕಿನ ಭಾಗವಾಗಿದೆ. ಯಾವ ತರ್ಕದ ಆಧಾರದ ಮೇಲೆ ಇಂಗ್ಲಿಷ್ ಕಲಿಕೆ ಜನಸಾಮಾನ್ಯರಿಗೆ ಹೊರೆಯಾಗುತ್ತದೆ ಎಂದು ವಾದಿಸುವುದು ತಿಳಿಯದ ಸತ್ಯವಾಗಿದೆ.

ಭಾರತದಂತಹ ಬಹುಭಾಷಿಕ ದೇಶಗಳಲ್ಲಿ ಭಾಷಾ ನೀತಿಯನ್ನು ರೂಪಿಸುವ ಸಂದರ್ಭದಲ್ಲಿ ನಾವು ಪರಿಗಣಿಸಬೇಕಾದ ಅಂಶಗಳು ವೈಜ್ಞಾನಿಕ ಮತ್ತು ವೈಚಾರಿಕ ನಿಲುವುಗಳಿಂದಕೂಡಿರಬೇಕು ಇಲ್ಲದೆ ಹೋದರೆ ಕೆಲವೇ ಕೆಲವು ಜನ ಅಥವಾ ಗುಂಪು ತಮ್ಮದೇ ತಾತ್ವಿಕತೆಯಿಂದ ಜನಪರವಾದ ತೀರ್ಮಾನಗಳನ್ನು ಜನ ವಿರೋಧಿ ನಿಲುವುಗಳೆಂದು ಬಿಂಬಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ದೇಶೀ ಭಾಷೆಗಳೊಂದಿಗೆ ಇಂಗ್ಲಿಷನ್ನು ಕಲಿಸಬೇಕು ಎನ್ನುವುದು ಸಂವಿಧಾನಾತ್ಮಕವಾದ ಶಾಸನವಾದ್ದರಿಂದ ಇದನ್ನು ಒಂದನೆ ತರಗತಿಯಿಂದ ಕಲಿಸುವುದರಲ್ಲಿ ಏನು ಕಷ್ಟ ಇರಲಾರದು. ಈ ಮೇಲೆ ಚರ್ಚಿಸಿದ ಎಲ್ಲಾ ಅಂಶಗಳ ಆಧಾರದ ಮೇಲೆ ಕನ್ನಡ ವಿರೋಧಿ ನೆಲೆ ಎನ್ನುವ ಸರಳ ತೀರ್ಮಾನಕ್ಕೆ ಬರುವಷ್ಟು ಸುಲಭದ ನಿಲುವುಗಳು ಇವು ಆಗಲಾರವು ಎನ್ನುವುದು ಕೂಡ ಗಮನಾರ್ಹವಾದ ಮಾತು.

ಇದು ಶಿವಮೊಗ್ಗದ ಸೃಷ್ಟಿ ವೇದಿಕೆಯಲ್ಲಿ ದಿನಾಂಕ ೧೨-೧೧-೨೦೦೬ ರಂದು ಮತ್ತು ಕನ್ನಡ ವಿಶ್ವವಿದ್ಯಾಲಯ ಹಂಪಿಯಲ್ಲಿ ನವೆಂಬರ ೧೪ ೨೦೦೬ ರಂದು ಪ್ರೊ. ತೀ ನಂ ಶ್ರೀ ಜನ್ಮಶತಮಾನೋತ್ಸವ ಆಚರಣೆ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ ☐

ವಿಜ್ಞಾನ-ತಂತ್ರಜ್ಞಾನ ಶಿಕ್ಷಣವನ್ನೇ ಜ್ಞಾನದ ಕ್ಷೇತ್ರವೆಂದು ತಿಳಿಯಲಾಗುತ್ತಿದೆ. ಹೀಗಾಗಿ ಮಾನವಿಕ ಶಾಸ್ತ್ರಗಳು, ಲಲಿತಕಲೆಗಳ ಶಾಸ್ತ್ರಗಳು ಮೂಲೆಗುಂಪಾಗುತ್ತಿವೆ. ಯಾವುದೇ ಮಗುವಿನ ಮೊದಲ ಆದ್ಯತೆ ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ಪಡೆಯುವುದೇ ಆಗಿದೆ. ವಿಜ್ಞಾನ-ತಂತ್ರಜ್ಞಾನ ಕ್ಷೇತ್ರವೇ ಮೊದಲ ಆಯ್ಕೆಯಾಗಿದೆ. ಇದು ಮಕ್ಕಳ ಆಯ್ಕೆಯಲ್ಲ. ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಫಲವಾಗಿ ಎಲ್ಲ ರಾಜ್ಯಗಳ ರಾಜ್ಯಭಾಷೆಗಳು ಶಿಕ್ಷಣದಿಂದ, ಬೌದ್ಧಿಕತೆಯಿಂದ ಹೊರಗುಳಿಯಲಿವೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯಲ್ಲಿ ಶಿಕ್ಷಣ ಪಡೆಯುವುದು ದಿನದಿಂದ ದಿನಕ್ಕೆ ಕಮ್ಮಿಯಾಗುತ್ತಿದೆ. ಇದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳು, ಕೆಳವರ್ಗದವರ ಮಕ್ಕಳ ಭವಿಷ್ಯ ಕರಾಳವಾಗ ಆದೆ. ಇಂಗ್ಲಿಷ್ ಕಲಿಕೆಯಿಂದ ಮಕ್ಕಳು ಯಾಂತ್ರಿಕವಾಗುತ್ತಾರೆಯೇ ಹೊರತು ಸೃಜನಶೀಲರಾಗುವುದಿಲ್ಲ.

ಡಾ॥ ಅಮರೇಶ ನುಗಡೋಣಿ

ಕರಾಳವಾಗಲಿದೆ ಗ್ರಾಮಾಂತರ ಪ್ರದೇಶ, ಮತ್ತು ಕೆಳವರ್ಗದವರ ಮಕ್ಕಳ ಭವಿಷ್ಯ

ಕಳೆದ ಒಂದು, ಒಂದೂವರೆ ದಶಕದ ಕಾಲಾವಧಿಯಲ್ಲಿ ಬದಲಾದ ಸಮಾಜವನ್ನು ವಿವರಿಸುವುದು ವಿದ್ವಾಂಸರಿಗೆ ಕಷ್ಟವಾಗಿದೆ. ಇದಕ್ಕೆ ಪ್ರಧಾನ ಕಾರಣವೆಂದರೆ, ಜಾಗತೀಕರಣ ಪ್ರಕ್ರಿಯೆ ಎಂದೇ ಹೇಳಬೇಕು. ವಿಜ್ಞಾನ-ತಂತ್ರಜ್ಞಾನಗಳ ಬೆಳವಣಿಗೆಯಿಂದ ತೀವ್ರವಾಗಿ ದೇಶಗಳು ಅಭಿವೃದ್ಧಿ ಹೊಂದಿವೆ. ಈ ಅಭಿವೃದ್ಧಿಯನ್ನು ಬೆರಗು, ಆತಂಕಗಳಿಂದ ನೋಡುವುದು ಮಾತ್ರ ನಮ್ಮಿಂದ ಸಾಧ್ಯವಾಗಿದೆ. ಆದರೆ ಈ ಅಭಿವೃದ್ಧಿ ಯಾರಿಗೆ ಹಿತವಾಗಿದೆ? ಯಾರಿಗೆ ಉರುಳಾಗಿದೆ? ಎಂಬ ತಿಳುವಳಿಕೆಯನ್ನು ಪಡೆಯಲು ಈಗ ಪ್ರಯತ್ನಗಳು ನಡೆದಿವೆ. ಭಾರತ, ಭಾರತದಂತಹ ಮೂರನೇ ದೇಶಗಳು ಜಾಗತೀಕರಣದಿಂದ ದರೋಡೆಕೋರರ ಕೈಗೆ ಸಿಕ್ಕಂತೆ ಪಾಳು ಬೀಳುತ್ತಿವೆ. ನಮ್ಮ ಸುಂದರ ಗುಡ್ಡ ಬೆಟ್ಟಗಳನ್ನು ತೋಡಿ, ಅಗೆದು ಅದಿರನ್ನು ಒಯ್ಯಲಾಗುತ್ತಿದೆ. ನಮ್ಮ ಪರಿಸರ ಧೂಳಿನಿಂದ ರೋಗ ಹಿಡಿದಿದೆ. ನಮ್ಮ ಭೂಮಿಗೆ ವಿಷ ಉಣ್ಣಿಸಲಾಗುತ್ತಿದೆ. 'ಈ ದೇಶ ನಮ್ಮದು' ಎಂಬ ಸಹಜ ಪ್ರೇಮ ಯಾವ ಆಳುವ ಸರಕಾರಕ್ಕೂ ರಾಜಕಾರಣಿಗಳಿಗೂ ಇಲ್ಲದ್ದು ಸಾಮಾನ್ಯರ ದುರ್ದೈವ. ದಿನೇ ದಿನೇ ದೇಶ ಬರಿದಾಗುತ್ತಿದೆ. ನಮ್ಮ ಮಕ್ಕಳಿಗೆ ನಮ್ ದೇಶದಿಂದ ಯಾವ ಪ್ರಯೋಜನವಿಲ್ಲದಂತೆ ಮಾಡಲಾಗುತ್ತಿದೆ. 'ಜಾಗತೀಕ ಹಳ್ಳಿಗೆ' ಅಮೆರಿಕ ಗೌಡನಾಗುವ ಈ ಜಾಗತೀಕರಣದಿಂದ ನಮ್ಮ ಬಾಳು ಸೃಜನಶೀಲತೆಯನ್ನು ಕಳೆದುಕೊಂಡಿದೆ.

ಭಾರತದಲ್ಲಿ ಜಾಗತೀಕರಣದಿಂದ ಉಂಟಾಗಿರುವ ಪರಿಣಾಮಗಳನ್ನು ಅನೇಕ ಆಯಾಮಗಳಿಂದ ತೋರಿಸಬಹುದು. ನಿಜವಾಗಿಯೂ ನಮಗೆ ಜಾಗತೀಕರಣದಿಂದ ಬಿಸಿ ತಟ್ಟಿದೆ. ಅದರ ನೀತಿ ನಿಯಮಗಳು ಅಪಾಯಕಾರಿಯಾಗಿ ಕಾಣಿಸುತ್ತಾ ನಮ್ಮ ಬದುಕನ್ನೇ ಕಮರಿಸುವ ಮಾರಿಯಾಗಿ ಪರಿಣಮಿಸುತ್ತಿದೆ. ನಮ್ಮ ಮೂಲ ಕಸಬುಗಳಲ್ಲಿ ಒಂದಾದ ವ್ಯವಸಾಯ ದಿವಾಳಿಯಾಗಿ ಹೋಗಿದೆ. ರೈತರು, ರೈತರನ್ನು ನಂಬಿ ದುಡಿಯುವ ವರ್ಗಗಳು ದಿಕ್ಕುಗೇಡಿಯಾಗಿವೆ. ಪಟ್ಟಣ-ನಗರಗಳ ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿಗೆ ಬಿದ್ದಿದ್ದಾರೆ. ನೆಲ-ಜಲ-ಗಾಳಿ ಖಾಸಗೀಕರಣದಿಂದ ಬರಡಾಗಿದೆ. ಇದೆಲ್ಲವನ್ನು ನೋಡಿದರೆ ಜಾಗತೀಕರಣವು ನಮ್ಮ ಸಾಂಸ್ಕೃತಿಕ ಬದುಕಿನ ಎಲ್ಲ ಆಯಾಮಗಳಿಗೆ ಮರಣಾಂತಿಕ ಪೆಟ್ಟು ನೀಡುತ್ತಿದೆ. ನಮ್ಮನ್ನು ಆಳುವ ಸರ್ಕಾರಗಳಿಗೆ ಇದೂ ಒಂದು ದೇಶ, ಇಲ್ಲಿ ಜೀವಗಳಿವೆ, ಇದನ್ನು ರಕ್ಷಿಸಬೇಕು ಎಂಬ ಕನಿಷ್ಠ ಪ್ರಜ್ಞೆಯಿಲ್ಲದೆ ಸ್ವಾಭಿಮಾನ ಕಳೆದುಕೊಂಡು ದುರ್ಬಲವಾಗಿವೆ. ಸಾಮಾನ್ಯರು ಯಾವುದನ್ನು ಕುರಿತು ಯೋಚಿಸಲಾಗದ ಸ್ಥಿತಿ ತಲುಪಿದ್ದಾರೆ. ಜಾಗತೀಕರಣವು ನಮ್ಮ ಸಾಮಾನ್ಯರ ಶ್ರಮದ ದುಡಿಮೆಯನ್ನು, ಅವರ ಉತ್ಪಾದನೆಯನ್ನು ವ್ಯವಸ್ಥಿತವಾಗಿ ನಿರಾಕರಿಸುತ್ತಿದೆ. ನಮ್ಮ ದುಡಿಮೆ, ಅದರ ಉತ್ಪಾದನೆ ಅಂದರೆ ಅದು ನಮ್ಮ ಸಾಂಸ್ಕೃತಿಕ, ಸಂಪತ್ತು, ನಮ್ಮ ಉತ್ಪಾದನೆ ಎಂದರೆ ನಮ್ಮ ಪ್ರತಿಭೆ. ಅದು ಸೃಜನ ಶೀಲತೆಯ ಸಂಕೇತ. ಹಿಂದೆ ಗ್ಯಾಟ್, ಈಗ ಡಬ್ಲ್ಯೂ.ಟಿ.ಓ. ರೂಪಿಸಿರುವ ನೀತಿಗಳು ನಮ್ಮ ಉತ್ಪಾದನೆಗಳಿಗೆ ಮಾರಕವಾಗಿ ನಿಂತಿವೆ. ಅನೇಕ ನೆಪಗಳನ್ನು ಒಡ್ಡಿ ಗೌಣಗೊಳಿಸಿವೆ. ವಿಶ್ವವ್ಯಾಪಾರ ಒಪ್ಪಂದದಿಂದಾಗಿ ವಿದೇಶಿ ಉತ್ಪನ್ನಗಳು ನಮ್ಮ ದೇಶದೊಳಗೆ ನಿರಾಂತಕವಾಗಿ ನುಗ್ಗಿ ನೆಲೆಯೂರಿವೆ. ಇದು ನಮ್ಮ ಎಲ್ಲ ವಲಯಗಳಲ್ಲಿ ಕೆಟ್ಟ ಪರಿಣಾಮವನ್ನುಂಟು ಮಾಡಿದೆ. ನಮ್ಮ ಒಕ್ಕಲುತನದಿಂದ ಬೆಳೆದ ಎಲ್ಲ ಉತ್ಪನ್ನಗಳ ಬೆಲೆ ಕುಸಿದು ಹೋಯಿತು. ಮುಕ್ತ ವ್ಯಾಪಾರ ಎಂಬುದು ಬರೀ ನೆಪವಾಗಿದೆ. ಏಕೆಂದರೆ ನಮ್ಮ ಉತ್ಪನ್ನಗಳ ರಫ್ತಿಗೆ ಅನೇಕ ಅಡ್ಡಿಗಳನ್ನು ಒಡ್ಡಲಾಗಿದೆ.

ವಿದೇಶಿ ಸರಕುಗಳಿಗೆ ಆಮದು ನೀತಿ ಸುಗಮವಾಗಿದೆ. ಇದರಿಂದಾಗಿ ವಿದೇಶಿ ಉತ್ಪನ್ನಗಳು ನಮ್ಮ ಸಂತೆಯಲ್ಲಿ ಮೆರೆಯುತ್ತಿವೆ. ಜಾಗತೀಕರಣದಿಂದ ನಮಗೆ ಪ್ರಯೋಜನವಿದೆ. ಬೇಕಾದ ವಸ್ತುವನ್ನು ಬೇಕಾದ ಸಮಯದಲ್ಲಿ ಪಡೆಯಬಹುದು. (ಉದಾ: ಕಾರು, ಬೈಕು, ಕಂಪ್ಯೂಟರ್ ಮುಂತಾದವು) ಎಂದು ವಾದಿಸುವ ಚಿಂತಕರಿದ್ದಾರೆ. ಇದು ಉಳ್ಳವರಿಗೆ ಮಾತ್ರ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ವಿಜ್ಞಾನ-ತಂತ್ರಜ್ಞಾನಗಳನ್ನು ಮಾತ್ರ ಜ್ಞಾನದ ಕ್ಷೇತ್ರವೆಂದು ಪರಿಗಣಿಸಿದ್ದರಿಂದ ಇಂದು ಮಾನವಿಕಗಳು ಸೊರಗತೊಡಗಿವೆ. ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾಹಿತಿ ತಂತ್ರಜ್ಞಾನ ಸೌಲಭ್ಯವನ್ನು ಯಾರು ಒದಗಿಸಿದ್ದಾರೆ? ನಿಜವಾಗಿಯೂ ಮಕ್ಕಳು ಇಂದು ಎಸ್.ಎಸ್.ಎಲ್.ಸಿ. ಮುಗಿಸಿದ ಮೇಲೆ ಮುಂದೇನು ಓದಬೇಕೆಂದು ದಿಕ್ಕುಗೇಡಿಗಳಾಗುತ್ತಿದ್ದಾರೆ. ವಿಜ್ಞಾನ ಕಲಿಯಲು ಗ್ರಾಮಗಳಲ್ಲಿ, ಯಾಕೆ ತಾಲೂಕುಗಳಲ್ಲಿ ಸರಿಯಾದ ಕಾಲೇಜುಗಳಿಲ್ಲ. ಹೆಸರಿಗೆ ವಿಜ್ಞಾನ ಕಾಲೇಜುಗಳಿದ್ದರೂ ಅವುಗಳಿಂದ ಯಾವುದೇ ಪ್ರಮಾಣದ ಓದು, ಜ್ಞಾನ ಪಡೆಯಲು ಸಾಧ್ಯವಾಗುವುದಿಲ್ಲ. ಖಾಸಗೀ ಕಾಲೇಜುಗಳಲ್ಲಿ ಓದಬೇಕು. ಬಡವರಿಗೆ ಇದು ಸಾಧ್ಯವೇ? ಹೀಗಾಗಿ ಹಳ್ಳಿಯ ಯುವತಿ-ಯುವಕರು ಅನಿವಾರ್ಯವಾಗಿ ಕಲೆ, ವಾಣಿಜ್ಯ ಪದವಿಗಳಿಗೆ ಸೇರುತ್ತಾರೆ. ಇದರಿಂದ ಪ್ರಯೋಜನವಿಲ್ಲವೆಂದು ತಿಳಿದಾಗ ಓದಿನಲ್ಲಿ ನಿರುತ್ಸಾಹ ಮೂಡಿಸಿಕೊಂಡು ಕೂಡುತ್ತಾರೆ. ಯಾವುದಕ್ಕೂ ಪ್ರಯೋಜನವಿಲ್ಲದ ಯುವಕರ ಗುಂಪು ಈಗ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚುತ್ತಿದೆ.

ಜಾಗತೀಕರಣದ ನೀತಿ ಹೇಗಿದೆ ಎಂದರೆ, ಮೂರನೇ ದೇಶದ



ನಾವು ಏನನ್ನು ಉತ್ಪಾದಿಸಬಾರದು, ಇದರ ಅರ್ಥ ನಮ್ಮ ಪ್ರತಿಭೆ, ಸೃಜನಶೀಲತೆಯನ್ನು ಪ್ರಶ್ನಿಸಿ, ಆ ಮೂಲಕ ಅದನ್ನು ವ್ಯವಸ್ಥಿತವಾಗಿ ಬತ್ತುವಂತೆ ಮಾಡುವುದೇ ಆಗಿದೆ. ಗಾಂಧೀಜಿ ೨೦ನೇ ಶತಮಾನದ ಆದಿಯಲ್ಲೇ 'ಹಿಂದ್ ಸ್ವರಾಜ್' ಪುಸ್ತಕದಲ್ಲಿ ಅನೇಕ ಚಿಂತನಾರ್ಹ ಮಾತುಗಳನ್ನೇ ಹೇಳಿದ್ದಾರೆ. ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯಿಂದ ಭಾರತದ ಗತಿ ಏನಾಗಬಹುದೆಂದು ಗಾಂಧೀಜಿ ಅರಿತಿದ್ದರು. ಅಭಿವೃದ್ಧಿಯ ಕಲ್ಪನೆ ಸಾಮಾನ್ಯರಿಗೆ ಮಾರಕವಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಆಧುನಿಕತೆ, ಯಂತ್ರ, ಔದ್ಯೋಗೀಕರಣ ಮುಂತಾದವುಗಳ ಅಪಾಯಗಳನ್ನು ಮನಗಂಡು 'ಇದು ಬೇಡ' ಎಂದು 'ಇದು ಬೇಕು' ಎಂದು ಕೂಡ ಹೇಳಿದರು. ಮಾತೃಭಾಷೆಯಲ್ಲಿ ಶಿಕ್ಷಣ, ಗುಡಿ ಕೈಗಾರಿಕೆಗಳ ಅಭಿವೃದ್ಧಿ ಯಂತ್ರಗಳಿಂದ ಮುಕ್ತಿ, ವಕೀಲರ, ವೈದ್ಯರನ್ನು ಕುರಿತ ಗಾಂಧೀಜಿ ಹೇಳಿದ ಮಾತುಗಳನ್ನು ತಪ್ಪಾಗಿ ಅರ್ಥೈಸಲಾಗುತ್ತಾ ಬರಲಾಯಿತು.

ನವಭಾರತವನ್ನು ಕಟ್ಟುವ ಉತ್ಸಾಹದಲ್ಲಿ ಗಾಂಧೀಜಿ ಅವರ ಮಾತುಗಳನ್ನು ನಯವಾಗಿ ಗಾಳಿಗೆ ತೂರಲಾಯಿತು. ಅಂದು ಗಾಂಧೀಜಿ ಹೇಳಿದ ಮಾತುಗಳು ಇಂದಿನ ಜಾಗತೀಕರಣಕ್ಕೆ ಪರ್ಯಾಯವೆಂದು ಆಲೋಚಿಸುವಂತೆ ಮಾಡಿದೆ. ಆದರೆ 'ಹಿಂದ್ ಸ್ವರಾಜ್' ತತ್ವಗಳನ್ನು ಬದಲಾದ ಪರಿಸರಕ್ಕೆ ಅನುಗುಣವಾಗಿ ಪುನಾರಚಿಸಿ ನೆಲೆಗೊಳಿಸುವ ಕ್ರಿಯಾಶೀಲತೆ ಕಂಡುಬರುತ್ತಿಲ್ಲ. ಆಧುನಿಕರಾದ ಗಾಂಧಿ, ಲೋಹಿಯಾ, ಅಂಬೇಡ್ಕರ್ ಮುಂತಾದವರ ಚಿಂತನೆಗಳನ್ನು ಭಾರತದಲ್ಲಿ ನೆಲೆಗೊಳಿಸಲು ಯಾಕೆ ಸಾಧ್ಯವಾಗುತ್ತಿಲ್ಲ? 'ನಮ್ಮತನ' ಮರೆತಿರುವುದೇ ಇದಕ್ಕೆ ಕಾರಣವಿರಬಹುದೆ? ಜಾಗತೀಕರಣವು ನಮ್ಮನ್ನು ನಮ್ಮ ನೆಲ, ಜಲ, ಗಾಳಿಯಿಂದ ಬೇರ್ಪಡಿಸುತ್ತಿರುವಾಗ ನಮ್ಮ ಅಸ್ತಿತ್ವದ ಪ್ರಶ್ನೆಯನ್ನು ಯಾರು ಭಾವಿಸಬೇಕು? ಇದು ನಮ್ಮ ಮುಂದಿರುವ ಬಿಕ್ಕಟ್ಟು.

ವಚನಕಾರರ ಕಾಲದ ಪ್ರಯತ್ನವನ್ನು ಇಲ್ಲಿ ನೆನೆಯಬಹುದು. ಸಮಾಜದ ಕೊನೆಸೆರಗಿನ ಸಮುದಾಯಗಳಿಗೆ ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ಅವಕಾಶಗಳನ್ನು ರೂಪಿಸಲಾಯಿತು. ಸಮುದಾಯಗಳು ಕ್ರಿಯಾಶೀಲವಾಗ ತೊಡಗಿದವು. ಪ್ರತಿಯೊಬ್ಬನು ದುಡಿಮೆ (ಕಾಯಕ)ಗಾರನಾಗಿರಬೇಕು. ಆದರೆ ೧೨ನೇ ಶತಮಾನದ ವಚನಕಾರರ ಈ ಪ್ರಯತ್ನ ನಿಜವಾದ ಅರ್ಥದಲ್ಲಿ ಜೀವಂತವಾಗಿ ಮುಂದುವರಿಯಲಿಲ್ಲ. ಗಾಂಧೀಜಿ ಅವರ ಸ್ವಾವಲಂಬನೆ, ಸ್ವದೇಶಿ ಚಳುವಳಿಯಾಗಿ ನೆಲೆಗೊಳ್ಳಲಿಲ್ಲ. ಈಗ ಜಾಗತೀಕರಣದಿಂದ ನಮ್ಮ ಸೃಜನಶೀಲತೆ, ಕ್ರಿಯಾಶೀಲತೆ ನಾಶವಾಗುತ್ತಿದೆ. ನಮ್ಮ ಪಾರಂಪರಿಕ ಕಸುಬುಗಳನ್ನು ಮತ್ತು ತಂತ್ರಜ್ಞಾನವನ್ನು ಸಮುದಾಯಗಳು ಪುನಾರಚಿಸಿಕೊಳ್ಳಬೇಕು. ವ್ಯವಸಾಯಗಾರರು ತಮಗೆ ಬೇಕಾದ ನೀರು, ಬೀಜ, ಗೊಬ್ಬರ ಮತ್ತು ಉಳುಮೆಯನ್ನು ಪುನರ್‌ಸೃಷ್ಟಿಸಿಕೊಳ್ಳಬೇಕು. ಇದಕ್ಕೆ ನಮ್ಮ ಶಿಕ್ಷಣವು ಪೂರಕವಾಗಿ ಪರಿವರ್ತನೆಗೊಳ್ಳಬೇಕು. ವಿಜ್ಞಾನಿಗಳು, ತಂತ್ರಜ್ಞರು, ಕಸಬುದಾರರಿಗೆ, ಕೃಷಿಕರಿಗೆ ಬೆಂಬಲವಾಗಿ ನಿಲ್ಲಬೇಕು. ಸಾಧ್ಯವಾದಷ್ಟು ನಮ್ಮ ಶ್ರಮ, ಹಣ ನಮಗೆ ಪೂರಕವಾಗಿರಬೇಕು. ನಮ್ಮ ಬದುಕನ್ನು ನಾವೇ ನಿಭಾಯಿಸಿ ರೂಪಿಸಿಕೊಳ್ಳಬೇಕು. ನಮ್ಮ ಸಂಸ್ಕೃತಿಗಳ ಅನನ್ಯತೆಗಳನ್ನು ಉಳಿಸಿಕೊಂಡು, ನಮ್ಮ ಪೂರ್ವಿಕರ ಬಾಳನ್ನು ಕಟ್ಟಬೇಕು. ಇದಕ್ಕೆ ಬೇಕಾಗಿರುವುದು ನಮ್ಮ ಸ್ವಾಭಿಮಾನ ಮಾತ್ರ, ಜಾಗತೀಕರಣಕ್ಕೆ ಪರ್ಯಾಯವಾಗಿ ಮೊದಲು ಚಿಂತಿಸಬೇಕಾದುದು ನಮ್ಮ ಸ್ವಾಭಿಮಾನವನ್ನು ಕುರಿತು. ಈ ಸ್ವಾಭಿಮಾನವು ಆಳುವ ಸರಕಾರಕ್ಕೆ ಇರಬೇಕು. ರಾಜಕಾರಣಿಗಳಲ್ಲಿ ಇರಬೇಕು, ಇದ್ದರೆ ನಾಡಿನ ಸುದೈವ. ಇಲ್ಲದಿದ್ದರೆ ಜನತೆಯಲ್ಲಿ ಇರಬೇಕು, ಜನತೆಯೇ ವಿರೋಧಪಕ್ಷವಾಗಿ ಸದಾ ಎಚ್ಚರಿಕೆಯಿಂದ ಇರಬೇಕು.

ನಮ್ಮ ಬದುಕನ್ನು ನಾವೇ ನಿಭಾಯಿಸಿ ರೂಪಿಸಿಕೊಳ್ಳಬೇಕು. ನಮ್ಮ ಸಂಸ್ಕೃತಿಗಳ ಅನನ್ಯತೆಗಳನ್ನು ಉಳಿಸಿಕೊಂಡು, ನಮ್ಮ ಪೂರ್ವಿಕರ ಬಾಳನ್ನು ಕಟ್ಟಬೇಕು. ಇದಕ್ಕೆ ಬೇಕಾಗಿರುವುದು ನಮ್ಮ ಸ್ವಾಭಿಮಾನ ಮಾತ್ರ, ಜಾಗತೀಕರಣಕ್ಕೆ ಪರ್ಯಾಯವಾಗಿ ಮೊದಲು ಚಿಂತಿಸಬೇಕಾದುದು ನಮ್ಮ ಸ್ವಾಭಿಮಾನವನ್ನು ಕುರಿತು. ಈ ಸ್ವಾಭಿಮಾನವು ಆಳುವ ಸರಕಾರಕ್ಕೆ ಇರಬೇಕು. ರಾಜಕಾರಣಿಗಳಲ್ಲಿ ಇರಬೇಕು, ಇದ್ದರೆ ನಾಡಿನ ಸುದೈವ. ಇಲ್ಲದಿದ್ದರೆ ಜನತೆಯಲ್ಲಿ ಇರಬೇಕು, ಜನತೆಯೇ ವಿರೋಧಪಕ್ಷವಾಗಿ ಸದಾ ಎಚ್ಚರಿಕೆಯಿಂದ ಇರಬೇಕು.

ವ್ಯವಸಾಯ: ರೈತರ ಸಾವು, ಪಾರಾಗುವ ಬಗೆ ಹೇಗೆ?

ಒಂದು ವರದಿಯ ಮಾಹಿತಿ ಪ್ರಕಾರ ಕಳೆದ ಹತ್ತು ವರ್ಷಗಳಲ್ಲಿ ರೈತರ ಸಾವು ಭಾರತದಲ್ಲಿಯೇ ೮ ಲಕ್ಷ ಮೀರಿದೆ. ಕರ್ನಾಟಕದಲ್ಲಿ ಸುಮಾರು ೧೨ ಸಾವಿರ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಭಾರತದ ಅನೇಕ ರಾಜ್ಯಗಳಲ್ಲಿ ರೈತರ ಆತ್ಮಹತ್ಯೆಗೆ ಕಾರಣಗಳೇನು ಎಂದು ತಿಳಿಯಲು ಅನೇಕ ಅಧ್ಯಯನ ತಂಡಗಳು ಕ್ಷೇತ್ರ ಕಾರ್ಯ ಮಾಡಿ ವರದಿಗಳನ್ನು ಪ್ರಕಟಿಸಿವೆ. ಈ ಅಧ್ಯಯನಗಳಿಂದ ವ್ಯಕ್ತವಾದ ಅಂಶಗಳೆಂದರೆ, ಬದಲಾದ ವ್ಯವಸಾಯದ ವಿಧಾನ, ಹೆಚ್ಚಾದ ಖರ್ಚಿನ ವೆಚ್ಚ, ಬೆಳೆ ಹಾನಿ, ಕುಸಿದ ಬೆಲೆ ಹಾಗೂ ವ್ಯವಸಾಯದ ಸಾಲ. ಇವುಗಳಿಂದ ತತ್ತರಿಸಿದ ರೈತರ ಸಮುದಾಯ ಆತ್ಮಹತ್ಯೆ ಮಾಡಿಕೊಳ್ಳುತ್ತಿದೆ. ಕರ್ನಾಟಕದಲ್ಲಿ ನೂರಕ್ಕೆ ೭೦ ಜನ ರೈತರು ಸಾಲದಿಂದ ಕಷ್ಟ ಎದುರಿಸುತ್ತಿದ್ದಾರೆ. ಕರ್ನಾಟಕದ ಪ್ರತಿಯೊಬ್ಬ ರೈತನ ಮೇಲೆ ಸರಾಸರಿ ಸುಮಾರು ೨೦,೦೦೦ ಸಾವಿರ ಸಾಲ ಇದೆ. ಸರ್ಕಾರ ರೈತರ ಬೆಳೆಗೆ ಬೆಂಬಲ ಬೆಲೆ ಘೋಷಿಸುವುದು, ಸಾಲ ಮನ್ನಾದ ಹೇಳಿಕೆ, ಕಡಿಮೆ ಬಡ್ಡಿಗೆ ಸಾಲ ನೀಡುವ ಭರವಸೆ ಇವು ಯಾವುವೂ ಕಾರ್ಯರೂಪಕ್ಕೆ ಬಂದಿಲ್ಲ. ಬರುವುದೂ ಇಲ್ಲ. ಸರ್ಕಾರ ಜಾಗತೀಕರಣದ ಸಂದರ್ಭದಲ್ಲಿ ದುರ್ಬಲವಾಗಿದೆ.

ರೈತರ ಈ ದುಃಸ್ಥಿತಿಗೆ ಕಾರಣಗಳೇನು? ಆಳುವ ಸರ್ಕಾರ ರೈತರ ಹಿತರಕ್ಷಣೆಗೆ ರಾಜಕೀಯ ಇಚ್ಛಾಶಕ್ತಿ ಹೊಂದಿಲ್ಲ. ಕೃಷಿ ನೀತಿಯನ್ನು ಕಾಲಕಾಲಕ್ಕೆ ರೂಪಿಸುವ ಜವಾಬ್ದಾರಿಯನ್ನು ಹೊತ್ತಿಲ್ಲ. ಇಂದಿನ ಪರಿಸ್ಥಿತಿಯಲ್ಲಿ ರೈತ ಯಾವ ಬೆಳೆಯನ್ನು ಹೇಗೆ, ಎಷ್ಟು ಬೆಳೆಯಬೇಕು ಎಂಬ ನಿರ್ದೇಶನ ನೀಡುವ ಜವಾಬ್ದಾರಿಯಿಂದ, ತಪ್ಪಿಸಿಕೊಂಡಿದೆ. ಹೀಗಾಗಿ ರೈತರು ದೆಸೆಗೆಟ್ಟ ಸ್ಥಿತಿಯಲ್ಲಿದ್ದಾರೆ. ಸಾಲು ಸಾಲು ಆತ್ಮಹತ್ಯೆ ಪ್ರಕರಣಗಳು ಸಂಭವಿಸುತ್ತಲಿವೆ. ದುರಂತವೆಂದರೆ, ರೈತರ ಸಾವುಗಳನ್ನು ತಪ್ಪಿಸಲು ಸರ್ಕಾರ ರಾಜಕೀಯ ಇಚ್ಛಾಶಕ್ತಿಯನ್ನೇ ಹೊಂದದಿರುವುದು. ರೈತ ಸಂಘಗಳು, ಕೃಷಿತಜ್ಞರು, ಕೃಷಿ ವಿಶ್ವವಿದ್ಯಾಲಯಗಳು, ಚಿಂತಕರು, ರೈತರ ಸಾವುಗಳನ್ನು ತಡೆಯಲು ಹಳ್ಳಿಹಳ್ಳಿಗೆ ಸಂಚರಿಸಿ ಒದಗಿದ ಸಂಕಷ್ಟಗಳಿಗೆ ಪರಿಹಾರ ಕಂಡುಕೊಳ್ಳುವ, ಸಾಂತ್ವನ ನೀಡುವ ಶಿಬಿರ, ಕಮ್ಮಟ, ಸಭೆಗಳನ್ನು ನಡೆಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳದಿರುವುದು.

೮೦ ರ ದಶಕಗಳವರೆಗೆ ಕರ್ನಾಟಕದಲ್ಲಿ ಸಾಲದ ಹೊರೆಯಿಂದ ರೈತರು ಸತ್ತಿರುವ ಉದಾಹರಣೆಗಳು ಇಲ್ಲ. ಹಾಗಾದರೆ ೮೦ ರ ದಶಕದ ಕೊನೆಗೆ ಯಾಕೆ ರೈತರ ಸಾವುಗಳು ಹೆಚ್ಚಾದವು? ಈ ಸಾವುಗಳನ್ನು ಪರಿಶೀಲಿಸಿದರೆ ಎದ್ದು ಕಾಣುವ ಅಂಶವೆಂದರೆ, ವ್ಯವಸಾಯ ಚಟುವಟಿಕೆಯೇ ಪರಾವಲಂಬಿಯಾಗಿದೆ. ರೈತನು ತನ್ನ ಹೊಲವನ್ನು ಹರಗುವುದಕ್ಕೆ ಟ್ರ್ಯಾಕ್ಟರ್ ಯಂತ್ರವನ್ನು ಬಾಡಿಗೆಗೆ ತರಬೇಕು. ಬಿತ್ತುವ ಬೀಜಗಳನ್ನು ಕೊಂಡು ತರಬೇಕು. ಬೆಳೆಗೆ ಗೊಬ್ಬರವನ್ನೂ ಕೊಂಡುಕೊಳ್ಳಬೇಕು. ಕಣ ಮಾಡಲೂ ಯಂತ್ರವನ್ನು ಬಾಡಿಗೆಗೆ ತರಬೇಕು. ಇಷ್ಟಾಗಿ ಬೆಳೆದ ಬೆಲೆಯನ್ನು ರೈತ ನಿಗದಿ ಮಾಡುವಂತಿಲ್ಲ. ದಲ್ಲಾಳಿಗಳು ನಿಗದಿ ಮಾಡಿದ ಕಮ್ಮಿ ಬೆಲೆಗೇ ಬೆಳೆಯನ್ನು ಮಾರಬೇಕು. ಎಷ್ಟು ಬೆಳೆದರೂ ಪರಾವಲಂಬಿತನದಿಂದಾಗಿ ಆರ್ಥಿಕವಾಗಿ ನಷ್ಟವನ್ನು ಅನುಭವಿಸಲೇಬೇಕು. ದುರಂತವೆಂದರೆ, ದೇಶದ ಬೆನ್ನೆಲುಬು ಎಂದು ಕರೆಸಿಕೊಂಡಿರುವ ರೈತನ ಈ ನಷ್ಟಕ್ಕೆ ಪರಿಹಾರವೆಂದರೆ ಸಾವೇ ಗತಿ ಎಂಬಂತಾಗಿದೆ. ೧೨ ಸಾವಿರ ರೈತರ ಸಾವುಗಳನ್ನು ಪರಿಶೀಲಿಸಿದರೆ ನಮ್ಮ ಸಮಾಜದ ದುರ್ಗತಿ ಅರಿವಿಗೆ ಬರುತ್ತದೆ. ಈ ಹಿಂದೆ ರೈತರು ತಮ್ಮ ಹೊಟ್ಟೆಗೆ ತಿನ್ನುವ ಕಾಳುಗಳನ್ನೇ ಬೀಜವಾಗಿ ಹೊಲಕ್ಕೆ ಬಿತ್ತುತ್ತಿದ್ದರು. ಅವು ತಮ್ಮ ಹೊಲದ ಕಾಳುಗಳೇ ಆಗಿರುತ್ತಿದ್ದವು.

ಈಗ ಈ ಪರಿಸ್ಥಿತಿಯಿಲ್ಲ. ಕಂಪನಿಗಳು ಮಾರುವ ಬೀಜಗಳನ್ನೇ ಕೊಂಡುತರಬೇಕು. ಹಿಂದೆ ಜಾನುವಾರುಗಳನ್ನು ಹೊಂದಿದ್ದ ರೈತ ಅವುಗಳ ಹೆಂಡೆಗೊಬ್ಬರವನ್ನೇ ಹೊಲಕ್ಕೆ ಬಳಸುತ್ತಿದ್ದ. ಈಗ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಅನಿವಾರ್ಯವಾಗಿ ಬಳಸುವ ಒತ್ತಡಕ್ಕೆ ಒಳಗಾಗಿದ್ದಾನೆ. ಇನ್ನು ಯಂತ್ರಗಳಿಂದ ಬೇಗ ಬೇಗ ಕೆಲಸವಾಗುತ್ತದೆಂದು (ಟ್ರಾಕ್ಟರ್, ಕಣ ಯಂತ್ರ) ಬಾಡಿಗೆಗೆ ತಂದು ಕೆಲಸ ಮಾಡುವ ಒತ್ತಡಕ್ಕೆ ಒಳಗಾಗಿದ್ದಾನೆ. ಎಲ್ಲಿದೆ ಈ ವ್ಯವಸಾಯದ ಚಟುವಟಿಕೆಗಳ ಹಿಂದೆ ಸ್ವಾವಲಂಬನೆ? ಪ್ರತಿ ಹಂತದಲ್ಲೂ ಪರಾವಲಂಬಿತನವೇ ಕಾಣುತ್ತಿದೆ. ಬೀಜ, ನೀರು, ವಿದ್ಯುತ್, ಯಂತ್ರ ಎಲ್ಲದಕ್ಕೂ ಅನ್ಯರ ಅವಲಂಬನವೇ ಎದ್ದು ಕಾಣುತ್ತದೆ. ದುಡಿಮೆಗಾರನ ಸೃಜನಶೀಲತೆಗೆ ಅವಕಾಶವಿಲ್ಲ. ಇದರಿಂದಾಗಿ ಸಣ್ಣ ರೈತರೆಲ್ಲ ಸಾಲದ ಭಾರಕ್ಕೆ ಕುಸಿದು ಹೋಗುತ್ತಿದ್ದಾರೆ.

ಹಿಂದೆ ನೀರಾವರಿ ಇಲ್ಲದ ಪ್ರದೇಶಗಳಲ್ಲಿಯೂ ವ್ಯವಸಾಯ ಪ್ರಗತಿಯಲ್ಲಿತ್ತು. ಬಾವಿ ತೋಡಿ ನೀರನ್ನು ಎತ್ತುಗಳ ಸಹಾಯದಿಂದ ಮೇಲೆತ್ತಿ ಹೊಲಕ್ಕೆ ಹರಿಸಿ ಬೆಳೆ ಬೆಳೆಯುತ್ತಿದ್ದರು. ಇದಕ್ಕೆ ಮಾಟೆ ನೀರಾವರಿ ಬೇಸಾಯ ಅನ್ನುತ್ತಿದ್ದರು. ಒಂದು ಕುಟುಂಬದ ಸದಸ್ಯರೆಲ್ಲರಿಗೂ ಕೈತುಂಬ ಕೆಲಸವಿರುತ್ತಿತ್ತು, ಎತ್ತುಗಳಿಗೂ ಕೆಲಸವಿರುತ್ತಿತ್ತು. ದೇಶೀ ತಂತ್ರಜ್ಞಾನದಿಂದಲೇ ಬೇಸಾಯ ನಡೆಯುತ್ತಿತ್ತು. ಬಾವಿಗೆ ಬದಲು ಬೋರ್‌ವೆಲ್ ಬಂದವು. ವಿದ್ಯುತ್

ಬೇಕಾಯಿತು. ಯಂತ್ರ ಬೇಕಾಯಿತು. [illegible]ದಿಂದ ಎತ್ತು ಗಳ [illegible]ದಿಂದ [illegible]ನ್ನು ಮೇಲೆತ್ತುವಾಗ ಎಲ್ಲರಿಗೂ ಕೆಲಸವಿತ್ತು. ಯಂತ್ರ ಬಂದ ಮೇಲೆ ದುಡಿಯುವ ಕುಟುಂಬದ ಸದಸ್ಯರಿಗೆ ಕೆಲಸ ಕಮ್ಮಿಯಾಯಿತು. ಮನುಷ್ಯ ಯಂತ್ರಗಳಿಗೆ ಅಧೀನನಾದ. ಸರಕಾರದ ನೀತಿಯಿಂದ ಹೊತ್ತಿಗೆ ಸರಿಯಾಗಿ ವಿದ್ಯುತ್ ಸರಬರಾಜು ಇರುವುದಿಲ್ಲ. ಬೆಳೆಗೆ ನೀರು ಸರಿಯಾದ ಸಮಯಕ್ಕೆ ಇಲ್ಲ. ಬೆಳೆ ಹಾನಿ ಶುರುವಾಯಿತು. ಮೇಲಾಗಿ ಸಣ್ಣ ರೈತರು ಯಂತ್ರಗಳನ್ನು ಬಳಸುವಷ್ಟು ಶಕ್ತರಾಗಿರುವುದಿಲ್ಲ.

ಆದರೆ ಯಂತ್ರಗಳ ಆಕರ್ಷಣೆಗೆ ಒಳಗಾದ ಮನುಷ್ಯ ತನ್ನ ದೇಶೀಜ್ಞಾನವನ್ನು ಬಳಸುವುದಕ್ಕೆ ಎರವಾಗಿದ್ದಾನೆ. ನೂರಾರು ರೈತರು ತಮ್ಮ ಹೊಲದಲ್ಲಿದ್ದ ಬಾವಿಗಳನ್ನು ಮುಚ್ಚಿಸಿದರು. ಬಾವಿಗೆ ಜಾಗ ಬಹಳ ಹಿಡಿಯುತ್ತದೆಂದು ಬೋರ್‌ವೆಲ್ ಹಾಕಿಸಿದರು. ಯಂತ್ರ ವಿದ್ಯುತ್ ಕೊರತೆಯಿಂದ ರೈತ ಬೇಸತ್ತಿದ್ದಾನೆ ನಿಜ. ಈಗ ಹಿಂದಕ್ಕೆ ನೋಡಿಕೊಂಡರು ಹೋಗಲಾರದಷ್ಟು ದೂರ ಬಂದಿದ್ದಾನೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಗಾಂಧೀಜಿ ಹೇಳಿದ ಮಾತುಗಳು ಈಗ ನೆನಪಾಗುತ್ತಿವೆ. ಒಬ್ಬ ವ್ಯಕ್ತಿ ಬಾಳಿಕೊಳ್ಳಲಿಕ್ಕೆ ಏನೇನು ಅಗತ್ಯವೋ ಅಂಥವುಗಳ ಮೇಲೆ ಆ ವ್ಯಕ್ತಿಯ ನಿಯಂತ್ರಣ ಇರಬೇಕು. ಗಾಂಧೀಜಿಯ ಈ ಮಾತು ಸ್ವಾವಲಂಬನೆಯನ್ನು ಕುರಿತು ಹೇಳಿದ್ದು ಈ ಹೊತ್ತಿನ ಮನುಷ್ಯನ ಬದುಕು ಪ್ರತಿ ನಿಮಿಷವೂ ಪರಾವಲಂಬಿಯಾಗಿದೆ. ಪರಿಹಾರದ ಹಾದಿ ಯಾವುದು? ಪರಂಪರೆಯ ಪದ್ಧತಿಗೆ ಮರಳುವುದೆ? ಅಥವಾ ಶುಭಾಷ್ ಪಾಳೇಕಾರರ ಪ್ರಯೋಗಗಳ ಕಡೆ ಗಮನ ಕೊಡಬೇಕೆ?

ವಿಶೇಷ ಆರ್ಥಿಕ ವಲಯ (SEZ): ರೈತರ ಮೇಲೆ ಹೊಸ ದಾಳಿ

ಜಾಗತೀಕರಣದ ಭಾಗವಾದ ಮುಕ್ತ ಮಾರುಕಟ್ಟೆಯಿಂದ ರೈತರು ದಿವಾಳಿಯಾಗಿ ಸಾವಿನ ಮೆರವಣಿಗೆ ನಡೆಯುತ್ತಿರುವ ಬೆನ್ನಹಿಂದೆಯೇ ಭಾರತಕ್ಕೆ ಹೊಸ ದಾಳಿ ಆರಂಭವಾಗಿದೆ. ಅದೇ 'ವಿಶೇಷ ಆರ್ಥಿಕ ವಲಯ' ಎಂಬ ವ್ಯವಸ್ಥಿತ ದಾಳಿ ಭಾರತದ ಸರ್ಕಾರದ ಬೆಂಬಲದಿಂದಲೇ ನಡೆಯುತ್ತಿದೆ. ರೈತರ ವ್ಯವಸಾಯವನ್ನು ದಿವಾಳಿ ಮಾಡಿ, ರೈತರು ಭೂಮಿ, ವ್ಯವಸಾಯದ ಸಹವಾಸವೇ ಬೇಡ ಎನ್ನುವಂತೆ ಮಾಡಿ ನಿಲ್ಲಿಸಿದ ಬೆನ್ನ ಹಿಂದೆಯೇ 'ವಿಶೇಷ ಆರ್ಥಿಕ ವಲಯ' ಯೋಜನೆ ಜಾರಿಗೆ ಬಂದಿರುವುದು ಒಂದಕ್ಕೊಂದು ಸಂಬಂಧ ಇರುವಂತೆ ಕಾಣುತ್ತಿದೆ.

'ವಿಶೇಷ ಆರ್ಥಿಕ ವಲಯ' ಎಂದರೇನು? ದೇಶಿ ಮತ್ತು ವಿದೇಶಿ ಬಂಡವಾಳಗಾರರು ತಮ್ಮ ಉತ್ಪನ್ನಗಳ ರಫ್ತು ವಹಿವಾಟವನ್ನು ಗಮನದಲ್ಲಿರಿಸಿಕೊಂಡು ಕೈಗಾರಿಕಾ ಅಭಿವೃದ್ಧಿಗಾಗಿ ರೂಪಿಸಿದ ಯೋಜನೆಯಿದು. ವಿದೇಶಿ ಬಂಡವಾಳಗಾರರು ತಮ್ಮ ಕೈಗಾರಿಕೆಗಳನ್ನು ಸ್ಥಾಪಿಸಿಕೊಳ್ಳಲು ಭಾರತದ ವ್ಯವಸಾಯ ಭೂಮಿಯನ್ನು ಕೊಂಡು ತನ್ನದಾಗಿಸಿಕೊಳ್ಳಲು ಸರ್ವಪ್ರಯತ್ನ ನಡೆಸಿದ್ದಾರೆ. ಒಂದು ವಿದೇಶಿ ಕಂಪನಿ ಈ ಯೋಜನೆ ಅಡಿಯಲ್ಲಿ ಕೈಗಾರಿಕೆಯನ್ನು ಸ್ಥಾಪಿಸಲು ವ್ಯವಸಾಯದ ಸಾವಿರಾರು ಎಕರೆ ಭೂಮಿಯನ್ನು ಕೊಂಡುಕೊಳ್ಳಲಿದೆ. ಎಚ್ಚರದಿಂದ ಗಮನಿಸಬೇಕಾದ ಸಂಗತಿಯೆಂದರೆ, ಭಾರತ ಸರ್ಕಾರ ಇಂಥ ೩೫೦ 'ವಿಶೇಷ ಆರ್ಥಿಕ ವಲಯ' ಸ್ಥಾಪನೆಗೆ ಅವಕಾಶ ಕೊಡಲಿದೆ. ಈಗಾಗಲೇ ಸುಮಾರು ೧೫೦ ವಿದೇಶಿ ಕಂಪನಿಗಳಿಗೆ ಭಾರತದ ವ್ಯವಸಾಯ ಭೂಮಿಯನ್ನು ಕೊಳ್ಳಲು ಅನುಮತಿ ನೀಡಿದೆ. ಈ ಕಂಪನಿಗಳು ರೈತರ ಭೂಮಿಯನ್ನು ಸರ್ಕಾರದ ಬೆಂಬಲದಿಂದ ಬಲವಂತವಾಗಿ ಕೊಳ್ಳಲು ಸರ್ವಪ್ರಯತ್ನ ನಡೆಸಿವೆ. ಒಂದು ಅಂದಾಜಿನ ಪ್ರಕಾರ ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಈ ಯೋಜನೆಗಾಗಿ ೭೫,೦೦೦ ಹೆಕ್ಟೇರ್ ಭೂಮಿ ವಿದೇಶಿ ಬಂಡವಾಳಿಗರ ಕೈವಶವಾಗಲಿದೆ. ವ್ಯವಸಾಯ ಭೂಮಿ ಹೊಂದಿರುವ ರೈತರಿಂದ ಭೂಮಿಯನ್ನು ಬಲವಂತವಾಗಿ ಕಸಿದುಕೊಂಡು ರೈತರನ್ನು ಅತಂತ್ರ ಮಾಡುತ್ತಿರುವುದು ಮತ್ತೊಂದು ದುರಂತ. ಈ ದುರಂತ ತಪ್ಪಲು ಭಾರತದ ರೈತರು, ಬೇರೆ ಬೇರೆ ರಾಜ್ಯಗಳ ರೈತರು ಸಂಪರ್ಕ ಏರ್ಪಡಿಸಿಕೊಂಡು ಸಂಘಟಿತ ಹೋರಾಟ ನಡೆಸುವುದು ಅನಿವಾರ್ಯವಾಗಿದೆ. ಪಶ್ಚಿಮ ಬಂಗಾಳದಲ್ಲಿ ವಿರೋಧ ಪಕ್ಷಗಳು ಹೋರಾಟವನ್ನು ತೀವ್ರಗೊಳಿಸುತ್ತಿವೆ. ಬೇರೆ ಬೇರೆ ರಾಜ್ಯಗಳ ರೈತರು ಹೋರಾಟ ನಡೆಸಿದ್ದಾರೆ. ಕರ್ನಾಟಕದ ರೈತರು ಈ ಯೋಜನೆಯ ಸ್ವರೂಪವನ್ನು ಅರಿತುಕೊಂಡು ಹೋರಾಟಕ್ಕೆ ಸಿದ್ಧರಾಗಬೇಕಾಗಿರುವುದು ಅನಿವಾರ್ಯವಾಗಿದೆ.

ವಿಶೇಷ ಆರ್ಥಿಕ ವಲಯ ಸ್ಥಾಪಿಸುವ ಕಂಪೆನಿಗಳಿಗೆ ಭಾರತ ಸರ್ಕಾರ ನೀಡಿರುವ ವಿನಾಯತಿಗಳು:

ವಿದೇಶಿ ಕಂಪೆನಿಗಳು 'ವಿಶೇಷ ಆರ್ಥಿಕ ವಲಯ' ಎಂದು ವಶಪಡಿಸಿಕೊಂಡಿರುವ ಭೂಮಿಯನ್ನು ಭಾರತದ ರೈತರಿಂದ ಅಗ್ಗಕ್ಕೆ ಕೊಂಡು, ಮುಂದೆ ಅಭಿವೃದ್ಧಿಗೊಳಿಸಿ ಸಾವಿರ ಪಟ್ಟು ಹಣ ಗಳಿಸಲಿವೆ. ಈ ಕಂಪೆನಿಗಳಲ್ಲಿ ದುಡಿವ ಜನರಿಗೆ ಭದ್ರತೆಯಿಲ್ಲ. ಯಾವುದೇ ಕಾನೂನಿನ ನೆರವಿಲ್ಲ. ಸಂಬಳದ ನಿಯಂತ್ರಣ ಹೊಂದಿರುತ್ತವೆ. ಯಾವುದೇ ವಿವಾದಗಳು ಸೃಷ್ಟಿಯಾದರೆ ಅವುಗಳ ನ್ಯಾಯ ಭಾರತದ ನ್ಯಾಯಾಲಯಗಳಲ್ಲಿ ನಡೆಯುವುದಿಲ್ಲ. ಒಟ್ಟಿನಲ್ಲಿ ಭಾರತದ ನೆಲದಲ್ಲಿ ವಿದೇಶಿ ಲೋಕಗಳನ್ನು ಸೃಷ್ಟಿಸಿಕೊಳ್ಳುವುದು ಈ ಯೋಜನೆಯಿಂದ ನಡೆಯಲಿದೆ. ನಾವು ನೆನಪಿಡಬೇಕು. ಬೆಳಗಾವಿ ಮಹಾರಾಷ್ಟ್ರಕ್ಕೆ ಹೋದರೂ, ಬೆಳಗಾವಿ ಕರ್ನಾಟಕದಲ್ಲೆ ಇದ್ದರೂ ಅದು ಭಾರತದಲ್ಲೇ ಇರುತ್ತದೆ. ಆದರೆ ಭಾರತದ ನೆಲ ವಿದೇಶಿ ಕಂಪೆನಿಗಳಿಗೆ ಮಾರಿದರೆ ಅದನ್ನು ಹೇಗೆ ಭಾವಿಸುವುದು?

೧. ಒಂದೊಂದು ವಿದೇಶಿ ಕಂಪೆನಿಗಳು ಸಾವಿರಾರು ಎಕರೆ ವ್ಯವಸಾಯದ ಭೂಮಿಯನ್ನು ಕೊಳ್ಳಲು ಅನುಮತಿ ಪಡೆದಿವೆ.

೨. ವಶಪಡಿಸಿಕೊಂಡ ಸ್ಥಳವನ್ನು ವಿದೇಶಿ ಪ್ರದೇಶವೆಂದು, ಅದು ಸ್ವತಂತ್ರ ಪ್ರದೇಶವೆಂದು ಹಕ್ಕು ಪಡೆದಿವೆ.

೩. ಯಾವುದೇ ತಮ್ಮ ಉತ್ಪನ್ನಗಳಿಗೆ ಬೆಲೆ ನಿಗದಿ ಮಾಡುವ ಸ್ವಾತಂತ್ರ್ಯ ಹೊಂದಿವೆ.

೪. ಬಂಡವಾಳ ಹೂಡುವ ಕಂಪೆನಿಗಳು ಆದಾಯ ತೆರಿಗೆಯಿಂದ ಮುಕ್ತಿ ಹೊಂದಿರುತ್ತವೆ.

೫. ಸೇವಾ ತೆರಿಗೆಯಿಂದ ಮುಕ್ತ ಹೊಂದಿರುತ್ತವೆ.

"೬. ತಮ್ಮ ಕೈಗಾರಿಕಾ ಅಭಿವೃದ್ಧಿಗೆ ಯಾವುದೇ ಪರವಾನಿಗೆ ಇಲ್ಲದೆ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಅವಕಾಶ ಹೊಂದಿವೆ.

೭. ಆಮದಿನ ಮೇಲೆ ಕಸ್ಟಮ್ಸ್ ಸುಂಕದಿಂದ ವಿನಾಯಿತಿ ಪಡೆದಿವೆ.

೮. ದೇಶೀಯ ಮಾರುಕಟ್ಟೆಯಲ್ಲಿ ಖರೀದಿಸಿದ ಕಚ್ಚಾ ಸಾಮಗ್ರಿ ಮತ್ತು ಬಂಡವಾಳ ಉತ್ಪನ್ನಗಳ ಮೇಲೆ ಎಕ್ಸೈಸ್ ಸುಂಕದಿಂದ ವಿನಾಯಿತಿ ಪಡೆದಿವೆ.

೯. ೫ ವರ್ಷಗಳ ಕಾಲ ಆದಾಯ ತೆರಿಗೆಯಿಂದ ಸಂಪೂರ್ಣ ವಿನಾಯಿತಿ. ನಂತರ ಶೇಕಡ ೫೦ ಮಾತ್ರ ಆದಾಯ ತೆರಿಗೆ ನೀಡಲಾಗುವುದು.

೧೦. ವಶಪಡಿಸಿಕೊಂಡ ಭೂಪ್ರದೇಶದಲ್ಲಿ ಅಭಿವೃದ್ಧಿ ಹೆಸರಿನಲ್ಲಿ ಏನನ್ನಾದರೂ ನಡೆಸುವವು.

೧೧. ವಿದೇಶಿಯ ಈ ಕಂಪೆನಿಗಳಲ್ಲಿ ದುಡಿಯುವ ವರ್ಗಗಳು ಕಾರ್ಮಿಕ ಕಾನೂನುಗಳಿಂದ ಮುಕ್ತವಾಗಿವೆ.

ಇಂತಹ ಹತ್ತಾರು ವಿನಾಯಿತಿಯನ್ನು ಈ ವಿದೇಶಿ ಕಂಪೆನಿಗಳು ಭಾರತ ಸರ್ಕಾರದಿಂದ ಪಡೆದಿವೆ.

ಎಚ್ಚರದಿಂದ ಗಮನಿಸಬೇಕಾದ ಸಂಗತಿ ಎಂದರೆ, ಇಷ್ಟು ವಿನಾಯಿತಿ ನೀಡಿರುವುದರಿಂದ ಭಾರತ ಸರ್ಕಾರಕ್ಕೆ ಮುಂದಿನ ೫ ವರ್ಷಗಳಲ್ಲಿ ೧,೭೦೦,೦೦೦ ಕೋಟಿ ತೆರಿಗೆ ಆದಾಯ ನಷ್ಟವಾಗಲಿದೆ ಎಂದು ಅಂದಾಜಿಸಲಾಗಿದೆ.

ಈ ವಿದೇಶಿ ಕಂಪೆನಿಗಳು 'ವಿಶೇಷ ಆರ್ಥಿಕ ವಲಯ' ಎಂದು ವಶಪಡಿಸಿಕೊಂಡಿರುವ ಭೂಮಿಯನ್ನು ಭಾರತದ ರೈತರಿಂದ ಅಗ್ಗಕ್ಕೆ ಕೊಂಡು, ಮುಂದೆ ಅಭಿವೃದ್ಧಿಗೊಳಿಸಿ ಸಾವಿರಪಟ್ಟು ಹಣ ಗಳಿಸಲಿವೆ. ಈ ಕಂಪೆನಿಗಳಲ್ಲಿ ದುಡಿವ ಜನರಿಗೆ ಭದ್ರತೆಯಿಲ್ಲ. ಯಾವುದೇ ಕಾನೂನಿನ ನೆರವಿಲ್ಲ. ಸಂಬಳದ ನಿಯಂತ್ರಣ ಹೊಂದಿರುತ್ತವೆ. ಯಾವುದೇ ವಿವಾದಗಳು ಸೃಷ್ಟಿಯಾದರೆ ಅವುಗಳ ನ್ಯಾಯ ಭಾರತದ ನ್ಯಾಯಾಲಯಗಳಲ್ಲಿ ನಡೆಯುವುದಿಲ್ಲ. ಒಟ್ಟಿನಲ್ಲಿ ಭಾರತದ ನೆಲದಲ್ಲಿ ವಿದೇಶಿ ಲೋಕಗಳನ್ನು ಸೃಷ್ಟಿಸಿಕೊಳ್ಳುವುದು ಈ ಯೋಜನೆಯಿಂದ ನಡೆಯಲಿದೆ.

ನಾವು ನೆನಪಿಡಬೇಕು. ಬೆಳಗಾವಿ ಮಹಾರಾಷ್ಟ್ರಕ್ಕೆ ಹೋದರೂ, ಬೆಳಗಾವಿ ಕರ್ನಾಟಕದಲ್ಲೆ ಇದ್ದರೂ ಅದು ಭಾರತದಲ್ಲೇ ಇರುತ್ತದೆ. ಆದರೆ ಭಾರತದ ನೆಲ ವಿದೇಶಿ ಕಂಪೆನಿಗಳಿಗೆ ಮಾರಿದರೆ ಅದನ್ನು ಹೇಗೆ ಭಾವಿಸುವುದು?

ಇಂಗ್ಲಿಷ್ ಭಾಷೆಗೆ ಪ್ರಧಾನ ಪಟ್ಟ, ಯಾರ ಹಿತಕ್ಕಾಗಿ?

ಇಂಗ್ಲಿಷ್ ಭಾಷೆಯ ಯಜಮಾನಿಕೆ ಬ್ರಿಟಿಷ್ ವಸಾಹತುಶಾಹಿ ಕಾಲದಿಂದಲೇ ಆರಂಭವಾಯಿತು. ಆಧುನಿಕ ಶಿಕ್ಷಣ ವ್ಯವಸ್ಥೆಯ ಜತೆಗೆ ಇಂಗ್ಲಿಷ್ ನಂಟು ಪ್ರಬಲವಾ

ಗಿತ್ತು. ಭಾರತದಲ್ಲಿ ಬ್ರಿಟಿಷರ ಆಡಳಿತ ಸುಗಮವಾಗಲು ಇಂಗ್ಲಿಷ್ ಅನಿವಾರ್ಯವಾಗಿತ್ತು. ಭಾರತೀಯರಿಗೆ ಆಧುನಿಕ ಶಿಕ್ಷಣ ಕೊಡುವ ನೆಪದಲ್ಲಿ ಇಂಗ್ಲಿಷ್ ವ್ಯಾಮೋಹವನ್ನು ತುಂಬಿದರು. ರಾಜ್ಯಗಳ ದೇಶೀ ಭಾಷಿಗರು ಅದರಲ್ಲೂ ವಿದ್ಯಾವಂತರು ಇಂಗ್ಲಿಷ್ ಭಾಷೆಯ ಜತೆಗೆ ತಮ್ಮ ಮಾತೃಭಾಷೆಯನ್ನು ಬಲಪಡಿಸಲು ಪ್ರಯತ್ನಿಸಿದರು. ಇಂಗ್ಲಿಷ್ ಭಾಷೆಯ ಜ್ಞಾನವನ್ನೂ ಮಾತೃಭಾಷೆಯಲ್ಲಿ ಅಭಿವ್ಯಕ್ತಿಸಲು ತೊಡಗಿದರು. ಇದರಿಂದ ಮಾತೃಭಾಷೆಗಳೂ ಬಲಗೊಳ್ಳುವ ಹಾದಿಯಲ್ಲಿದ್ದವು. ೨೦ನೇ ಶತಮಾನದ ಮಧ್ಯದವರೆಗೆ ಈ ಬೆಳವಣಿಗೆ ಇತ್ತು. ಶಿಕ್ಷಣ ವ್ಯವಸ್ಥೆಯಲ್ಲಿ ಪಶ್ಚಿಮದವರ ಪ್ರಭಾವ ಹೆಚ್ಚಾಗುತ್ತಾ ಇಂಗ್ಲಿಷ್ ಪ್ರಾಬಲ್ಯ ಗಟ್ಟಿಯಾಗುತ್ತ ಹೋಯಿತು. ಭಾರತೀಯರ ಕಲಿಕೆ ಪಶ್ಚಿಮದವರ ಅಗತ್ಯಕ್ಕೆ ಉಪಯೋಗವಾಗತೊಡಗಿತ್ತು. ೨೧ನೇ ಶತಮಾನದ ಆರಂಭದಲ್ಲಿ ಮಾತೃಭಾಷೆಯಲ್ಲಿ ಮಕ್ಕಳ ಶಿಕ್ಷಣ ಪ್ರಯೋಜನಕಾರಿಯಲ್ಲ ಎಂಬ ನಿರ್ಧಾರಕ್ಕೆ ಬರಲಾಗಿದೆ.

ವಿಜ್ಞಾನ-ತಂತ್ರಜ್ಞಾನ ಶಿಕ್ಷಣವನ್ನೇ ಜ್ಞಾನದ ಕ್ಷೇತ್ರವೆಂದು ತಿಳಿಯಲಾಗುತ್ತಿದೆ. ಹೀಗಾಗಿ ಮಾನವಿಕ ಶಾಸ್ತ್ರಗಳು, ಲಲಿತಕಲೆಗಳ ಶಾಸ್ತ್ರಗಳು ಮೂಲೆಗುಂಪಾಗುತ್ತಿವೆ. ಯಾವುದೇ ಮಗುವಿನ ಮೊದಲ ಆದ್ಯತೆ ಇಂಗ್ಲಿಷ್ ಭಾಷೆಯಲ್ಲಿ ಶಿಕ್ಷಣ ಪಡೆಯುವುದೇ ಆಗಿದೆ. ವಿಜ್ಞಾನ-ತಂತ್ರಜ್ಞಾನ ಕ್ಷೇತ್ರವೇ ಮೊದಲ ಆಯ್ಕೆಯಾಗಿದೆ. ಇದು ಮಕ್ಕಳ ಆಯ್ಕೆಯಲ್ಲ. ಜಾಗತೀಕರಣ, ಖಾಸಗೀಕರಣ, ಉದಾರೀಕರಣದ ಫಲವಾಗಿ ಎಲ್ಲ ರಾಜ್ಯಗಳ ರಾಜ್ಯಭಾಷೆಗಳು ಶಿಕ್ಷಣದಿಂದ, ಬೌದ್ಧಿಕತೆಯಿಂದ ಹೊರಗುಳಿಯಲಿವೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯಲ್ಲಿ ಶಿಕ್ಷಣ ಪಡೆಯುವುದು ದಿನದಿಂದ ದಿನಕ್ಕೆ ಕಮ್ಮಿಯಾಗುತ್ತಿದೆ. ಇದರಿಂದ ಗ್ರಾಮಾಂತರ ಪ್ರದೇಶದ ಮಕ್ಕಳು, ಬಡವರ, ಕೆಳವರ್ಗದವರ ಮಕ್ಕಳ ಭವಿಷ್ಯ ಕರಾಳವಾಗಲಿದೆ. ಜತೆಗೆ ಇಂಗ್ಲಿಷ್ ಭಾಷೆಯ ಕಲಿಕೆಯಿಂದ ಮಕ್ಕಳು ಯಾಂತ್ರಿಕವಾಗುತ್ತಾರೆಯೇ ಹೊರತು ಸೃಜನಶೀಲರಾಗುವುದಿಲ್ಲ. ಮಕ್ಕಳ ಸೃಜನಶೀಲತೆಯನ್ನು ಇಂಗ್ಲಿಷ್ ನಾಶ ಮಾಡುತ್ತಿದೆ.

ಇದನ್ನು ತಪ್ಪಿಸುವುದು ಸಾಧ್ಯವಿಲ್ಲ ಎಂಬ ಬೆಳವಣಿಗೆಗಳು ನಡೆಯುತ್ತಿವೆ. ಉಳಿದಿರುವ ದಾರಿಯೆಂದರೆ ಪ್ರಜ್ಞಾವಂತ ಪೋಷಕರು, ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಮಾತೃಭಾಷೆಯನ್ನು ಬಲಪಡಿಸಲು ಯೋಜನೆಗಳನ್ನು ರೂಪಿಸಬೇಕು. (ವಿಪರ್ಯಾಸವೆಂದರೆ ಇಂಗ್ಲಿಷ್ ಜತೆಗೆ ಮಾತೃಭಾಷೆಯನ್ನು ಪೋಷಿಸಿ ಬಲಪಡಿಸುವ ಗತಿ ಬಂದಿದೆ.) ವಿಜ್ಞಾನ-ತಂತ್ರಜ್ಞಾನ ವಿಷಯಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಕಲಿತರೂ, ಆ ಜ್ಞಾನವನ್ನು ಮಾತೃಭಾಷೆಯಲ್ಲಿ ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳಬೇಕು. ಮೆಡಿಕಲ್, ಇಂಜಿನಿಯರಿಂಗ್, ಲಾ ಮುಂತಾದ ಆಧುನಿಕ ವಿಜ್ಞಾನ-ತಂತ್ರಜ್ಞಾನ ವಿಷಯಗಳನ್ನು ವಿದ್ಯಾರ್ಥಿಗಳು ಇಂಗ್ಲಿಷ್ ಜತೆಗೆ ಮಾತೃಭಾಷೆಯಲ್ಲಿ ಅಭಿವ್ಯಕ್ತಿಸುವ, ವ್ಯವಹರಿಸುವ ಸಾಮರ್ಥ್ಯವನ್ನು ಕಲಿಯುವ ಯೋಜನೆಗಳು ಕ್ರಿಯಾಶೀಲವಾಗಬೇಕು. ಇದು ಖಂಡಿತ ಈಗಿನ ಪರಿಸ್ಥಿತಿಯಲ್ಲಿ ಸರ್ಕಾರಗಳಿಂದ ಸಾಧ್ಯವಿಲ್ಲ. ಕನ್ನಡ ಸಂಸ್ಕೃತಿ ಪರಂಪರೆಯ ಹಿನ್ನೆಲೆಯುಳ್ಳ ಶಿಕ್ಷಣ ಸಂಸ್ಥೆಗಳು ಕರ್ನಾಟಕದಲ್ಲಿ ಶಕ್ತವಾಗಿ ಬೆಳೆದು ನಿಂತಿವೆ. ಅವುಗಳಿಂದ ಇದು ಸಾಧ್ಯವಾಗಬಹುದು. ವೈದ್ಯಕೀಯ, ತಾಂತ್ರಿಕ, ಕಾನೂನು, ಕೃಷಿ ಮುಂತಾದ ಜ್ಞಾನಕ್ಷೇತ್ರಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷೆಯಲ್ಲಿ ವಿಷಯ ಗ್ರಹಿಸಿಕೊಂಡು, ಅದನ್ನು ಕನ್ನಡ ಭಾಷೆಯಲ್ಲೇ ಬರೆಯಲು ಅವಕಾಶವನ್ನು ಕಲ್ಪಿಸಬೇಕು. ಇದು ಖಾಸಗೀ ಶಿಕ್ಷಣ ಸಂಸ್ಥೆಗಳಿಂದ ಮಾತ್ರ ಸಾಧ್ಯವೆಂದು ನನಗನಿಸುತ್ತದೆ. ಕನ್ನಡ ಸಂಸ್ಕೃತಿ ಪರಂಪರೆಯಿಂದ ಹುಟ್ಟಿಕೊಂಡ ಶಿಕ್ಷಣ ಸಂಸ್ಥೆಗಳು ಈ ಕೆಲಸವನ್ನು ಮಾಡಿದರೆ ಕನ್ನಡ ಭಾಷೆಯ ಬೆಳವಣಿಗೆಗೆ ಅವಕಾಶವಾಗುತ್ತದೆ.

ದೇಶೀಜ್ಞಾನ ಪರಂಪರೆ ಮತ್ತು ಕನ್ನಡ ಭಾಷೆ: ದೇಶೀಜ್ಞಾನ ಪರಂಪರೆಯನ್ನು ನ್ಯಾಯ ಪದ್ಧತಿಯಲ್ಲಿ, ವೈದ್ಯಕೀಯ ಪದ್ಧತಿಯಲ್ಲಿ ಕಾಣಬಹುದು. ಭಾರತದಲ್ಲಿ ಆಯಾ ರಾಜ್ಯಗಳ ಮಾತೃಭಾಷೆಯಲ್ಲಿ, ಸ್ಥಳೀಯ ಉಪಭಾಷೆಗಳಲ್ಲಿಯೂ ಈ ಪದ್ಧತಿಗಳ ಕಾರ್ಯಚಟುವಟಿಕೆಗಳು ನಡೆಯುತ್ತಿದ್ದವು. ಸ್ಥಳೀಯ ಭಾಷೆಯ ಅಂದರೆ ಸ್ಥಳೀಯ ಜ್ಞಾನ ಎಂದೇ ಅರ್ಥ. ನಮ್ಮ ಸಾಂಪ್ರದಾಯಿಕ ಹಳ್ಳಿಗಳಲ್ಲಿ ನ್ಯಾಯ ಪದ್ಧತಿ ಇತ್ತು. ದೇಶೀ ತಿಳುವಳಿಕೆಯಲ್ಲಿ ಪಂಚಾಯಿತಿ ನಡೆಯುತ್ತಿತ್ತು. ಇದೆಲ್ಲವೂ ಸ್ಥಳೀಯ ಭಾಷೆಯಲ್ಲಿಯೇ ಇತ್ತು. ಮಾನವೀಯತೆಯ ತಳಹದಿಯ ಮೇಲೆ ನ್ಯಾಯವನ್ನು ಹಂಚಲಾಗುತ್ತಿತ್ತು. ಮಾನವೀಯತೆಯ ಮೇಲೆ ನ್ಯಾಯವನ್ನು ಹಂಚಲಾಗುತ್ತಿತ್ತು. ಹಾಗೆಯೇ ವೈದ್ಯಕೀಯ ಪದ್ಧತಿಯೂ ಸ್ಥಳೀಯ ಭಾಷೆಯಲ್ಲಿಯೇ ನಡೆಯುತ್ತಿತ್ತು.

ವ್ಯವಸಾಯ ಪದ್ಧತಿಯನ್ನು ಸಮಾಜದ ಬಹುತೇಕ ಜನಬಲ್ಲವರಾಗಿದ್ದರು. ಯಾವ ಕಾಲದಲ್ಲಿ ಯಾವ ಬಗೆಯಲ್ಲಿ ಮಳೆಯಾಗುತ್ತದೆ? ಆ ಕಾಲದ ಮಳೆಗೆ ಯಾವ ಬೆಳೆಯನ್ನು ಬೆಳೆಯಬೇಕು? ಬೀಜಗಳನ್ನು ಹೇಗೆ ಸಂರಕ್ಷಿಸಬೇಕು? ದನಗಳ ಗೊಬ್ಬರವನ್ನು ಹೇಗೆ ಸಂಗ್ರಹಿಸಬೇಕು? ಸಂಗ್ರಹಿಸಿದ ಬೀಜ, ಗೊಬ್ಬರವನ್ನು ಹೊಲದ ಬೆಳೆಗಾಗಿ ಹೇಗೆ ಬಳಸಬೇಕು? ಭೂಮಿಯನ್ನು ಯಾವಾಗ, ಹೇಗೆ ಹದಮಾಡಬೇಕು? ಅಷ್ಟೇ ಅಲ್ಲದೆ, ಯಾವ ಕಾಲದಲ್ಲಿ ಯಾವ ಧಾನ್ಯ ತಿನ್ನಬೇಕು? ಯಾವ ರೋಗಗಳಿಗೆ ಯಾವ ತರಕಾರಿ ಬಳಸಬೇಕು? ಯಾವ ಕಾಲದಲ್ಲಿ ಯಾವ ಬಗೆಯ ಅಡಿಗೆಯನ್ನು ಮಾಡಬೇಕು? ಎಂಬುದೆಲ್ಲವೂ ದೇಶೀಜ್ಞಾನ ಪರಂಪರೆಯಲ್ಲೇ ಕ್ರಿಯಾಶೀಲವಾಗಿ ನಡೆಯುತ್ತಿತ್ತು. ಈ ದೇಶೀಜ್ಞಾನವು ಸ್ಥಳೀಯ ಭಾಷೆಯಲ್ಲಿಯೇ ಸಂವಹನಗೊಳ್ಳುತ್ತಿತ್ತು. ಬ್ರಿಟಿಷ್ ವಸಾಹತುದೆಸೆಯಿಂದ, ಆಧುನಿಕತೆಯಿಂದ ನಮ್ಮ ದೇಶೀಜ್ಞಾನವು ಸ್ಥಳೀಯ ಭಾಷೆಯ ಅಡಿಯಲ್ಲಿ ನಡೆಯುತ್ತಿದ್ದ ವೈದ್ಯಕೀಯ, ನ್ಯಾಯ ಪದ್ಧತಿ, ವ್ಯವಸಾಯ ಪದ್ಧತಿಯನ್ನು ಇಂಗ್ಲಿಷ್ ಭಾಷೆಯಲ್ಲಿ ಕಲಿಸಲು ಆರಂಭವಾದದ್ದೇ ತಡ ನಮ್ಮ ಜನರು ಪರಾಧೀನರಾಗಿ ಕಂಗಾಲಾದರು. ಶೈಕ್ಷಣಿಕ ಚಟುವಟಿಕೆಯಲ್ಲಿ ಅಗ್ರೀ, ಮೆಡಿಕಲ್, ಲಾ, ಇಂಜಿನಿಯರಿಂಗ್ ಮುಂತಾದ ತಾಂತ್ರಿಕ ಪದವಿಗಳನ್ನು 'ಆಧುನಿಕ ಶಿಕ್ಷಣ' ಎಂಬ ಭ್ರಮೆಯಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಕಲಿಯಲು ಶುರುವಾದದ್ದೇ ನಮ್ಮ ದೇಶೀಜ್ಞಾನದ ಪರಂಪರೆಗೆ ಪೆಟ್ಟು ಬಿತ್ತು.

ಕೃಷಿಕರನ ಮಗ ಕೃಷಿ ಶಿಕ್ಷಣವನ್ನು ಇಂಗ್ಲಿಷ್ ಭಾಷೆಯಲ್ಲಿ ಕಲಿಯಬೇಕಾಗಿ ಬಂತು. ಆಗ ಅವನಿಗಿದ್ದ ಪರಂಪರಾಗತ ಕೃಷಿಜ್ಞಾನವೇ ಅನ್ಯಭಾಷೆಯಾದ ಕಾರಣ ಅದು ಅಪರಿಚಿತವಾಯಿತು. ಆಧುನಿಕ ಶಿಕ್ಷಣವೇ ಆಗಿದ್ದರೂ ಅದನ್ನು ಸ್ಥಳೀಯ ಭಾಷೆಯಲ್ಲಿ ಯಾಕೆ ಕಲಿಸಲು ಪ್ರಯತ್ನಿಸಲಾಗಲಿಲ್ಲ? ರಾಜಕೀಯ ಇಚ್ಛಾಶಕ್ತಿಯ ಕೊರತೆ ಯಾಕೆ ಬಂತು? ಪುನಃ ಗಾಂಧೀಜಿ ನೆನಪಾಗುತ್ತಾರೆ. ಮಾತೃಭಾಷೆಯಲ್ಲಿ ಶಿಕ್ಷಣ ಮುನ್ನಡೆಯಬೇಕು ಎಂದು ಒತ್ತಿ ಹೇಳಿದ್ದಾರೆ. ಕೆಲವರು ವಾದ ಮಾಡಬಹುದು. ಅಗ್ರಿ, ಮೆಡಿಕಲ್, ಲಾ, ಇಂಜಿನಿಯರ್ ಮುಂತಾದ ತಾಂತ್ರಿಕ ಪದವಿಗಳು ಆಧುನಿಕವಾಗಿದ್ದು, ಅವುಗಳ ಸಾಹಿತ್ಯ ಇಂಗ್ಲಿಷ್ ಭಾಷೆಯಲ್ಲಿಯೇ ಅಭಿವೃದ್ಧಿಯಾಗಿದೆ ಎಂದು. ಹೈದ್ರಾಬಾದ್ ಸಂಸ್ಥಾನದಲ್ಲಿ ನಿಜಾಮ್ ಪ್ರಭುತ್ವವೂ ಆಧುನಿಕ ಶಿಕ್ಷಣವನ್ನು ಒಪ್ಪಿಕೊಂಡಿತ್ತು. ಆದರೆ ಪದವಿ, ಸ್ನಾತಕೋತ್ತರ ಪದವಿಗಳನ್ನು, ತಾಂತ್ರಿಕ ಪದವಿಗಳನ್ನು ಉರ್ದು ಭಾಷೆಯಲ್ಲಿ ಕಲಿಸಲಾಗುತ್ತಿತ್ತು. ಹೈದರಾಬಾದಿನ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಎಲ್ಲ ಪದವಿಗಳನ್ನು ಉರ್ದು ಭಾಷೆಯಲ್ಲಿ ಸಮರ್ಥವಾಗಿ ಕಲಿಸಲಾಗುತ್ತಿತ್ತು. ಕಾನೂನು, ವೈದ್ಯಕೀಯ, ಇಂಜಿನಿಯರಿಂಗ್ ಎಲ್ಲ ವಿಷಯಗಳನ್ನು ಉರ್ದುವಿನಲ್ಲಿ ಕಲಿಯಲು ಅವಕಾಶವಿತ್ತು. ಉರ್ದು ಭಾಷೆಗೆ ಐದನೂರು ವರ್ಷಗಳ ಚರಿತ್ರೆಯೂ ಇಲ್ಲ. ಇದು ಹೇಗೆ ಸಾಧ್ಯವಾಯಿತು? ಮನುಷ್ಯ ಮಾತೃಭಾಷೆಯಲ್ಲಿ ಜ್ಞಾನವನ್ನು ಪಡೆಯಬೇಕು ಮತ್ತು ಮಾತೃಭಾಷೆಯಲ್ಲಿ ಜ್ಞಾನವನ್ನು ಸೃಷ್ಟಿಸಬೇಕು, ಇದು ಪ್ರಕೃತಿ ನಿಯಮ.

ಸಾಹಿತ್ಯ ರಚನೆಯ ಉದ್ದೇಶವೇನಾಗಿರಬೇಕು?

ರಾಯಚೂರು ಜಿಲ್ಲೆ ಹೈದರಾಬಾದು ಕರ್ನಾಟಕದಲ್ಲಿ ಇದೆ. ಈ ಹೊತ್ತಿನ ಹೈದರಾಬಾದು ಕರ್ನಾಟಕ ಪ್ರದೇಶದಲ್ಲೇ ಪ್ರಾಚೀನ ಕನ್ನಡ ಸಾಹಿತ್ಯ ಕುಡಿ ಒಡೆದು ಬೆಳೆದದ್ದು. ಕನ್ನಡ ಸಾಹಿತ್ಯ ರಚಿಸಿದ ಪ್ರಸಿದ್ಧ ಜೈನ ಕವಿಗಳು, ೧೨ನೇ ಶತಮಾನದ ವಚನ ಚಳುವಳಿ, ದಾಸಸಾಹಿತ್ಯ ಚಳುವಳಿ, ೧೭ನೇ ಶತಮಾನದ ತತ್ವಪದ ಸಾಹಿತ್ಯ ಚಳುವಳಿ ಮುಂತಾದವುಗಳು ಈ ಪ್ರಾಂತದಲ್ಲೇ ನಡೆದವು. ಜೈನಕವಿಗಳು, ವಚನಕಾರರು, ದಾಸರು, ಸೂಫಿಗಳು, ಶಾಹೀರರು ಮುಂತಾದವರ ನೆಲೆವೀಡು ಈ ಪ್ರಾಂತ. ಇದು ನಮಗೆಲ್ಲ ಹೆಮ್ಮೆಯ ಸಂಗತಿ. ಇವರೆಲ್ಲ ತಮ್ಮ ತಮ್ಮ ಕಾಲದ ಸಂಘರ್ಷಗಳನ್ನು ತಮ್ಮ ಸಾಹಿತ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ. ಅವರ ಚಿಂತನೆಗಳು ಈ ಹೊತ್ತಿಗೆ ಪ್ರಸ್ತುತ, ನಿಜ. ಕೇವಲ ಇವರನ್ನು ನೆನೆದು ಹೆಮ್ಮೆ ಪಟ್ಟರೆ ಸಲಾದು. ಭವ್ಯ ಸಾಹಿತ್ಯ ಪರಂಪರೆ ನಮ್ಮದು ಎಂದು ಸ್ಮರಿಸಿದರೆ ಸಾಲದು. ಈ ಪರಂಪರೆಯ ಜತೆಗೆ ಇಂದಿನ ಬರಹಗಾರರು ಅನುಸಂಧಾನ ನಡೆಸಬೇಕು. ಜೊತೆಗೆ ನಮ್ಮ ಕಾಲದ ಬಿಕ್ಕಟ್ಟುಗಳೇನು? ನಮ್ಮ ಕಾಲದ ಸಂಘರ್ಷಗಳೇನು? ಅವುಗಳ ಸ್ವರೂಪವನ್ನು ಆಳವಾಗಿ ಅರಿತುಕೊಳ್ಳಬೇಕು. ವಿಶಿಷ್ಟ ರೀತಿಯಲ್ಲಿ ಗ್ರಹಿಸುವ ವಿಧಾನ ಕಲಿಯಬೇಕು. ಅದನ್ನು ಬರಹದಲ್ಲಿ ಅಭಿವ್ಯಕ್ತಿಸಬೇಕು. ಇದು ಬರಹಗಾರರ ಧ್ಯೇಯವಾಗಬೇಕು. ಅಂದಾಗ ಮಾತ್ರ ಇಂದಿನ ಈ ಭಾಗದ ಬರಹಗಾರರು ಭವ್ಯ ಸಾಹಿತ್ಯ ಪರಂಪರೆಯ ಕೊಂಡಿಗಳಾಗಲು ಸಾಧ್ಯವಾಗುತ್ತದೆ.

ಈ ಭಾಗದ ಬರಹಗಾರರಾದ ನಾವು ಜಾಗತೀಕರಣದಿಂದ ಹದಗೆಟ್ಟ ನಮ್ಮ ಸಾಮಾಜಿಕ ಜೀವನವನ್ನು ಅರಿಯಬೇಕು. ಸಮಾಜದ ಮೇಲೆ ನಡೆಯುತ್ತಿರುವ ದಾಳಿಗಳನ್ನು ಸೂಕ್ಷ್ಮವಾಗಿ ಗ್ರಹಿಸಬೇಕು. ಸಾಮಾಜಿಕ ಜವಾಬ್ದಾರಿಯಿಂದ ಜನ ಸಮುದಾಯಗಳ ಒಳಿತಿಗಾಗಿ ಸಾಹಿತ್ಯ ರಚನೆಗೆ ಮುಂದಾಗಬೇಕು. ದೇಶಕ್ಕೆ, ಜನತೆಗೆ ಕಾಲಕಾಲಕ್ಕೆ ಬಂದೊದಗುವ ಆಪತ್ತುಗಳನ್ನು ಬರಹಗಾರರು ಅರಿಯುವ ಪ್ರಜ್ಞೆ ಹೊಂದಬೇಕು. ಅದರಿಂದ ಪಾರಾಗುವ ದಾರಿಗಳನ್ನು ತಮ್ಮ ಬರಹಗಳಿಂದ ಜನತೆಗೆ ತಿಳುವಳಿಕೆ ನೀಡಬೇಕು. ಅಂಥ ಸಾಹಿತ್ಯಕ್ಕೆ ಮನ್ನಣೆ ಸಿಗುತ್ತದೆ. ನಾವು ಈ ದಿಶೆಯಲ್ಲಿ ಪ್ರಯತ್ನಿಸೋಣ.

(ರಾಯಚೂರು ಜಿಲ್ಲೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಆಯ್ದ ಭಾಗ) □

ಕಂಬಾಲಪಲ್ಲಿಯ ಸುಟ್ಟ ಬೂದಿಯಲ್ಲಿ ನ್ಯಾಯ ಚಿಗುರಲಿ

ದೇಶವನ್ನೇ ಬೆಚ್ಚಿ ಬೀಳಿಸಿದ್ದ, ದಲಿತರ ಪಾಲಿನ 'ಜಲಿಯನ್ ವಾಲಾಬಾಗ್' ಎಂದೇ ಕುಖ್ಯಾತಿಗೊಂಡಿದ್ದ ಕಂಬಾಲಪಲ್ಲಿ ದಲಿತರ ದಹನ ಪ್ರಕರಣದ ತೀರ್ಪು ತಾ: ೩-೧೨-೨೦೦೭ ರಂದು ಹೊರಬಿದ್ದಿದೆ. ಆರೋಪಿಗಳ 'ವಿರುದ್ಧ ಯಾವುದೇ ಸಾಕ್ಷಾಧಾರ ಇಲ್ಲದ್ದರಿಂದ ಹಾಗೂ ಎಲ್ಲ ಪ್ರತ್ಯಕ್ಷ ಸಾಕ್ಷಿಗಳೂ ಪ್ರಾಸಿಕ್ಯೂಷನ್ ಸಾಕ್ಷಿಗಳೂ ಪ್ರತಿಕೂಲ ಸಾಕ್ಷಿಗಳಾಗಿ ಬದಲಾಗಿದ್ದರಿಂದ ಮಾನ್ಯ ವಿಶೇಷ ನ್ಯಾಯಾಲಯ ಎಲ್ಲಾ ಆರೋಪಿಗಳನ್ನು ಆರೋಪ ಮುಕ್ತಗೊಳಿಸಿದೆ. ಹೀಗಾಗಿ ೭ ಜನ ದಲಿತರನ್ನು ತಪ್ಪಸಿಕೊಳ್ಳದಂತೆ ಅವರು ಜೀವ ಭಯದಿಂದ ಪಾರಾಗಲು ಬಚ್ಚಿಟ್ಟುಕೊಂಡಿದ್ದ ಮನೆಗಳಿಗೆ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿ, ಆ ಉರಿದ ಜ್ವಾಲೆಗಳಿಂದ ತಪ್ಪಿಸಿಕೊಳ್ಳಲು ಯತ್ನಿಸಿದಾಗ ಕಲ್ಲು ಹೊಡೆದು, ಬೆಂಕಿ ಆರಿಸಲು ಬಂದ ಅಗ್ನಿಶಾಮಕ ದಳದ ಸಿಬ್ಬಂದಿಯನ್ನು ಆರಿಸದಂತೆ ತಡೆದ ಜಾತಿ ದ್ವೇಷದ ಅಮಾನುಷ, ಬೀಭತ್ಸ ಕ್ರೌರ್ಯದ ಪ್ರಕರಣವೊಂದು ನ್ಯಾಯಾಲಯದ ನ್ಯಾಯದ ಕಣ್ಣೆದುರು ಬಿದ್ದು ಹೋಗಿದೆ.

ಘಟನೆ ನಡೆದಾಗ ಶ್ರೀಮತಿ ಸೋನಿಯಾಗಾಂಧಿಯವರಾದಿಯಾಗಿ ರಾಷ್ಟ್ರ,ರಾಜ್ಯಮಟ್ಟದ ನಾಯಕರ ದಂಡು ದಂಡೇ ಕಂಬಾಲಪಲ್ಲಿಗೆ ಬಂದು ಹೋಯಿತು. ಸುಟ್ಟು ಕರಕಲಾಗಿದ್ದ ಹೆಣಗಳನ್ನೂ ಬೆಂದು ಬೂದಿಯಾದ ಮನೆಗಳನ್ನೂ, ಬದುಕುಗಳನ್ನೂ ಕಂಡು ಸಾಂತ್ವನದ ಶಾಸ್ತ್ರ ಮುಗಿಸಿ ಹೋದರು. ಆದರೆ ಇವರ್‍ಯಾರೂ ಇದೀಗ ತೀರ್ಪು ಹೊರಬಿದ್ದ ಮೇಲೆ ಒಂದೇ ಒಂದು ಮಾತನ್ನಾಗಲಿ ಪ್ರತಿಕ್ರಿಯೆಯನ್ನಾಗಲಿ ವ್ಯಕ್ತಪಡಿಸಿಲ್ಲ. ಅಷ್ಟು ಯಾಕೆ ಪ್ರಕರಣ ನಡೆದಾಗ ಬೊಬ್ಬೆ ಹಾಕಿದ ದಲಿತ ಸಂಘಟನೆಗಳೂ ಅವುಗಳ ನೇತಾರರೂ ಆದವರು ಕೂಡ ತೀರ್ಪು ಹೊರಬಿದ್ದು ಮೂರು ತಿಂಗಳಾದರೂ ತುಟಿ ಎರಡು ಮಾಡದೆ ಮೌನವ್ರತಧಾರಿಗಳಾಗಿದ್ದಾರೆ! ಇನ್ನು ಇಂತಹ ಒಂದು ತೀರ್ಪಿನಿಂದಾಗಿ ತಲ್ಲಣಿಸಬೇಕಾಗಿದ್ದ ನಾಡಿನ ನಾಗರೀಕ ಜನತೆ ಕಾವೇರಿ ನ್ಯಾಯಾಧೀಕರಣದ ತೀರ್ಪಿನ ವಿರುದ್ಧದ ಪ್ರತಿಭಟನೆಯ ಅಬ್ಬರದಲ್ಲಿ ಮುಳುಗಿದ್ದಾರೆ. ಹೀಗಾಗಿ ಕಂಬಾಲಿಪಲ್ಲಿ ಯಾರಿಗೂ ಬೇಡದ, ಯಾರಿಗೂ ಕೇಳಿಸದ ಅರಣ್ಯರೋಧನವಾಗಿ ಕ್ಷೀಣಿಸುತ್ತಿದೆ. ಮಾನ್ಯ ಘನ ಸರ್ಕಾರವೇನೋ ಅಧಿಕೃತವಾಗಿ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವುದಾಗಿ ಹೇಳಿದೆ. ಆದರೆ ಸರ್ಕಾರ ಮೊಕದ್ದಮೆಲಯ ವಿಚಾರಣೆಯುದ್ದಕ್ಕೂ ತೋರುತ್ತಾ ಬಂದಿರುವ ಅಜಾಗರೂಕತೆ 'ಆಕಸ್ಮಿಕ', 'ಸಹಜ' ಎನ್ನಿಸದೆ ಉದ್ದೇಶ ಪೂರ್ವಕ ಎನ್ನುವುದಕ್ಕೆ ತಕ್ಕ ಸಾಕ್ಷ್ಯಾಧಾರಗಳು ಲಭ್ಯ ಇವೆ. ಸರ್ಕಾರ ತೀರ್ಪು ಕೈಜಾರಿ ಹೋಗಲಿ ಎನ್ನುವಂತೆಯೇ ವಿಚಾರಣೆಯುದ್ದಕ್ಕೂ ವರ್ತಿಸುತ್ತಾ ಬಂದಿದೆ. ವಿಚಾರಣೆಯ ಸಂದರ್ಭದಲ್ಲಿ ಆರೋಪ ಸಾಬೀತುಪಡಿಸಬೇಕಾದ ಜವಾಬ್ದಾರಿ ಇದ್ದ ಪ್ರಾಸಿಕ್ಯೂಷನ್ ತನಗಿದ್ದ ಎಲ್ಲ ಅವಕಾಶಗಳನ್ನೂ ಕೈಬಿಟ್ಟು ಕೂತಿರುವುದು ಸ್ಪಷ್ಟವಾಗಿದೆ.

ಈ ಬಗ್ಗೆ ಅನುಮಾನಕ್ಕೆಡೆಕೊಡಬಹುದಾದ ಅಂಶಗಳನ್ನು ಸಾರ್ವಜನಿಕಗೊಳಿಸು

> Accused Nos.1.to 32 are acquitted u/s 232 cr. P.c. of the offences punishable u/s 143, 147, 148, 324, 326, 353, 342, 436, 427, 302, 307 read with sec. 149 of IPC and u/ss 3 (1) (iv) and (x), 3 (2) (iv) & (v) of ST/ST (POA) Act, 1989. Their bail bonds stand cancelled. Mos 1 to 7 are ordered to be destroyed after appeal time is over.
>
> Sd/-
>
> K. SHIVARAM
>
> II addl. District & Sessions Judge,
>
> Kolar



ಕಂಬಾಲಪಲ್ಲಿ ಮಾರಣ ಹೋಮದಲ್ಲಿ ತನ್ನ ನಾಲ್ಕು ಜನ ಬಂಧುಗಳನ್ನು ಕಳೆದುಕೊಂಡ ವೆಂಕಟರಾಯಪ್ಪ ತೀರ್ಪಿನ ಬಗ್ಗೆ ಪತ್ರಕರ್ತರಿಗೆ ಪ್ರತಿಕ್ರಿಯಿಸಿದಾಗ ತೆಗೆದ ಚಿತ್ರ. ಕೃಪೆ 'ದಿ ಹಿಂದೂ'

ನಾಡಿನ ನಾಗರೀಕ ಜನತೆ ಕಾವೇರಿ ನ್ಯಾಯಾಧೀಕರಣದ ತೀರ್ಪಿನ ವಿರುದ್ಧದ ಪ್ರತಿಭಟನೆಯ ಅಬ್ಬರದಲ್ಲಿ ಮುಳುಗಿದ್ದಾರೆ. ಹೀಗಾಗಿ ಕಂಬಾಲಿಪಲ್ಲಿ ಯಾರಿಗೂ ಬೇಡದ, ಯಾರಿಗೂ ಕೇಳಿಸದ ಅರಣ್ಯರೋಧನವಾಗಿ ಕ್ಷೀಣಿಸುತ್ತಿದೆ. ಮಾನ್ಯ ಘನ ಸರ್ಕಾರವೇನೋ ಅಧಿಕೃತವಾಗಿ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವುದಾಗಿ ಹೇಳಿದೆ. ಆದರೆ ಸರ್ಕಾರ ಮೊಕದ್ದಮೆಯ ವಿಚಾರಣೆಯುದ್ದಕ್ಕೂ ತೋರುತ್ತಾ ಬಂದಿರುವ ಅಜಾಗರೂಕತೆ 'ಆಕಸ್ಮಿಕ', 'ಸಹಜ' ಎನ್ನಿಸದೆ ಉದ್ದೇಶ ಪೂರ್ವಕ ಎನ್ನುವುದಕ್ಕೆ ತಕ್ಕ ಸಾಕ್ಷ್ಯಾಧಾರಗಳು ಲಭ್ಯ ಇವೆ. ಸರ್ಕಾರ ತೀರ್ಪು ಕೈಜಾರಿ ಹೋಗಲಿ ಎನ್ನುವಂತೆಯೇ ವಿಚಾರಣೆಯುದ್ದಕ್ಕೂ ವರ್ತಿಸುತ್ತಾ ಬಂದಿದೆ. ವಿಚಾರಣೆಯ ಸಂದರ್ಭದಲ್ಲಿ ಆರೋಪ ಸಾಬೀತುಪಡಿಸಬೇಕಾದ ಜವಾಬ್ದಾರಿ ಇದ್ದ ಪ್ರ್ಯಾಸಿಕ್ಯೂಷನ್ ತನಗಿದ್ದ ಎಲ್ಲ ಅವಕಾಶಗಳನ್ನೂ ಕೈಬಿಟ್ಟು ಕೂತಿರುವುದು ಸ್ಪಷ್ಟವಾಗಿದೆ.

ವುದು ನಮ್ಮ ಕರ್ತವ್ಯವೆಂದು ಭಾವಿಸಿ ಈ ಕೆಳಕಂಡ ಅಂಶಗಳನ್ನು ಸಾರ್ವಜನಿಕರೆದುರು ತೆರೆದಿಡುತ್ತಿದ್ದೇವೆ.

ಕಂಬಾಲಪಲ್ಲಿ ಪ್ರಕರಣದ ತೀರ್ಪು ಇದೀಗ ಹೊರಬಿದ್ದಿದೆ. ಎಲ್ಲಾ ಆರೋಪಿಗಳ ವಿರುದ್ಧ ಯಾವುದೇ ಸಾಕ್ಷ್ಯಾಧಾರವಿಲ್ಲದ್ದರಿಂದ ಮಾನ್ಯ ವಿಶೇಷ ನ್ಯಾಯಾಲಯ ಎಲ್ಲಾ ಆರೋಪಿಗಲನ್ನು ಖುಲಾಸೆ ಮಾಡಿದೆ. ತನಿಖೆ ವೇಳೆ ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳು ಪ್ರತಿಕೂಲ ಸಾಕ್ಷಿಗಳಾಗಿ ಪರಿವರ್ತನೆಯಾದ ಕೂಡಲೇ ೨ನೇ ವಿಶೇಷ ನ್ಯಾಯಾಲಯವು ಈ ಹಿಂದೆ ಉಚ್ಚನ್ಯಾಯಾಲಯ ಎಲ್ಲಾ ಆರೋಪಿಗಳಿಗೆ ಜಾಮೀನ ನಿರಾಕರಿಸಿದ್ದ ಅರಿವಿದ್ದರೂ ಯಾವುದೇ ಜಾಮೀನು ಅರ್ಜಿಯನ್ನು ಕೋರದೆ ಬಿಡುಗಡೆ ಮಾಡಿರುವುದು ಸೋಜಿಗವಾಗಿದೆ. ಈ ಮೊಕದ್ದಮೆಯಲ್ಲಿ ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳು ಈ ಘಟನೆಯನ್ನು ನೋಡಿದ್ದಾಗಿ ಹೇಳಿಕೆ ನೀಡಿ ಅನಂತರದ ವಿಚಾರಣೆಯಲ್ಲಿ ಈ ಘಟನೆಯನ್ನು ನೋಡಿಲ್ಲವೆಂದು ನ್ಯಾಯಾಲದಲ್ಲಿ ನಿರಾಕರಿಸಿರುತ್ತಾರೆ. ಆದ್ದರಿಂದಾಗಿಯೇ ಈ ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳನ್ನು ನ್ಯಾಯಾಲ ಯವು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿದೆ.

ಈ ಮೊಕದ್ದಮೆಯ ಸಾಂದರ್ಭಿಕ ಸಾಕ್ಷಿಗಳಾದ ಪ್ರಾಸಾ. ೫೩, ಪ್ರಾಸಾ. ೫೫ ಸುರೇಶಬಾಬು, ೫೬, ಭುಜಂಗಯ್ಯ, ಪ್ರಾಸಾ. ೫೭ ಎನ್. ಕೃಷ್ಣಪ್ಪ ಪ್ರಾಸಾ. ೫೮ ಎನ್. ಅಪ್ಪಣ್ಣ ಈ ಎಲ್ಲಾ ಸಾಕ್ಷಿಗಳು ಅಗ್ನಿಶಾಮಕದಳದ ಸಿಬ್ಬಂದಿ ಮತ್ತು ಘಟನೆ ನಡೆದ ದಿನ ಫಿರ್ಯಾದಿ ವೆಂಕಟರಾಯಪ್ಪನ ಮನೆಗೆ ಹತ್ತಿದ ಬೆಂಕಿಯನ್ನು ನಂದಿಸಲು ಪ್ರಯತ್ನಪಟ್ಟವರು. ಆದರೆ ಇವರನ್ನು ಅಭಿಯೋಜಕರು ಯಾವ ವಿಚಾರಣೆಗೂ ಒಳಪಡಿಸಿಲ್ಲ. ಅದೇ ರೀತಿ ಪ್ರಾಸಾ. ೬೦ ಸುಧಾಕರ್, ಪ್ರಾಸಾ ೬೧ ಜಿ.ಎಂ. ಪಟೇಲ, ಪ್ರಾಸಾ ೫೨, 'ಪ್ರಭಾಕರ ಇವರು ಕೆ.ಇ.ಬಿ. (ಬೆಸ್ಕಾಂ) ಅಧಿಕಾರಿಗಳಾಗಿದ್ದು, ಆ ದಿವಸ ಕಂಬಾಲಪಲ್ಲಿ ಗ್ರಾಮದಲ್ಲಿ ವಿದ್ಯುತ್‌ಚ್ಛಕ್ತಿ ಇದ್ದುದ್ದಾಗಿ ಸಾಬೀತುಪಡಿಸುವುದಕ್ಕೆ ತಕ್ಕ ಸಾಕ್ಷ್ಯಾಧಾರಗಳನ್ನು ಒದಗಿಸಿದ್ದಾರೆ. ಆದಾಗ್ಯೂ ಅಭಿಯೋಜಕರು ವಿಚಾರಣೆ ಮಾಡಿರುವುದಿಲ್ಲ; ಪ್ರಾಸಾ ೬೫ ಕಾಳಿದಾಸ್, ಚಿಂತಾಮಣಿ ತಾಲ್ಲೂಕು ತಹಸೀಲ್ದಾರರಾಗಿದ್ದು, ಆರೋಪಿ ನಂ ೨ ರವರಿಗೆ ನ್ಯಾಯಬೆಲೆ ಅಂಗಡಿ ಪರವಾನಗಿ ಮಂಜೂರು ಆಗಿರುವ ಬಗ್ಗೆ ಹಾಗು ಪಿರ್ಯಾದಿ ವೆಂಕಟರಾಯಪ್ಪ ಮತ್ತು ಸವರ್ಣೀಯರ ಬಗ್ಗೆ ಹಿಂದೆ ಇದ್ದ ವೈಷಮ್ಯಗಳ ಸಂಬಂಧದಲ್ಲಿ ಘಟನೆಗೂ ಹಿಂದೆ ೧೯೯೯ರ ಡಿಸೆಂಬರ್‌ನಲ್ಲಿ ನಡೆದ ಶಾಂತಿ ಸಭೆ ನಡವಳಿಕೆಗಳನ್ನು ಹಾಗೂ ಘಟನೆಯಲ್ಲಿ ಮನೆಗಳನ್ನು ಸುಟ್ಟ ಬಗ್ಗೆ ದಾಖಲೆಗಳನ್ನು ನೀಡಿರುತ್ತಾರೆ.

ಇವರ ವಿಚಾರಣೆಯನ್ನೂ ಅಭಿಯೋಜಕರು ಕೈಬಿಟ್ಟಿದ್ದಾರೆ. ಇಷ್ಟಲ್ಲದೆ ಈ ಪ್ರಕರಣದ ತನಿಖೆಯಲ್ಲಿ ಪ್ರಧಾನ ಪಾತ್ರ ವಹಿಸಿದ ಪ್ರಾಸಾ ೭೦ ರುದ್ರಪ್ಪ, ಪಿ.ಎಸ್.ಐ. ಪ್ರಾಸಾ ೭೩ ರಂಗಯ್ಯ, ಎ.ಎಸ್.ಐ. ಪ್ರಾಸಾ ೭೪ ನಾರಾಯಣಪ್ಪ. ಪಿ.ಎಸ್.ಐ, ಪ್ರಾಸಾ ೭೮ ಮುನಿರತ್ನಂ, ಪಿ.ಎಸ್.ಐ ಪ್ರಾಸಾ. ೭೯ ಸಿ. ಕೃಷ್ಣಪ್ಪ, ಪ್ರಾಸ ೮೦ ಪಿ.ಎಸ್.ಊ. ಪ್ರಾಸಾ ೮೯, ವಿ. ರಾಮಯ್ಯ ಡಿ.ವೈ.ಎಸ್. ಪ್ರಾಸಾ. ೭೯ ಎಂ.ಆರ್. ಮಹೇಶ್ವರನ್, ಡಿ.ವೈ.ಎಸ್.ಪಿ. ಈ ಎಲ್ಲಾ ಮೇಲ್ಕಂಡ ಸಾಕ್ಷ್ಯಗಳು ಪೊಲೀಸ್ ಅಧಿಕಾರಿಗಳಾಗಿದ್ದು, ಮೊಕದ್ದಮೆ ದಾಖಲು ಮಾಡಿಕೊಂಡವರಾಗಿಯೂ ಮತ್ತು ತನಿಖಾಧಿಕಾರಿಗಳಾಗಿಯೂ ಪಾತ್ರವಹಿಸಿದ್ದಾರೆ. ಆದರೂ ಅಭಿಯೋಜಕರು ಈ ಪೊಲೀಸ್ ಅಧಿಕಾರಿಗಳನ್ನು ವಿಚಾರಣೆ ಮಾಡಿರುವುದಿಲ್ಲ ಈ ಕೇಸಿನಲ್ಲಿ ಇವರು ಪ್ರಮುಖವಾದ ಸಾಕ್ಷಿಗಳಾಗಿರುತ್ತಾರೆ. ಅದೇ ರೀತಿ ಪ್ರಾಸಾ. ೮೩ ಡಾ॥ ಶಿವಣ್ಣ, ಪ್ರಾಸಾ. ೮೫ ಡಾ॥ ವೀಣಾ, ಪ್ರಾಸಾ. ೮೭ ಡಾ॥ ರಾಮಪ್ಪ ಇವರು ಶವಪರೀಕ್ಷೆ ನಡೆಸಿದ ಡಾಕ್ಟರ್‌ಗಳಾಗಿದ್ದು, ಇವರನ್ನು ಕೂಡ ಅಭಿಯೋಜಕರು ವಿಚಾರಣೆ ಮಾಡಿರುವುದಿಲ್ಲ.

ಇದಕ್ಕೆ ಅಭಿಯೋಜಕರು ನೀಡಿರುವ ಕಾರಣಗಳು

ಪ್ರಾಸಾ. ೫೩,೫೫,೫೬,೫೭,೫೮,೫೯, ರವರುಗಳು ಅಗ್ನಿಶಾಮಕ ದಳದ ಸಿಬ್ಬಂದಿಯಾಗಿದ್ದು, ಇವರುಗಳು ಪ್ರಾಸಾ ೪೧ ಮತ್ತು ಪ್ರಾಸ ೪೮ ರವರೊಂದಿಗೆ ಮನೆಗೆ ಹತ್ತಿದ ಬೆಂಕಿಯನ್ನು ಆರಿಸಲು ಪ್ರಯತ್ನ ಪಟ್ಟವರಾಗಿದ್ದು, ಆ ಬಗ್ಗೆ ಪ್ರಾಸಾ. ೪೧, ೪೮ರವರೇ ಸಾಕ್ಷಿ ನುಡಿದಿರುವುದರಿಂದ ಮಿಕ್ಕವರನ್ನು ವಿಚಾರಣೆಗೊಳಪಡಿಸಲಾಗಿಲ್ಲ.

ಪ್ರಾಸಾ ೬೧,೬೨

ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಪರೀಕ್ಷಿಸಲಾಗಿಲ್ಲ.

ಪ್ರಾಸಾ ೭೦ ಎ.ಎಸ್.ಐ, ಪ್ರಾಸಾ ೭೩, ಪಿ.ಎಸ್.ಐ, ಪ್ರಾಸಾ ೧೪ ಸಿ.ಎಸ್.ಐ ರವರುಗಳು ನ್ಯಾಯಾಲಯಕ್ಕೆ ಹಾಜರಾಗದ ಕಾರಣ ಪರೀಕ್ಷಿಸಲಾಗಿಲ್ಲ.

ಪ್ರಾಸಾ ೮೯, ಜಿ. ರಾಮಯ್ಯ, ಡಿ.ವೈ.ಎಸ್.ಪಿ. ಚಿಂತಾಮಣಿ ಪ್ರಾಸಾ ೯೦, ಎಂ.ಆರ್. ಮಹೇಶ್ವರನ್, ಪೊಲೀಸ್ ಉಪಾಧೀಕ್ಷಕರು ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು. ಇವರುಗಳಿಗೆ ಸಾಕಷ್ಟು ಸಲ ವಾರೆಂಟ್ ನೀಡಿದಾಗಲೂ ಅವರನ್ನು ಹಾಜರುಪಡಿಸದೆ ಇದ್ದ ಕಾರಣ ಅಭಿಯೋಜಕರ ವಿನಂತಿಯನ್ನು ೧೯-೧೦-೨೦೦೬ ರಂದು ತಿರಸ್ಕರಿಸಿ ಆರೋಪಿ ಪರ ಹೇಳಿಕೆಗೆ ಅವಕಾಶ ಮಾಡಿಕೊಡಲಾಯಿತು.

ಈ ಮೇಲಿನ ವಿದ್ಯಮಾನಗಳನ್ನು ಗಮನಿಸಿದಾಗ ಎಲ್ಲಾ ಶಕ್ತಿ ಸಂಪನ್ಮೂಲಗಳಿದ್ದು, ಸರ್ಕಾರಿ ಸೇವೆಯಲ್ಲಿದ್ದ ಪ್ರಾಸಿಕ್ಯೂಷನ್ ಪರ ಸಾಕ್ಷಿಗಳನ್ನು ನ್ಯಾಯಾಲಯಕ್ಕೆ ಕರೆತರಲಾಗಿದೆ ಹೋಗಿರುವುದು ಅತ್ಯಂತ ಅಸಮರ್ಥನೀಯ ಕೃತ್ಯವಾಗಿದೆ. ಹಾಗೂ ನ್ಯಾಯಾಲಯಕ್ಕೆ ಬರಲು ಕಾಳಜಿ ತೋರದಿರುವ ಈ ಅಧಿಕಾರಿ ವರ್ಗದ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ಸೋಜಿಗವಾಗಿದೆ.

ವಿಶೇಷ ನ್ಯಾಯಾಲಯದ ತಾಂತ್ರಿಕ ತೊಡುಕುಗಳು

ಈ ಎಸ್.ಸಿ.ಟಿ ಕಾಯ್ದೆಯ ಕಲಂ ೧೪ ರನ್ವಯ ೧೯೯೩ನೇ ಸಾಲಿನಲ್ಲಿ ಕೋಲಾರದಲ್ಲಿ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲಾಗಿದ್ದು, ವಿಶೇಷ ನ್ಯಾಯಾಧೀಶರ ಹುದ್ದೆ ಹಾಗೂ ಅಭಿಯೋಜಕರ ಹುದ್ದೆ ಬಹಳ ವರ್ಷಗಳವರೆಗೆ ಖಾಲಿಯಾಗಿಯೇ ಉಳಿದಿತ್ತು. ಈ ಅವಧಿಯಲ್ಲಿ ಎರಡನೇ ತ್ವರಿತ ವಿಲೇವಾರಿ ನ್ಯಾಯಾಲಯ, ಕೋಲಾರ. ೧ನೇ ಅಪರ ಜಿಲ್ಲಾ ಸತ್ರ ನ್ಯಾಯಾಲಯಗಳ ನ್ಯಾಯಾಧೀಶರುಗಳನ್ನು ಪ್ರಭಾರದಲ್ಲಿಡಲಾಗಿತ್ತು. ಈ ನ್ಯಾಯಾಲಯಗಳು ಸಾಕ್ಷಿಗಳ ವಿಚಾರಣೆ ನಡೆಸಿವೆ. ಇದು ಕಾನೂನೂ ಸಮ್ಮತವಾಗಿರುವುದಿಲ್ಲ. ವಿಶೇಷ ನ್ಯಾಯಾಲಯ ಜಾರಿ ನಿಯಮ ಕಲಂ ೧೪ ರನ್ವಯ ಮೇಲ್ಕಂಡ ಮೂರು ನ್ಯಾಯಾಲಗಳು ವಿಶೇಷ ನ್ಯಾಯಾಲಯಗಳಾಗಿರುವುದಿಲ್ಲ. ಹಾಗು ಇದೇ ಕಲಂ ೧೪ರ ಅನ್ವಯ ಯಾವುದೇ ವಿಶೇಷ ನ್ಯಾಯಾಲಯದ ಅಧಿಕಾರವನ್ನು ಕೂಡ ಹೊಂದಿರುವುದಿಲ್ಲ. ಹೀಗಿದ್ದಾಗಿಯೂ ಸಾಕ್ಷಿಗಳ ವಿಚರಣೆಯನ್ನು ಈ ಮೂರು ನ್ಯಾಯಾಲಯಗಲು ಕೂಡ ನಡೆಸಿರುವುದು ಸೋಜಿಗವಾಗಿದೆ.

ಮಾನ್ಯ ವಿಶೇಷ ನ್ಯಾಯಲಯವು ಆರೋಪಿಗಳಿಗೆ ದಂ.ಪ್ರ.ಸಂ.ಯ ಕಲಂ ೩೧೩ರ ಅಡಿಯಲ್ಲಿ ಹೇಳಿಕೆಗಳನ್ನು ಅವಶ್ಯಕವಾಗಿದ್ದರೂ ಮಾಡಿರುವುದಿಲ್ಲ. ಈ ವಿಷಯಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯವು ೩೧೩ ರ ಪ್ರಕಾರ ಆರೋಪಿಗಳ ಹೇಲಿಕೆ ಪಡೆದಿರುವುದಿಲ್ಲ.

ಈ ಪ್ರಕರಣದಲ್ಲಿ ತೀರ್ಪಿನ ಪುಟ ೨೪ ಪ್ಯಾರಾ ೪೫ ರಲ್ಲಿ ಹೇಳಿರುವಂತೆ ಪ್ರಾಸಾ ೧ ಪಿರ್ಯಾದುದಾರ ತನ್ನ ಸಾಕ್ಷಿಯಲ್ಲಿ ತನ್ನ ಮನೆಗೆ ಬೆಂಕಿ ಹಚ್ಚಿದ್ದರೂ ಗೊತ್ತಿಲ್ಲವೆಂದು ಆ ಸಮಯದಲ್ಲಿ ೬೦–೭೦ ಜನ ಗುಂಪು ಸೇರಿದ್ದರೂ, ಘಟನೆಯನ್ನು ಪ್ರತ್ಯಕ್ಷವಾಗಿ ಕಂಡಿಲ್ಲವೆಂದು ನುಡಿಯುತ್ತಾರೆ. ಆದ ಕಾರಣ ಅವರ ಸಾಕ್ಷ್ಯವನ್ನು ನಂಬಲರ್ಹವೆಂದು ನ್ಯಾಯಾಧೀಶರು ಪರಿಗಣಿಸಿರುತ್ತಾರೆ. ಮೃತರ ಸಂಬಂಧಿಗಳಾದ ಪ್ರಾಸಾ. ೯, ೧೦, ೨೫, ೨೬, ೩೫, ೩೬, ೪೦ ರವರು ಪ್ರತಿಕೂಲ ಸಾಕ್ಷಿಗಳಾಗಿ ಸಾಕ್ಷ್ಯ ನುಡಿದಿರುತ್ತಾರೆ ಹಾಗೂ ಇತರೆ ಪ್ರತ್ಯಕ್ಷ ಸಾಕ್ಷಿಗಳಾದ ಪ್ರಾಸಾ. ೭, ೨೬, ೨೭, ೨೯ ರಿಂದ ೩೨ ಪ್ರಾಸಾ. ೩೪,೩೮, ೪೬ ರವರು ಮತ್ತು ಸ್ಥಳ ಮಹಜರ್ ಸಾಕ್ಷಿಗಳು ಮತ್ತು ಅಮಾನತು ಮಾಡಿದ ಸಾಕ್ಷಿಗಳು ಪ್ರತಿಕೂಲ ಸಾಕ್ಷಿಗಳಾಗಿದ್ದರಿಂದ

ಕಂಬಾಲಪಲ್ಲಿ ಪ್ರಕರಣದ ತೀರ್ಪು ಇದೀಗ ಹೊರಬಿದ್ದಿದೆ. ಎಲ್ಲಾ ಆರೋಪಿಗಳ ವಿರುದ್ಧ ಯಾವುದೇ ಸಾಕ್ಷ್ಯಾಧಾರವಿಲ್ಲದ್ದರಿಂದ ಮಾನ್ಯ ವಿಶೇಷ ನ್ಯಾಯಾಲಯ ಎಲ್ಲಾ ಆರೋಪಿಗಲನ್ನು ಖುಲಾಸೆ ಮಾಡಿದೆ. ತನಿಖೆ ವೇಳೆ ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳು ಪ್ರತಿಕೂಲ ಸಾಕ್ಷಿಗಳಾಗಿ ಪರಿವರ್ತನೆಯಾದ ಕೂಡಲೇ ೨ನೇ ವಿಶೇಷ ನ್ಯಾಯಾಲಯವು ಈ ಹಿಂದೆ ಉಚ್ಚನ್ಯಾಯಾಲಯ ಎಲ್ಲಾ ಆರೋಪಿಗಳಿಗೆ ಜಾಮೀನ ನಿರಾಕರಿಸಿದ್ದ ಅರಿವಿದ್ದರೂ ಯಾವುದೇ ಜಾಮೀನು ಅರ್ಜಿಯನ್ನು ಕೋರದೆ ಬಿಡುಗಡೆ ಮಾಡಿರುವುದು ಸೋಜಿಗವಾಗಿದೆ. ಈ ಮೊಕದ್ದಮೆಯಲ್ಲಿ ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳು ಈ ಘಟನೆಯನ್ನು ನೋಡಿದ್ದಾಗಿ ಹೇಳಿಕೆ ನೀಡಿ ಅನಂತರದ ವಿಚಾರಣೆಯಲ್ಲಿ ಈ ಘಟನೆಯನ್ನು ನೋಡಿಲ್ಲವೆಂದು ನ್ಯಾಯಾಲದಲ್ಲಿ ನಿರಾಕರಿಸಿರುತ್ತಾರೆ. ಆದ್ದರಿಂದಾಗಿಯೇ ಈ ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳನ್ನು ನ್ಯಾಯಾಲಯವು ಪ್ರತಿಕೂಲ ಸಾಕ್ಷಿಗಳೆಂದು ಪರಿಗಣಿಸಿದೆ.

[illegible]
[illegible]
ಗಿದೆ. ಆದರೆ ಮಾನ್ಯ ೨ನೇ ವಿಶೇಷ ನ್ಯಾಯಾಲಯವು ಸಾಂದರ್ಭಿಕ ಸಾಕ್ಷ್ಯಗಳಾದ [illegible] ದಾಖಲೆಗಳು, ಪೊಲೀಸ್ ಅಧಿಕಾರಿಗಳ ಸಾಕ್ಷಿಯನ್ನು ಮತ್ತು ವೈದ್ಯಾಧಿಕಾರಿಗಳ ಸಾಕ್ಷಿಯನ್ನು ನಂಬಬಹುದಿಗಿತ್ತು.

ಏಕೆಂದರೆ ಪ್ರತ್ಯಕ್ಷ ಸಾಕ್ಷಿಗಳು ವಿಚಾರಣೆ ವೇಳೆಯಲ್ಲಿ ಪ್ರತಿಕೂಲ ಸಾಕ್ಷಿಗಳಾಗಿದ್ದರೂ ಸಹ ನ್ಯಾಯಾಲಯವು ಆರೋಪಿಗಳಿಗೆ ಶಿಕ್ಷೆ ವಿಧಿಸಬಹುದಾಗಿತ್ತು. ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳು ಪ್ರತಿಕೂಲ ಸಾಕ್ಷಿಯಾಗಿ ಕೋರ್ಟು ಮುಂದೆ ಸಾಕ್ಷ್ಯ ನೀಡಿರುವುದಕ್ಕೆ ಮತ್ತು ಸಾಮಾನ್ಯವಾಗಿ ಇರಬಹುದಾದ ಕಾರಣಗಳೆಂದರೆ ಆರೋಪಿಗಳ ಬಗ್ಗೆ ಸಾಕ್ಷಿದಾರರಿಗೆ ಇರುವ ಭೀತಿ ಅಥವಾ ಆಮಿಷ. ಇಂತಹ ಸಾಧ್ಯತೆಗಳನ್ನೇ ಮನಗಂಡೇ ಸಾಂದರ್ಭಿಕ ಸಾಕ್ಷ್ಯಗಳನ್ನು ಮುಖ್ಯವಾಗಿ ಪರಿಗಣಿಸಿ ಮದ್ರಾಸ್ ಉಚ್ಚನ್ಯಾಯಾಲಯ ಇತ್ತೀಚೆಗೆ ದಿನಾಂಕ ೧೬-೨-೨೦೦೭ ರಂದು ಧರ್ಮಪುರಿ ಬಸ್ ಸುಟ್ಟ ಪ್ರಕರಣದಲ್ಲಿ ತೀರ್ಪು ನೀಡಿದೆ.

ದಿನಾಂಕ: ೨-೭-೨೦೦೨ ರಲ್ಲಿ ಅಂದಿನ ತಮಿಳುನಾಡು ಮುಖ್ಯಮಂತ್ರಿ ಜಯಲಲಿತರವರಿಗೆ ಜೈಲು ಶಿಕ್ಷೆ ವಿಧಿಸಿದಾಗ ಎ.ಐ.ಡಿ.ಎಂ.ಕೆ ಬೆಂಬಲಿಗರು ನ್ಯಾಯಾಲಯದ ತೀರ್ಪನ್ನು ಪ್ರತಿಭಟಿಸಿ, ಧರ್ಮಪುರಿ ಕೃಷಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಯರು ಸುಟ್ಟು ಭಸ್ಮವಾದರು. ಉಳಿದವರಿಗೂ ಗಂಭೀರವಾದ ಸುಟ್ಟಗಾಯಗಳಾಗಿದ್ದವು. ಈ ಕೇಸನ್ನು ಕೃಷ್ಣಗಿರಿ ಜಿಲ್ಲಾ ಸ್ಪೆಷನ್ಸ್ ನ್ಯಾಯಾಲಯದಲ್ಲಿ ಪ್ರತ್ಯಕ್ಷ ಸಾಕ್ಷಿಗಳು ಪ್ರತಿಕೂಲ ಸಾಕ್ಷಿಗಳಾಗಿ ಸಾಕ್ಷ್ಯ ನೀಡಿದ್ದರಿಂದ ಎಲ್ಲಾ ಆರೋಪಿಗಳನ್ನು ನ್ಯಾಯಾಲಯ ಬಿಡುಗಡೆ ಮಾಡಿತ್ತು. ಇದರ ವಿರುದ್ಧ ತಮಿಳುನಾಡು ರಾಜ್ಯ ಸರ್ಕಾರ ಮತ್ತೆ ಉಚ್ಚ ನ್ಯಾಯಾಲಯಕ್ಕೆ ಆರೋಪಿಗಳನ್ನು ಬಿಡುಗಡೆ ಮಾಡಿರುವುದು ಸೂಕ್ತವಲ್ಲವೆಂದು ಮೇಲ್ಮನವಿ ಸಲ್ಲಿಸಿತ್ತು ಉಚ್ಚ ನ್ಯಾಯಾಲಯವು ಮೊಕದ್ದಮೆಯನ್ನು ದಾಖಲಿಸಿಕೊಂಡು ಮರುವಿಚಾರಣೆಗೆ ಆದೇಶ ಮಾಡಿ ಈ ಮೊಕದ್ದಮೆಯನ್ನು ಕೃಷ್ಣಗಿರಿ ನ್ಯಾಯಾಲಯವು ದಿ: ೧೬-೨-೨೦೦೭ ರಂದು ಮೂರು ಜನರಿಗೆ ಮರಣದಂಡನೆ ಶಿಕ್ಷೆ ನೀಡಿ ಉಳಿದವರಿಗೆ ಜೀವಾವಧಿ ಶಿಕ್ಷೆ ತೀರ್ಪು ನೀಡಿತ್ತು.

ಪ್ರತ್ಯಕ್ಷ ಸಾಕ್ಷಿಗಳು ವಿಚಾರಣೆ ವೇಳೆಯಲ್ಲಿ ಪ್ರತಿಕೂಲ ಸಾಕ್ಷಿಗಳಾಗಿದ್ದರೂ ಸಹ ನ್ಯಾಯಾಲಯವು ಆರೋಪಿಗಳಿಗೆ ಶಿಕ್ಷೆ ವಿಧಿಸಬಹುದಾಗಿತ್ತು. ಎಲ್ಲಾ ಪ್ರತ್ಯಕ್ಷ ಸಾಕ್ಷಿಗಳು ಪ್ರತಿಕೂಲ ಸಾಕ್ಷಿಯಾಗಿ ಕೋರ್ಟು ಮುಂದೆ ಸಾಕ್ಷ್ಯ ನೀಡಿರುವುದಕ್ಕೆ ಮತ್ತು ಸಾಮಾನ್ಯವಾಗಿ ಇರಬಹುದಾದ ಕಾರಣಗಳೆಂದರೆ ಆರೋಪಿಗಳ ಬಗ್ಗೆ ಸಾಕ್ಷಿದಾರರಿಗೆ ಇರುವ ಭೀತಿ ಅಥವಾ ಆಮಿಷ. ಇಂತಹ ಸಾಧ್ಯತೆಗಳನ್ನೇ ಮನಗಂಡೇ ಸಾಂದರ್ಭಿಕ ಸಾಕ್ಷ್ಯಗಳನ್ನು ಮುಖ್ಯವಾಗಿ ಪರಿಗಣಿಸಿ ಮದ್ರಾಸ್ ಉಚ್ಚನ್ಯಾಯಾಲಯ ಇತ್ತೀಚೆಗೆ ದಿನಾಂಕ ೧೬-೨-೨೦೦೭ ರಂದು ಧರ್ಮಪುರಿ ಬಸ್ ಸುಟ್ಟ ಪ್ರಕರಣದಲ್ಲಿ ತೀರ್ಪು ನೀಡಿದೆ.

ಜಸೀಕಾಲಾಲ್ ಕೊಲೆ ಪ್ರಕರಣ:

ದಿನಾಂಕ: ೨೦-೧೨-೨೦೦೬ ರಂದು ದೆಹಲಿ ಉಚ್ಚ ನ್ಯಾಯಾಲಯದಲ್ಲಿ ಜಸ್ಸಿಕಾಲಾಲ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಮಣಿಶರ್ಮ ಮತ್ತು ಇತರರಿಗೆ ನೀಡಿದ ಜೀವಾವಧಿ ಶಿಕ್ಷೆಯ ತೀರ್ಪನ್ನು ಕೂಡ ಈ ಹಿನ್ನೆಲೆಯಲ್ಲೇ ನೋಡಬಹುದು. ಸ್ಪೆಷನ್ಸ್ ನ್ಯಾಯಾಲಯವು ಆರೋಪಿ ಮಣಿಶರ್ಮ ಮತ್ತು ಇತರರ ಪರವಾಗಿ ಪ್ರತ್ಯಕ್ಷ ಸಾಕ್ಷಗಳು ಪ್ರತಿಕೂಲ ಸಾಕ್ಷಿಗಳಾಗಿ ಸಾಕ್ಷ್ಯ ನೀಡಿದ್ದರಿಂದ ಆರೋಪಿಗಳನ್ನು ಬಿಡುಗಡೆ ಮಾಡಿತ್ತು. ದೆಹಲಿ ಸರ್ಕಾರವು ಮೇಲ್ಮನವಿ ಸಲ್ಲಿಸಿದ್ದರಿಂದ ದೆಹಲಿ ಉಚ್ಚ ನ್ಯಾಯಾಲಯವು ಈ ಮೊಕದ್ದಮೆಯನ್ನು ದಾಖಲಿಸಿಕೊಂಡು ವಿಚಾರಣೆ ನಡೆಸಿ, ಆರೋಪಿ ಮಣಿಶರ್ಮನಿಗೆ ಜೀವಾವಧಿ ಶಿಕ್ಷೆ ನೀಡಿತು. ಮತ್ತು ಪ್ರತಿಕೂಲ ಸಾಕ್ಷಿಗಳಿಗೆ ಸುಳ್ಳು ಸಾಕ್ಷ್ಯ ಹೇಳಿದ್ದಕ್ಕೆ ನ್ಯಾಯಾಲಯವು ಶೋಕಾಸ್ ನೋಟೀಸು ಕೂಡ ಜಾರಿ ಮಾಡಿತು. ಈ ಎಲ್ಲಾ ಹಿನ್ನೆಲೆಯನ್ನು ಗಮನಿಸಿದಾಗ ಕಂಬಲಪಲ್ಲಿ ಪ್ರಕರಣದಲ್ಲಿ ಎರಡನೇ ವಿಶೇಷ ನ್ಯಾಯಾಲವು ಎಸ್.ಪಿ. ೧೧೪: ೨೦೦೦ ದಲ್ಲಿ ಎಲ್ಲಾ ಆರೋಪಿಗಳನ್ನು ಬಿಡುಗಡೆ ಮಾಡಿರುವುದು ಸಮಂಜಸಲವಲ್ಲ ಎನ್ನುವುದು ಮೇಲುನೋಟಕ್ಕೆ ಕಂಡು ಬರುತ್ತದೆ. ಆದ್ದರಿಂದ ಈ ಗೌರವಾನ್ವಿತ ಉಚ್ಚ ನ್ಯಾಯಾಲಯ ೨ನೇ ವಿಶೇಷ ನ್ಯಾಯಾಲಯದ ತೀರ್ಪನ್ನು ಸಮಂಜಸವಲ್ಲವೆಂದು ಪರಿಗಣಿಸಿ ಮರುವಿಚಾರಣೆಗೆ ಆದೇಶ ಮಾಡಿ ಈ ಮೊಕದ್ದಮೆಯನ್ನು ಬೇರೆ ಜಿಲ್ಲೆ ಅಥವಾ ರಾಜ್ಯಕ್ಕೆ ವರ್ಗಾವಣೆ ಮಾಡಿ ವಿಚಾರಣೆ ನಡೆಸಬೇಕು ಮತ್ತು ಪ್ರತಿಕೂಲ ಸಾಕ್ಷಿಗಳಿಗೆ ನ್ಯಾಯಾಲಯ ನೋಟೀಸು ಜಾರಿ ಮಾಡಿ, ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುವುದು ಸಮಂಜಸವೇ ಎಂಬುದನ್ನು ಪ್ರಶ್ನಿಸಬೇಕು. ಆಗ ಮಾತ್ರ ಕಂಬಾಲಪಲ್ಲಿಯ ಸುಟ್ಟ ಬೂದಿಯಲ್ಲಿ ನ್ಯಾಯ ಚಿಗುರಬಹುದು.

– ದಲಿತ ಸಂಘರ್ಷ ಸಮಿತಿ,
ಕೋಲಾರ ಜಿಲ್ಲಾ ಕಾರ್ಯಕಾರಿ ಸಮಿತಿ
('ಕಂಬಾಲಪಲ್ಲಿಯ ಸುಟ್ಟ ಬೂದಿಯಲ್ಲಿ ನ್ಯಾಯ ಚಿಗುರಲಿ' ಕೃತಿಯಿಂದ) □

ತೀರ್ಪಿನ ನಂತರ ಕಂಬಾಲಪಲ್ಲಿ...

'ನಾನು ಏನು ತಾನೆ ಮಾಡಬಲ್ಲೆ? ಅವರುಗಳು ಎಲ್ಲಾ ಸಾಕ್ಷಿಗಳಿಗೂ ಹಣ ಹಂಚಿದ್ದಾರೆ' ಎಂದು ಎಂ. ವೆಂಕಟರಾಯಪ್ಪ ಹೊಸ ಕಂಬಾಲಪಲ್ಲಿಯಲ್ಲಿ ತಿಳಿಸಿದ. ಈತನ ಹೆಂಡತಿ ರಾಮಕ್ಕ ಕಂಬಾಲಪಲ್ಲಿಯಲ್ಲಿ ಮಕ್ಕಳಾದ ಶ್ರೀರಾಮಪ್ಪ, ಆಂಜನೇಯ ಮತ್ತು ಮಗಳಾದ ಪಾಪಮ್ಮ ಮಾರ್ಚ್ ೨೦೦೦ ರಲ್ಲಿ ಕಂಬಾಲಪಲ್ಲಿಯಲ್ಲಿ ದಹನಗೊಂಡ ದಲಿತರ ಪೈಕಿ ಇದ್ದರು. ವೆಂಕಟರಾಯಪ್ಪನೇ ಆಪಾದಿತರ ವಿರುದ್ಧವಾಗಿ ಪ್ರಥಮ ಪ್ರತ್ಯಕ್ಷ ಸಾಕ್ಷಿಯಾಗಿದ್ದ. ಈ ಕೇಸಿನಲ್ಲಿ ೪೦ ಮಂದಿ ಸಾಕ್ಷಿಗಳು ವಿರುದ್ಧ ಹೇಳಿಕೆ ಕೊಟ್ಟರು. ಇದರಿಂದ ಎಲ್ಲಾ ೩೨ ಮಂದಿ ಆರೋಪಿಗಳೂ ಸಹ ಖುಲಾಸೆಗೊಂಡಿದ್ದರು.

೨ನೇ ಸಾಕ್ಷಿಯಾದ ಗಂಗುಲಪ್ಪ ಹಿಂದೂ ಪತ್ರಿಕೆಗೆ ಹೇಳಿದ್ದು, 'ನಾನು ನನ್ನ ಹೇಳಿಕೆಯನ್ನು ಬದಲಾಯಿಸಬೇಕಾಗಿ ಬಂದಿದ್ದು, ನನ್ನ ಮಕ್ಕಳ ರಕ್ಷಣೆಗಾಗಿ; ಆಪಾದಿತರ ಪತ್ನಿಯರು ತಮ್ಮ ಗಂಡಂದಿರನ್ನು ಉಳಿಸಲು ನನ್ನ ಬಳಿ ಭಿಕ್ಷೆ ಬೇಡಿದರು' ಎಂದು.

ಕೋಲಾರ ಜಿಲ್ಲೆಯಲ್ಲಿ ಜಾತಿ ಸಂಘರ್ಷಗಳು ನಡೆಯುತ್ತಲೇ ಇವೆ. ಕಂಬಾಲಪಲ್ಲಿಯ ಹೇಯ ಘಟನೆ ಇದರಲ್ಲಿ ಒಂದು ಮಾತ್ರ, ಮೇಲ್ಜಾತಿಯ ಕೃಷ್ಣರೆಡ್ಡಿ ಸಾವಿಗೆ ಸಂಬಂಧಿಸಿದ ಸೇಡಿಗಾಗಿ ೭ ಜನ ದಲಿತರನ್ನು ಸುಟ್ಟು ಹಾಕಲಾಯಿತೆಂದು ನಂಬಲಾಗಿದೆ.

ಈಗ 'ನಮ್ಮೊಳಗೆ ಅಂತಹ ಬೇಧ ಭಾವನೆ ಏನೂ ಇಲ್ಲ ಆರೋಪಿಗಳು ಖುಲಾಸೆಯಾದ್ದರಿಂದ ಸಂತೋಷವಾಗಿದೆ' ಎಂದು 'ಹಿರಿಯರ ಸಮ್ಮುಖದಲ್ಲಿ ಕಂಬಾಲಪಲ್ಲಿಯ ಸವರ್ಣೀಯ ಯುವಕನೊಬ್ಬ ತಿಳಿಸಿದ.

ಹತ್ತಿರದ ಹಳ್ಳಿಯೊಂದರಲ್ಲಿ ಪ್ರಮುಖ ಆರೋಪಿಗಳಾದ ಮದ್ದಿರೆಡ್ಡಿ ಮತ್ತು ವೆಂಕಟರೆಡ್ಡಿಯವರುಗಳಿಗೆ ಔತಣವನ್ನು ಏರ್ಪಡಿಸಲಾಗಿತ್ತು. ಅಲ್ಲಿ ಸೇರಿದ್ದ ಜನಗಳೆ[illegible] ಸಂತೋಷದಿಂದ [illegible] ಕೃಷ್ಣ[illegible] ಹೇಳಿದ್ದು ಹೀಗೆ 'ಇಂದು ಸಂತೋಷ ಪಡಬಹುದಾದ್ದು ಏನೂ ಇಲ್ಲ; ನಾನು ಜೈಲಿನಲ್ಲಿದ್ದಾಗ ನಮ್ಮ ತಂದೆ ತೀರಿಕೊಂಡರು. ನಾನು ಸಣ್ಣ ಪುಟ್ಟ ಕಾಂಟ್ರಾಕ್ಟರ್ ಕೆಲಸಗಳನ್ನು ಮಾಡಿಸುತ್ತಿದ್ದೆ, ಈಗ ನಾನು ಹೇಗೆ ಬದುಕಲಿ?'

ಕಂಬಾಲಪಲ್ಲಿಯಲ್ಲಿ ಈ ಘಟನೆಯಾದ ನಂತರ ಯಾವುದೇ ಹಬ್ಬ ಹರಿದಿನಗಳನ್ನು ಯಾವ ಜಾತಿಯವನೂ ಮಾಡಿಲ್ಲ. ಏಕೆಂದರೆ ಪ್ರತಿಯೊಬ್ಬ ಮನೆಯ ಒಂದಿಬ್ಬರಾದರೂ ಆಪಾದಿತರೆನಿಸಿ ಜೈಲಿನಲ್ಲಿದ್ದರು.

೬೬ ದಲಿತ ಕುಟುಂಬಗಳಿಗೆ ಕಂಬಾಲಪಲ್ಲಿಯಿಂದ ೪೦ ಕಿ.ಮೀ ದೂರದಲ್ಲಿ 'ಮಿನಿ ಕಂಬಾಲಪಲ್ಲಿ' ಎಂಬ ಹೆಸರಿನಡಿಯಲ್ಲಿ ವಾಸಕ್ಕೆ ಮನೆಗಳನ್ನು ಕಟ್ಟಿಕೊಡಲಾಗಿದೆ. ಅಲ್ಲಿ ನ್ಯಾಯಾಂಗದ ತೀರ್ಪಿಗೆ ಭಿನ್ನವಾದ ಪ್ರತಿಕ್ರಿಯೆ ಕಂಡುಬರುತ್ತದೆ. 'ಇಲ್ಲಿ ಒಬ್ಬರ ಅಡಿಯಾಳೆಂಬ ಭಯ ಇರುವುದಿಲ್ಲ. ಅವರು ನಮಗೆ ಏನೂ ಮಾಡಲಾರರು' ಎಂದು ವೆಂಕಟರಾಯಪ್ಪನವರು ಹೇಳುತ್ತಾರೆ. ಹಿಂದಿನ ಕಂಬಾಲಪಲ್ಲಿಯಲ್ಲಿ ಇದ್ದಂತಹ ಕಷ್ಟಮಯ ಜೀವನ ತಲೆಯೆತ್ತುವಂತಹ ಬದುಕು ಮಿನಿ ಕಂಬಾಲಪಲ್ಲಿಯಲ್ಲಿ ಇಲ್ಲವೇ ಇಲ್ಲ. ಇಲ್ಲಿನ ಳಳ ಕುಟುಂಬಗಳಿಗೆ ೧ ಎಕರೆ ೧೦ ಗುಂಟೆಯಷ್ಟು ಭೂಮಿಯನ್ನು ನೀಡಲಾಗಿದೆ.

ಬಿ. ಜಗದೀಶ ಎಂಬ ಬಿ.ಇಡಿ., ಓದುತ್ತಿದ್ದ ಹುಡುಗ ಹೀಗೆ ಹೇಳುತ್ತಾನೆ. 'ನಮ್ಮೂರಿನ ರೆಡ್ಡಿಗಳಿಗೆ ಈಗಿನ ಸರ್ಕಾರದ ಬೆಂಬಲ ಸಾಕಷ್ಟಿದೆ. ದಲಿತ ಸಂಘರ್ಷ ಸಮಿತಿಯು ಸಹ ರಾಜಿ ಮಾಡಿಕೊಳ್ಳುವತ್ತ ನಡೆದಿದೆಯಾದ್ದರಿಂದ ನಮಗೆ ಹತಾಶೆ ಭಾವನೆ ಉಂಟಾಗಿದೆ. ನಮ್ಮನ್ನು ಈಗಿರುವ ಜಾಗದಿಂದ ಎತ್ತಂಗಡಿ ಮಾಡದೆ ಇದ್ದರೆ ಸಾಕು.'

ವರದಿ: ಪಾರ್ವತಿ ಮೆನನ್, 'ದಿ ಹಿಂದೂ'

ಕಂಬಾಲಪಲ್ಲಿ ಮೌನ ಮೆರವಣಿಗೆಯ ಮಾತಿನ ಹಿಂದೆ...

ಮೊನ್ನೆ ಅಂದರೆ ಫೆಬ್ರುವರಿ ೨೫, ಸೋಮವಾರ ಕೋಲಾರ ಜಿಲ್ಲೆಯ ದಲಿತ ಸಂಘರ್ಷ ಸಮಿತಿಯ ಸದಸ್ಯರು ಮೌನ ಮೆರವಣಿಗೆಯನ್ನು ಸಂಘಟಿಸಿದ್ದರು. ಈ ಮೆರವಣಿಗೆಯ ಉದ್ದೇಶ ಬಹಳ ಸ್ಪಷ್ಟವಾಗಿ ಕರಪತ್ರ ಹೇಳುವಂತೆ "ನಾವು ಕಂಬಾಲ ಪಲ್ಲಿಯ ಸುಟ್ಟ ನ್ಯಾಯದ ಚಿಗುರಿಗಾಗಿ ಹಂಬಲಿಸಿ ಈ ನಡೆನಡೆಯುತ್ತಿದ್ದೇವೆ ಇದು ದಲಿತ ಸಂಘಟನೆಯ ಒಂದು ಬಣದ ನಡೆಯಾಗಲಿ, ನಮಗೆ ನಾವೇ ಗೀಚಿಕೊಂಡ ದಲಿತ ಗೆರೆಯೊಳಗಿನ ನಡೆಯಾಗಲಿ, ಆಗದೆ ಒಟ್ಟು ಮನುಷ್ಯರ ನಡೆಯಾಗಲಿ"

"ಈ ನರ ಹತ್ಯೆಯ ಪಾತಕ ನ್ಯಾಯದ ತಕ್ಕಡಿಯನ್ನು ದಾಟಿ ಎಲ್ಲ ಮನುಷ್ಯರ ಕೈಗೂ ಅಂಟಿ ಅಳಿಸಲಾರದ ಕಳಂಕವಾಗದಿರಲಿ... ಯಾರೊಬ್ಬರೂ ಯಾವುದೋ ಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿ ನಾಯಿ ನರಿಗಳಂತೆ ಬೆಲೆ ಇಲ್ಲದ ಸಾವು ಸತ್ತು... ಹುಳ ಹುಪ್ಪಟ್ಟೆಗಳಂತೆ ಸುಟ್ಟ ಕರಕಲು ಬೂದಿಯಾಗದಂತೆ ನೆಲದ ನ್ಯಾಯವೊಂದು ನೆಲೆಗಾಣಲಿ."

ದೂರದ ಹಳ್ಳಿ ಮೂಲೆಗಳಿಂದ ಟ್ರಾಕ್ಟರ್, ಲಾರಿಗಳಲ್ಲಿ ಸಾವಿರಾರು ಹಳ್ಳಿಗರು, ವಿದ್ಯಾರ್ಥಿಗಳು ನಚಿಕೇತನ ವಸತಿ ನಿಲಯದ ಮುಂದೆ ಸೇರಿದರು, ಅಲ್ಲಿ ತಮಟೆಯ ಅಬ್ಬರ, ಕ್ರಾಂತಿಗೀತೆಯ ಅತಿಭಾವುಕತೆಗಳೆಲ್ಲ ನಿಶ್ಯಬ್ದವಾಗಿ ಮೌನದಲ್ಲಿ ಲೀನವಾಗಿ ಆ ಸಾವಿರಾರು ದಲಿತರ ಕಣ್ಣುಗಳಲ್ಲಿ ವಿಷಾದದ ಛಾಯೆಯಾಗಿ, ಅವರ ಬದುಕಿನ ತಲ್ಲಣ, ತಳಮಳಗಳ ಪ್ರತೀಕದಂತೆ ಕಾಣುತ್ತಿತ್ತು. ಆ ಒಂದು ಜಿಲ್ಲೆಯಲ್ಲಿ ಕೇವಲ ಕೆಲವೇ ದಿನಗಳಲ್ಲಿ ಸುಮಾರು ಆರುಸಾವಿರಕ್ಕಿಂತ ಹೆಚ್ಚು ಜನರನ್ನು ಬಂದು ಭಾಗವಹಿಸುವಂತೆ ಮಾಡಿದ ಪ್ರೇರಣೆಯ ಬಗ್ಗೆ ಆಶ್ಚರ್ಯವಾಗುತ್ತಿದೆ. ರಸ್ತೆಯ ಅಕ್ಕಪಕ್ಕದ ನಾಗರೀಕರು ಯಾವುದೇ ಸದ್ದಿಲ್ಲದೆ, ಸುದ್ದಿಯಿಲ್ಲದೆ ಉರಿ ಬಿಸಿಲಿನಲ್ಲಿ ಮೌನವಾಗಿ ಹರಿಯುತ್ತಿದ್ದ ಈ ಜನಸಾಗರವನ್ನು ನೋಡಿ ಬೆರಗಾಗುತ್ತಿದ್ದರು. ಅವರ ಕೈಗೆ ಮೆರವಣಿಗೆಯ ಉದ್ದೇಶದ ಕರಪತ್ರವನ್ನು ಕಾರ್ಯಕರ್ತರು ಹಂಚುತ್ತಿದ್ದರು.

ಸುಮಾರು ಏಳು ವರ್ಷಗಳ ಹಿಂದೆ ಯಾವ ನ್ಯಾಯಲಯದ ಕಟ್ಟೆಯನ್ನೇರಿ "ಕಂಬಾಲ ಪಲ್ಲಿ" ಘಟನೆ ದೇಶವನ್ನೇ ಬೆಚ್ಚಿಸಿತ್ತೊ ಅದೇ ನ್ಯಾಯಲಯದ ಮುಂಭಾಗದಲ್ಲಿ ದಲಿತರು ಮೌನವಾಗಿ ತೀರ್ಪನ್ನು ವಿರೋಧಿಸಿದ್ದು ಮನುಷ್ಯರೆಲ್ಲರ ಅಂತಃಕರಣವನ್ನು ಕಲಕುವಂತಿತ್ತು. ಇನ್ನೆಷ್ಟು ವರ್ಷ ದಲಿತರು ಈ ರೀತಿಯ ಅನ್ಯಾಯವನ್ನು ಸಹಿಸಬೇಕು? ಎನ್ನುವ ಪ್ರಶ್ನೆ ಅವರ ಕಣ್ಣ ಬೆಳಕಲ್ಲಿತ್ತು. ಇಂದಿಗೂ ಕರ್ನಾಟಕದ ಗ್ರಾಮೀಣ ಪ್ರದೇಶಗಳ ಅನೇಕ ಭಾಗಗಳಲ್ಲಿ ದಲಿತರ ಮೇಲಾಗುತ್ತಿರುವ ಬಹಿಷ್ಕಾರ, ಅತ್ಯಾಚಾರದಂತ ಪ್ರಕರಣಗಳು ಬೆಳಕಿಗೆ ಬಾರದಂತೆ ಅವರ ಧ್ವನಿಯನ್ನು ಸಂಪೂರ್ಣವಾಗಿ ಹತ್ತಿಕ್ಕಲಾಗುತ್ತಿದೆ. ಇಲ್ಲಿ ಪ್ರಶ್ನೆಯಿರುವುದು ದಲಿತರ ಮೇಲಾಗುತ್ತಿರುವ ಅನ್ಯಾಯಗಳನ್ನು ಎದುರಿಸುವ ಬಗ್ಗೆ. ಕಂಬಾಲ ಪಲ್ಲಿಯ ತೀರ್ಪಿನ ಸಂದರ್ಭವನ್ನು ಸಂಘಟನೆ ತನ್ನ ಆತ್ಮಾವಲೋಕನದ ಸಂದರ್ಭವನ್ನಾಗಿಸಿಕೊಂಡಂತೆ ಕಾಣುತ್ತಿದೆ. ಸರ್ಕಾರದ ಮಟ್ಟದಲ್ಲಿ ಅನೇಕ ತಪ್ಪುಗಳು ನಡೆದಿವೆ. ಮಾವಳ್ಳಿ ಶಂಕರ್ ಡಿಎಸ್‌ಎಸ್ (ಅಂಬೇಡ್ಕರ್‌ವಾದ) ಅವರು ಈ ತೀರ್ಪಿನ ಬಗ್ಗೆ ಪ್ರಶ್ನೆಗಳಿಗೆ ಉತ್ತರಿಸುತ್ತಾ ನಾಯಕರುಗಳು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಸೋತಿರುವುದೂ ಈ ರೀತಿಯ ತೀರ್ಪಿಗೆ ಕಾರಣವೆನ್ನುತ್ತಾರೆ.

ಕಂಬಾಲ ಪಲ್ಲಿಯ ತೀರ್ಪಿನ ಕೆಲವು ದಿನಗಳು ಭಾವನಾತ್ಮಕವಾಗಿ ಈ ತೀರ್ಪಿನ ವಿರುದ್ಧ ಮಾತನಾಡುತ್ತಿದ್ದ ಕೆಲವು ನಾಯಕರು ಕೆಲವರು ಪ್ರಾಮಾಣಿಕವಾಗಿ ಅದರಲ್ಲಿ ಸಂಘಟನೆಯ ಜವಾಬ್ದಾರಿ ಎಷ್ಟು ಎನ್ನುವ ನಿಟ್ಟಿನಲ್ಲಿ ಆತ್ಮಶೋಧನೆಗೆ ಪ್ರಯತ್ನಿಸುತ್ತಿದ್ದಾರೆ ಯುವಕರು ಉತ್ತಮ ನಾಯಕತ್ವದ ಕೊರತೆಯ ಬಗ್ಗೆ ತಮ್ಮ ಕೊರಗನ್ನು ಹೇಳಿಕೊಳ್ಳುತ್ತಾರೆ ಹಿರಿಯ ದಲಿತ ನಾಯಕರಾದ ಎನ್ ವೆಂಕಟೇಶ್‌ರವರೆ ಹೇಳುವಂತೆ "ಬೆನಿಫಿಟ್ ಓರಿಯಂಟಲ್ ಆಗಿದ್ದ ದಲಿತ ನಾಯಕರನ್ನು ಬಳಸಿಕೊಂಡು ಸರ್ಕಾರ ನಮ್ಮ ಕಾಳಜಿಯನ್ನು ಹತ್ತಿಕ್ಕಲು ಪ್ರಯತ್ನಿಸಿತು"

ಸಾರ್ವಜನಿಕರ ಮುಂದೆ ಇಟ್ಟು ಒತ್ತಡ ರೂಪಿಸಲು "ಅವಕಾಶವಿತ್ತು ಈ ವಿಚಾರದಲ್ಲಿ ದಲಿತ ಸಂಘಟನೆಗಳೆಲ್ಲ ಸೇರಿ ಕೆಲಸ ಮಾಡ ಬೇಕಿತ್ತು. ಇಂತಹ ತಯಾರಿಗೆ ಟೈಮೇ ಸಿಗಲಿಲ್ಲ ಸರ್ಕಾರ ನ್ಯಾಯಲಯ ಎಲ್ಲರೂ ಸುಟ್ಟವರ ಪರವಾಗೆ ಇದ್ದಿದ್ದರಿಂದ ಎಲ್ಲವನ್ನೂ ಮುಗಿಸಿ ತೀರ್ಪುಕೊಟ್ಟರು. ಇದು ಕೃಷ್ಣ ಕುಮಾರಸ್ವಾಮಿ, ಯಡಿಯೂರಪ್ಪ ಸರ್ಕಾರಗಳ ವಂಚನೆಯ ಫಲ".

ಒಂದು ಅನ್ಯಾಯ ನಡೆದಾಗ ಅತಿ ಉತ್ಸಾಹದಿಂದ ಹೋರಾಟ ಮಾಡಲು ಹೊರಡುವ ಮುಖಂಡರು ಘಟನೆಯ ಅಂತ್ಯದವರೆಗೂ ಅದೇ ಮಟ್ಟದ ಬದ್ಧತೆಯನ್ನು ಉಳಿಸಿಕೊಳ್ಳುವಲ್ಲಿ ಏಕೆ ಸೋಲುತ್ತಾರೆ? ಅನ್ಯಾಯಕ್ಕೆ ಒಳಗಾದವರೆಲ್ಲ ಕೂಲಿ ಕಾರ್ಮಿಕರು ಘಟನೆ ನಡೆದ ಆರಂಭಿಕ ದಿನಗಳಲ್ಲಿ ನಿಷ್ಠುರವಾಗಿ, ನೋವು ಮತ್ತು ಆಕ್ರೋಶದಿಂದ ತಮಗಾದ ಅನ್ಯಾಯವನ್ನು ಪ್ರತಿಭಟಿಸಿದ್ದರು. ಕಾರಣ ಅವರಿಗೆ ಆ ಹಂತದಲ್ಲಿ ದೊರೆತ ನೈತಿಕ ಬೆಂಬಲ.

> ದೂರದ ಹಳ್ಳಿ ಮೂಲೆಗಳಿಂದ ಟ್ರಾಕ್ಟರ್, ಲಾರಿಗಳಲ್ಲಿ ಸಾವಿರಾರು ಹಳ್ಳಿಗರು, ವಿದ್ಯಾರ್ಥಿಗಳು ನಚಿಕೇತನ ವಸತಿ ನಿಲಯದ ಮುಂದೆ ಸೇರಿದರು, ಅಲ್ಲಿ ತಮಟೆಯ ಅಬ್ಬರ, ಕ್ರಾಂತಿಗೀತೆಯ ಅತಿಭಾವುಕತೆಗಳೆಲ್ಲ ನಿಶ್ಯಬ್ದವಾಗಿ ಮೌನದಲ್ಲಿ ಲೀನವಾಗಿ ಆ ಸಾವಿರಾರು ದಲಿತರ ಕಣ್ಣು ಗಳಲ್ಲಿ ವಿಷಾದದ ಛಾಯೆಯಾಗಿ, ಅವರ ಬದುಕಿನ ತಲ್ಲಣ, ತಳಮಳಗಳ ಪ್ರತೀಕದಂತೆ ಕಾಣುತ್ತಿತ್ತು.

ಆರು ವರ್ಷಗಳ ಧೀರ್ಘಕಾಲ ನಡೆದ ಮೊಕದ್ದಮೆ ಅವರ ಬಡತನ, ಅಸಹಾಯಕತೆ ಅವರನ್ನು ಹತಾಶೆಯ ಅಂಚಿಗೆ ತಳ್ಳಿತ್ತು. ಈ ಘಟನೆಯಲ್ಲಿ ಪತ್ನಿ ಹಾಗೂ ಮೂರು ಮಕ್ಕಳನ್ನು ಕಳೆದುಕೊಂಡ ತಂದೆಯ ಈ ಕೇಸಿನಲ್ಲಿ "ಹಾಸ್ಟೈಲ್" ಆಗುತ್ತಾನೆ. ಇದಕ್ಕಿಂತ ದುರಂತ ಇನ್ನೇನು ಬೇಕು?

ಯಾಕೋ ನನ್ನಪ್ಪ ಎಸ್.ಎಸ್. ಕುಮಟಾ ಮತ್ತೆ ಮತ್ತೆ ನನಗೆ ನೆನಪಾಗಿ ಕಾಡುತ್ತಿದ್ದಾರೆ. ಅಪ್ಪ ಮೊದಲ ಬಾರಿ ಸಾಗರ ಪುರಸಭೆಯಲ್ಲಿ ಪೌರಕಾರ್ಮಿಕ ಸಂಘವನ್ನು ಸಂಘಟಿಸಿ ಒಬ್ಬ ಮಹಿಳೆಯನ್ನು ಅದರ ನಾಯಕಿಯನ್ನಾಗಿ ಸಿದ್ದರು. ಎದೆಯ ಮೇಲೆ ಗಾಂಧಿ ಭಾವ ಚಿತ್ರವನ್ನು ಹಾಕಿಕೊಂಡು ದಲಿತರನ್ನು ದೇವಾಲಯದೊಳಕ್ಕೆ, ಹಾಗೂ ಹೋಟೆಲ್‌ಗಳ ಒಳಗೆ ಪ್ರವೇಶ ನೀಡಲು ಹೋರಾಡಿ ಯಶಸ್ವಿಯಾದರು. ಈ ಅಪ್ಪ ಕೊನೆಗೂ ಸತ್ತಿದ್ದು ಕೆಟ್ಟ ಬಡತನದಲ್ಲಿ, ಆದರೆ ನಾನು ಕಾಲೇಜಿಗೆ ಫೀಸಿಲ್ಲದಾಗ ಬಟ್ಟೆಯಿಲ್ಲದಾಗ ನನಗೆ ಸಹಾಯ ಮಾಡುತ್ತಾ ಇದ್ದದು ಪೌರಕಾರ್ಮಿಕ ಸಂಘದ ನಾಯಕಿಯಾದ ಸುಶೀಲಕ್ಕ. ಆಕೆಯೆ ಹೇಳುವಂತೆ "ರಾಯರು (ಅಪ್ಪ) ದೇವರಂತೆ. ನಮ್ಮ ಜನಗಳಿಗೆ ಬೇಕಾದ ಸವಲತ್ತನ್ನು ಹೋರಾಟ ಮಾಡಿ ನಮಗೆ ಕೊಡಿಸಿದ್ದಾರೆ" ಈ ಅಪ್ಪ ಸತ್ತಾಗ ಅವರ ಕೇರಿಯಲ್ಲಿ ಜನ ಅದೆಷ್ಟು ಅತ್ತರೊ ಎದೆ ಬಡಿದು ಕೊಂಡರೋ, ಸುಶೀಲಕ್ಕನ ಸಮಾಧಾನ ಮಾಡಲು ಹೋದಾಗ ಅವಳು ನನ್ನನ್ನು ತಬ್ಬಿ ಅತ್ತಳು ಅವಳನ್ನು ಸಮಾಧಾನಿಸಲು ನನ್ನಲ್ಲಿ ಮಾತಿರಲಿಲ್ಲ. ಅವಳ ಮನೆಯ ಒಲೆಹಚ್ಚದೆ ವಾದವೇ ಕಳೆದಿತ್ತು.

ಕಂಬಾಲ ಪಲ್ಲಿ ಏಕೆ ದಿವಂಗತ ಕುಮಟಾರವರನ್ನು ನೆನಪಿಸುತ್ತಿದೆಯೋ ಕಾಣೆ, ಅಂತೂ "ಸುಟ್ಟ ಬೂದಿಯಲ್ಲಿ ನ್ಯಾಯ ಚಿಗುರಲಿ" ಎಂದು ಮರುವಿಚಾರಣೆ ನಡೆಸುವ ನಿಟ್ಟನಲ್ಲಿ ಕಾರ್ಯಸೂಚಿ ತಯಾರಾಗುತ್ತಿದೆ ಆದರೆ ಈ ದುರಂತದಲ್ಲಿ ಅನ್ಯಾಯ ಅನುಭವಿಸಿದ ಕುಟುಂಬಗಳು "ದಯವಿಟ್ಟು ನೀವು ನಮ್ಮನ್ನ ನಮ್ಮ ಪಾಡಿಗೆ ಬಿಟ್ಟ ಬಿಡಿ, ಒಂದೆ ಊರಿನಲ್ಲಿರುವ ನಮ್ಮ ವ್ಯವಹಾರ ನಾವೇ ನೋಡಿ ಕೋಳ್ತೀವಿ ಅಂತ ತಣ್ಣಗೆ ಹೇಳಿ ಕೈ ಮುಗಿದು ಮೌನವಾಗುತ್ತಾರೆ. ಕಂಬಾಲ ಪಲ್ಲಿಯ ತೀರ್ಪು ಮೌನದ ಒಲೆ ಹರಡಿದೆ. ಈ ದೇಶದಲ್ಲಿ ದಲಿತರ ವಿರುದ್ಧ ನಡೆದ ಅನೇಕ ಅನ್ಯಾಯಗಳಂತೆ ಇದೂ ಒಂದಾಗಿ ಚರಿತ್ರೆಯ ಪುಟ ಸೇರುವ ಎಲ್ಲಾ ಸಾಧ್ಯತೆಗಳು ನಿಚ್ಚಳವಾಗಿದೆ, ಆದರೂ ದಲಿತ ಸಂಘಟನೆಯ ಕೆಲವು ಯುವಕರು ಒತ್ತರಿಸಿ ಬರುವ ದುಃಖವನ್ನೂ ಮೀರಿ "ಮರುವಿಚಾರಣೆಯ ಬಗ್ಗೆ" ಮುಂದಿನ ಹೋರಾಟದ ಬಗ್ಗೆ ತಮ್ಮ ವಿಶ್ವಾಸವನ್ನು ವ್ಯಕ್ತಪಡಿಸುತ್ತಾರೆ. ಸಂಘಟನೆಯ ನೈತಿಕ ನೆಲೆಗಟ್ಟಿನ ಬಗ್ಗೆ ಚಿಂತನೆಯನ್ನಾರಂಭಿಸಿದ್ದಾರೆ.

"ಸುಟ್ಟ ಬೂದಿಯಲ್ಲಿ ನ್ಯಾಯ ಚಿಗುರಲಿ"
ಎಂದು ಹಾರೈಸುತ್ತಾ

ನಿಮ್ಮ
ಸುಜಾತ ಕುಮಟಾ

ಅಸ್ಪೃಶ್ಯರು ಮತ್ತು ಸಾಮಾಜಿಕ ನ್ಯಾಯ ಚಿಂತನೆಗಳು

ಯಾವ ಸಾಮಾಜಿಕ ಆವರಣದೊಳಗೆ ನಾವು ಬದುಕುತ್ತಿದ್ದೇವೆಯೊ ಅದರ ತಳ ಬುಡಗಳನ್ನು ಅರಿತುಕೊಳ್ಳುವುದು ಸಂಸ್ಕೃತಿ ಚರ್ಚೆಯಲ್ಲಿ ಅಗತ್ಯವಾಗಿದೆ. ನಮ್ಮ ಸಮಾಜದ ವಿವಿಧ ಸ್ತರಗಳಲ್ಲಿ ಆಳುವ ಸಂಸ್ಕೃತಿಯ ಆಲೋಚನ ಕ್ರಮಕ್ಕೆ ತಕ್ಕನಾಗಿ ರೂಪುಗೊಂಡು ನೆಲೆಸಿರುವ ನಂಬಿಕೆ, ಆಚರಣೆಗಳು ಮನುಷ್ಯರಿಂದ ಹಿಡಿದು ಪಶುಪಕ್ಷಿ, ಗಿಡ, ಮರ, ದಿಕ್ಕುಗಳು, ಬಣ್ಣಗಳು, ಉಣ್ಣುವುದು, ಉಡುವುದು, ಆಡುವ ಮಾತು, ಮಾಡುವ ಕಸುಬುಗಳಾದಿಯಾಗಿ, ಜೀವನವನ್ನೆಲ್ಲಾ ವ್ಯಾಪಿಸಿಕೊಂಡಿರುವ ಶ್ರೇಣೀಕರಣಗಳಾಗಿವೆ. ಇಲ್ಲಿ ವ್ಯವಸ್ಥಿತವಾದ ಬದುಕನ್ನು ಜಾತಿ ಮತ್ತು ಧರ್ಮದ ಕುರಿತಾದ ಆಚರಣೆಗಳು ಕ್ರಮವಾಗಿ ನಿಯಂತ್ರಿಸುತ್ತಿವೆ. ಇದು ಧರ್ಮದ ಮೂಲದ ಅಥವಾ ಮೂಲಭೂತ ತಾತ್ವಿಕ ನೆಲೆಗಳಿಂದ ಹಿಡಿದು ಸಾಂಪ್ರದಾಯಕ, ಮಾರ್ಕ್ಸ್‌ವಾದಿ ತಾತ್ವಿಕ ಚಿಂತನೆಗಳವರೆಗೂ ಹಬ್ಬಿದೆ.

ಲಕ್ಕೂರು ಸಿ. ಆನಂದ

'ಚಿಂತನೆ' ಒಂದು ಖಚಿತ ಪರಿಕಲ್ಪನೆಯಾಗಿ ರೂಪುಗೊಂಡಾಗ ಯಾವುದೆ ಸಮಸ್ಯೆಯು ಅದು ಜಾತಿ, ಕುಟುಂಬ ಸಮಾಜ ಯಾವುದೇ ಇರಲಿ ಅದರ ಮೂಲವನ್ನು ಗಂಭೀರವಾಗಿ ಮನಗಾಣುವುದಕ್ಕೆ ಒಂದು ಮುಖ್ಯ ಅಂಶವಾಗುತ್ತದೆ. ಅದು ಸ್ವಾಯತ್ತವೂ, ಸ್ವಯಂಪೂರ್ಣವೂ, ಅಖಂಡವೂ ಆದ ಸಾಹಿತ್ಯದ ಅಧ್ಯಯನದಲ್ಲಿ ಇಂಥ ಪರಿಕಲ್ಪನೆಗಳು ಗಂಭೀರವಾದ ಆಯಾಮಗಳು. ಜನಮನದ ದೃಷ್ಟಿ, ಧೋರಣೆ, ಅಭೀಪ್ಸೆ, ಆಶಯ, ದರ್ಶನಗಳನ್ನೆಲ್ಲ ತನ್ಮೂಲಕ ಬಿಂಬಿಸುವ ಸಾಮಾಜಿಕ ಧ್ವನಿ ನಿರ್ದುಷ್ಟವೂ, ಕಾಲಾತೀತವೂ ಆದುದಾಗಿದೆ. ಮತಿ ಮತ್ತು ಗತಿಗಳ ಒಂದು ನಿಶ್ಚಿತ ಪದದ ಬದುಕು ಕ್ರಮೇಣ ಅಮೂರ್ತಗೊಳ್ಳುತ್ತಾ ಬಂದಿತು. ಒಂದು ಕಾಲದ ಅನಿವಾರ್ಯ ನಡೆನುಡಿಗಳು ಕ್ರಮೇಣ ಆಚರಣೆ, ನಂಬಿಕೆ, ಸಂಪ್ರದಾಯವೇ ಮೊದಲಾದ ವಿಚಾರಗಳಾಗಿ ಸಮಸ್ಯೆಗಳಿಗೆ ಕಾರಣವಾದುದು ವಿಧಿತ. ಇಂಥ ವಿಚಾರಗಳಲ್ಲಿ ಜಾತಿಯ ನೆಲೆ ಗಂಭೀರವಾದುದು. ಮನುಷ್ಯ ಜಾತಿಯನ್ನು ಮುಟ್ಟಿಸಿಕೊಳ್ಳುವವರು, ಮುಟ್ಟಿಸಿಕೊಳ್ಳದವರು ಎಂದು ವಿಂಗಡಿಸಿ ಅಸ್ಪೃಶ್ಯರನ್ನು ಒಂದು ನಿರ್ದಿಷ್ಟ ನೆಲೆಯಲ್ಲಿ ವ್ಯವಸ್ಥೆಗೊಳಿಸಿದ್ದು ಇಲ್ಲಿ ಗಮನೀಯ. ಈ ವ್ಯವಸ್ಥೆಯಲ್ಲಿ ಸವರ್ಣೀಯರ ಸಮೂಹ ವಿಸ್ತೃತವಾಗಿ ಹಿಗ್ಗುತ್ತ ನಡೆದರೆ ಅಸ್ಪೃಶ್ಯರ ಸಮೂಹ ದಿಗ್ಬಂಧನಕ್ಕೆ ಈಡಾಯಿತು. ಪರಾಶ್ರಯ ನೆಲೆಗೆ ತಂದು ಬಿಟ್ಟ ಪರಿಣಾಮ ದಲಿತರ ಬದುಕು ಅತ್ಯಂತ ಸಂಕೀರ್ಣವಾದುದನ್ನು ಮಾನವ ಇತಿಹಾಸ ನಮ್ಮೆದುರು ತೆರೆದಿಡುತ್ತದೆ.

ಇಂದು ಯಾವ ಸಾಮಾಜಿಕ ಆವರಣದೊಳಗೆ ನಾವು ಬದುಕುತ್ತಿದ್ದೇವೆಯೊ ಅದರ ತಳ ಬುಡಗಳನ್ನು ಅರಿತುಕೊಳ್ಳುವುದು ಸಂಸ್ಕೃತಿ ಚರ್ಚೆಯಲ್ಲಿ ಅಗತ್ಯವಾಗಿದೆ. ನಮ್ಮ ಸಮಾಜದ ವಿವಿಧ ಸ್ತರಗಳಲ್ಲಿ ಆಳುವ ಸಂಸ್ಕೃತಿಯ ಆಲೋಚನ ಕ್ರಮಕ್ಕೆ ತಕ್ಕನಾಗಿ ರೂಪುಗೊಂಡು ನೆಲೆಸಿರುವ ನಂಬಿಕೆ, ಆಚರಣೆಗಳು ಮನುಷ್ಯರಿಂದ ಹಿಡಿದು ಪಶುಪಕ್ಷಿ, ಗಿಡ, ಮರ, ದಿಕ್ಕುಗಳು, ಬಣ್ಣಗಳು, ಉಣ್ಣುವುದು, ಉಡುವುದು, ಆಡುವ ಮಾತು, ಮಾಡುವ ಕಸುಬುಗಳಾದಿಯಾಗಿ, ಜೀವನವನ್ನೆಲ್ಲಾ ವ್ಯಾಪಿಸಿಕೊಂಡಿರುವ ಶ್ರೇಣೀಕರಣಗಳಾಗಿವೆ. ಇಲ್ಲಿ ವ್ಯವಸ್ಥಿತವಾದ ಬದುಕನ್ನು ಜಾತಿ ಮತ್ತು ಧರ್ಮದ ಕುರಿತಾದ ಆಚರಣೆಗಳು ಕ್ರಮವಾಗಿ ನಿಯಂತ್ರಿಸುತ್ತಿವೆ. ಇದು ಧರ್ಮದ ಮೂಲದ ಅಥವಾ ಮೂಲಭೂತ ತಾತ್ವಿಕ ನೆಲೆಗಳಿಂದ ಹಿಡಿದು ಸಾಂಪ್ರದಾಯಕ, ಮಾರ್ಕ್ಸ್‌ವಾದಿ ತಾತ್ವಿಕ ಚಿಂತನೆಗಳವರೆಗೂ ಹಬ್ಬಿದೆ. ತದನಂತರ ಈ ನಿಲುವು ಬೇರೊಂದು ನೆಲೆಯನ್ನು ಪಡೆಯಿತು. ತಾತ್ವಿಕ ಜೀವನಾದರ್ಶವು ಧರ್ಮದೊಳಗೆ ಪ್ರವೇಶಿಸಿದಂತೆ ಅಲ್ಲಿ ಜೀವನ ಸ್ಪಂದನಕ್ಕೆ ಒಳಗಾಗಿದ್ದು ಆ ಮೂಲಕ ಹೊಸ ಅನ್ವೇಷಣೆಯ ಗುಣವನ್ನು ಪಡೆದದ್ದನ್ನು ಕಳೆದೆರೆಡು ಶತಮಾನಗಳ ಈಚೆಗೆ ನಾವು ಕಾಣಬಹುದು. ಅದು ದಯಾನಂದ ಸರಸ್ವತಿ, ವಿವೇಕಾನಂದ, ಅರವಿಂದರು, ಅಂಬೇಡ್ಕರ್ ಮೊದಲಾದವರ ಚಿಂತನೆಗಳು (ಚಿನು ಅಚಿಬೆ, ಗೂಗಿ, ವ್ಯಾಡ್ಸನ್ ಮತ್ತು ಜೋರಿ ವ್ಯಾಲಿನ್ ಸಹ) ಮಾರ್ಕ್ಸ್, ಲೋಹಿಯಾ ಮತ್ತು ಪೆರಿಯಾರ್‌ರವರ ಹೊಸ ಗ್ರಹಿಕೆಯ ಚಿಂತನಾಲಹರಿಗಳು ಮಾನವನ ಜೀವನಾನುಭವ ಶೋಧನೆಯ ಮೂಲಕ ಹೊಸ ಮೌಲ್ಯದ ಲೋಕ ಗ್ರಹಿಕೆಗೆ ಕಾರಣವಾಯಿತು ಎನ್ನಬಹುದು.

ಈ ಶ್ರೇಣೀಕರಣಗೊಂಡ ನಂತರ ಆಳುವ ಸಂಸ್ಕೃತಿಯಾದಂತಹ ಬ್ರಾಹ್ಮಣರಲ್ಲಿ ಅನೇಕ ಬದಲಾವಣೆಗಳಾದವು. ಅವು ಅವರ ಆಹಾರಕ್ರಮ, ಆಚಾರ-ವಿಚಾರ, ಸಂಪ್ರದಾಯ ಮತ್ತು ಉಡುಗತೊಡುಗೆಗಳಲ್ಲಿ ಅನೇಕ ವೈವಿಧ್ಯಮಯ ಬದಲಾವಣೆಯನ್ನು ತಂದುಕೊಂಡು ಇನ್ನೊಂದು ಸಂಸ್ಕೃತಿ ಅಥವಾ ಜನಾಂಗವೊಂದಕ್ಕೆ ನಿರ್ದೇಶನಕೊಡಲು ಪ್ರಾರಂಭಿಸಿದವು. ಅಂಬೇಡ್ಕರ್ ಪ್ರಕಾರ:

"ಮೇಲ್ವರ್ಗದವರ ಜೀವನ ಕ್ರಮದಲ್ಲಿ ಎರಡು ಕ್ರಾಂತಿಕಾರಕ ಮಾರ್ಪಾಟನ್ನು ತಂದುಕೊಂಡರು ಒಂದು ಗೋಮಾಂಸ ಭಕ್ಷಣೆಯನ್ನು ನಿಲ್ಲಿಸಿದ್ದು,

ಎರಡು ಇನ್ನೂ ಕೊಂಚ ಮುಂದುವರೆದು ಎಲ್ಲ ಬಗೆಯ ಮಾಂಸ ಹಾರವನ್ನು ಕೈಬಿಟ್ಟದ್ದು. ನನ್ನ ದೃಷ್ಟಿಯಲ್ಲಿ ಬ್ರಾಹ್ಮಣರು ಗೋಮಾಂಸ ಭಕ್ಷಣೆ ತ್ಯಜಿಸಿ ಗೋವನ್ನು ಪೂಜಿಸಲು ಆರಂಭಿಸಿದ್ದು ದೊಡ್ಡ ರಾಜತಂತ್ರ"

ಎನ್ನುವ ಅಂಬೇಡ್ಕರ್ "ಬೌದ್ಧರ ಮತ್ತು ತಮ್ಮ ಧರ್ಮದೊಳಗಣ ಸ್ಪರ್ಧೆಯಲ್ಲಿ ಬ್ರಾಹ್ಮಣರು ತಾವು ಬೌದ್ಧರಿಗಿಂತ ಶ್ರೇಷ್ಠವೆಂದು ರುಜುವಾತು ಪಡಿಸುವ ಹಟದಲ್ಲಿ ಈ ಬದಲಾವಣೆಯನ್ನು ಪಡೆದರೆಂದು ಅಂಬೇಡ್ಕರ್‌ರವರು ವಿವರಿಸುತ್ತಾರೆ.

ಈ ಬಗೆಯ ಮೇಲ್ಮನೆಗಳಲ್ಲಿರುವ ವ್ಯಂಗ್ಯವೆಂದರೆ, ಯಾವ ಸಂಸ್ಕೃತಿಯೂ ಉಳಿದವಕ್ಕೆ ಮಾದರಿಯಾಗಿದೆಯೋ ಅದು, ಚರಿತ್ರೆಯ ಒಂದು ಘಟ್ಟದಲ್ಲಿ ಸ್ವತಃ ಇನ್ನೊಂದನ್ನು ಅನುಸರಿಸಿರುವುದು ಅಂದರೆ ಪ್ರಮಾಣೀಕರಣಗಳನ್ನು ನಿರ್ಧರಿಸುವ ಅಧಿಕಾರ ಸ್ಥಾನದಲ್ಲಿ



ರುವ ಬ್ರಾಹ್ಮಣರು, ಒಂದು ಕಾಲಕ್ಕೆ ಮಾಂಸಹಾರಿಗಳಾಗಿದ್ದರು: ತಮ್ಮ ಯಜ್ಞಶ್ರಾದ್ಧಗಳಲ್ಲಿ ಪ್ರಾಣಿಬಲಿ-ಮಾಂಸದಡಿಗೆಗಳನ್ನು ಪವಿತ್ರ ಆಚರಣೆಗಳಾಗಿ ಹೊಂದಿದ್ದವರು. ಈ ಸಂಗತಿಯನ್ನು ವೇದಗಳ ಬಗ್ಗೆ ಅಧ್ಯಯನ ಮಾಡಿರುವ ಅನೇಕ ವಿದ್ವಾಂಸರು ವಿಶ್ಲೇಷಿಸಿದ್ದಾರೆ. ವೇದಗಳಲ್ಲಿ ಬರುವ 'ಗೋಘ್ನ' (ಹಸು ತಿನ್ನುವವನು) ಎಂಬ ಶಬ್ದವು ಅತಿಥಿಗೆ ಪರ್ಯಾಯ ಹೆಸರು. ಯಾಕೆಂದರೆ ಆರ್ಯರು ಗೌರವಾನ್ವಿತ ಅತಿಥಿಗೆ ಕೊಡುತ್ತಿದ್ದ 'ಮಧುಪರ್ಕ'ದಲ್ಲಿ ದನದ ಮಾಂಸ ಇರಲೇಬೇಕಿತ್ತು. ಅಜಯಾಗದಲ್ಲಿ ಆಡಿನ, ಅಶ್ವಮೇಧಯಾಗದಲ್ಲಿ ಕುದುರೆಯ ವಿಭಿನ್ನ ಅಂಗಗಳನ್ನು ಹಂಚುವ ವಿವರಣೆ ವೇದಗಳಲ್ಲಿದೆ. ಯಾವ ದೇವತೆಗಳಿಗೆ ಯಾವ ಬಣ್ಣದ ಹಸುವನ್ನು ಬಲಿಕೊಡಬೇಕೆಂಬ ವಿವರಣೆಗಳಿವೆ: ಮಹಾಭಾರತದಲ್ಲಿ (ಅರಣ್ಯಪರ್ವ: ೨೦೭-೨೦೯) ವದಂತಿ ರಾಜನ ಅಡುಗೆಮನೆಯಲ್ಲಿ ಪ್ರತಿದಿನ ಎರಡು ಸಾವಿರ ದಿನಗಳ ಮಾಂಸವನ್ನು ಆಡುತ್ತಿದ್ದ ಬಗ್ಗೆ ಉಲ್ಲೇಖವಿದೆ (ವೈದಿಕ ವಾಙ್ಮಯ) ಆದ್ದರಿಂದ ಚಾರ್ವಾಕರು ವಚನಕಾರರು ಬ್ರಹ್ಮಶಿವ ಮೊದಲಾದವರು ಬ್ರಾಹ್ಮಣರ ಟೀಕೆ ಮಾಡುವಾಗ ಮೇಲಿನ ಚಾರಿತ್ರಿ ತಥ್ಯವನ್ನು ಒಂದು ಪ್ರಬಲವಾದ ಅಸ್ತ್ರ ಮಾಡಿಕೊಳ್ಳುತ್ತಾರೆ.

ಈ ಮಾಂಸಹಾರದ ನಿರಾಕರಣೆ ಮತ್ತು ಒಪ್ಪುವಿಕೆಯ ಭಾರತದ ಸಂಸ್ಕೃತಿಗಳಲ್ಲಿ ನಿರ್ಮಿಸಿರುವ ಆಕರ್ಷಣೆ ವಿಕರ್ಷಣೆಯ ದ್ವಂದಗಳು ವಿಚಿತ್ರವಾಗಿವೆ. ಸಮುದಾಯಗಳ ನಂಬಿಕೆ ಆಚರಣೆ ಮಿತ್‌ಗಳಲ್ಲಿ ಈ ದ್ವಂದ್ವವನ್ನು ಗುರುತಿಸಬಹುದು. ಇವನ್ನು ಮೂರು ನೆಲೆಗಳಲ್ಲಿ ವಿವರಿಸಬಹುದು.

ಅ) 'ಗೋಮಾಂಸ' ಸ್ವೀಕರಿಸುವ ಜನರ ಸಂಸ್ಕೃತಿಗಳು

ಆ) ದನವಲ್ಲದ ಇತರೆ ಪ್ರಾಣಿಗಳ ಮಾಂಸ ತಿನ್ನುವ ಜನರ ಸಂಸ್ಕೃತಿಗಳು.

ಇ) ಇಲಿ, ಉಡ, ಹಾವು, ಇರುವೆ ಇತ್ಯಾದಿಗಳನ್ನು ತಿನ್ನುವ ಜನರ ಸಂಸ್ಕೃತಿಗಳು.

ಈ ಮೇಲಿನ ಅನೇಕ ಅಭಿಪ್ರಾಯಗಳಿಗೆ ಅದರ ಸ್ಥಾನಭ್ರಂಶ ಪಲ್ಲಟಗಳ ಕುರಿತು ಖ್ಯಾತ ವೈದಿಕ ಧರ್ಮಶಾಸ್ತ್ರದ ದೊಡ್ಡವಿದ್ವಾಂಸರಾದ ಪಿ.ವಿ. ಕಾಣೆ ಹೀಗೆ ಅಭಿಪ್ರಾಯಪಡುತ್ತಾರೆ-

'ಗೋಮಾಂಸ'ದ ರಾಜಕಾರಣ ವಲಸೆಗಾರರಾಗಿ ಬಂದ ಆರ್ಯರಿಗೆ ಹಸು ಸಂಪತ್ತೂ ಹೌದು. ಆಹಾರವೂ ಹೌದು ಗೋವು ಪವಿತ್ರವಾಗಿತ್ತು ಎಂಬ ಕಾರಣಕ್ಕಾಗಿಯೇ ಅದರ ಮಾಂಸ ಸೇವನೆ ಪವಿತ್ರೀಕರಿಸುವ ಆಚರಣೆಗಳಲ್ಲಿ ಒಂದಾಗಿತ್ತು'

ತದನಂತರ ಮುಂದುವರೆದು ಅನೇಕ ಧರ್ಮದ ಆಚರಣೆಗಳಲ್ಲಿ ಮುಂದಾದರು. ಪಿತೃಸಂಸ್ಕೃತಿಯ ಆಧಾರದಲ್ಲಿ ಶಕ್ತಿ ದೇವತೆಗಳ ಆರಾಧನೆಯಾದ (ಮಣ್ಣು ಮತ್ತು ಮರದಿಂದ ನಿರ್ಮಿತವಾದಂತಹವು) ಮಾರೆಮ್ಮ, ಎಲ್ಲಮ್ಮ, ಮದ್ದೂರಮ್ಮ, ಕಾಳಿ ಎಂಬ ದೇವತೆಗಳ ಸೃಷ್ಟಿ ಮತ್ತು ಅವು ಅಸ್ಪೃಶ್ಯರ ದೇವತೆಗಳೆಂದು ಅವು ಇತರೆ ದೇವತೆಗಳಂತೆ ಅಲಂಕಾರ ರಹಿತ ಮತ್ತು ಚಿನ್ನ ಬೆಳ್ಳಿ ವಜ್ರ ಲೇಪಿತ ಆಭರಣಗಳಿಂದ ವಂಚಿತವಾಗಿ ಕಣಗಿಲೆ, ದಾಸವಾಳ, ನಾಗಮಲ್ಲಿಗೆ, ಚೆಂಡುಮಲ್ಲಿಗೆ ಎಂಬ ಗ್ರಾಮ ಕುಸುಮಗಳಿಂದ ಅಲಂಕೃತಗೊಂಡು ಗ್ರಾಮವನ್ನು ರಕ್ಷಿಸುತ್ತ ಊರ ಹೊರಗೆ ನೆಲೆಸುವಂತಹ ದೇವತೆಗಳೆಂದು ಅಥೆಂಟಿಕ್ ಆದಂತಹ ಫರ್ಮಾನು ಹೊರಡಿಸಿ, ಇಂತಹ ದೇವತೆಯು ಇಂತಹ ಜನಾಂಗಕ್ಕೆ ಮಾತ್ರ ಸೀಮಿತವೆಂದು ಅದಕ್ಕೆ ಸಾಕ್ಷಿಯೆಂಬಂತೆ ಪುರಾಣಗಳಲ್ಲಿನ, ವೇದಗಳಲ್ಲಿನ, ಉಪನಿಷತುಗಳಲ್ಲಿನ ಪುರಾವೆಗಳನ್ನು ಕೆದಕಿ ಮುಂದಿಟ್ಟರು. ತದನಂತರ ಮಾತ್ರ ಸಂಸ್ಕೃತಿಯೆಡೆಗೆ ಬೊಟ್ಟು ಮಾಡಿ ಕೃಷ್ಣ, ರಾಮ, ಶಿವ, ಪಾರ್ವತಿ, ಲಕ್ಷ್ಮಿ ಮೊದಲಾದ ಶಿಷ್ಯ ದೇವತೆಗಳು ಊರಾ ಒಳಗೆ ಚಿನ್ನ, ಬೆಳ್ಳಿ, ವಜ್ರ, ಲೇಪಿತ ಆಭರಣಗಳಿಂದ ಅಲಂಕೃತಗೊಂಡು ಸಸ್ಯಹಾರಿ ದೇವತೆಗಳೆಂದು ಇವೆಲ್ಲ ಕಲ್ಲು, ಕಂಚು ಮೊದಲಾದ ಲೋಹ ನಿರ್ಮಿತಿಗಳೆಂಬ ಹಣೆಪಟ್ಟಿ ಹಚ್ಚಿಕೊಂಡವು. ಇಲ್ಲಿ ಊರ ಒಳಗೆ ಮತ್ತು ಹೊರಗೆ ಎಂಬ ಶ್ರೇಣೀಕರಣ ಒಂದು ಸಾಮಾಜಿಕ ವೈರುಧ್ಯಕ್ಕೆ ಕಾರಣವಾಯಿತು. ವಿಸ್ಮಯವೆಂದರೆ ಸಂಸ್ಕೃತಿಯಲ್ಲಾದ ಈ ಪಲ್ಲಟವನ್ನು ಶ್ರೇಷ್ಠ ಮತ್ತು ಕನಿಷ್ಠವೆಂದು ಸೃಷ್ಟಿಕರಿಸಿದ ಬ್ರಾಹ್ಮಣ ಸಂಸ್ಕೃತಿಯು ಇತರರು ಇವರನ್ನು ಹೀನಾಯವಾಗಿ ನೋಡುವಂಥ ದೃಷ್ಟಿಕೋನವನ್ನು ಬೆಳೆಸಲು ಕಾರಣವಾಗಿ ಈ ಅಂಶಗಳು ಮಾರ್ಪಟ್ಟವು.

ಇಲ್ಲಿ ಮತ್ತೆ ಅಂಬೇಡ್ಕರ್‌ರನ್ನು ತರಬೇಕಾಗುತ್ತದೆ. ಅವರ ಪ್ರಕಾರ ಅಸ್ಪೃಶ್ಯರು ಯಾರು? ಅವರು ಹೇಗೆ ಸೃಷ್ಟಿಯಾದರು? ಎಂಬುದಕ್ಕೆ ಅವರು ಕೊಡುವ ಉತ್ತರವೆಂದರೆ-

"ಬ್ರಾಹ್ಮಣ ಸಂಸ್ಕೃತಿ ನಿಷೇಧಿಸಿದ ಆಹಾರವನ್ನು ಬಿಡದೆ ಮುಂದುವರೆಸಿದ್ದಕ್ಕೆ ಅದರಲ್ಲೂ ಸತ್ತದನಗಳನ್ನು ಹೊರುವುದು ಅದರ ಚರ್ಮಬಳಸಿ ವೃತ್ತಿ ಮಾಡುವುದು ಯಾರ ಸಾಮಾಜಿಕವಾದಂತಹ ಕರ್ತವ್ಯವಾಗಿತ್ತೊ ಅಂಥವರು ಸತ್ತ ದನದ ಮಾಂಸ ತಿನ್ನುವುದು ಸಹಜವಾಗಿತ್ತೊ. ಆ ಜನ ಅಸ್ಪೃಶ್ಯರೆನಿಸಿದರು"

ಪುರಾಣಗಳು, ವೇದಗಳು, ಉಪನಿಷತ್ತುಗಳು ಸಹ ಅಸ್ಪೃಶ್ಯರನ್ನು ಕಡೆಯಾಗಿಯೇ ವಿಂಗಡಿಸುತ್ತ ಬಂದಿವೆ. ಸ್ಮೃತಿಗಳು ಅಸ್ಪೃಶ್ಯರು ಹಾಗೂ ಬುಡಕಟ್ಟು ಜನರನ್ನು "ಬರ್ಬರ" ಎಂದು ಕರೆದವು. ಭಾರತೀಯ ಕೆಳಜಾತಿ ಬುಡಕಟ್ಟುಗಳ ಅಧ್ಯಯನ ಮಾಡಿದ ಪಾಶ್ಚಾತ್ಯ ಮತ್ತು ಭಾರತೀಯ ಮಾನವ ತಜ್ಞರು ಕೂಡ ಇದೇ ಶಬ್ದದಿಂದಲೇ ಅವರನ್ನು ಕರೆದರು ವೈದಿಕ ಪುರಾಣಗಳಲ್ಲಿ ಬರುವ 'ರಾಕ್ಷಸರು' 'ಅಸುರರು' ವೈದಿಕ ಸಂಸ್ಕೃತಿಯ ವಿರೋಧಿ ಸಮುದಾಯದವರು ಎಂದು ದೇವಿಪ್ರಸಾದ್ ಅಭಿಪ್ರಾಯ ಪಡುತ್ತಾರೆ. ವೈದಿಕಕ್ಕೆ ಪ್ರತಿಯಾಗಿ ಹುಟ್ಟಿದ್ದೆಂದು ತಿಳಿಯಲಾದ ಜೈನಧರ್ಮ ಕೂಡ ಅಸ್ಪೃಶ್ಯತೆಯನ್ನು ಗತಜನ್ಮದ ಪಾಪಫಲವೆಂದು ವ್ಯಾಖ್ಯಾನಿಸಿತು.

ಇಲ್ಲಿ ಮಾನವ ಕುಲದ ಆಧ್ಯಾತ್ಮಕತೆಯನ್ನು ನೈತಿಕತೆಯು ಕೈ ಹಿಡಿದು ನಡೆಸುತ್ತ ಹೋಗುತ್ತದೆ. ಮನುಷ್ಯನ ಮನಸೊಳಗೆ ಆಧ್ಯಾತ್ಮಕತೆಯ ಸುಳಿವು ತನ್ಮೂಲಕ ಸಾಕಾರವಾಗುವ ರೀತಿ ನೀತಿಗಳೊಂದಿಗೆ ಮಿಳಿತವಾಗುತ್ತ ಸಾಮಾಜಿಕವಾದಂತಹ ಒಂದು ಬೇಲಿಯನ್ನು ಅದು ಕಟ್ಟಿಕೊಳ್ಳುತ್ತ ಸಾಗುತ್ತದೆ. ಅಲ್ಲಿಯ ಅನುಭವ ಪ್ರಪಂಚದ ಆಧ್ಯಾತ್ಮಿಕ ಚಿಂತನೆಯ ಕಡಗೋಲು ಮಥಿಸುತ್ತ ಮಥಿಸುತ್ತ ಬದುಕಿನೊಳಗಿನ ಚಿಂತನೆಗಳನ್ನು, ತಾತ್ವಿಕತೆಯ ಮಹಾದ್ವಂದ್ವಗಳನ್ನು ಕತ್ತಲೊಳಗಿನ ಬೆಳಕನ್ನು, ಲೌಕಿಕತೆಯೊಳಗಿನ ಅಲೌಕಿಕತೆಯನ್ನು ಅದು ರೂಪಿಸುತ್ತ ಸಾಗುತ್ತದೆ.

ಇಲ್ಲಿ ಪುರಾಣಗಳು, ವೇದಗಳು, ಉಪನಿಷತ್ತುಗಳು ಸಹ ಅಸ್ಪೃಶ್ಯರನ್ನು ಕಡೆಯಾಗಿಯೇ ವಿಂಗಡಿಸುತ್ತ ಬಂದಿವೆ. ಸ್ಮೃತಿಗಳು ಹೊಲೆಮಾದಿಗರ ಹಾಗೂ ಬುಡಕಟ್ಟು ಜನರನ್ನು "ಬರ್ಬರ" ಎಂದು ಕೆರೆದವು. ಭಾರತೀಯ ಕೆಳಜಾತಿ ಬುಡಕಟ್ಟುಗಳ ಅಧ್ಯಯನ ಮಾಡಿದ ಪಾಶ್ಚಾತ್ಯ ಮತ್ತು ಭಾರತೀಯ ಮಾನವ ತಜ್ಞರು ಕೂಡ ಇದೇ ಶಬ್ದದಿಂದಲೇ ಅವರನ್ನು ಕರೆದರು: ವೈದಿಕ ಪುರಾಣಗಳಲ್ಲಿ ಬರುವ 'ರಾಕ್ಷಸರು' 'ಅಸುರರು' ವೈದಿಕ ಸಂಸ್ಕೃತಿಯ ವಿರೋಧಿ ಸಮುದಾಯದವರು ಎಂದು ದೇವಿಪ್ರಸಾದ್ ಅಭಿಪ್ರಾಯ ಪಡುತ್ತಾರೆ. ವೈದಿಕಕ್ಕೆ ಪ್ರತಿಯಾಗಿ ಹುಟ್ಟಿದ್ದೆಂದು ತಿಳಿಯಲಾದ ಜೈನಧರ್ಮ ಕೂಡ ಅಸ್ಪೃಶ್ಯತೆಯನ್ನು ಗತಜನ್ಮದ ಪಾಪಫಲವೆಂದು ವ್ಯಾಖ್ಯಾನಿಸಿದರು. 'ವಡ್ಡಾರಾಧನೆ'ಯ ಸುಕುಮಾರಸ್ವಾಮಿ ಕತೆಯಲ್ಲಿ ಗುರುನಿಂದೆ ಮಾಡಿದ ವಾಯುಭೂತಿಯು ಮುಟ್ಟಿಸಿಕೊಳ್ಳದ ಜಾತಿಯೊಂದರಲ್ಲಿ ಕುರುಡು ಹೆಣ್ಣಾಗಿ ಹುಟ್ಟುತ್ತಾನೆ ರೋಗ ಅಂಗವಿಕಲತೆ ಅಸ್ಪೃಶ್ಯ ಜಾತಿ ಹೆಣ್ತನಗಳು ಇಲ್ಲಿ ಕರ್ಮಫಲಗಳಾಗಿವೆ. ಸ್ಮೃತಿಗಳು ಅಸ್ಪೃಶ್ಯರನ್ನು 'ಹೇಲು ಉಚ್ಚೆಗಳು ಹೇಗೆ ಮುಟ್ಟಲು ಅನರ್ಹವೊ ಹಾಗೆ ಅವರು' ಎಂದು ಸ್ಪಷ್ಟವಾಗಿ ವ್ಯಾಖಾನಿಸುತ್ತವೆ.

"ಬಚ್ಚಲುದಕಂ ತಿಳಿದೊಡೆ ಆತ ಮೀಹಕ್ಕೆ ಯೋಗ್ಯಂ"

ಹೊಲತಿಯರು ಎಷ್ಟೇ ಚೆಲುವೆಯರಾಗಿದ್ದರೂ ಒಳ್ಳೇ ಗಾಯಕರಾಗಿದ್ದರೂ, ಸತ್ಯವಂತನು, ಧಾರ್ಮಿಕ ಸಹಿಷ್ಣುತೆಯುಳ್ಳವನು ಆದ ಹರಿಶ್ಚಂದ್ರ ಅವರನ್ನು ಮುಟ್ಟಲಾರ, ಬದಲಿಗೆ ಅವರ ಜಾತಿಯ ಸೂತಕವನ್ನು ಎತ್ತಿ ಆಡಿ ಅವರನ್ನು ನಿರಾಕರಿಸುತ್ತಾನೆ. ಇಲ್ಲಿ ಹರಿಶ್ಚಂದ್ರನ ಮೂಲಕ ಮನುಷ್ಯರ ಪ್ರಮಾಣೀಕರಣ ಕುರಿತ ಆ ಕಾಲದ ಸಾಮಾಜಿಕ ಗ್ರಹಿಕೆಗಳೆಲ್ಲ ಅಭಿವ್ಯಕ್ತಗೊಳ್ಳುತ್ತದೆ.

ಈ ಎಲ್ಲಾ ವೈರುದ್ಯಗಳ ನಡುವೆ ಸ್ವಲ್ಪ ದಿಟ್ಟವಾಗಿ ನಿಲ್ಲುವುದೆಂದರೆ ಮಧ್ಯಕಾಲೀನ ವಚನಸಾಹಿತ್ಯ, ಅದರಲ್ಲೂ ಕ್ರಾಂತಿಕಾರಕ ಮಹಿಳು ವಚನಕಾರ್ತಿಯರು.

ಕುರಿಕೋಳಿ ಕಿರುಮೀನು ತಿಂಬುವರಿಗೆಲ್ಲ ಕುಲಜ ಕುಲಜರೆಂದೆಂಬರು ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು

ಕೆಳಸ್ತರದಿಂದ ಬಂದ ವಚನಕಾರಳಾದ ಕಾಳೆವ್ವೆಯು ಮನುಷ್ಯನ ಆಹಾರ ಕ್ರಮದಲ್ಲಿನ ಮಾಂಸಹಾರ ಸೇವನೆಯಲ್ಲಿನ ಶ್ರೇಣೀಕರಣದ ವೈರುದ್ಯದತ್ತ ಪ್ರಾಸಂಗಿಕವಾಗಿ ಈ ತೆರನಾಗಿ ಬರೆಯುತ್ತಾಳೆ. ಇಲ್ಲಿ ಆಹಾರ ಕ್ರಮದ ಜೊತೆಗೆ 'ವಣಿ' 'ಶ್ರೇಣೀ'ಯ ಪರಿಕಲ್ಪನೆ ಮತ್ತು ತನ್ನೊಳಗೆ ವಿಂಗಡನೆಯ ಪ್ರತೀಕತೆಯನ್ನು ವ್ಯಕ್ತಪಡಿಸುತ್ತಾಳೆ.

ಇಲ್ಲಿ ಸಾಂಸ್ಕೃತಿಕ ಒಡನಾಟದಿಂದ ರೂಪಿತವಾಗುವ, ರೂಪಿಸಲ್ಪಡುವ ಧರ್ಮ, ಆಚರಣೆ, ಆಲೋಚನೆ

ಗಳು ಮತ್ತು ಅದರಿಂದ ನಿರೂಪಿತವಾಗುವ ಆತ್ಮಾವಲೋಕನವು ಒಂದು ಜನಾಂಗದ ಪುರಾತನ ಸ್ಮೃತಿಗಳನ್ನು ತಂದು ನಮ್ಮ ಕಣ್ಮುಂದೆ ನಿಲ್ಲಿಸುತ್ತದೆ. ಅದು ಒಂದು ಜನಾಂಗದ ಚರಿತ್ರೆಯಾಗಬಹುದು, ಅನುವಂಶೀಯವಾಗಿ ಆಚರಣೆ ಮಾಡುತ್ತ ಬಂದಂತಹ ತಾತ್ವಿಕ ತರ್ಕದ ಅನ್ವೇಷಣೆಯ ಧಾರ್ಮಿಕ ಸಿದ್ಧಾಂತಗಳಾಗಬಹುದು, ಇಲ್ಲ ಜನಾಂಗವೊಂದರ-ಸಮುದಾಯವೊಂದರ ಮೌಖಿಕ ಪರಂಪರೆಯ ಚಿಂತನಾ ಲಹರಿಯ ಆಡುಗಬ್ಬಗಳಾಗಬಹುದು. ಇವೆಲ್ಲವೂ ಸಾಮಾಜಿಕ ವಲಯದೊಳಗಿನ ಜೀವರಾಶಿಯೊಂದಿಗಿನ ಸಾಂಸ್ಕೃತಿಕ ಬಿಕ್ಕಟ್ಟನ್ನು ಮತ್ತು ಅಲ್ಲಿಯ ಜನಾಂಗದ ಉತ್ಕಟ ಭಾವದ ವಿಸ್ತಾರವನ್ನು ಸಾಮಾಜಿಕ ಮತ್ತು ಸಾಂಸ್ಕೃತಿಕ ಮುಖಾ-ಮುಖಿಯಲ್ಲಿ ನಮ್ಮನ್ನು ಚಿಂತನೆಗೆ ಒಳಪಡಿಸುತ್ತದೆ.

ಇಂಡಿಯಾದಲ್ಲಿ ಹುಟ್ಟಿನಿಂದಲೇ ಮನುಷ್ಯರ ಶ್ರೇಷ್ಠತೆ ಕನಿಷ್ಠತೆಗಳನ್ನು ತೀರ್ಮಾನ ಮಾಡುವ ಈ ಜಾತಿ ಅಸ್ಪೃಶ್ಯತೆಗಳು ಯಾವಾಗಲಿಂದ ಶುರುವಾದವು? ವರ್ಣಗಳು ಸ್ಥಗಿತಗೊಂಡು ಜಾತಿಗಳಾದವೊ, ಅಂತರ್‌ವರ್ಣಿಯ ವಿವಾಹ ಸಂಬಂಧಗಳಿಂದ ಹುಟ್ಟಿದ ಸರಕಾರ ಪೀಳಿಗೆಯಿಂದ ಜಾತಿ ಹುಟ್ಟಿತೊ ಅಥವಾ ಬುಡಕಟ್ಟು ವ್ಯವಸ್ಥೆಯಲ್ಲಿದ್ದ ಕುಲ ಬಳ್ಳಿಗಳು ಜಾತಿಗಳಾಗಿ ಮಾರ್ಪಟ್ಟವೊ-ಈ ಕುರಿತಾದ ಅಸ್ಪಷ್ಟವಾದ ಚರ್ಚೆಗಳು ನಮ್ಮನ್ನು ಕಾಡುತ್ತಿವೆ. ಅದರಡಿಯಲ್ಲಿಯೇ ಬೆಳೆದು ಬಂದ ಈ ಸಾಮಾಜಿಕ ನಿರ್ಬಂಧಗಳು, ರೂಪಿಕೆಗಳು, ಆಚರಣೆ, ಸಂಪ್ರದಾಯಗಳನ್ನು ಯಾರು ರೂಪಿಸಿದರು? ಯಾಕೆ ರೂಪಿಸಿದರು? ಅದರಿಂದ ಏನು ಲಾಭ? ಎಂಬ ಪ್ರಶ್ನೆಗಳು ಇಲ್ಲಿಯವರೆಗೂ ತನ್ನ ಸತ್ವವನ್ನು ಬಿಟ್ಟುಕೊಡದೆ ಗುಪ್ತವಾಗಿ ಕುಳಿತುಕೊಂಡಿರುವುದು ಚರ್ಚೆಗೆ ಗ್ರಾಸವಾಗಿ ಕಾಣುತ್ತದೆ.

ಇಂದಿಗೂ ಚಾಲ್ತಿಯಲ್ಲಿರುವ ವೈದಿಕ ಸಂಪ್ರದಾಯದ ಆಚರಣ ವಿಧಾನಗಳು ಅಸ್ಪೃಶ್ಯತೆಯ ಜನಸಮುದಾಯದೊಳಗಿನ ಜೀವಂತ ಮೌಖಿಕ ಸಂಸ್ಕೃತಿಯನ್ನು ಅವೈದಿಕ ಭೌತವಾದೀ ಸಂಸ್ಕೃತಿಯ ಆಳಕ್ಕೆ ಎಳೆದೊಯ್ಯುತ್ತಿದೆ. ಮೌಖಿಕ ಪರಂಪರೆಯೊಳಗಿನ ಜೀವಂತ ಪರಿಕರಣಗಳನ್ನು ತಾತ್ವಿಕ ಆಲೋಚನೆಗಳನ್ನು ತನ್ನ ಸಿದ್ಧಾಂತಗಳ ಅಳತೆಗೋಲಿನೊಂದಿಗೆ ಅಳೆದು ಅಲ್ಲೊಂದು ಭೌತವಾದದ ಬಯಲನ್ನು ಸೃಷ್ಟಿಸುತ್ತಿದೆ. ಜನಪದದ. ಸಹಜ ಪ್ರತಿಪಾದನೆಗಳು, ತಾತ್ವಿಕ ಅನನ್ಯತೆ ಸಂಘರ್ಷಮಯವಾದ ಬಹಿಷ್ಕೃತ ಜನಾಂಗವೊಂದರ ಉಸಿರಲ್ಲಿ ವೈದಿಕ ಸಂಸ್ಕೃತಿಯ ಕಟ್ಟುನಿಟ್ಟಾದ ಹೇಳಿಕೆಗಳ ಮಿಶ್ರಣದೊಂದಿಗೆ ಮೌಖಿಕ ಪರಂಪರೆಯ ಜಾಡು ಇಂದು ನಮಗೆ ಗೋಚರಿಸುತ್ತಿದೆ.

ಇಲ್ಲಿ ಜನಪದೀಯ ನೆಲೆಯಲ್ಲಿ ಜಾತಿ ವ್ಯವಸ್ಥೆಯನ್ನು ವಿಂಗಡಿಸುವುದಾಗಲೀ, ವೈದಿಕ ಸಂಸ್ಕೃತಿಯ ಹಿನ್ನೆಲೆಯಿಂದ ಜನಾಂಗವನ್ನು ಶ್ರೇಣೀಕರಿಸುವುದಾಗಲೀ ಆಗುವುದಿಲ್ಲ. ಆ ತೆರನಾಗಿ ಮಾಡಲು ಹೊರಟರೆ ಅಲ್ಲಿ ಶೇಷವಾಗಿ ಉಳಿಯುವ ಪರಿಕರಗಳೆಲ್ಲಾ ಒಂದು ಅಭೌದಿಕ, ಅವೈಜ್ಞಾನಿಕ ಸಿದ್ಧಾಂತಗಳಾಗಿ ಗೋಚರಿಸುವ ದಿಗಿಲು ಖಂಡಿತ ಇದೆ. ಇಲ್ಲಿ ಮುಖ್ಯವಾಗಿ ಶೋಷಿತ ವಲಯದಲ್ಲಿ ನೆಲೆನಿಂತ ವ್ಯಕ್ತಿಗೆ ಅಥವಾ ಸಮುದಾಯಕ್ಕೆ ಸಾಮಾಜಿಕ ಭದ್ರತೆ, ಸ್ಥಿರತೆ ಮುಖ್ಯವಾಗುತ್ತದೆ.

ಇಂದು ಸಾಮಾಜಿಕ ವಲಯದಲ್ಲಿ ಬಹಳಷ್ಟು ವೈರುಧ್ಯಗಳನ್ನು ಕಂಡ ದಲಿತ ಅಥವಾ ಅಸ್ಪೃಶ್ಯ ಜನ ಸಮುದಾಯ ಅನೇಕ ಅಂತರಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಜಾತಿಯಡಿಯಲ್ಲಿ ಹುಟ್ಟಿಕೊಂಡ ಸಮಸ್ಯೆ ಧರ್ಮದ ಆಚರಣೆಯ ತೊಡಕುಗಳು. ಜನಾಂಗೀಯ ಅಸಮಾನತೆ ಹೀಗೆ ಈ ಪ್ರಶ್ನೆಗಳಿಗೆಲ್ಲಾ ಎದುರು ನಿಂತು ವ್ಯವಸ್ಥೆಗೆ ಪ್ರಶ್ನೆ ಹಾಕಿ ಉತ್ತರಕ್ಕೆ ಒತ್ತಾಯಿಸುತ್ತ ವಿಭಾಗೀಕರಣದ ರೂಪವನ್ನರಿವ ಕ್ರಿಯೆಯಾಗಿದೆ. ಇದನ್ನೆ ನೈಜೀರಿಯಾದ ಕಪ್ಪು ಲೇಖಕನಾದ ವೋಲೆಸೊಯೆಂಕಾ ಈ ತೆರನಾಗಿ ಹೇಳುತ್ತಾನೆ-

"The literature of American Negroes is an attempt to explain the racial situation to the slaves; "who am I?" and what am I?," "who are they" and "what are they?- are the urgent Questions for Negroes. The demand for an answer leads not only to necessary social protest, but also to the development of the creative imagination, to the search for reason and to the new concerns with art and ideology."

ಅಂದರೆ, 'ಸೊಯೆಂಕಾ'ನನ್ನು ನಿಮ್ಮ ಕಲಾಮೀಮಾಂಸೆ ಯಾವುದು? ಎಂದು ಕೇಳಿದಾಗಲೆಲ್ಲಾ ಆತನು:

"ತೃತೀಯ ದೇಶದ ಲೇಖಕರಿಗೆ ಮುಖ್ಯವಾಗಿ ಬೇಕಾಗಿರುವುದು ರಾಜಕೀಯ, ಸಾಮಾಜಿಕವಾದ ಮೀಮಾಂಸೆಯೆ ಹೊರತು ಕಲಾಮೀಮಾಂಸೆ ಅಲ್ಲ"

ಎಂದು ಉತ್ತರಿಸುತ್ತಾನೆ. ಇಲ್ಲಿ ವ್ಯಕ್ತವಾಗಿರುವಂತಹ ರಾಜಕೀಯ, ಸಾಮಾಜಿಕ ಮತ್ತು ಕಲಾಮೀಮಾಂಸೆಯ ಅಗತ್ಯಗಳ ಕುರಿತು ಸೊಯೆಂಕಾನ ನಿಲುವು ಒಂದು ಮಹತ್ವಕಾಂಕ್ಷೆಯುತವಾದಂತಹ ನಿರ್ಧಾರವನ್ನು ವ್ಯಕ್ತಪಡಿಸುತ್ತದೆ. ಹೌದು ಇಂದು ಈ ಸಾಮಾಜಿಕ-ರಾಜಕೀಯ ಸಿದ್ಧಾಂತವು ಬರಬರುತ್ತ ಬದಲಾಗುತ್ತ ಅಲ್ಲೊಂದು ಕಲಾತ್ಮಕತೆ ರೂಪುಗೊಳ್ಳುತ್ತ ಸಾಗುತ್ತಿದೆ. ಇಂದು ದಲಿತ ಜಗತ್ತಿನ ಆಂತರಿಕ ಸಮಸ್ಯೆಗಳು ಮುಖಾ-ಮುಖಿಯಾಗುತ್ತ ಜೀವನ ಕ್ರಮದ ಬೆಳವಣಿಗೆಯಲ್ಲಿ ಆಂತಕವನ್ನು ಸೃಷ್ಟಿಸುತ್ತಿದೆ. ಅದು ಅದರೊಟ್ಟಿಗೆ ಒಂದು ಮೌಖಿಕ ಜಗತ್ತಿನ ರೂಪಾವೇಷಗಳನ್ನು ಬೊಗಸೆಯೊಳಗೆ ಬಚ್ಚಿಟ್ಟುಕೊಂಡು ಹೇಳ ಹೆಸರಿಲ್ಲದಂತೆ ಮಾಯವಾಗಿಸುತ್ತಿರುವುದು ಸಾಹಿತ್ಯದ ಸೃಜನಶೀಲ ಪ್ರಕ್ರಿಯೆಗೆ ಕೊಡಲಿ ಪೆಟ್ಟಾದಂತೆ ಲೆಕ್ಕ.

ಇಂದು ನಮ್ಮ ಮೌಖಿಕ ಜಗತ್ತನ್ನು ಎರಡು ಪ್ರಬಲವಾದಂತಹ ಶಕ್ತಿಗಳು ಆಳುತ್ತಿವೆ. ಒಂದು: ಸಾಂಸ್ಕೃತಿಕ ಆಚರಣೆಗಳು ಮತ್ತು ಎರಡು: ಸಾಮಾಜಿಕ ಸಿದ್ಧಾಂತಗಳೂ ಅ) ಇಲ್ಲಿ ಸಾಂಸ್ಕೃತಿಕ ಆಚರಣೆಯ ಒಳಗೆ ಮುಚ್ಚಿಸಿಕೊಳ್ಳದ ಜನಾಂಗವೊಂದರ ಸಾಂಸ್ಕೃತಿಕ ಬೇರುಗಳನ್ನು ಮತ್ತು ಅದಕ್ಕೆ ಅಂಟಿ ಕುಳಿತ ಅಧ್ಯಾತ್ಮವಾದದ ಕುರುಹುಗಳನ್ನು ಸಹಜ ತತ್ವಗಳೆಂದೇ ಕಾಣಬಹುದಾದರೂ ಇಲ್ಲೊಂದು ವಾಸ್ತವಿಕ ಜಗತ್ತು ನಮಗೆ ಎದುರಾಗುತ್ತದೆ. ಆ) ಅದೇ ಸಾಮಾಜಕ ಸಿದ್ಧಾಂತಗಳ ಕದ ತೆರೆದಂತೆ ವೈದಿಕ ಸಂಸ್ಕಾರದ ಆಚರಣೆಗಳು, ಅಭೌತಿಕವಾದ ಮತ್ತು ನಿಖರತೆಯಿಲ್ಲದ ಅವಾಸ್ತವಿಕ ಕಲ್ಪನೆಗಳು ನಮಗೆ ಎದುರಾಗುತ್ತದೆ. ಇಲ್ಲಿ ಈ ಎರಡರಿಂದ ನಮಗೆ ಕ್ರೌರ್ಯದ ಅಂತಿಮ ಮುಖದ ದರ್ಶವಾಗುತ್ತದೆಯೇ ಹೊರತು 'ಮುಕ್ತಿ'ಯ ಮಾರ್ಗ ಸಿಗುವುದಿಲ್ಲ. ಆದರೆ ಇದನ್ನೆ ವೈದಿಕ ಸಂಸ್ಕೃತಿಯ ಅಧ್ಯಾತ್ಮವಾದಿಗಳು 'ಅಧ್ಯಾತ್ಮ'ವೆಂದು ಸರಳೀಕರಿಸಿ ಹೇಳಿಬಿಡುತ್ತಾರೆ. ಇದು ಮೌಢ್ಯದ ಸಂಕೇತವಾಗಿ ಅರಾಜಕ ವಿಚಾರಗಳು ಗ್ರಹಿಕೆಯಾಗಿ ಜನಾಂಗವೊಂದನ್ನು ಕಾಡುತ್ತ ಬರುತ್ತದೆ. ಈ ಕಾಡುವಿಕೆ ಅನ್ನುವುದು ಕ್ಷಣದಲ್ಲಿ ಹುಟ್ಟಿ ಕ್ಷಣದಲ್ಲಿ ಸಾಯದೆ ವ್ಯಕ್ತಿಯ ಸಂಸ್ಕಾರದವರೆಗೂ ಅವನ ನೆರಳಂತೆ ಅವನನ್ನು ಹಿಂಬಾಲಿಸುತ್ತದೆ.

ಇಲ್ಲಿ ಮತ್ತೆ ಮೌಖಿಕ ಜಗತ್ತನ್ನು ಬೆರಗು ಕಣ್ಣಿಂದ ನೋಡುವ ಅಸಹಾಯಕ ಪರಿಸ್ಥಿತಿ ಉಂಟಾಗಿದೆ. ಏಕೆಂದರೆ ಅಲ್ಲಿಯೂ ಸಹ ಅನೇಕ ಅಂತರಿಕ ದೋಷಗಳು ಅದನ್ನು ಮುತ್ತಿ ನಿಂತಿರುವುದೇ ಈ ಅಸಹಾಯಕತೆಗೆ ಸಾಕ್ಷಿ, ಅವು 'ಧರ್ಮ' ಮತ್ತು 'ಅಧ್ಯಾತ್ಮ', ಈ 'ಧರ್ಮ'ವೆಂಬುದು ವ್ಯಕ್ತಿಯೊಬ್ಬನ ಜಾತಿ, ಅಲ್ಲಿಯ ಆಚರಣೆಗಳೂ ಮತ್ತು ಆ ಮನುಷ್ಯನ ಲೌಕಿಕ ಬದುಕನ್ನು ನಿಯಂತ್ರಿಸುವ ಕೊಡಲಿಯ ವಟಾದರೆ, ಈ 'ಅಧ್ಯಾತ್ಮ' ಹಿಂಸೆ-ಅಹಿಂಸೆಯ ನಡುವಿನ ಸೂಕ್ಷ್ಮಸಂಗತಿಗಳನ್ನು ಮತ್ತು ಮನುಷ್ಯನ ಅಂತಿಮ ಸುಖದ ಪರಾಕಷ್ಠೆಯನ್ನು ಮುಟ್ಟುತ್ತ ಅಲ್ಲಿಯ ಅನುಭವ ಪ್ರಪಂಚದಲ್ಲಿ ತೇಲಾಡುವಂತೆ ಮಾಡುವ ಇಹದ ಬದುಕಿನ ಮುಕ್ತಿಯಾಗಿದೆ.

ಬದುಕಿನ ಆಪ್ತ ಕ್ಷಣಗಳು ಸಾಮಾಜಿಕ ಹೋರಾಟದ ನೈತಿಕತೆಗಿರಬಹುದಾದ ಆಧ್ಯಾತ್ಮಿಕ ಮುಖದ ಅಗತ್ಯ ಬಣ್ಣಗಳನ್ನು ಕೊಂಚ-ಕೊಂಚವಾಗಿ ತುಂಬಿಕೊಡುತ್ತಿರುವ ಈ ಜಾಗತೀಕರಣದ ಸಂದರ್ಭದಲ್ಲಿ ಅಸ್ಪೃಶ್ಯತ

ಇಂಡಿಯಾದಲ್ಲಿ ಹುಟ್ಟಿನಿಂದಲೇ ಮನುಷ್ಯರ ಶ್ರೇಷ್ಠತೆ ಕನಿಷ್ಠತೆಗಳನ್ನು ತೀರ್ಮಾನ ಮಾಡುವ ಈ ಜಾತಿ ಅಸ್ಪೃಶ್ಯತೆಗಳು ಯಾವಾಗಲಿಂದ ಶುರುವಾದವು? ವರ್ಣಗಳು ಸ್ಥಗಿತಗೊಂಡು ಜಾತಿಗಳಾದವೊ, ಅಂತರ್‌ವರ್ಣಿಯ ವಿವಾಹ ಸಂಬಂಧಗಳಿಂದ ಹುಟ್ಟಿದ ಸರಕಾರ ಪೀಳಿಗೆಯಿಂದ ಜಾತಿ ಹುಟ್ಟಿತೊ ಅಥವಾ ಬುಡಕಟ್ಟು ವ್ಯವಸ್ಥೆಯಲ್ಲಿದ್ದ ಕುಲ ಬಳ್ಳಿಗಳು ಜಾತಿಗಳಾಗಿ ಮಾರ್ಪಟ್ಟವೊ-ಈ ಕುರಿತಾದ ಅಸ್ಪಷ್ಟವಾದ ಚರ್ಚೆಗಳು ನಮ್ಮನ್ನು ಕಾಡುತ್ತಿವೆ. ಅದರಡಿಯಲ್ಲಿಯೇ ಬೆಳೆದು ಬಂದ ಈ ಸಾಮಾಜಿಕ ನಿರ್ಬಂಧಗಳು, ರೂಪಿಕೆಗಳು, ಆಚರಣೆ, ಸಂಪ್ರದಾಯಗಳನ್ನು ಯಾರು ರೂಪಿಸಿದರು? ಯಾಕೆ ರೂಪಿಸಿದರು? ಅದರಿಂದ ಏನು ಲಾಭ? ಎಂಬ ಪ್ರಶ್ನೆಗಳು ಇಲ್ಲಿಯವರೆಗೂ ತನ್ನ ಸತ್ವವನ್ನು ಬಿಟ್ಟುಕೊಡದೆ ಗುಪ್ತವಾಗಿ ಕುಳಿತುಕೊಂಡಿರುವುದು ಚರ್ಚೆಗೆ ಗ್ರಾಸವಾಗಿ ಕಾಣುತ್ತದೆ.

ಆಚರಣೆಯ ಹುಡುಕಾಟವು ಒಂದು ಬೆರಗಿನ ಶೋಧದ ಆಟವಾಗಿ ಅಂಥ ಆಟವು ಸೃಷ್ಟಿಸುವಂತಹ ವಿನೋದಕ್ಕಾಗಿ ಜಾತಿಯ ಸೀಮಿತತೆಯೊಳಗಿನ ಮನುಷ್ಯ ಇಂದು ಕಾಯುತ್ತಿದ್ದಾನೆ. ಇಂತಹ ಹುಡುಕಾಟದ ಆಶಯ ಇಂದು ಇಲ್ಲಿ ಬಿಟ್ಟು ಹೋಗುವ ಮೌನ ಎಷ್ಟು ಗಾಢವೆಂದು ಅದನ್ನು ಅನುಭವಿಸಿದವನಿಗೆ ಮಾತ್ರ ಅರಿವಾಗುವಂತಹದ್ದು, ಆದ್ದರಿಂದ ಒಂದು ಸಂಸ್ಕೃತಿ ತನ್ನೆಲ್ಲಾ ವೈರುಧ್ಯಗಳನ್ನು ಗಾಢ ಕತ್ತಲಿನೊಳಕ್ಕೆ ವ್ಯಕ್ತಿಯನ್ನು ಅನಾಮತ್ತಾಗಿ ನೂಕಿ ಕೈಯನ್ನು ಬರಿದು ಮಾಡಿಕೊಳ್ಳುತ್ತಿದೆ. ಹಾಗೆ ಸಮುದಾಯವನ್ನು ಸಹ...

ಇಲ್ಲಿ ಧರ್ಮ ಮತ್ತು ಅಧ್ಯಾತ್ಮವು ಒಂದೇ ದಾರಿಯ ಹೆಜ್ಜೆಗಳಂತೆ ಕಂಡರೂ ಅವೆರಡೂ ವ್ಯಕ್ತಪಡಿಸುವ ಅಂಶಗಳು ತುಂಬಾ ಭಿನ್ನವಾಗಿವೆ. 'ಅಧ್ಯಾತ್ಮ' ಇಹದ ಬದುಕಿನ ಮುಕ್ತಿಯನ್ನು ಕಾಣಿಸಿದರೆ, 'ಧರ್ಮ'ವು ಸಾವಿನ ನಂತರದ ಲೋಕಕ್ಕೆ ಸೇರಿದಂತಾಗುತ್ತದೆ. ಇದು ಕೇವಲ ಮೌಖಿಕ ಜನಾಂಗವೊಂದರ ಪರಂಪರೆಯ ಕಣ್ಣಲ್ಲಿ ನೋಡಿದರೆ ಮಾತ್ರ ಗೋಚರಿಸುವಂತಹ ಅಂಶವೇ ಹೊರತು ಅವೈದಿಕ ಆಚರಣೆಯ ಮುಖಾಂತರ ನೋಡಿದರೆ ನಮ್ಮ ಮನ: ಪಟಲದಲ್ಲಿ ಉಳಿಯುವುದಿಲ್ಲ.

ಕೊನೆಯಾದಾಗಿ ಅಸ್ಪೃಶ್ಯರ ನಡುವಿನ ಸಾಮಾಜಿಕ ನ್ಯಾಯ, ನ್ಯಾಯಕತ್ವದ ಕುರಿತು ಅನೇಕ ಭಿನ್ನಾಭಿಪ್ರಾಯಗಳನ್ನು ನಾವು ಕಾಣಬಹುದು. ಈ ನಾಯಕತ್ವದ ಅಂತರದ ಕುರಿತು ಲಕ್ಷ್ಮೀಪತಿ ಕೋಲಾರ ಈ ರೀತಿ ಅಭಿಪ್ರಾಯ ಪಡುತ್ತಾರೆ–

"ದಲಿತ ಚಳುವಳಿಯಲ್ಲಿ ನಾನು ಗಮನಸಿದಂತೆ ಸಾಂಸ್ಕೃತಿಕ ನಾಯಕತ್ವ ಮತ್ತು ಸಾಮಾಜಿಕ ನಾಯಕತ್ವದ ನಡುವೆ ವಿಚಿತ್ರ ಅಂತರ ಉಳಿದುಕೊಂಡೇ ಬಂದಿದೆ. ಆವೇಶ ಸಾಮಾಜಿಕ ನಾಯಕತ್ವದ ಮುಖ್ಯ ಗುಣವಾಗಿದ್ದರೆ, ನೈತಿಕ ಎಚ್ಚರವೆಂಬುದು ಸಾಂಸ್ಕೃತಿಕ ನಾಯಕತ್ವದ ಮುಖ್ಯ ಗುಣವಾಗಿದೆ. ಈ ಎರಡು ಗುಣಗಳ ಬೇರುಗಳು ಹಿಂಸೆ ಮತ್ತು ಅಹಿಂಸೆಯೆಂಬ ಭಿನ್ನ ನೆಲೆಗಳಲ್ಲಿ ಮನೆ ಮಾಡಿರುವಂಥವು. ಆವೇಶದ ಶಕ್ತಿಗಿಂತಲೂ ಒಳನೋಟಗಳ ವಿವೇಕ, ಮನಸ್ಸಿನ ನಂಬಿಕೆಗಳನ್ನು ಹೆಚ್ಚು ಗಟ್ಟಿಗೊಳಿಸಬಲ್ಲದು. ಆದ್ದರಿಂದ ಆವೇಶ ಎಂಬುದು ನೈತಿಕ ಸ್ವರೂಪವನ್ನು ಪಡೆಯಬೇಕಿದೆ. ಅದು ಸಾಧ್ಯವಾಗ

–ಬೇಕಾದರೆ ಈ ಎರಡೂ ನಾಯಕತ್ವಗಳ ನಡುವಿನ ಅಂತರ ಇಲ್ಲವಾಗಬೇಕು"

ಇಲ್ಲಿ ಎರಡು ವೈರುಧ್ಯಗಳನ್ನು ನಾವು ಗಮನಿಸಬಹುದು ಅದು ಒಂದು: ಜನಾಂಗ, ಎರಡು. ನಾಯಕತ್ವ, ಇದರ ಕುರಿತು ಪ್ರಸ್ತುತ ಸಂದರ್ಭದಲ್ಲಿ ಒಂದು ವಿವೇಕಯುತವಾದಂತಹ ಚರ್ಚೆಯಾಗಬೇಕು.

ಗ್ರಂಥ ಋಣ:

ಮರದೊಳಗಣ ಕಿಚ್ಚು: ಡಾ॥ ರಹಮತ್ ತರೀಕೆರೆ

ಕಾಲುದಾರಿ: ಲಕ್ಷ್ಮೀಪತಿ ಕೋಲಾರ

ನಕ್ಷೆ ನಕ್ಷತ್ರ, ಡಾ॥ ಬಸವರಾಜ ಕಲ್ಗುಡಿ

ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು: ಡಾ॥ ಬಿ.ಆರ್. ಅಂಬೇಡ್ಕರ್.

ಅಸ್ಪೃಶ್ಯರು: ಕುಮಾರ ವೆಂಕಣ್ಣ

caste and Tribes of Southern India: Edgar Thurston.

caste and Race in India: Ghurye G.S.

Anger and Beyond: Herbert Hill

□

ಹೊತ್ತಾರೆ ಬರುತ್ತಿದ್ದ ನೀಲಗಾರರೊಂದಿಗೆ...





ಹೊತ್ತಾರೆ ಬರುತ್ತಿದ್ದ ನೀಲಗಾರರೊಂದಿಗೆ
ಸ್ವರ ಜೋಡಿಸುತ್ತ ಕುಂತ ಅಜ್ಜಿ
ಬೆಟ್ಟದ ತುದಿಯಿಂದ ಇಳಿಯುತ್ತಿದ್ದ
ಮಂಜಿನ ನಡುವಿನ ಹಾದಿಯತ್ತ
ಕಣ್ಣ ಹಾಯಿಸುತ್ತಿದ್ದಳು

ಮಂಜ ಸರಿಸುತ್ತ ಬರಬಹುದು
ಪದಗಳ ನುಡಿಸುತ್ತ
ಗುರು ಅವನು ಬೆಟ್ಟಕ್ಕೆ
ಆಳ ತಳದ ಕಣಿವೆಗೆ

ಸರಿದವು
ಹಲವು ಸುಡು ಹಗಲು
ಕಾದಳು
ತನ್ನೆದೆ ದೀಪದ ಕುಡಿಯ ಉರಿ ಆರುವವವರೆಗೂ

ಅಜ್ಜ ಸತ್ತ ಹಗಲಲ್ಲೊಂದು ದಿನ
ಅವನ ಮಲಗಿಸಲಾಗಿತ್ತು
ಅವಳು ಬಿಟ್ಟು ಹೋದ ಪದಗಳೊಂದಿಗೆ..

ಆರ್. ಸುಧೀಂದ್ರ ಕುಮಾರ್

ಮತ್ತೆ ಕಾವೇರಿದ ಕಾವೇರಿ

ಕರ್ನಾಟಕ ಪ್ರಮುಖ ನದಿಗಳಲ್ಲೊಂದಾದ ಕಾವೇರಿಯನ್ನು ಕನ್ನಡ ನಾಡಿನ ಜೀವನದಿ ಎಂದೇ ಪರಿಗಣಿಸಲಾಗುತ್ತದೆ. ಕನ್ನಡದ ಕಾವ್ಯಗಳಲ್ಲಿ, ಕಥೆ ಕಾದಂಬರಿಗಳಲ್ಲಿ, ಇತಿಹಾಸದ ಪುಟಗಳಲ್ಲಿ, ನಾಟಕಗಳಲ್ಲಿ ಮತ್ತಿತರ ಎಲ್ಲಾ ಕಲಾ ಪ್ರಕಾರಗಳಲ್ಲೂ ಕಾವೇರಿ ನದಿಗೆ ಒಂದು ವಿಶಿಷ್ಟ ಸ್ಥಾನವಿದೆ. ಬಹುಶಃ ಕಾವೇರಿ ನದಿಯಿಂದ ಸ್ಫೂರ್ತಿ ಪಡೆಯದ ಕಲಾವಿದರೇ ಇಲ್ಲವೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ದಕ್ಷಿಣ ಕರ್ನಾಟಕದ ಬಹುತೇಕ ಪ್ರದೇಶಗಳಿಗೆ ನೀರಾವರಿ ಮಾತ್ರವಲ್ಲದೆ ಕುಡಿಯುವ ನೀರನ್ನೂ ಸರಬರಾಜು ಮಾಡುವ ಕಾವೇರಿಯೊಡನೆ ಕನ್ನಡ ಜನತೆಯ ಭಾವುಕ ಸಂಬಂಧ ಶತಮಾನಗಳಿಂದಲೂ ಬೆಸೆದುಕೊಂಡು ಬಂದಿದೆ. ಈ ಭಾವನಾತ್ಮಕ ಸಂಬಂಧಗಳನ್ನು ಜೀವಂತವಾಗಿರಿಸುವಲ್ಲಿ ಕನ್ನಡ ಪರ ಸಂಘಟನೆಗಳೂ ಸಾಕಷ್ಟು ಶ್ರಮ ವಹಿಸಿವೆ. ಕಂಡುಬರುವುದಿಲ್ಲವೆಂದೇ ಹೇಳಬಹುದು.

ನಾ. ದಿವಾಕರ

ಐದು ವರ್ಷಗಳ ನಂತರ ಮತ್ತೆ ಕಾವೇರಿಯ ಕಾವು ಕರ್ನಾಟಕವನ್ನು ಆವರಿಸಿದೆ. ಕಳೆದ ೧೬ ವರ್ಷಗಳಿಂದ ಅತ್ಯಂತ ಕುತೂಹಲದಿಂದ ಕರ್ನಾಟಕದ ಜನತೆ ನಿರೀಕ್ಷಿಸುತ್ತಿದ್ದ ಕಾವೇರಿ ನ್ಯಾಯಾಧಿಕರಣದ ಅಂತಿಮ ತೀರ್ಪು ಫೆಬ್ರವರಿ ೫ರಂದು ಹೊರ ಬಂದಿದ್ದು, ಒಂದು ರೀತಿಯಲ್ಲಿ ಕರ್ನಾಟಕದ ಜನತೆಯ ಆಶೋತ್ತರಗಳಿಗೆ ಪ್ರತಿಕೂಲವಾದ ತೀರ್ಪು ಪ್ರಕಟವಾಗಿರುವುದು, ಕಾವೇರಿ ಕಣಿವೆಯ ರೈತರಿಗೆ ನಿರಾಸೆಯನ್ನುಂಟು ಮಾಡಿದೆ. ಕಾವೇರಿ ನ್ಯಾಯಾಧಿಕರಣದ ತೀರ್ಪಿನ ವಿರುದ್ಧ ನಡೆದ ತೀವ್ರತರವಾದ ಪ್ರತಿಭಟನೆಗಳು, ಚಳುವಳಿಗಳು ರಾಜ್ಯದ ಜನತೆಯ ಅಸಮಾಧಾನದ ಕುರುಹಾಗಿದೆ. ಪ್ರಸ್ತುತ ಅಂತಿಮ ತೀರ್ಪಿಗಿಂತಲೂ ಮಧ್ಯಂತರ ತೀರ್ಪು ಉತ್ತಮವಾಗಿತ್ತೆಂಬ ಅಭಿಪ್ರಾಯವೂ ವ್ಯಕ್ತವಾಗುತ್ತಿದೆ. ಕಾವೇರಿ ನ್ಯಾಯಾಧಿಕರಣದ ತೀರ್ಪು ತಮಿಳುನಾಡಿನ ಪರವಾಗಿದೆ ಎಂಬ ಕೂಗು ಒಂದೆಡೆಯಾದರೆ, ಕೇಂದ್ರದಲ್ಲಿರುವ ಯು.ಪಿ.ಎ. ಸರ್ಕಾರದಲ್ಲಿ ಡಿ.ಎಂ.ಕೆ ಪಕ್ಷ ಸಹಭಾಗಿಯಾಗಿರುವುದು ಈ ಆರೋಪಗಳಿಗೆ ಪುಷ್ಟಿ ನೀಡುತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ರೈತಾಪಿ ಜನತೆಯ, ಕನ್ನಡ ಪರ ಹೋರಾಟಗಾರರ ಮತ್ತು ಸಾಮಾನ್ಯ ಜನತೆಯ ಆಕ್ರೋಶ ಮುಗಿಲು ಮುಟ್ಟಿದ್ದು, ಫೆಬ್ರವರಿ ೧೨ ರಂದು ನಡೆದ ರಾಜ್ಯ ಬಂದ್‌ನ ಯಶಸ್ಸು, ಕಾವೇರಿ ಮತ್ತು ಕರ್ನಾಟಕದ ಸೂಕ್ಷ್ಮ ಸಂಬಂಧಗಳನ್ನು ಅನಾವರಣಗೊಳಿಸಿದೆ.

ಕರ್ನಾಟಕ ಪ್ರಮುಖ ನದಿಗಳಲ್ಲೊಂದಾದ ಕಾವೇರಿಯನ್ನು ಕನ್ನಡ ನಾಡಿನ ಜೀವನದಿ ಎಂದೇ ಪರಿಗಣಿಸಲಾಗುತ್ತದೆ. ಕನ್ನಡದ ಕಾವ್ಯಗಳಲ್ಲಿ, ಕಥೆ ಕಾದಂಬರಿಗಳಲ್ಲಿ, ಇತಿಹಾಸದ ಪುಟಗಳಲ್ಲಿ, ನಾಟಕಗಳಲ್ಲಿ ಮತ್ತಿತರ ಎಲ್ಲಾ ಕಲಾ ಪ್ರಕಾರಗಳಲ್ಲೂ ಕಾವೇರಿ ನದಿಗೆ ಒಂದು ವಿಶಿಷ್ಟ ಸ್ಥಾನವಿದೆ. ಬಹುಶಃ ಕಾವೇರಿ ನದಿಯಿಂದ ಸ್ಫೂರ್ತಿ ಪಡೆಯದ ಕಲಾವಿದರೇ ಇಲ್ಲವೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು. ದಕ್ಷಿಣ ಕರ್ನಾಟಕದ ಬಹುತೇಕ ಪ್ರದೇಶಗಳಿಗೆ ನೀರಾವರಿ ಮಾತ್ರವಲ್ಲದೆ ಕುಡಿಯುವ ನೀರನ್ನೂ ಸರಬರಾಜು ಮಾಡುವ ಕಾವೇರಿಯೊಡನೆ ಕನ್ನಡ ಜನತೆಯ ಭಾವುಕ ಸಂಬಂಧ ಶತಮಾನಗಳಿಂದಲೂ ಬೆಸೆದುಕೊಂಡು ಬಂದಿದೆ. ಈ ಭಾವನಾತ್ಮಕ ಸಂಬಂಧಗಳನ್ನು ಜೀವಂತವಾಗಿರಿಸುವಲ್ಲಿ ಕನ್ನಡ ಪರ ಸಂಘಟನೆಗಳೂ ಸಾಕಷ್ಟು ಶ್ರಮ ವಹಿಸಿವೆ. ಹಾಗಾಗಿಯೇ ನೆರೆ ರಾಜ್ಯದೊಡನಿನ ನದಿ ನೀರಿನ ವ್ಯಾಜ್ಯವೂ ಸಹ ಭಾಷಾಭಿಮಾನದ ಚೌಕಟ್ಟಿನೊಳಗೇ ವ್ಯಕ್ತವಾಗುತ್ತದೆ. ಇದು ಬಹುಶಃ ಅನ್ಯ ರಾಜ್ಯಗಳಲ್ಲಿ ಕಂಡುಬರುವುದಿಲ್ಲವೆಂದೇ ಹೇಳಬಹುದು.

ಕಾವೇರಿ ನದಿಯು ಕೊಡಗಿನ ಪಶ್ಚಿಮ ಘಟ್ಟಗಳ, ಹಂದ್ವರ್ಣದ ಸುಂದರ ಬೆಟ್ಟ ಗುಡ್ಡಗಳ ನಡುವೆ ಹುಟ್ಟುತ್ತದೆ. ಮೂರು ರಾಜ್ಯಗಳಲ್ಲಿ ೮೦೨ ಕಿಲೋಮೀಟರ್ ಕ್ರಮಿಸುವ ಕಾವೇರಿ ಕರ್ನಾಟಕದಲ್ಲಿ ೩೮೧ ಕಿ.ಮೀ., ತಮಿಳುನಾಡಿನಲ್ಲಿ ೩೫೭ ಕಿ.ಮೀ., ಮತ್ತು ಕೇರಳದಲ್ಲಿ ೬೪ ಕಿ.ಮೀ. ಹರಿಯುತ್ತದೆ. ಈ ಹಾದಿಯಲ್ಲಿ, ಹೇಮಾವತಿ, ಕಬಿನಿ, ಭವಾನಿ, ಅಮರಾವತಿ, ಕಪಿಲ, ಶಿಂಶ, ಸುವರ್ಣಮುಖಿ ಮುಂತಾದ ಹಲವಾರು ಉಪನದಿಗಳನ್ನು ಕಾವೇರಿ ತನ್ನ ಒಡಲಲ್ಲಿ ಸೇರಿಸಿಕೊಂಡು ಮುನ್ನಡೆಯುತ್ತದೆ. ಕರ್ನಾಟಕದಲ್ಲಿ ಕಾವೇರಿಯ ಹೊರತಾಗಿ, ಕೃಷ್ಣ, ಗೋದಾವರಿ, ಮಹಾದಾಯಿ, ನೇತ್ರಾವತಿ, ಪೆನ್ನಾರ್ ಮತ್ತು ಪಾಲಾರ್ ನದಿಗಳೂ ಹರಿಯುತ್ತವೆ. ಕರ್ನಾಟಕದ ಒಟ್ಟು ಭೌಗೋಳಿಕ ಪ್ರದೇಶ ೧,೯೧,೭೯೧ ಚದರ ಕಿ.ಮೀಗಳಷ್ಟಿದ್ದು (೧,೯೦,೪೯.೮೩೬ ಹೆಕ್ಟೇರ್‌ಗಳು– ಒಂದು ಹೆಕ್ಟೇರ್‌ಗೆ ೨.೫ ಎಕರೆ) ಅದರಲ್ಲಿ ೧,೦೬,೦೮,೯೧೨ ಹೆಕ್ಟೇರ್‌ನಷ್ಟು ಭೂಮಿ ಕೃಷಿ ಯೋಗ್ಯವಾಗಿದೆ. ಈ ಕೃಷಿ ಯೋಗ್ಯ ಭೂಮಿಯಲ್ಲಿ ೮೦,೪೯,೩೧೫ ಹೆಕ್ಟೇರ್‌ನಷ್ಟು ನೀರಾವರಿ ಸೌಕರ್ಯ ಹೊಂದಿದ್ದು, ಇನ್ನುಳಿದ ಪ್ರದೇಶ ಮಳೆಯಾಧಾರಿತವಾಗಿದೆ. ಕಾವೇರಿ ಜಲಾನಯನ ಪ್ರದೇಶದ ಒಟ್ಟು ಕೃಷಿ ಭೂಮಿಯ ವಿಸ್ತೀರ್ಣ ೮೭,೯೦೦ ಚದರ ಕಿ.ಮೀ ಗಳಷ್ಟಿದ್ದು ಅದರಲ್ಲಿ ಕರ್ನಾಟಕದ ಪಾಲು ೩೬,೨೪೦ ಚ.ಕಿ.ಮೀ, ತಮಿಳುನಾಡು ೪೮,೫೮೧ ಚ.ಕಿ.ಮೀ ಕೇರಳ ೨೯೩೦ ಚ.ಕಿ.ಮೀ ಮತ್ತು ಪಾಂಡಿಚರಿ ೧೪೯ ಚ.ಕಿ.ಮೀ ಆಗಿದೆ. ಈ ಜಲಾನಯನ ಪ್ರದೇಶದ ವಿಸ್ತೀರ್ಣವೇ ನ್ಯಾಯಾಧಿಕರಣ ತೀರ್ಪಿಗೆ ಬುನಾದಿಯಾಗಿರುವುದರಿಂದ, ಕರ್ನಾಟಕಕ್ಕಿಂತಲೂ, ತಮಿಳು ನಾಡಿಗೆ ಹೆಚ್ಚಿನ ಪ್ರಮಾಣದ ನೀರನ್ನು ನೀಡಲಾಗಿದೆ.

ಆದಾಗ್ಯೂ ಪ್ರಸ್ತುತ ತೀರ್ಪಿನ ಬಗ್ಗೆ ಕನ್ನಡಿಗರಲ್ಲಿ ಮೂಡಿರುವ ಅಸಮಾಧಾನದ ಹೊಗೆ ಶೀಘ್ರವಾಗಿ ಕ್ಷೀಣಿಸುವಂತಿಲ್ಲವೆಂದು ನಿಸ್ಸಂದೇಹವಾಗಿ ಹೇಳಬಹುದು. ಏಕೆಂದರೆ ಕಾವೇರಿ ವಿವಾದ

ಇತ್ತೀಚಿನದ್ದಲ್ಲ. ಅದಕ್ಕೆ ಸುಮಾರು ಎರಡು ಶತಮಾನಗಳ ಸುದೀರ್ಘ ಇತಿಹಾಸವೇ ಇದೆ. ಟಿಪ್ಪು ಸುಲ್ತಾನನ ಆಳ್ವಿಕೆಯ ನಂತರದಲ್ಲಿ, ಬ್ರಿಟಿಷ್ ವಸಾಹತುಶಾಹಿಗಳು, ಅಂದಿನ ಮೈಸೂರು ಪ್ರಾಂತ್ಯದ ವಿರುದ್ಧ ನಡೆಸಿದ ಕುತಂತ್ರವೇ ಇಂದು ದಕ್ಷಿಣ ಭಾರತದಲ್ಲಿ ನೀರಿಗಾಗಿ ಯುದ್ಧ ಮಾಡುವಂತಹ ಸನ್ನಿವೇಶವನ್ನು ಸೃಷ್ಟಿಸಿದೆ.

ಕಾವೇರಿ ವಿವಾದದ ಇತಿಹಾಸ

ಕಾವೇರಿ ವಿವಾದ ಆರಂಭಗೊಂಡದ್ದು ಸರಿಯಾಗಿ ೨೦೦ ವರ್ಷಗಳ ಹಿಂದೆ, ಕ್ರಿ.ಶ. ೧೮೦೭ರಲ್ಲಿ ಮೈಸೂರಿನ ಹುಲಿ ಎಂದೇ ಪ್ರಖ್ಯಾತನಾಗಿ, ಬ್ರಿಟಿಷ್ ಸಾಮ್ರಾಜ್ಯಕ್ಕೆ ಸಿಂಹ ಸ್ವಪ್ನವಾಗಿ, ತನ್ನ ರಾಷ್ಟ್ರದ ರಕ್ಷಣೆಗಾಗಿ ಮಕ್ಕಳನ್ನೂ ಒತ್ತೆ ಇಟ್ಟು, ವೀರ ಯೋಧನಂತೆ ಪ್ರಾಣ ತ್ಯಾಗ ಮಾಡಿದ ಟಿಪ್ಪು ಸುಲ್ತಾನ್, ಬ್ರಿಟೀಷರಿಗೆ ಮೈಸೂರು ಪ್ರಾಂತ್ಯದಲ್ಲಿ ಭದ್ರ ನೆಲೆಯೂರಲು ಅವಕಾಶ ನೀಡದಿದ್ದುದೇ, ಅಂದಿನ ಮೈಸೂರು ಪ್ರಾಂತ್ಯ ಬ್ರಿಟೀಷರ ಕೆಂಗಣ್ಣಿಗೆ ಗುರಿಯಾಗಿತ್ತು. ಟಿಪ್ಪುವಿನ ನಂತರದಲ್ಲಿ ಬಂದ ದೊರೆಗಳು ಬ್ರಿಟೀಷರೊಡನೆ ಸ್ನೇಹದಿಂದಿದ್ದರೂ, ಆ ವೇಳೆಗಾಗಲೇ ಮದ್ರಾಸ್ ಪ್ರೆಸಿಡೆನ್ಸಿಯಲ್ಲಿ ಭದ್ರವಾಗಿ ನೆಲೆಯೂರಿದ್ದ ಈಸ್ಟ್ ಇಂಡಿಯಾ ಕಂಪನಿ, ತನ್ನ ಎಲ್ಲಾ ಆಡಳಿತ ವ್ಯವಹಾರಕ್ಕೂ ಮದ್ರಾಸ್ ಅನ್ನೇ ಕೇಂದ್ರವನ್ನಾಗಿ ಮಾಡಿಕೊಂಡಿದ್ದು ಈಗ ಇತಿಹಾಸ. ಅದೇ ವೇಳೆಯಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಂಡಿದ್ದನ್ನು ಇತಿಹಾಸದಲ್ಲಿ ದಾಖಲಿಸಲಾಗಿದೆ. ೧೭ನೆಯ ಶತಮಾನದ ಅಂತ್ಯದಲ್ಲಿ ಚಿಕ್ಕದೇವರಾಜ ಒಡೆಯರು ಕಾವೇರಿ ನದಿಗಡ್ಡವಾಗಿ ನಿರ್ಮಿಸಿದ ಅಣೆಕಟ್ಟು ಪ್ರವಾಹದಲ್ಲಿ ಕೊಚ್ಚಿ ಹೋಯಿತೆಂದು ಹೇಳಲಾಗುತ್ತದೆ. ೧೮ನೆಯ ಶತಮಾನದ ಪ್ರಾರಂಭದಲ್ಲಿ ಕಂಠೀರವ ನರಸರಾಜ ಒಡೆಯರು ನಿರ್ಮಿಸಿದ ಬಂಗಾರು ಕಾಲುವೆ ಇಂದಿಗೂ ಇದೆ. ಈ ಪರಿಸ್ಥಿತಿಯಲ್ಲೂ ಮೈಸೂರಿನ ಅರಸರು ನೀರಾವರಿ ಯೋಜನೆಗಳಿಗಾಗಿ ಅನೇಕ ಕ್ರಮಗಳನ್ನು ಕೈಗೊಂಡಿದ್ದು ಕಂಡುಬರುತ್ತದೆ. ಈ ಹಗ್ಗ ಜಗ್ಗಾಟದ ಪ್ರತಿಫಲವೇ ೧೮೯೧ ರ ಮೈಸೂರು–ಮದ್ರಾಸ್ ಪ್ರಾಂತ್ಯಗಳ ನಡುವಿನ ಒಪ್ಪಂದ.

ಬ್ರಿಟಿಷರ ಮಧ್ಯಸ್ತಿಕೆಯಲ್ಲಿ ನಡೆದ ೧೮೯೧ರ ಒಪ್ಪಂದದ ಪ್ರಕಾರ, ಎರಡೂ ಪ್ರಾಂತ್ಯಗಳು ಕಾವೇರಿ ನದಿಯ ನೀರನ್ನು ಎಷ್ಟು ಪ್ರಮಾಣದಲ್ಲಿ ಉಪಯೋಗಿಸಬಹುದೆಂದು ತೀರ್ಮಾನಿಸಲಾಗಿತ್ತು. ಇದರನ್ವಯ ಮೈಸೂರಿನಲ್ಲಿ ಯಾವುದೇ ನೀರಾವರಿ ಯೋಜನೆ ಅನುಷ್ಟಾನಗೊಳಿಸಬೇಕಾದರೂ, ಮದ್ರಾಸ್ ಪ್ರೆಸಿಡೆನ್ಸಿಯ ಪರವಾನಗಿ ಪಡೆಯಬೇಕಾಗಿತ್ತು. ಈ ಒಪ್ಪಂದಕ್ಕೆ ಮುನ್ನವೇ ಮೈಸೂರಿನ ದಿವಾನರು ೧೮೯೦ರ ಜೂನ್ ೧೦ ರಂದು, ಮೈಸೂರು ಪ್ರಾಂತ್ಯದಲ್ಲಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ಪರವಾನಗಿಗಾಗಿ ಬ್ರಿಟಿಷ್ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದರು. ಆದರೆ ಈ ಅರ್ಜಿಗೆ ಉತ್ತರ ಬರಲು ಎರಡು ವರ್ಷ ಕಾಯಬೇಕಾಯಿತು. ಇದರ ಫಲವಾಗಿ ಸೃಷ್ಟಿಯಾದ ೧೮೯೨ರ ಒಪ್ಪಂದ ಮದ್ರಾಸಿಗೇ ಹೆಚ್ಚು ಅನುಕೂಲಕರವಾಗಿರುತ್ತೆಂದು ಹೇಳಬಹುದು. ಈ ಒಪ್ಪಂದದಲ್ಲಿ ಮೈಸೂರು ಪ್ರಾಂತ್ಯಕ್ಕೆ ಅನೇಕ ನಿಬಂಧನೆಗಳನ್ನು ಹೇರಲಾಗಿತ್ತು. ಈ ಅನ್ಯಾಯವನ್ನು ವಿರೋಧಿಸಿದ ಮೈಸೂರು ಅರಸರು ಭಾರತ ಸರ್ಕಾರಕ್ಕೆ ಮನವಿ ಸಲ್ಲಿಸಿ, ತಮ್ಮ ನೀರಾವರಿ ಯೋಜನೆಗಳಿಗೆ ಅನುಕೂಲ ಮಾಡಿಕೊಡುವಂತೆ ವಿನಂತಿಸಿಕೊಂಡರು. ಈ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರವು ಮೈಸೂರಿಗೆ ಅನುಕೂಲಕರವಾದ ತೀರ್ಪು ನೀಡಿ, ಅಣೆಕಟ್ಟು ನಿರ್ಮಿಸಲು ಅನುಮತಿಯನ್ನೂ ನೀಡಿತು.

ಈ ಪ್ರಕರಣದ ಹಿನ್ನೆಲೆಯಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರು, ಕನ್ನಂಬಾಡಿ ಅಣೆಕಟ್ಟು ನಿರ್ಮಿಸಲು ತಮ್ಮ ಸಲಹೆಯನ್ನು ಮುಂದಿಟ್ಟು, ಸರ್ಕಾರದ ಒಪ್ಪಿಗೆಯನ್ನೂ ಪಡೆದರು. ಆದರೆ ಮದ್ರಾಸ್ ಸರ್ಕಾರ ಈ ನಿರ್ಧಾರವನ್ನು ವಿರೋಧಿಸಿ ೧೯೧೦ರಲ್ಲಿ ಭಾರತ ಸರ್ಕಾರಕ್ಕೆ ಮನವಿ ಸಲ್ಲಿಸಿತು. ೧೯೧೪ರಲ್ಲಿ ಭಾರತ ಸರ್ಕಾರವು ಮೈಸೂರಿನ ಪರವಾಗಿ ತೀರ್ಪು ನೀಡಿದ ಪರಿಣಾಮವಾಗಿ ಕನ್ನಂಬಾಡಿ ಅಣೆಕಟ್ಟಿಗೆ ೧೯೧೭ ರಲ್ಲಿ ಪರವಾನಗಿ ದೊರೆಯಿತು. ಈ ಅಣೆಕಟ್ಟಿನ ನಿರ್ಮಾಣ ಹಂತದಲ್ಲಿ ಎರಡೂ ರಾಜ್ಯಗಳ ನಡುವೆ ಏರ್ಪಟ್ಟ ಭಿನ್ನಾಭಿಪ್ರಾಯದ ಪರಿಣಾಮವೇ, ಐತಿಹಾಸಿಕ ೧೯೨೪ರ ಒಪ್ಪಂದ.

ಎಂಟು ದಶಕಗಳ ಕಾಲ ಕರ್ನಾಟಕ ಮತ್ತು ತಮಿಳುನಾಡು ನಡುವೆ ನಡೆದ ನದಿ ವಿವಾದಕ್ಕೆ ಬೈಬಲ್‌ನಂತಿದ್ದ ೧೯೨೪ರ ಒಪ್ಪಂದದ ಸಾರಾಂಶವೆಂದರೆ ನದಿ ನೀರಿನ ಹಂಚಿಕೆಯ ಪ್ರಮಾಣ. ಈ ಒಪ್ಪಂದದ ಪ್ರಕಾರ ಕರ್ನಾಟಕಕ್ಕೆ ಕನ್ನಂಬಾಡಿ ಅಣೆಕಟ್ಟು ನಿರ್ಮಿಸಿ, ೪೪.೮ tmcft ನೀರನ್ನು ಶೇಖರಿಸಲು ಅವಕಾಶ ನೀಡಲಾಯಿತು. ಮೆಟ್ಟೂರಿನಲ್ಲಿ ಅಣೆಕಟ್ಟು ನಿರ್ಮಿಸಿದ ತಮಿಳುನಾಡಿಗೆ ೪೪.೮ tmcft ನೀರು ಶೇಖರಿಸಲು ಅನುಮತಿ ನೀಡಲಾಗಿತ್ತು. ಈ ಒಪ್ಪಂದವು ೫೦ ವರ್ಷಗಳ ಕಾಲ ಸಿಂಧುವಾಗಿರುತ್ತದೆ ಎಂದು ತೀರ್ಮಾನಿಸಲಾಗಿತ್ತು. ಈ ಅವಧಿಯಲ್ಲೂ ಕರ್ನಾಟಕದಲ್ಲಿ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ನಿಬಂಧನೆಗಳಿದ್ದವು. ಐದು ದಶಕಗಳ ನಂತರದಲ್ಲಿ ಪುನ: ಎರಡೂ ರಾಜ್ಯಗಳ ನಡುವೆ ನೀರಿನ ಬಳಕೆಯ ಪ್ರಮಾಣದ ಬಗ್ಗೆ ವಿವಾದ ಆರಂಭಗೊಂಡು, ಕೇಂದ್ರ ಸರ್ಕಾರವು ಒಂದು ಸತ್ಯ ಶೋಧನಾ ಸಮಿತಿಯನ್ನು ನೇಮಿಸಿ, ಕಾವೇರಿ ಕಣಿವೆಯಲ್ಲಿನ ಮಳೆ, ನೀರಿನ ಲಭ್ಯತೆಯ ಬಗ್ಗೆ ವರದಿ ತಯಾರಿಸಿತು. ಈ ವರದಿಯ ಆಧಾರದ ಮೇಲೆ ೧೯೭೨ರಲ್ಲಿ ಎರಡೂ ರಾಜ್ಯಗಳ ನಡುವೆ ಒಪ್ಪಂದ ಏರ್ಪಟ್ಟು, ಕಾವೇರಿ ಜಲಾನಯನ ಪ್ರದೇಶದಲ್ಲಿ ಲಭ್ಯವಿದ್ದ ೬೭೧ tmcft ನೀರನಲ್ಲಿ ಕರ್ನಾಟಕಕ್ಕೆ ೧೭೭, ತಮಿಳುನಾಡಿಗೆ ೪೮೯, ಕೇರಳಕ್ಕೆ ೫ tmcft ನೀರನ್ನು ಹಂಚಲಾಯಿತು.

ತದನಂತರದಲ್ಲಿ ೧೯೮೬ರಲ್ಲಿ ತಮಿಳುನಾಡು ಸರ್ಕಾರವು ಅಂತರ ರಾಜ್ಯ ಜಲ ವಿವಾದ ಕಾಯ್ದೆಯ ಅಡಿಯಲ್ಲಿ ನ್ಯಾಯಾಧಿಕರಣ ಸ್ಥಾಪಿಸಲು ಕೇಂದ್ರ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದನ್ನು ನಿರಾಕರಿಸಲಾಗಿ, ತಮಿಳುನಾಡು ಸರ್ಕಾರವು ಪ್ರತಿ ವರ್ಷ ನಿರ್ದಿಷ್ಟ ಪ್ರಮಾಣದ ನೀರನ್ನು ಬಿಡುವಂತೆ ಕರ್ನಾಟಕ ಸರ್ಕಾರವನ್ನು ಒತ್ತಾಯಿಸತೊಡಗಿತ್ತು. ಈ ನಿಟ್ಟಿನಲ್ಲಿ ಸರ್ವೋಚ್ಚ ನ್ಯಾಯಾಲಯದಲ್ಲೂ ಮನವಿ ಸಲ್ಲಿಸಲಾಯಿತು. ನ್ಯಾಯಾಲಯದ ಆದೇಶದ ಮೇರೆಗೆ ಕಾವೇರಿ ನ್ಯಾಯಾಧಿಕರಣ ೧೯೯೦ರಲ್ಲಿ ಸ್ಥಾಪಿತವಾಯಿತು. ಹಿಂದಿನ ಹತ್ತು ವರ್ಷಗಳ ಸರಾಸರಿ ಮಳೆಯ ಪ್ರಮಾಣವನ್ನಾಧಾರಿಸಿ ನ್ಯಾಯಾಧಿಕರಣವು, ಪ್ರತಿ ವರ್ಷ ತಮಿಳುನಾಡಿಗೆ ೨೦೫ tmcft ನೀರು ಬಿಡುವಂತೆ ಕರ್ನಾಟಕ ಸರ್ಕಾರಕ್ಕೆ ಆದೇಶಿಸಿತು. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಮೇಲ್ಮನವಿ ಫಲಪ್ರದವಾಗಲಿಲ್ಲ. ಕಾವೇರಿ ನ್ಯಾಯಾಧಿಕರಣದ ಈ ಮಧ್ಯಂತರ ಆದೇಶವೇ ಎರಡೂ ರಾಜ್ಯಗಳ ನಡುವಿನ ವಿವಾದಕ್ಕೆ ನಾಂದಿಯಾಗಿ ಪರಿಣಮಿಸಿತ್ತು. ಐದು ವರ್ಷಗಳ ಹಿಂದೆ ಕರ್ನಾಟಕದಲ್ಲಿ ಮಳೆಯ ಪ್ರಮಾಣ ಕಡಿಮೆಯಾದಾಗ ನ್ಯಾಯಾಧಿಕರಣದ ಆದೇಶವನ್ನು ಪಾಲಿಸಲಾಗದೆ, ಕರ್ನಾಟಕದಲ್ಲಿ ಸಾಕಷ್ಟು ಗೊಂದಲ ಉಂಟಾಗಿತ್ತು. ೪೦ ದಿನಗಳ ಕಾಲ ನಿರಂತರವಾದ ಹೋರಾಟ ಕಾವೇರಿ ಕಣಿವೆಯಲ್ಲಿ ಕಂಡು ಬಂದಿತ್ತು.

ಅಂತಿಮ ತೀರ್ಪಿನ ಸುತ್ತ

ಕರ್ನಾಟಕದ ರಾಜಕಾರಣದಲ್ಲಿ ಮತ್ತು ಜನಾಭಿಪ್ರಾಯದಲ್ಲಿ ಕಾವೇರಿ ನ್ಯಾಯಾಧಿಕರಣದ ಸ್ಥಾಪನೆಯೇ ಒಂದು ರಾಜಕೀಯ ಕುತಂತ್ರವೆಂದೇ ಪರಿಗಣಿಸಲಾಗುತ್ತಿದೆ. ೧೯೯೦ ರಲ್ಲಿ ನ್ಯಾಯಾಧಿಕರಣ ಸ್ಥಾಪಿತಗೊಂಡಾಗ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ವಿ.ಪಿ. ಸಿಂಗ್ ಸರ್ಕಾರಕ್ಕೆ ಡಿ.ಎಂ.ಕೆ ಬೆಂಬಲ ನೀಡುತ್ತಿದ್ದುದೇ ಈ ರೀತಿಯ ನಿಲುವಿಗೆ ಕಾರಣವಾಗಿರಬಹುದು. ಇದರ ನೇರ ಪರಿಣಾಮವೇನೋ ಎಂಬಂತೆ ಈಗಲೂ ಕೇಂದ್ರ ಸರ್ಕಾರಕ್ಕೆ ಡಿ.ಎಂ.ಕೆ ಪಕ್ಷವು ಬೆಂಬಲ ನೀಡುತ್ತಿದ್ದು, ಅಂತಿಮ ತೀರ್ಪಿನ ಹಿಂದೆಯೂ ರಾಜಕೀಯ ಕುತಂತ್ರ ಅಥವಾ ಷಡ್ಯಂತ್ರ ಇದೆಯೆಂದು ಭಾವಿಸಲಾಗುತ್ತಿದೆ. ಈ ನಿಲುವಿನ ಸತ್ಯಾಸತ್ಯತೆಗಳೇನೇ ಇದ್ದರೂ, ಒಂದು ನ್ಯಾಯಾಧಿಕರಣದ ತೀರ್ಪಿಗೆ ರಾಜಕೀಯ ಬಣ್ಣ ಲೇಪಿಸುವುದು ಪ್ರಜಾತಾಂತ್ರಿಕ ಲಕ್ಷಣವಲ್ಲ ಎಂದಷ್ಟೇ ಹೇಳಬಹುದು. ಈ ರೀತಿಯ ನಿಲುವು ತಾಳುವುದರಿಂದ ನ್ಯಾಯಾಂಗಕ್ಕೆ ಅಪಚಾರ ಮಾಡಿದಂತಾಗುತ್ತದೆ.

ಕೋಷ್ಟಕ ೧

ನ್ಯಾಯಮಂಡಲಿ ಆದೇಶಿಸಿರುವ ಮಾಹೆಯಾನ ನೀರು ಸರಬರಾಜಿನ ಪ್ರಮಾಣದ ವಿವರ

Month	Intrerim Order (tmcft)	Final Order (tmcft)
June	10.16	10.0
July	42.76	34.0
August	54.72	50.0
September	29.36	40.0
October	30.17	22.0
November	16.05	15.0
December	10.37	08.0
Januaty	02.51	03.0
February	02.17	02.5
March	02.40	02.5
April	02.32	02.5
May	02.01	02.5
TOTAL	**205.00**	**192.00**

ಆದರೆ ಈ ತೀರ್ಪಿನಿಂದ ಕರ್ನಾಟಕಕ್ಕೆ ಸಂಪೂರ್ಣ ನ್ಯಾಯ ದೊರೆತಿಲ್ಲ ಎಂದು ನಿಸ್ಸಂದೇಹವಾಗಿ ಹೇಳಬಹುದು. ಪ್ರಸ್ತುತ ತೀರ್ಪಿನ ಪ್ರಕಾರ ಕಾವೇರಿ ಜಲಾನಯನ ಪ್ರದೇಶದಲ್ಲಿ ಲಭ್ಯವಿರುವ ೭೪೦ tmcft ನೀರಿನಲ್ಲಿ ಕರ್ನಾಟಕಕ್ಕೆ ೨೭೦, ತಮಿಳುನಾಡಿಗೆ ೪೧೯, ಕೇರಳಕ್ಕೆ ೩೦ ಮತ್ತು ಪಾಂಡಿಚೇರಿಗೆ ೭ tmcft ನೀರನ್ನು

ಕಾವೇರಿ ವಿವಾದ ಕೊನೆಗೂ ಕೊನೆ ಹೇಗೆ?

ಕಾವೇರಿ ಚರಿತ್ರೆ ನೋಡಿದರೆ, ಆ ಇತಿಹಾಸದ ಉದ್ದಕ್ಕೂ ಕರ್ನಾಟಕಕ್ಕೆ ಅನ್ಯಾಯಗಳ ಸುರಿಮಳೆಯೇ ಸುರಿದಿದೆ. ಅದೊಂದು ದುಃಸ್ವಪ್ನದಂತಿದೆ. ನಾವೇನಾದರು ಈ ದುಃಸ್ವಪ್ನಕ್ಕೆ ಸಿಕ್ಕಿಹಾಕಿಕೊಂಡರೆ, ಭಾವಾವೇಶಕ್ಕೆ ಒಳಗಾಗಿ ನಮ್ಮ ವಿವೇಕವನ್ನೇ ಕಳೆದುಕೊಳ್ಳಬೇಕಾಗುತ್ತದೆ. ಅಷ್ಟೊಂದು ಅನ್ಯಾಯಗಳಾಗಿವೆ. ಇದನ್ನು ನೆನಪಿಸಿಕೊಂಡು ಕೂತಷ್ಟೂ ಗೋಳಾಡುತ್ತಿರಬೇಕಾಗುತ್ತದೆ, ಅಷ್ಟೆ. ಬದಲಾಗಿ, ನಾವು ಆ ಇತಿಹಾಸದ ಅನ್ಯಾಯಗಳನ್ನು ನುಂಗಿಕೊಂಡು ಕಣ್ಣೆದುರಿಗಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ನಮ್ಮೆಲ್ಲ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸಬೇಕಾಗಿದೆ, ಎದುರಿಗಿರುವ ತಕ್ಷಣದ ಅಪಾಯಗಳೇನು ಎಂದು ಮುಂಗಾಣಬೇಕಾಗಿದೆ, ಉಪಾಯಗಳಿಗಾಗಿ ಹುಡುಕಾಡಬೇಕಾಗಿದೆ.

ಈಗ ಹೊರಬಿದ್ದಿರುವ ನ್ಯಾಯಾಧಿಕರಣದ ಈ ಐತೀರ್ಪಿನ ಮೇಲೂ ಇತಿಹಾಸದ ತಾರತಮ್ಯದ ಕರಿನೆರಳು ಚಾಚಿಕೊಂಡಿದೆ. ಕರ್ನಾಟಕದ ಪರಿಸ್ಥಿತಿ ಕತ್ತರಿಗೆ ಸಿಕ್ಕಿಕೊಂಡ ಅಡಿಕೆಯಂತಾಗಿದೆ. ಏಕೆಂದರೆ ನ್ಯಾಯ ಪಡೆಯಲು ನಾವು ಮೇಲ್ಮನವಿಗೊ ಸುಪ್ರಿಂಕೋರ್ಟ್‌ಗೊ ಹೋಗುವುದಾದರೆ ಈ ವಿಚಾರಣೆಯೂ ಹತ್ತಾರು ವರ್ಷಗಳು ಜರುಗುವಂತಾದರೆ ಅಲ್ಲಿಯವರೆಗೆ ಮಧ್ಯಂತರ ಆದೇಶದಂತೆ ೨೦೫ ಟಿಎಂಸಿ ನೀರನ್ನು ಮೆಟ್ಟೂರ್ ಜಲಮಾಪನದಲ್ಲಿ ಬಿಡಬೇಕಾಗಿ ಬರುವ ಅಪಾಯವಿದೆ. ಮೆಟ್ಟೂರ್ ಜಲಮಾಪನದ ಇತಿಹಾಸವೂ ವಂಚನೆಯ ಇತಿಹಾಸವೇ. ಬಿಳಿಗುಂಡ್ಲುವಿನ ಜಲಮಾಪನದ ಅಳತೆಗೂ ಮೆಟ್ಟೂರ್ ಜಲಮಾಪನದ ಅಳತೆಗೂ ಸಕತ್ತು ಮೋಸವಾಗಿರುವುದು ದಾಖಲಾಗಿದೆ. ಮಧ್ಯಂತರ ಆದೇಶವೇನಾದರೂ ಮುಂದುವರೆದರೆ ಮೆಟ್ಟೂರ್ ಜಲಮಾಪನದಲ್ಲಿ ೨೦೫ ಟಿಎಂಸಿ ಎಂದು ತೋರಿಸುವಷ್ಟು ನೀರು ಬಿಡಬೇಕಾದರೆ ಮೆಟ್ಟೂರ್‌ನ ಮೋಸದ ಅಳತೆಯ ಫಲವಾಗಿ ಸುಮಾರು ೨೨೦ ಟಿಎಂಸಿಯನ್ನಾದರೂ ಬಿಳಿಗುಂಡ್ಲುವಿನಲ್ಲಿ ಬಿಟ್ಟಿರಬೇಕಾಗುತ್ತದೆ.

ಬಿಳಿಗುಂಡ್ಲುವಿನ ಜಲಮಾಪನದಲ್ಲಿ ಸುಮಾರು ೨೨೦ ಟಿಎಂಸಿ ಬಿಟ್ಟರೆ ಅದು ಮೆಟ್ಟೂರ್‌ನಲ್ಲಿ ೨೦೫ ತೋರಿಸುತ್ತದೆ! ಆದರೆ ಐತೀರ್ಪಿನ ಪ್ರಕಾರ ಬಿಳಿಗುಂಡ್ಲುವಿನಲ್ಲಿ ೧೯೨ ಟಿಎಂಸಿ ಬಿಡಬೇಕು. ವ್ಯಾಜ್ಯ ಮುಕ್ತಾಯವಾಗುವವರೆಗೂ ಮಧ್ಯಂತರ ತೀರ್ಪು ಜಾರಿಗೆ ಬರುವುದಾದರೆ ೨೨೦-೧೯೨ ಅಂದರೆ ಸುಮಾರು ೨೮ ಟಿಎಂಸಿ ಯಷ್ಟು ಹೆಚ್ಚುವರಿಯಾಗಿ ಬಿಡುತ್ತಲೇ ಇರಬೇಕಾಗುತ್ತದೆ. ಇದು ಕರ್ನಾಟಕದ ಪಾಲಿಗೆ ಅತ್ಯಂತ ಅನರ್ಥಕಾರಿಯಾದದು. ಆದರೆ ಈ ಐತೀರ್ಪನ್ನು ಅಲ್ಲಿನ ತಾರತಮ್ಯ ನಿವಾರಿಸಿಕೊಳ್ಳದೆ ಒಪ್ಪುವ ಹಾಗೂ ಇಲ್ಲ. ಮುಳ್ಳು ಬೇಲಿಯ ಮೇಲೆ ಒಣಹಾಕಿದ ಬಟ್ಟೆಯನ್ನು ಹರಿಯದಂತೆ ಬಿಡಿಸಿಕೊಳ್ಳುವಂತೆ ಈ ಜಟಿಲತೆಯನ್ನು ಬಿಡಿಸಬೇಕಾಗಿದೆ.

ಜೊತೆಗೆ ನ್ಯಾಯಾಧಿಕರಣದ ಮುಂದೆ ಪರಿಶೀಲನೆಗೆ ಹೋಗುವುದಾದರೆ ಅಲ್ಲಿ ನ್ಯಾಯಾಧಿಕರಣವು ಚರ್ಚಿಸದೇ ಇರುವ ಸಂಗತಿಗಳನ್ನು ಮಾತ್ರ ಪರಿಶೀಲನೆಗೆ ಮುಂದಿಡಬೇಕಾಗುತ್ತದೆ. ಅಂಥವು ಎಷ್ಟಿವೆ, ಎಲ್ಲಿವೆ–ತಜ್ಞರು ಹುಡುಕಬೇಕಾಗಿದೆ. ಉದಾಹರಣೆಗೆ ೪ ಟಿಎಂಸಿ ನೀರನ್ನು

> **ಈಗ ಹೊರಬಿದ್ದಿರುವ ನ್ಯಾಯಾಧಿಕರಣದ ಈ ಐತೀರ್ಪಿನ ಮೇಲೂ ಇತಿಹಾಸದ ತಾರತಮ್ಯದ ಕರಿನೆರಳು ಚಾಚಿಕೊಂಡಿದೆ. ಕರ್ನಾಟಕದ ಪರಿಸ್ಥಿತಿ ಕತ್ತರಿಗೆ ಸಿಕ್ಕಿಕೊಂಡ ಅಡಿಕೆ ಯಂತಾಗಿದೆ. ಏಕೆಂದರೆ ನ್ಯಾಯ ಪಡೆಯಲು ನಾವು ಮೇಲ್ಮನವಿಗೊ ಸುಪ್ರಿಂ ಕೋರ್ಟ್‌ಗೊ ಹೋಗುವುದಾದರೆ ಈ ವಿಚಾರಣೆಯೂ ಹತ್ತಾರು ವರ್ಷಗಳು ಜರುಗುವಂತಾದರೆ ಅಲ್ಲಿಯವರೆಗೆ ಮಧ್ಯಂತರ ಆದೇಶದಂತೆ ೨೦೫ ಟಿಎಂಸಿ ನೀರನ್ನು ಮೆಟ್ಟೂರ್ ಜಲಮಾಪನದಲ್ಲಿ ಬಿಡಬೇಕಾಗಿ ಬರುವ ಅಪಾಯವಿದೆ. ಮೆಟ್ಟೂರ್ ಜಲಮಾಪನದ ಇತಿಹಾಸವೂ ವಂಚನೆಯ ಇತಿಹಾಸವೇ. ಬಿಳಿಗುಂಡ್ಲುವಿನ ಜಲಮಾಪನದ ಅಳತೆಗೂ ಮೆಟ್ಟೂರ್ ಜಲಮಾಪನದ ಅಳತೆಗೂ ಸಕತ್ತು ಮೋಸವಾಗಿರುವುದು ದಾಖಲಾಗಿದೆ.**

ಹಂಚಲಾಗಿದ್ದು, ಕರ್ನಾಟಕವು ಪ್ರತಿ ವರ್ಷ ತಮಿಳುನಾಡಿಗೆ ೧೯೨ tmcft ನೀರನ್ನು ಒದಗಿಸಬೇಕೆಂದು ಆದೇಶಿಸಲಾಗಿದೆ. ಅರ್ಥಾತ್ ಕರ್ನಾಟಕಕ್ಕೆ ಲಭ್ಯವಿರುವ ೪೬೨ tmcft ನಲ್ಲಿ ೧೯೨ tmcftನ್ನು ತಮಿಳುನಾಡಿಗೆ ನೀಡಬೇಕಾಗಿದೆ. ಇಡೀ ಜಲಾನಯನ ಪ್ರದೇಶದ ನೀರಿನ ಲಭ್ಯತೆಯ ಪ್ರಮಾಣವನ್ನು ಶೇ ೫೦ರ ಅವಲಂಬನೆಯ ಮೇಲೆ ನಿರ್ಧರಿಸಲಾಗಿದೆ. ಅಂದರೆ ಎರಡು ವರ್ಷಕ್ಕೊಮ್ಮೆ ಸಂಪೂರ್ಣ ೭೪೦ tmcft ನೀರು ಲಭ್ಯವಿರುತ್ತದೆ ಎಂದು ಅರ್ಥೈಸಬಹುದು.

ಮಧ್ಯಂತರ ತೀರ್ಪಿನಲ್ಲಿ ಕರ್ನಾಟಕ ತಮಿಳುನಾಡಿಗೆ tmcft ನೀರನ್ನು ಮೆಟ್ಟೂರು ಜಲಾಶಯದಿಂದ ಬಿಡಬೇಕೆಂದು ಆದೇಶಿಸಲಾಗಿದ್ದರೆ, ಪ್ರಸ್ತುತ ತೀರ್ಪಿನಲ್ಲಿ ೧೯೨ tmcft ನೀರನ್ನು ಬಿಳಿಗುಂಡು ಜಲಾಶಯದಿಂದ ಬಿಡಬೇಕೆಂದು ಆದೇಶಿಸಲಾಗಿದೆ. ಇದರಿಂದ ಬಿಳಿಗುಂಡು ಪ್ರದೇಶದಲ್ಲಿ ಸಂಗ್ರಹವಾಗುವ ನೀರಿನ ಪ್ರಮಾಣವನ್ನು ಪರಿಗಣಿಸಿದಲ್ಲಿ ತಮಿಳುನಾಡಿಗೆ ೨೫ tmcft ನೀರು ಹೆಚ್ಚಿಗೆ ಹರಿಯುತ್ತದೆ. ಇದು ಮಧ್ಯಂತರ ತೀರ್ಪಿನ ೨೦೫ tmcft ಗಿಂತಲೂ ಹೆಚ್ಚಾಗುತ್ತದೆ. ಈ ಅಂಶ ಮತ್ತು ಮಂಡಲಿ ನಿರ್ಧರಿಸಿರುವ ಮಾಹೆಯಾನ ನೀರು ಬಿಡುಗಡೆಯ ಪ್ರಮಾಣಗಳೇ ಕರ್ನಾಟಕದ ರೈತರನ್ನು ಸಹಜವಾಗಿ ಕೆರಳಿಸಿದೆ. (ಕೋಷ್ಟಕ – ೧)

ಕರ್ನಾಟಕದಲ್ಲಿ ಮಳೆ ಸಕಾಲಕ್ಕೆ ಬರಲಿ, ಬರದಿರಲಿ, ಈ ಮೇಲಿನ ಪ್ರಮಾಣದಲ್ಲಿ ನೀರು ಸರಬರಾಜು ಮಾಡಬೇಕೆಂದು ಆದೇಶಿಸಿರುವ ನ್ಯಾಯಮಂಡಲಿಯ ತೀರ್ಪು ಪ್ರಶ್ನಾರ್ಹವಾಗಿದೆ. ಈ ತೀರ್ಪು ನೀಡಲು ಕರ್ನಾಟಕ ಸರ್ಕಾರ ಒದಗಿಸಿದ್ದ ಅಂಕಿ ಅಂಶಗಳೇ ಕಾರಣ ಎಂದು ಹೇಳಲಾಗಿದ್ದು, ಕರ್ನಾಟಕ ಸರ್ಕಾರದ ಪಾತ್ರವನ್ನೂ ಇಲ್ಲಿ ಪ್ರಶ್ನಿಸಲಾಗುತ್ತಿದೆ. ಜೂನ್–ಜುಲೈ ತಿಂಗಳಲ್ಲಿ ಮತ್ತು ಜನವರಿ–ಫೆಬ್ರವರಿ ತಿಂಗಳಲ್ಲಿ ಕರ್ನಾಟಕದಲ್ಲಿ ಮುಂಗಾರು ಕ್ಷೀಣಿಸಿರುವುದರಿಂದ ಈ ಅವಧಿಯಲ್ಲಿ ಜಲಾಶಯದಲ್ಲಿ ನೀರು ಲಭ್ಯವಿರುವ ಸಾಧ್ಯತೆಗಳೇ ಕಡಿಮೆ. ಆದಾಗ್ಯೂ ಕರ್ನಾಟಕವು ನೀರನ್ನು ಶೇಖರಿಸಿಟ್ಟು ತಮಿಳುನಾಡಿಗೆ ಸರಬರಾಜು ಮಾಡಬೇಕೆಂದು ಆದೇಶಿಸಿರುವುದು ರಾಜ್ಯದ ರೈತರ ಹಿತ ದೃಷ್ಟಿಯಿಂದ ಸರ್ಮಥಾ ಒಪ್ಪತಕ್ಕದಲ್ಲ.

ಮಧ್ಯಂತರ ಆದೇಶದ ಪ್ರಕಾರ ಕರ್ನಾಟಕಕ್ಕೆ ಕೇವಲ ೧೧ ಲಕ್ಷ ಎಕರೆ ಭೂಮಿಯನ್ನು ನೀರಾವರಿಗೆ ಒಳಪಡಿಸಲು ಅವಕಾಶವಿದ್ದು, ಈಗ ಈ ನಿಬಂಧನೆಯನ್ನು ತೆಗೆದುಹಾಕಿರುವುದು ರಾಜ್ಯದ ದೃಷ್ಟಿಯಿಂದ ಅನುಕೂಲಕರವಾಗಿದೆ. ಆದರೆ ಪ್ರಸ್ತುತ ರಾಜ್ಯದಲ್ಲಿ ೨೪ ಲಕ್ಷ ಎಕರೆ ನೀರಾವರಿ ಭೂಮಿಯಿದ್ದು, ತನ್ನ ತೀರ್ಪಿನ ಸಲುವಾಗಿ ನ್ಯಾಯಮಂಡಲಿ ಪರಿಗಣಿಸಿರುವುದು ೧೮.೮೫ ಲಕ್ಷ ಎಕರೆ ಮಾತ್ರವಾಗಿದೆ. ರಾಜ್ಯದ ನೀರಾವರಿ ತಜ್ಞರ ಪ್ರಕಾರ ರಾಜ್ಯಕ್ಕೆ ಒಟ್ಟಾರೆ ನೀರಾವರಿ ಮತ್ತು ಕುಡಿಯುವ ನೀರಿನ ಯೋಜನೆಗಳಿಗೆ ಕನಿಷ್ಟ ೪೦೫ tmcft ನೀರಾದರೂ ಅವಶ್ಯಕತೆ ಇದೆ. ಬೆಂಗಳೂರು, ಮೈಸೂರು, ಮಂಡ್ಯ ಮತ್ತು

<u>ಕೋಷ್ಟಕ – ೨</u>

೧೯೯೧ ರಿಂದ ಬಿಳಿಗುಂಡು ಮತ್ತು ಮೆಟ್ಟೂರು ಜಲಾಶಯದಿಂದ ಬಿಟ್ಟಿರುವ ನೀರಿನ ಪ್ರಮಾಣ

YEAR	BILIGUNDU (tmcft)	METTUR (tmcft)
1991-92	340.00	334.96
1992-93	358.61	351.69
1993-94	230.39	223.37
1991-95	394.00	373.16
1995-96	195.51	183.09
1996-97	245.75	244.05
1997-98	277.06	268.05
1998-99	260.40	237.27
1999-2000	273.68	268.60
2000-2001	319.26	306.20
2001-2002	189-94	162.74
2002-2003	109.45	94.87
2003-2004	75.87	65.16
2004-2005	185.55	163.96
2005-2006	383.91	399.22

ಸಮುದ್ರಕ್ಕೆ ಬಿಡುವುದಕ್ಕಾಗಿ 'ನ್ಯಾಯಾಧಿಕರಣವು ಮುಡಿಪಿಟ್ಟಿದೆ. ಸಮುದ್ರದ ಪಾಲಾಗುವ ನೀರು ೪ ಟಿಎಂಸಿ ಎಂದು ನಿಗದಿ ಪಡಿಸಿಕೊಂಡು ಎಲ್ಲಾ ರಾಜ್ಯಗಳಿಗೂ ನೀರು ಹಂಚಿಕೆ ನಿಗದಿ ಮಾಡಿದಂತಿದೆ. ಆದರೆ ೪ ಟಿಎಂಸಿಗಿಂತ ಹೆಚ್ಚಿಗೆ ನೀರು ಸಮುದ್ರಕ್ಕೆ ಸೇರಿದರೆ ಅದನ್ನು ಅರ್ಥೈಸಿಕೊಳ್ಳುವುದು ಹೇಗೆ? ನೀರು ಕಮ್ಮಿಯಾದಾಗ ಸಂಕಷ್ಟ ಸೂತ್ರವಿರುವಂತೆ ಇದಕ್ಕೂ ಒಂದು ಸೂತ್ರ ಅಗತ್ಯವಿಲ್ಲವೆ? ತಮಿಳ್ನಾಡು ನೂರಾರು ಟಿಎಂಸಿ ನೀರನ್ನು ಸಮುದ್ರಕ್ಕೆ ಬಿಟ್ಟು ತಾನು ಹೆಚ್ಚಿಗೆ ನೀರನ್ನು ಬಳಸಿಕೊಳ್ಳುತ್ತಿದ್ದೇನೆ ಎಂದು ಸಾಬೀತು ಪಡಿಸಲು ಮರೆಮಾಚುತ್ತಿದೆ ಎಂಬ ಆರೋಪವಿದೆ. ಇದು ಪರೀಕ್ಷೆಗೆ ಒಳಪಡಬೇಕಾಗಿಲ್ಲವೆ? ಅದಕ್ಕಾಗಿ ಕಾವೇರಿ ನದಿಯು ಸಮುದ್ರ ಸೇರುವ ಸ್ಥಳದಲ್ಲಿ ಅಂತರ್‌ರಾಷ್ಟ್ರೀಯ ಮಟ್ಟದ ಅಳತೆಮಾಪನ ಇಟ್ಟು ಅಲ್ಲಿ ಹರಿದು ಹೋಗುವ ನೀರಿನ ಪ್ರಮಾಣವನ್ನು ಖಚಿತಪಡಿಸಿಕೊಳ್ಳಬೇಕಾಗಿದೆ. ೪ ಟಿಎಂಸಿ ಹೊರತುಪಡಿಸಿ ಹೆಚ್ಚಿಗೆ ಹರಿದಿರಬಹುದಾದ ನೀರನ್ನು ಆಧಾರವಾಗಿಟ್ಟುಕೊಂಡು ಪರಿಶೀಲಿಸಿ ಪುನರ್ ವಿಂಗಡಣೆಗೆ ಒಳಪಡಿಸುವ ಸಾಧ್ಯತೆಯನ್ನು ಪರಿಶೀಲಿಸಬಹುದೆ? ಇಂಥವುಗಳನ್ನು ಹುಡಕಬೇಕಾಗಿದೆ.

ಒಟ್ಟಿನಲ್ಲಿ ಎರಡೂ ರಾಜ್ಯಗಳ ರಾಜಕಾರಣಿಗಳು ತಮ್ಮ ರಾಜಕಾರಣಕ್ಕಾಗಿ ಈ ಸಮಸ್ಯೆಯನ್ನು ಬಳಸಿಕೊಳ್ಳುತ್ತ ಬಂದ ಕ್ರೌರ್ಯಕ್ಕೆ ಕಾವೇರಿ ಜಲಾನಯನದ ಜನತೆ ತುತ್ತಾಗುತ್ತಿದ್ದಾರೆ. ಈ ವ್ಯಾಜ್ಯ ಮುಂದುವರೆದಷ್ಟೂ – ಕರ್ನಾಟಕವೂ ಉದ್ಧಾರವಾಗುವುದಿಲ್ಲ, ತಮಿಳ್ನಾಡೂ ಉದ್ಧಾರವಾಗುವುದಿಲ್ಲ. ವ್ಯಾಜ್ಯ ಇರುವಷ್ಟು ದಿನವೂ ಕಾವೇರಿ ಜಲಾನಯನ ಪ್ರದೇಶದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳನ್ನೂ ಮಾಡಲಾಗದೆ ಕೈಚೆಲ್ಲಿ ಕುಳಿತಿರಬೇಕಾಗುತ್ತದೆ. ದಾಯಾದಿಗಳು ಕೋರ್ಟ್ ಹತ್ತಿ ಹಾಳಾದಂತೆ ಕಾವೇರಿ ಜಲಾನಯನ ಪ್ರದೇಶದ ಕರ್ನಾಟಕದ ತಮಿಳ್ನಾಡಿನ ರೈತರ ಸ್ಥಿತಿಯಾಗುತ್ತದೆ. ಇದನ್ನು ಕಾವೇರಿ ಜಲಾನಯನ ಪ್ರದೇಶದ ಜನರಾದರೂ ಚಿಂತಿಸಬೇಕಾಗಿದೆ. ಹಾಗೂ ತೀರ್ಪು ಬಂದಿರುವ ಕಾರಣಕ್ಕಾಗಿ ಎರಡು ರಾಜ್ಯಗಳ ನಡುವೆ ಮಾತುಕತೆ ಮುಚ್ಚಿದ ಬಾಗಿಲು ಎಂದು ಭಾವಿಸದೆ ಸತತವಾಗಿ ಎರಡೂ ರಾಜ್ಯಗಳ ಸರ್ಕಾರ, ನಾಯಕರು, ಪ್ರಜ್ಞಾವಂತರು, ಕಾವೇರಿ ಕುಟುಂಬ ಪ್ರಯತ್ನಿಸಿ, ಕಷ್ಟಸುಖ ಹಂಚಿಕೊಳ್ಳುತ್ತ ಒಂದು ದಾರಿಯನ್ನು ಕಂಡುಕೊಳ್ಳಬೇಕಾಗಿದೆ. ಹೀಗಾಗಲು ಕೇಂದ್ರ ಸರ್ಕಾರವು ತನ್ನ ಪಾತ್ರ ವಹಿಸಬೇಕಾಗಿದೆ.

ಈ ವಿವಾದವನ್ನು ಕೊನೆಕಾಣಿಸುವುದಕ್ಕಾಗಿ ಎರಡೂ ರಾಜ್ಯಗಳೂ ಮಾತುಕತೆ ಮೂಲಕ ಕೆಲವು ಒಪ್ಪಂದಗಳನ್ನು ಮಾಡಿಕೊಂಡು ಈ ಐತೀರ್ಪನ್ನು ಒಪ್ಪಿಕೊಳ್ಳಲು ಸಾಧ್ಯವೆ? ಹೀಗಾಗುವುದಾದರೆ ಆ ಒಪ್ಪಂದಗಳು ಹೇಗಿರಬೇಕು? ಈ ಕೆಲವು ಉದಾಹರಣೆಗಳನ್ನು ಪರಿಶೀಲನೆಗೆ ಇಡುತ್ತೇನೆ.

೧. ರಾಷ್ಟ್ರೀಯ ಜಲ ನೀತಿಗಾಗಿ ಎರಡೂ ರಾಜ್ಯಗಳೂ ಒತ್ತಾಯಿಸುವುದು.

೨. ರಾಷ್ಟ್ರೀಯ ಜಲನೀತಿಯಾಗಿ ಅದರ ನೀತಿ ನಿಯಮಗಳು ರೂಪುಗೊಂಡಾಗ ಆ ನೀತಿ ನಿಯಮಗಳಿಗೆ ಈ ಐತೀರ್ಪನ್ನು ಒಳಪಡಿಸಿ ಆ ನೀತಿನಿಯಮಗಳಿಗೆ ಅನುಸಾರ ಬದಲಿಸಿಕೊಳ್ಳುವುದಕ್ಕೆ ಎರಡೂ ರಾಜ್ಯಗಳೂ ಪರಸ್ಪರ ಸಮ್ಮತಿಸುವುದು.

೩. ಅಲ್ಲಿಯವರೆಗೆ, ಪರಿಸರ ಮತ್ತು ಸಮುದ್ರಕ್ಕೆಂದು ಮೀಸಲಿಟ್ಟಿರುವ ೧೪ ಟಿಎಂಸಿ ನೀರನ್ನು ವರ್ಷಕ್ಕೆ ಒಂದು ಮುಂಗಾರು ಮಳೆಯ ಕರ್ನಾಟಕವು ಬಳಸಿಕೊಳ್ಳಲು ತಮಿಳುನಾಡು ಸಮ್ಮತಿಸಿ ಬಿಳಿಗುಂಡ್ಲುನಲ್ಲಿ ೧೭೮ ಟಿಎಂಸಿ ನೀರುಬಿಡುಗಡೆಗೆ ಒಪ್ಪಿಗೆ ತೋರಿಸುವುದು. ಜೊತೆಗೆ ನ್ಯಾಯಾಧಿಕರಣದ ಮುಂದೆ ತಮಿಳ್ನಾಡು ತಾನೇ ಒಪ್ಪಿಕೊಂಡಿರುವ ತನ್ನ ಅಂತರ್‌ಜಲದಲ್ಲಿ ಅರ್ಧದಷ್ಟನ್ನಾದರೂ ಕರ್ನಾಟಕ ಬಿಡುವ ನೀರಿನಲ್ಲಿ ಕಡಿತಮಾಡಿಕೊಳ್ಳಲು ಸಮ್ಮತಿಸಿದರಂತೂ ಸಮಸ್ಯೆ ಒಂದೇ ಸಲಕ್ಕೆ ಬಗೆಹರಿಯುತ್ತದೆ.

೪. ಕೇರಳ ತನ್ನ ಪಾಲು ೩೦ ಟಿಎಂಸಿಯನ್ನು ಬಳಸಿಕೊಳ್ಳುವವರೆಗೂ ಇದನ್ನು ಎರಡೂ ರಾಜ್ಯಗಳು ಹಂಚಿಕೊಳ್ಳುವುದಕ್ಕೆ ಸಮ್ಮತಿಸುವುದು.

ಇವೇ ಆಗಬೇಕೆಂದಿಲ್ಲ. ವಿವೇಚನೆ ವಿವೇಕ ಬಳಸಿ ಒಂದಿಷ್ಟು ಬದಲಾವಣೆಗಳನ್ನು ಮಾಡಿಕೊಂಡು ಒಪ್ಪಂದಕ್ಕೆ ಬಂದು ಈ ಐತೀರ್ಪನ್ನು ಎರಡೂ ರಾಜ್ಯಗಳೂ ಒಪ್ಪಿಕೊಳ್ಳುವುದಾದರೆ ಎರಡೂ ಉದ್ಧಾರವಾಗುತ್ತವೆ, ಎರಡೂ ಅಭಿವೃದ್ಧಿ ಹೊಂದುತ್ತವೆ.

ಕೊನೆಯದಾಗಿ ರಾಜ್ಯದಲ್ಲಿರುವ ರಾಷ್ಟ್ರೀಯ ಪಕ್ಷಗಳಿಗೂ ಹಾಗು ಕೇಂದ್ರ ಸರ್ಕಾರಕ್ಕೂ ಒಂದು ಮಾತು ಹೇಳುವೆ. ತಮಿಳ್ನಾಡು ಆಂಧ್ರಪ್ರದೇಶದಂತೆ ಕರ್ನಾಟಕದಲ್ಲೂ ಪ್ರಬಲ ರಾಜ್ಯಪಕ್ಷ ಇದ್ದಿದ್ದರೆ ನಮಗೆ ಈ ದುಃಸ್ಥಿತಿ ಬರುತ್ತಿರಲಿಲ್ಲ ಎಂಬ ತಬ್ಬಲಿ ಭಾವನೆ ಕರ್ನಾಟಕದ ಜನತೆಗೆ ಬರಬಾರದು. ನಾನೂ ಒಂದು ರಾಜ್ಯಪಕ್ಷಕ್ಕೆ ಸೇರಿದವನಾಗಿಯೂ ಇದನ್ನು ಬಯಸಲಾರೆ. ರಾಜ್ಯದಲ್ಲಿರುವ ರಾಷ್ಟ್ರೀಯ ಪಕ್ಷಗಳು ಹಾಗೂ ಕೇಂದ್ರದ ಸರ್ಕಾರವೂ ಇದನ್ನು ಬಯಸದಿರಲಿ ಎಂದು ಆಶಿಸುವೆ.

ದೇವನೂರ ಮಹಾದೇವ

ತುಮಕೂರು ಜಿಲ್ಲೆಗಳಿಗೆ ಕುಡಿಯುವ ನೀರಿಗೆ ಕಾವೇರಿ ನದಿಯೇ ಆಸರೆಯಾಗಿದ್ದು, ಈ ತೀರ್ಪಿನ ಹಿನ್ನೆಲೆಯಲ್ಲಿ ಈ ಯೋಜನೆಗಳು ಕುಂಠಿತವಾಗುವ ಸಾಧ್ಯತೆಗಳಿವೆ. ಇದರಿಂದ ಮೈಸೂರು ಮತ್ತು ಬೆಂಗಳೂರು ನಗರಗಳ ನಡುವೆ ನೀರಿಗಾಗಿ ಸಂಘರ್ಷ ನಡೆದರೂ ಹೆಚ್ಚೇನಲ್ಲ.

ಪ್ರಸ್ತುತ ತೀರ್ಪಿನಿಂದ ರಾಜ್ಯಕ್ಕೆ ಮುಖ್ಯವಾಗಿ ಹೊಡೆತ ಬೀಳುವುದು ಪೂರ್ಣಗೊಳ್ಳಬೇಕಾದ ನೀರಾವರಿ ಯೋಜನೆಗಳಲ್ಲಿ. ೧೨೩ ಕೋಟಿ ರೂಗಳ ಕಬಿನಿ ಬಲದಂಡೆ ನಾಲೆ ಯೋಜನೆಯಿಂದ ೧.೨೩ ಹೆಕ್ಟೇರ್ ಭೂಮಿಯನ್ನು ನೀರಾವರಿಗೊಳಪಡಿಸುವುದು ಈಗ ದುಸ್ಸಾಧ್ಯವಾಗುತ್ತದೆ. ಕಾವೇರಿ ನೀರಾವರಿ ನಿಗಮದವರ ಮಾತಿನಲ್ಲೇ ಹೇಳುವುದಾದರೆ ಈಗ ರಾಜ್ಯಕ್ಕೆ ಲಭ್ಯವಾಗಿರುವ ೨೭೦ tmcft ನೀರಿನಲ್ಲಿ ಇನ್ನಾವುದೇ ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದೂ ಅಸಾಧ್ಯವಾಗುತ್ತದೆ. ನ್ಯಾಯಾಧಿಕರಣವು ತನ್ನ ತೀರ್ಪಿನಲ್ಲಿ ಪರಿಗಣಿಸದ ಮತ್ತೊಂದು ಅಂಶವೆಂದರೆ ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಲಭ್ಯವಿರುವ ಅಂತರ್ಜಲ ಮಟ್ಟ, ತಮಿಳುನಾಡು ಸರ್ಕಾರವೇ ನೀಡಿರುವ ಅಂಕಿ ಅಂಶಗಳ ಪ್ರಕಾರ ಅಲ್ಲಿ ೧೫೦ tmcft ಅಂತರ್ಜಲ ಲಭ್ಯವಿದೆ. ಆದರೆ ನ್ಯಾಯಾಧಿಕರಣವು ೪೫ tmcft ಮಾತ್ರ ಪರಿಗಣಿಸಿದೆ. ತಮಿಳುನಾಡಿನಲ್ಲಿ ಎರಡು ಮುಂಗಾರು ಮಳೆ ಬೀಳುವುದರಿಂದ ಮತ್ತು ನಿರಂತರ ನೀರಿನ ಹರಿವು ಇರುವುದರಿಂದ ಅಲ್ಲಿನ ಅಂತರ್ಜಲ ಮಟ್ಟ ಹೆಚ್ಚಾಗಿದೆ ಎಂಬುದು ನಿರ್ವಿವಾದ ಅಂಶ. ಕರ್ನಾಟಕದಲ್ಲಿ ಅಂತರ್ಜಲ ಮಟ್ಟವು ೪೮೫ tmcft ಇದ್ದರೂ, ೭೨ ತಾಲ್ಲೂಕುಗಳಲ್ಲಿ ಕೊರೆಯಲಾಗಿರುವ ನಾಲ್ಕು ಲಕ್ಷ ಕೊಳವೆ ಬಾವಿಗಳಿಂದ ೭.೫ ಲಕ್ಷ ಹೆಕ್ಟೇರ್ ಭೂಮಿ ನೀರಾವರಿಗೊಳಪಟ್ಟಿದ್ದರೂ, ಇದರ ಫಲವಾಗಿ ೩೧ ಲಕ್ಷ ತೆರೆದ ಬಾವಿಗಳು ಬತ್ತಿ ಹೋಗಿವೆ. ಅಂತರ್ಜಲದ ಮಟ್ಟವನ್ನು ಕಾಪಾಡಿಕೊಳ್ಳುವುದರಲ್ಲಿ ರಾಜ್ಯದ ವೈಫಲ್ಯವೂ ಇಲ್ಲಿ ಮುಖ್ಯವಾಗುತ್ತದೆ.

ಇಲ್ಲಿ ಪರಿಗಣಿಸಬೇಕಾದ ಪ್ರಮುಖ ಅಂಶವೆಂದರೆ, ಮುಂಗಾರು ಮಳೆ ವಿಫಲವಾಗದಿದ್ದಲ್ಲಿ, ಇಲ್ಲಿ ಯಾವುದೇ ಸಮಸ್ಯೆ ಉದ್ಭವಿಸುವುದಿಲ್ಲ. ಮಳೆ ಬರದ ವರ್ಷಗಳಲ್ಲೂ, ಕರ್ನಾಟಕವು ಕನಿಷ್ಟ ಪಕ್ಷ ಒಂದು ಪ್ರಮಾಣದ ನೀರನ್ನು ತಮಿಳುನಾಡಿಗೆ ಬಿಡಬೇಕೆಂದು ಅಪೇಕ್ಷಿಸುವುದು ರಾಜ್ಯದ ಹಿತ ದೃಷ್ಟಿಯಿಂದ ಅಪಾಯಕಾರಿಯಾಗಿ ಪರಿಣಮಿಸುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಎರಡೂ ರಾಜ್ಯಗಳು ಹೊಂದಾಣಿಕೆಯಿಂದ, ಮಾತುಕತೆಗಳ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳಬೇಕೆಂದು ಹೇಳುವ ನ್ಯಾಯಾಧಿಕರಣವು, ಕಳೆದ ೧೪ ವರ್ಷಗಳ ನೀರಿನ ಹರಿವನ್ನು ಪರಿಗಣಿಸಿ, ಸರಾಸರಿ ಆಧಾರದ ಮೇಲೆ ತನ್ನ ತೀರ್ಪನ್ನು ನೀಡಿದೆ.

ಮೇಲಿನ ಕೋಷ್ಟಕದಲ್ಲಿ ಸ್ಪಷ್ಟವಾಗುವ ಒಂದು ಅಂಶವೆಂದರೆ, ಕಳೆದ ೧೪ ವರ್ಷಗಳಲ್ಲಿ ಕೇವಲ ನಾಲ್ಕು ವರ್ಷಗಳಲ್ಲಿ ಮಾತ್ರ ಕರ್ನಾಟಕ ೧೯೨ tmcft ಗಿಂತಲೂ ಕಡಿಮೆ ನೀರನ್ನು ಬಿಟ್ಟಿದೆ. ಈ ನಾಲ್ಕು ವರ್ಷಗಳಲ್ಲಿ ಮುಂಗಾರು ಮಳೆ ವಿಫಲವಾಗಿದ್ದು ಕಾರಣವೆಂದು ಹೇಳಬೇಕಿಲ್ಲವಾದರೂ, ಪುನಃ ಇಂತಹ ಪರಿಸ್ಥಿತಿ ಎದುರಾದಾಗ ಯಾವ ಕ್ರಮ ಕೈಗೊಳ್ಳಬೇಕೆಂದು ಸ್ಪಷ್ಟವಾಗಿ ಹೇಳಲಾಗಿಲ್ಲ. ಕೇಂದ್ರ ಸರ್ಕಾರ ಸ್ಥಾಪಿಸಬೇಕಿರುವ ಕಾವೇರಿ ನದಿ ಪ್ರಾಧಿಕಾರವು ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗುವುದು ಅವಶ್ಯವಾಗುತ್ತದೆ. ಆಗಲೂ ಇದೇ ರೀತಿಯ ಸಂಘರ್ಷಮಯ ವಾತಾವರಣ ಸೃಷ್ಟಿಯಾಗುವ ಸಾಧ್ಯತೆಗಳಿವೆ. ಕರ್ನಾಟಕದ ಜಲಾಶಯಗಳಲ್ಲಿ ನೀರನ್ನು ಶೇಖರಸಿಟ್ಟು ತಮಿಳುನಾಡಿಗೆ ಪ್ರತಿ ತಿಂಗಳೂ ಸರಬರಾಜು ಮಾಡಲು ಬಯಸುವುದು ಅತಿರೇಕದ ನಿರ್ಧಾರ ಎನಿಸಿದರೂ ತಪ್ಪೇನಿಲ್ಲ. ಈ ಪ್ರಧಾನವಾದ ಅಂಶಗಳೇ ಕರ್ನಾಟಕದ ರೈತ ಸಮುದಾಯವನ್ನು ಕೆರಳಿಸಿರುವುದು ಸ್ಪಷ್ಟವಾಗಿದೆ.

ನೀರಾವರಿ–ರಾಜಕೀಯ

"ಕಾವೇರಿ ನದಿ ವಿವಾದವು, ದೇಶದ ಇತರ ನದಿಗಳಾದ ನರ್ಮದಾ, ಗೋದಾವರಿ ವಿವಾದಗಳಿಗೆ ಹೋಲಿಸಿದರೆ ವಿಭಿನ್ನವಾಗಿ ಕಂಡುಬರುತ್ತದೆ. ಏಕೆಂದರೆ ಕಾವೇರಿ ಜಲಾನಯನ ಪ್ರದೇಶ ಈಗಾಗಲೇ ಅಧಿಕ ಅಭಿವೃದ್ಧಿ ಹೊಂದಿರುವ ಪ್ರದೇಶವಾಗಿದ್ದು, ಈ ಅಧಿಕ ಅಭಿವೃದ್ಧಿಯಿಂದಲೇ ಬಿಕ್ಕಟ್ಟು ಉಂಟಾಗುತ್ತದೆ. ಹಾಗಾಗಿ ಉತ್ತಮ ತಂತ್ರಜ್ಞಾನ, ಉತ್ತಮ ನಿರ್ವಹಣೆ, ಸಮಾನ ಹಂಚಿಕೆ ಮತ್ತು ವೈಜ್ಞಾನಿಕ ಅಂಶಗಳು ಕಾವೇರಿ ನದಿ ವಿವಾದದಲ್ಲಿ

ಹೆಚ್ಚು ಪ್ರಸ್ತುತವಾಗುತ್ತದೆ ಎಂದು ಖ್ಯಾತ ನೀರಾವರಿ ತಜ್ಞ ದಿ.ಎಸ್. ಗುಹನ್‌ರವರು ಹೇಳುತ್ತಾರೆ.

ಒಂದು ಅರ್ಥದಲ್ಲಿ ಇದು ದಾರ್ಶನಿಕ ನುಡಿಗಳಂತೇ ಹೇಳಬಹುದು. ಇಡೀ ಕಾವೇರಿ ಜಲಾನಯನ ಪ್ರದೇಶದಲ್ಲಿ ಕಂಡು ಬರುವುದು ಶೇ. ೯೦ ರಷ್ಟು ಸಣ್ಣ ಮತ್ತು ಅತಿ ಸಣ್ಣ ರೈತರು. ಇವರ ಸರಾಸರಿ ಹಿಡುವಳಿ ೨ ಎಕರೆಗಳಿಂದ ಗರಿಷ್ಠ ಎಂದರೆ ೧೦ ಎಕರೆಗಳಷ್ಟಿರುತ್ತದೆ. ಈ ಪ್ರದೇಶದ ರೈತರು ಹೆಚ್ಚು ನೀರನ್ನು ಬಳಸುವ ಕಬ್ಬು ಮತ್ತು ಭತ್ತವನ್ನೇ ಹೆಚ್ಚಾಗಿ ಬೆಳೆಯುವುದರಿಂದ, ಮತ್ತು ನೀರಾವರಿಯನ್ನೇ ನಂಬಿರುವುದರಿಂದ, ಎರಡೂ ರಾಜ್ಯದ ರೈತರಿಗೆ ಕಾವೇರಿ ಒಂದು ರೀತಿಯಲ್ಲಿ ಜೀವನದಿಯೇ ಆಗಿದೆ. ಎರಡೂ ರಾಜ್ಯಗಳಲ್ಲಿ ರೈತ ಸಂಘಟನೆಗಳು ಈ ನೀರಾವರಿ ಪ್ರದೇಶದ ರೈತರನ್ನೇ ಅವಲಂಬಿಸಿದ್ದು, ರಾಜಕೀಯವಾಗಿಯೂ ತಮ್ಮದೇ ಆದ ಪ್ರಾಬಲ್ಯವನ್ನು ಹೊಂದಿವೆ. ಆದರೆ ಜಾಗತೀಕರಣ ಪ್ರಕ್ರಿಯೆಯ ಪರಿಣಾಮವಾಗಿ ಈ ರೈತ ಸಮುದಾಯಗಳು ಎದುರಿಸುತ್ತಿರುವ ಹಲವಾರು ಸಮಸ್ಯೆಗಳಿಗೆ ಸರ್ಕಾರಗಳು ಸಕಾರಾತ್ಮಕವಾಗಿ ಸ್ಪಂದಿಸುವುದರಲ್ಲಿ ವಿಫಲವಾಗಿರುವುದು, ಪ್ರಸ್ತುತ ಸನ್ನಿವೇಶದಲ್ಲಿ ಎದ್ದುಕಾಣುತ್ತಿದೆ.

ವಿಶೇಷವಾಗಿ ಕರ್ನಾಟಕದಲ್ಲಿ ಕೃಷಿ ಬಿಕ್ಕಟ್ಟು ಪರಾಕಾಷ್ಠೆ ತಲುಪಿದೆ ಎಂದೇ ಹೇಳಬಹುದು. ಕಳೆದ ಹತ್ತು ವರ್ಷಗಳಲ್ಲಿ ರಾಜ್ಯದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇಂದಿಗೂ ಈ ರೈತರ ಆತ್ಮಹತ್ಯೆ ಪ್ರಕರಣಗಳು ದಿನ ನಿತ್ಯದ ಸುದ್ದಿಗಳಾಗಿವೆ. ಕೃಷಿ ಸಲಕರಣೆಗಳ ಏರುತ್ತಿರುವ ಬೆಲೆ, ಸರ್ಕಾರದಿಂದ ದೊರೆಯದ ಬೆಂಬಲ ಬೆಲೆ, ಹೊಸ ಆರ್ಥಿಕ ನೀತಿಯಿಂದ ಅಲಭ್ಯವಾಗಿರುವ ಸಬ್ಸಿಡಿಗಳು, ಖಾಸಗಿ ಲೇವಾದೇವಿಗಾರರ ಕಾಟ, ರಾಷ್ಟ್ರೀಕೃತ ಬ್ಯಾಂಕುಗಳ ಅಸಡ್ಡೆ, ತಮ್ಮ ಫಸಲಿಗೆ ದೊರೆಯದ ನ್ಯಾಯವಾದ ಬೆಲೆ, ಹೊಸ ಬೀಜ ಕಾಯ್ದೆಯ ಪರಿಣಾಮವಾಗಿ ಇಳುವರಿಗಿಂತಲೂ ಹೆಚ್ಚು ಬಂಡವಾಳ ಹೂಡಿಕೆ, ಹೀಗೆ ಹತ್ತು ಹಲವಾರು ಸಮಸ್ಯೆಗಳಿಂದ ಕರ್ನಾಟಕದ ರೈತ ಸಮುದಾಯ ತತ್ತರಿಸುತ್ತಿದೆ. ಇತ್ತೀಚೆಗೆ ರಾಜ್ಯ ಸರ್ಕಾರ ಘೋಷಿಸಿರುವ ಹೊಸ ಕೃಷಿ ನೀತಿಯೂ ಸಹ ರೈತರ ಪರವಾಗಿಲ್ಲ ಎಂಬ ಕೂಗು ಕೇಳಿಬರುತ್ತಿದೆ. ರೈತರಿಗೆ ಹಲವಾರು ರೀತಿಗಳಲ್ಲಿ ಸಹಾಯಕವಾಗಿದ್ದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಕಾಯ್ದೆಯನ್ನೂ ಸಹ ತಿದ್ದುಪಡಿ ಮಾಡಿ, ಈ ಕ್ಷೇತ್ರದಲ್ಲೂ ಖಾಸಗಿ ಮತ್ತು ವಿದೇಶಿ ಬಂಡವಾಳವನ್ನು ಆಹ್ವಾನಿಸುವ ಸರ್ಕಾರದ ನೀತಿಗಳು ರೈತ ಸಮುದಾಯವನ್ನು ಕಂಗೆಡಿಸಿದೆ.

ಇನ್ನೊಂದೆಡೆ ಕರ್ನಾಟಕ ಸರ್ಕಾರವು ಕೈಗೊಂಡಿರುವ ಮೂವತ್ತಕ್ಕೂ ಹೆಚ್ಚು ನೀರಾವರಿ ಯೋಜನೆಗಳು ಆಮೆ ಗತಿಯಲ್ಲಿ ಸಾಗುತ್ತಿದ್ದು ಇದುವರೆಗೆ ಈ ಯೋಜನೆಗಳಿಗೆ ೧೪.೨೬೭ ಕೋಟಿ ರೂಗಳನ್ನು ವೆಚ್ಚ ಮಾಡಲಾಗಿದೆ. ಆದರೆ ರಾಜ್ಯದಲ್ಲಿ ಒಟ್ಟು ಲಭ್ಯವಿರುವ ೩೪೭೫ tmcft ನೀರಿನಲ್ಲಿ ಕೇವಲ ೧೯೬೫ tmcft ನೀರನ್ನು ಮಾತ್ರ ಕೃಷಿಗೆ ಬಳಸಿಕೊಳ್ಳಲು ಸಾಧ್ಯವಾಗಿದೆ. ೧೯೯೮ರಲ್ಲಿ ಸ್ಥಾಪಿತವಾದ ಕರ್ನಾಟಕ ನೀರಾವರಿ ನಿಗಮವನ್ನು ೧೩೧೭೫ ಕೋಟಿ ರೂಗಳ ಬಂಡವಾಳದೊಡನೆ ಪ್ರಾರಂಭಿಸಲಾದರೂ ಇದುವರೆಗೆ ಆಯೋಜಿಸಿರುವ ೩೫ ಯೋಜನೆಗಳ ಪೈಕಿ ಕೆಲವನ್ನು ಮಾತ್ರ ಕಾರ್ಯರೂಪಕ್ಕೆ ತರಲಾಗಿದೆ. ಈಗ ಕಾರ್ಯ ಪ್ರವೃತ್ತವಾಗಿರುವ ಯೋಜನೆಗಳಿಗೆ ೪೫೮೭ ಕೋಟಿ ರೂಗಳು ಇನ್ನೂ ಬಿಡುಗಡೆಯಾಗಬೇಕಿದ್ದರೆ, ೨೯೩೧ ಕೋಟಿ ರೂಗಳ ವೆಚ್ಚದ ಯೋಜನೆಗಳು ಇನ್ನೂ ಪ್ರಾರಂಭವೇ ಆಗಿಲ್ಲ. ಕಾವೇರಿ ನೀರಾವರಿ ನಿಗಮವೂ ಸಹ ಇನ್ನೂ ಮಂದ ಗತಿಯಲ್ಲಿ ಸಾಗಿದ್ದು ಕಳೆದ ನಾಲ್ಕು ವರ್ಷಗಳಲ್ಲಿ ಶೇ. ೫೦ ರಷ್ಟು ಕೆಲಸವೂ ಪೂರ್ಣಗೊಂಡಿಲ್ಲ.

ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಪಕ್ಷ ರಾಜಕಾರಣ, ರಾಜಕೀಯ ವೈಷಮ್ಯ ಈ ಎಲ್ಲವೂ ನೀರಾವರಿ ಯೋಜನೆಗಳಿಗೆ ಕಂಟಕಪ್ರಾಯವಾಗಿರುವುದು ಸ್ಪಷ್ಟವಾಗುತ್ತದೆ. ರಾಜ್ಯದಲ್ಲಿನ ೩,೦೬೮,೪೫೦ ಎಕರೆ ಕೃಷಿ ಪ್ರದೇಶದ ಪೈಕಿ ಕೇವಲ ೨೪ ಲಕ್ಷ ಎಕರೆಗೆ ಮಾತ್ರ ನೀರಾವರಿ ಒದಗಿಸುವಲ್ಲಿ ರಾಜ್ಯ ಸರ್ಕಾರಗಳು ಯಶಸ್ವಿಯಾಗಿರುವುದು ನಮ್ಮ ಆಳುವ ಪಕ್ಷಗಳ ನಿರಾಸಕ್ತಿಯನ್ನು ತೋರಿಸುತ್ತದೆ. ಇನ್ನೊಂದೆಡೆ ತಮಿಳುನಾಡಿನಲ್ಲಿ ೪೫ ಲಕ್ಷಕ್ಕೂ ಹೆಚ್ಚು ಭೂಮಿಯನ್ನು ನೀರಾವರಿಗೆ ಒಳಪಡಿಸಲಾಗಿದೆ. ರಾಜಕೀಯ ಪಕ್ಷಗಳ ಈ ನಿರಾಸಕ್ತಿಯ ಜೊತೆಗೇ ಅರಣ್ಯ ಪ್ರದೇಶದ ರಕ್ಷಣೆಯಲ್ಲಿ ಸರ್ಕಾರದ ಮತ್ತು ಅರಣ್ಯ ಇಲಾಖೆಯ ವೈಫಲ್ಯವೂ ರೈತರ ಸಂಕಷ್ಟಕ್ಕೆ ಕಾರಣವಾಗಿದೆ. ಪಶ್ಚಿಮ ಘಟ್ಟಗಳಲ್ಲಿ ಕುದುರೇಮುಖ ಅದಿರು ಕಾರ್ಖಾನೆಯಿಂದ ನಾಶವಾದ ಅರಣ್ಯ ಸಂಪತ್ತು ಇಂದು ಮಳೆಯ ಪ್ರಮಾಣ ಕಡಿಮೆಯಾಗಲು ಕಾರಣವಾಗಿದೆ. ಕೊಡಗಿನಲ್ಲಿ ಬಾನೆ ಕಾಡು ಎಂದು ಕರೆಯಲ್ಪಡುವ ಅರಣ್ಯಗಳಲ್ಲಿ, ೨.೭೫ ಲಕ್ಷ ಎಕರೆ ಪ್ರದೇಶದಲ್ಲಿ ಕಾಫಿ ಮತ್ತು ರಬ್ಬರ್ ಬೆಳೆಯಲು ಅವಕಾಶ ಮಾಡಿಕೊಟ್ಟ ಸಂದರ್ಭದಲ್ಲಿ, ಈ ಅರಣ್ಯದಲ್ಲಿ ತಾನೇತಾನಾಗಿ ಬೆಳೆಯುವ ಮರಗಳನ್ನು ಕಡಿಯಬಾರದೆಂದು ಸರ್ವೋಚ್ಚ ನ್ಯಾಯಾಲಯ ಆದೇಶಿಸಿತ್ತು. ಆದರೆ ಪ್ಲಾಂಟೇಷನ್ ಮಾಲಿಕರ ದುರಾಸೆಗೆ ಬಲಿಯಾಗಿ, ಕಳೆದ ೫೦ ವರ್ಷಗಳಲ್ಲಿ ೫೦ ಸಾವಿರ ಎಕರೆಗೂ ಹೆಚ್ಚು ಅರಣ್ಯ ಪ್ರದೇಶ ಇಲ್ಲಿ ನಾಶವಾಗಿದೆ. ಇದರ ಪರಿಣಾಮವಾಗಿ ಕಾವೇರಿ ಉಗಮಿಸುವ ಕೊಡಗಿನಲ್ಲಿ ಮಳೆಯ ಪ್ರಮಾಣ ತೀವ್ರ ಕುಸಿತ ಕಂಡಿದ್ದು, ಕಾವೇರಿ ಜಲಾನಯನ ಪ್ರದೇಶಕ್ಕೆ ಹರಿಯುತ್ತಿದ್ದ ನೀರು ೧೯೬೦ರ ದಶಕದಲ್ಲಿ ೨೧೧ tmcft ಇದ್ದುದು ಈಗ ೧೪೯ tmcft ಆಗಿದೆ.

ಒಂದು ಕಾಲದಲ್ಲಿ ಕೆರೆಗಳಿಗೇ ಪ್ರಸಿದ್ಧಿಯಾಗಿದ್ದ ಕರ್ನಾಟಕ ಇಂದು ಕೆರೆರಹಿತ ರಾಜ್ಯವಾಗುವ ಪರಿಸ್ಥಿತಿ ಎದುರಿಸುತ್ತಿದೆ. ರಾಜ್ಯದಲ್ಲಿ ನೂರಾರು ಕೆರೆಗಳು ಹೂಳು ತೆಗೆಯದೆ ಬತ್ತಿ ಹೋಗಿದ್ದರೆ, ಮಂಡ್ಯ, ಹಾಸನ, ಕೋಲಾರ, ಕುಣಿಗಲ್, ಮುಂತಾದೆಡೆಗಳಲ್ಲಿ ಕೆರೆಗಳು ಹೌಸಿಂಗ್ ಬೋರ್ಡ್ ಕಾಲೋನಿಗಳನ್ನು ನಿರ್ಮಿಸಲಾಗಿದೆ/ನಿರ್ಮಿಸಲಾಗುತ್ತಿದೆ. ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದಾಗಲೇ ಮಂಡ್ಯದ ಕೆರೆ ಹೌಸಿಂಗ್ ಬೋರ್ಡ್ ಪಾಲಾಗಿದ್ದು ವಿಪರ್ಯಾಸವಲ್ಲವೇ. ಕೆರೆಗಳಲ್ಲಿನ ಹೂಳು ತೆಗೆದು, ನೀರನ್ನು ಸಂಗ್ರಹಿಸುವುದರ ಮೂಲಕ ಲಕ್ಷಾಂತರ ಸಣ್ಣ ರೈತರಿಗೆ ನೀರಾವರಿ ಸೌಲಭ್ಯ ಒದಗಿಸಬಹುದಾದ ಸಾಧ್ಯತೆಗಳನ್ನು ನಮ್ಮ ಸರ್ಕಾರಗಳು ಪರಿಗಣಿಸಿಯೇ ಇಲ್ಲ. ನೀರು ನಿಲ್ಲದ ಸಾವಿರಾರು ಕೆರೆಗಳಲ್ಲಿ ಇಟ್ಟಿಗೆ ತಯಾರಿಸುವವರು ಲಾಭ ಗಳಿಸುತ್ತಿದ್ದರೆ, ಇನ್ನು ಹಲವೆಡೆ ಅನಧಿಕೃತವಾಗಿ ಅನೇಕ ರೈತರು ಬೆಳೆ ಬೆಳೆಯುತ್ತಿದ್ದಾರೆ. ಇವೆಲ್ಲವನ್ನೂ ಸರ್ಕಾರಗಳು ಗಮನಿಸಿಯೂ ತೆಪ್ಪನಿರುವುದು ಸರ್ಕಾರದ ರೈತಪರ ಕಾಳಜಿಯನ್ನು ತೋರುತ್ತದೆ. ಕೆರೆಗಳ ಮಾತು ಒತ್ತಟ್ಟಿಗಿರಲಿ, ರಾಜ್ಯದ ಜಲಾಶಯಗಳಲ್ಲಿ ಹೂಳು ಯಾವ ಮಟ್ಟದಲ್ಲಿದೆ. ಎಂದು ತಿಳಿಯುವ ಪ್ರಜ್ಞೆಯನ್ನೂ ರಾಜ್ಯ ಸರ್ಕಾರಗಳು ಕಳೆದು ಕೊಂಡಿರುವುದು ವಿಪರ್ಯಾಸಕರ. ತುಂಗಭದ್ರಾ ಜಲಾಶಯದ ಮಟ್ಟ ೧೭೩ ಅಡಿಗಳಷ್ಟಿದ್ದರೂ, ಕಳೆದ ಐದು ವರ್ಷಗಳಲ್ಲಿ ಜಲಾಶಯ ಪೂರ್ಣ ಪ್ರಮಾಣದಲ್ಲಿ ತುಂಬಿಲ್ಲ. ಇದಕ್ಕೆ ಒಂದು ಕಾರಣ ಮಳೆಯ ವೈಫಲ್ಯವಾದರೆ, ಇನ್ನೊಂದು ಮುಖ್ಯ ಕಾರಣ ಜಲಾಶಯದಲ್ಲಿ ತುಂಬಿರುವ ೩೦ ಅಡಿಗೂ ಹೆಚ್ಚಿನ ಹೂಳು. ಸರ್ಕಾರದ ಈ ನಿಷ್ಕ್ರಿಯತೆ, ರೈತ ಸಮುದಾಯ ಜಾಗತೀಕರಣ ಪ್ರಕ್ರಿಯೆಯ ಫಲವಾಗಿ ಎದುರಿಸುತ್ತಿರುವ ತೀವ್ರ ಬಿಕ್ಕಟ್ಟು, ಮತ್ತು ಎದ್ದು ಕಾಣುತ್ತಿರುವ ಕರಾಳ ಭವಿಷ್ಯ ಇವುಗಳ ನಡುವೆಯೇ ಕರ್ನಾಟಕದ ರೈತರ ಹಿತಾಸಕ್ತಿಗಳಿಗೆ ವಿರುದ್ಧವಾದ, ಕಾವೇರಿ ನ್ಯಾಯಾಧಿಕರಣದ ತೀರ್ಪು ಹೊರಬಿದ್ದಿರುವುದು, ರೈತರ ಆಕ್ರೋಶಕ್ಕೆ ಕಾರಣ ಇರಬಹುದು.

ಕಾವೇರಿ

ಅಶ್ರು ತರ್ಪಣವೆನಲೇ
ರಕ್ತ ತರ್ಪಣವೆನಲೇ
ಎನಿತು ಬಾವಿಸಲೀ ಆಕ್ರಂದನವ
ನಿನ್ನ ಸ್ವಚ್ಛಂದ ಮಡಿಲಲ್ಲಿ!

ಹೆತ್ತೂರ ತೊರೆದು
ಎತ್ತೆತ್ತಲೋ ಹರಿದು
ಸುಪ್ತ ಚೇತನಗಳ
ಧಿಗ್ಗನೆಬ್ಬಿಸುವ ನಿನ್ನ
ತೊರೆಗಳಲೇಕೆ ಮೊರೆವ
ಸದ್ದಿಲ್ಲ; ಬೆರಗಾದೆಯೋ
ಕಂದಮ್ಮಗಳಬ್ಬರಕೆ!

ಮಾತೆ ಎಂಬರು ನಿನ್ನ
ಜನ್ಮದಾತೆ ಎಂಬುರು ನಿನ್ನ;
ಬಾಗಿನವಿದೋ ನಿನಗೆ
ಮೈದುಂಬಿ ಹರಿವಾಗ;
ಕಂಕಣವಿದೋ ಕಾಲ್ಗಳಿಗೆ
ಅಸವಳಿದು ನಿಂತಾಗ!

ಸಾಗಲೀ ಯುಗಾಂತರದ
ಪಯಣ ಅನಂತದೆಡೆ
ದಿವ್ಯ ದಿಗಂತದೆಡೆ;
ಎಲ್ಲೆಗಳ ಮೀರಿ
ಭಾವಗಳ ದಾಟಿ

ದಣಿವಾರಿಪ ಭುವಿಸುತಳು
ನೀ ಸೆರೆಯಾಗಲೇಕೆ
ಭಾವೋನ್ಮಾದದ ಸೆಲೆಗೆ!

ನಾ. ದಿವಾಕರ

ಪ್ರತಿಭಟನೆಯ ಮಹಾಪೂರ

೧೯೯೧ರ ಮತ್ತು ೨೦೦೭ ಕಾವೇರಿ ಹೋರಾಟಗಳಿಗೆ ಹೋಲಿಸಿದಲ್ಲಿ, ಈ ಬಾರಿ ಪ್ರತಿಭಟನೆಗಳು ಶಾಂತಿಯುತವಾಗಿಯೇ ಇದ್ದವೆಂದು ಹೇಳಬಹುದು. ಅನೇಕ ತಮಿಳು ಸಂಘಟನೆಗಳೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದು ಒಂದು ರೀತಿಯಲ್ಲಿ ಸ್ವಾಗತಾರ್ಹವೆ. ಫೆಬ್ರವರಿ ೧೨ ರಂದು ನಡೆದ ರಾಜ್ಯ ಬಂದ್ ಸಮಯದಲ್ಲೂ, ಮೈಸೂರು ಮತ್ತು ಬೆಂಗಳೂರಿನ ಕೆಲವು ಪ್ರಕರಣಗಳನ್ನು ಹೊರತು ಪಡಿಸಿದರೆ ಅಷ್ಟಾಗಿ ಗಲಭೆಗಳು ಕಂಡು ಬರಲಿಲ್ಲ. ಬಹುಶಃ ಈ ಬಾರಿಯ ಕಾವೇರಿ ಹೋರಾಟದಲ್ಲಿ ಭಾಗವಹಿಸದ ಜನ ಸಮುದಾಯವೇ ಇಲ್ಲವೆಂದು ಹೇಳಿದರೂ ಉತ್ಪ್ರೇಕ್ಷೆಯಾಗಲಾರದು. ಕಡೆಯ ಪಕ್ಷ ಶಾಲಾ ಮಕ್ಕಳನ್ನೂ ಹೋರಾಟದ ಅಂಗಳಕ್ಕೆ ಕರೆತಂದಿದ್ದು ಐತಿಹಾಸಿಕ ಘಟನೆಯೇ ಸರಿ.

ಆದರೆ ಇಲ್ಲಿ ಗಮನಿಸಬೇಕಾದ ಸೂಕ್ಷ್ಮವಾದ ಅಂಶವೊಂದಿದೆ. ಪ್ರಾರಂಭದಲ್ಲಿ ರಾಜ್ಯದಾದ್ಯಂತ ಕೇಳಿ ಬಂದ ಪ್ರತಿಭಟನೆಯ ಕೂಗು ದಿನ ಕಳೆದಂತೆ ಕಾವೇರಿ ಕಣಿವೆಗೆ ಮಾತ್ರ ಸೀಮಿತಗೊಂಡಿತು. ಫೆಬ್ರವರಿ ೧೨ರ ಬಂದ್ ಆಚರಿಸಿದಾಗಲೂ, ಉತ್ತರ ಕರ್ನಾಟಕದ ಜನತೆ, ಮಂಗಳೂರು, ಉಡುಪಿ ಮತ್ತಿತರ ನಗರಗಳಲ್ಲಿ ಜನ ಬಂದ್ ಕರೆಗೆ ಸ್ಪಂದಿಸಲಿಲ್ಲ. ಇದಕ್ಕೆ ಕಾರಣ ಹುಡುಕುವುದು ಕಷ್ಟಕರವೇನಲ್ಲ. ಕಾವೇರಿ ನದಿ ನೀರಿನ ಉಪಯೋಗ ಪಡೆಯುವ ಮೈಸೂರು ಪ್ರಾಂತ್ಯದ ಜನರಿಗೆ ಕಾವೇರಿ ಜೀವನದಿಯೇ. ಆದರೆ ಇತರ ಪ್ರಾಂತಗಳವರಿಗೆ ಕಾವೇರಿ ಭಾವನೆಯ ಕಡಲಿನಂತಷ್ಟೇ. ಕಾವೇರಿ–ಕನ್ನಡ–ಕನ್ನಡಿಗ ಎಂಬ ಸಾಂಸ್ಕೃತಿಕ ಭಾವನಾತ್ಮಕ ಸಂಬಂಧಗಳು ಇಡೀ ರಾಜ್ಯವನ್ನು ಬಡಿದೆಬ್ಬಿಸುತ್ತವೆ. ಆದರೆ ಅವು ತಾತ್ಕಾಲಿಕವಾಗುತ್ತವೆ ಎಂಬ ಅಂಶ ಪ್ರಸ್ತುತ ಕಾವೇರಿ ಪ್ರತಿಭಟನೆಯಲ್ಲಿ ವ್ಯಕ್ತವಾಗಿದೆ. ಹಾಗಾಗಿಯೇ ಕಾವೇರಿ ಹೋರಾಟಗಳು ಇಡೀ ಕರ್ನಾಟಕದ ಜನಸಮುದಾಯದ ಹೋರಾಟವಾಗುವುದಿಲ್ಲ.

ಆದಾಗ್ಯೂ ಕರ್ನಾಟಕದ ಜನತೆ ಕಾವೇರಿ ತೀರ್ಪಿನ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಲು ಸಾಕಷ್ಟು ಕಾರಣಗಳೂ ಇವೆ. ಹೆಚ್ಚುತ್ತಿರುವ ನಿರುದ್ಯೋಗ, ಗ್ರಾಮಗಳಲ್ಲಿ ಉದ್ಯೋಗ ದೊರೆಯದೆ ಜೀವನೋಪಾಯಕ್ಕಾಗಿ ಪಟ್ಟಣ ನಗರಗಳಿಗೆ ವಲಸೆ ಬರುತ್ತಿರುವ ಮಹಾಪೂರ, ರಾಜ್ಯದ ನಗರಗಳಲ್ಲಿ ಹೆಚ್ಚುತ್ತಿರುವ ಹೊರ ರಾಜ್ಯಗಳ ಜನತೆ, ಕೃಷಿ ಭೂಮಿಯನ್ನು ಆಕ್ರಮಿಸುತ್ತಿರುವ ನೆರೆ ರಾಜ್ಯದ ಭೂಮಾಲೀಕರು, ಇವೆಲ್ಲವೂ ಕರ್ನಾಟಕದ ಯುವ ಜನತೆಯಲ್ಲಿ ಒಂದು ರೀತಿಯ ಅಭದ್ರತೆಯನ್ನುಂಟು ಮಾಡುತ್ತಿದೆ. ಈ ಅಭದ್ರತೆಯನ್ನು ಹೋಗಾಲಾಡಿಸುವ ಯಾವುದೇ ಕ್ರಮ ಕೈಗೊಳ್ಳುವಲ್ಲಿ ರಾಜ್ಯ ಸರ್ಕಾರಗಳು ವಿಫಲವಾಗುತ್ತಿವೆ. ದಾವಣಗೆರೆಯಿಂದ ಬಳ್ಳಾರಿಯವರೆಗೆ ಹರಡಿರುವ, ತುಂಗಾ ಜಲಾಶಯದಿಂದ ನೀರಾವರಿಗೊಳಗಾಗಿರುವ ಬಹುತೇಕ ಕೃಷಿಭೂಮಿಯನ್ನು ಇಂದು ಆಂಧ್ರಪ್ರದೇಶದ ಭೂಮಾಲೀಕರು ಪಡೆದಿದ್ದಾರೆ. ಹಿಂದೆ ಇಲ್ಲಿ ಜಮೀನ್ದಾರರಾಗಿದ್ದವರು ಇಂದು ಈ ಭೂಮಾಲೀಕರ ಬಳಿ ಕೂಲಿಗಾಗಿ ದುಡಿಯುತ್ತಿದ್ದಾರೆ. ಇಲ್ಲವೇ ವಲಸೆ ಹೋಗುತ್ತಿದ್ದಾರೆ. ಮೈಸೂರು, ಮಂಡ್ಯ, ಬೆಂಗಳೂರು ಮತ್ತಿತರ ನಗರ ಪ್ರದೇಶಗಳ ಸುತ್ತ ಕೃಷಿ ಭೂಮಿಯ ರಿಯಲ್ ಎಸ್ಟೇಟ್ ಮಾಫಿಯಾಗಳ ಪಾಲಾಗುತ್ತಿದೆ. KIADB ಕೈಗಾರಿಕೆಗಳಿಗಾಗಿ ಕೃಷಿ ಭೂಮಿಯನ್ನು ಅತಿ ಅಗ್ಗದ ಬೆಲೆಯಲ್ಲಿ ಆಕ್ರಮಿಸಿಕೊಳ್ಳುತ್ತಿದ್ದರೆ, ರಿಯಲ್ ಎಸ್ಟೇಟ್ ಮಾಲೀಕರು ತಮ್ಮ ಬಡಾವಣೆಗಳನ್ನು ನಿರ್ಮಿಸಲು ಸಾವಿರಾರು ಎಕರೆ ಕೃಷಿ ಭೂಮಿಯನ್ನು ಕಬಳಿಸುತ್ತಿದ್ದಾರೆ. ಇನ್ನೊಂದೆಡೆ ಸರ್ಕಾರವೂ ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ನವ ವಸಾಹತು ಶಾಹಿಯನ್ನು ಭಾರತಕ್ಕೆ ಆಮದು ಮಾಡಿಕೊಳ್ಳುತ್ತಿದೆ. ಇಲ್ಲಿಯೂ ರೈತರು ತಮ್ಮ ಭೂಮಿಯನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಎಲ್ಲಾ ಕಾರಣಗಳಿಂದ ತಮ್ಮ ಅಸ್ಮಿತೆಗಾಗಿ ಹೋರಾಡುವ ಪರಿಸ್ಥಿತಿಯಲ್ಲಿ ಕನ್ನಡಿಗರು ಇದ್ದಾರೆಂದರೆ ತಪ್ಪಾಗಲಾರದು. ಹಾಗಾಗಿಯೇ ಕಾವೇರಿಯಂತಹ ಭಾವುಕ ವಿಷಯ ಪ್ರಸ್ತಾಪವಾದಾಗ ಇಡೀ ರಾಜ್ಯ ಕ್ಷಣ ಮಾತ್ರದಲ್ಲಿ ಸಿಡಿದೇಳುತ್ತದೆ.

ಆದರೆ ಯಾವುದೇ ಒಂದು ಜನಪರ ಚಳುವಳಿಗೆ ಒಂದು ನಿರ್ದಿಷ್ಟವಾದ, ಮೂಲಭೂತವಾದ ಧ್ಯೇಯವಿರದಿದ್ದರೆ, ಅದರಲ್ಲಿ ಅರಾಜಕತೆ ಸುಳಿಯುವುದು ಸುಲಭವಾಗುತ್ತದೆ. ಇದಕ್ಕೆ ಪ್ರಸ್ತುತ ಕಾವೇರಿ ಚಳುವಳಿಯೇ ನಿದರ್ಶನ. ಇಲ್ಲಿ ಚಳುವಳಿ ನಿರಂತರ ಬದ್ಧತೆಯನ್ನಾಗಲೀ, ಕಾಳಜಿಯನ್ನಾಗಲಿ ಪ್ರಶ್ನಿಸುತ್ತಿಲ್ಲ. ಆದರೆ ತಾವು ಏತಕ್ಕಗಿ ಚಳವಳಿ ನಡೆಸುತ್ತಿದ್ದೇವೆ, ಯಾರ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದೇವೆ ಎಂಬ ಪರಿವೆ, ಚಳವಳಿಗಾರರಿಗೆ ಅಗತ್ಯವಾಗಿ ಇರಬೇಕು. ಪ್ರಸ್ತುತ ಹೋರಾಟದಲ್ಲಿ ಕಂಡುಬಂದ ವಿಪರ್ಯಾಸವೆಂದರೆ, ಈ ಚಳುವಳಿಗೆ ನಾಯಕತ್ವವೇ ಇಲ್ಲ. ಚಳುವಳಿಗೆ ಒಂದು ನಿರ್ದಿಷ್ಟವಾದ ಮಾರ್ಗವನ್ನು ತೋರಿಸುವ, ಒಂದು ಮೂಲ ಧ್ಯೇಯದೆಡೆಗೆ ಕೊಂಡೊಯ್ಯುವ ನಾಯಕತ್ವ, ಸಾಂಸ್ಥಿಕ ರೂಪದಲ್ಲಾಗಲೀ ಸಾಂಘಿಕ ರೂಪದಲ್ಲಾಗಲೀ ಇರಬೇಕಾಗುತ್ತದೆ. ಇವೆರಡೂ ಇಲ್ಲಿ ಕಾಣದಿದ್ದುದು ಅನೇಕ ವಿವಾದಾಸ್ಪದ ನಿಲುವುಗಳಿಗೆ, ಅಕ್ಷೇಪಣೀಯ, ಅರಾಜಕತಾ ಬೆಳವಣಿಗೆಗಳಿಗೆ ಕಾರಣವಾಗಿದೆ.

ಈ ನೇತ್ಯಾತ್ಮಕ ಬೆಳವಣಿಗೆಗೆ ನಿದರ್ಶನವೆಂದರೆ, ಇಡೀ ಚಳವಳಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರದ ನಿರಾಕರಣೆ. ಯಾವುದೇ ಜನಪರ ಚಳವಳಿಯಲ್ಲಿ ಪರ ವಿರೋಧ ನಿಲುವುಗಳು ಸ್ವಾಭಾವಿಕವಾದ್ದರಿಂದ, ಅಭಿವ್ಯಕ್ತಿ ಸ್ವಾತಂತ್ರಕ್ಕೆ ತಕ್ಕ ಮನ್ನಣೆ ನೀಡುವುದು ಪ್ರಜಾತಾಂತ್ರಿಕ ಮೌಲ್ಯಗಳ ದೃಷ್ಟಿಯಿಂದ ಅಗತ್ಯವಾಗುತ್ತದೆ. ಭಾರತದ ಸ್ವಾತಂತ್ರ ಸಂಗ್ರಾಮದಲ್ಲಾಗಲೀ, ಕರ್ನಾಟಕ ಏಕೀಕರಣ ಸಂದರ್ಭದಲ್ಲಾಗಲೀ, ಗೋಕಾಕ್ ಚಳವಳಿಯಲ್ಲಾಗಲೀ ಈ ಅಂಶವನ್ನು ಸ್ಪಷ್ಟವಾಗಿ ಗುರುತಿಸಬಹುದು. ಆದರೆ ಪ್ರಸ್ತುತ ಕಾವೇರಿ ಕಣಿವೆಯಲ್ಲಿ ನಡೆಯುತ್ತಿರುವ ಚಳವಳಿ ಈ ನಿಟ್ಟಿನಲ್ಲಿ ನೇತ್ಯಾತ್ಮಕ ಸ್ವರೂಪ ಪಡೆಯುತ್ತಿರುವುದು ಸ್ಪಷ್ಟವಾಗುತ್ತಿದೆ. ಇದಕ್ಕೆ ಪ್ರಪ್ರಥಮವಾಗಿ ಬಲಿಯಾದವರು ಜ್ಞಾನಪೀಠ ಪ್ರಶಸ್ತಿ ವಿಜೇತ ಗಿರೀಶ್ ಕಾರ್ನಾಡ್‌ರವರು. ಇಡೀ ಕಾವೇರಿ ಹೋರಾಟದಲ್ಲಿ ಕಾರ್ನಾಡರನ್ನು ಭೌತಿಕವಾಗಿ, ಮಾನಸಿಕವಾಗಿ ಗಡಿಪಾರು ಮಾಡಲಾಗಿತ್ತೆಂದೇ ಹೇಳಬಹುದು. ಅವರ ಪ್ರತಿಕೃತಿ ದಹನಗಳು ಸಾಮಾನ್ಯವಾಗಿದ್ದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯವರೂ ಅವರ ಭಾವಚಿತ್ರವನ್ನು ತೆಗೆದುಹಾಕುವ ಮಟ್ಟಿಗೆ ಅವರ ವಿರುದ್ಧ ಆಕ್ರಮಣ ನಡೆಸಲಾಯಿತು. ಇನ್ನೊಂದೆಡೆ ಕೆಲವು ಬುದ್ಧಿ ಇಲ್ಲದ ಜೀವಿಗಳು, ಅಂದರೆ ಬುದ್ಧಿಜೀವಿಗಳನ್ನು ವಿರೋಧಿಸುವವರು, ಕಾರ್ನಾಡರ ಜ್ಞಾನಪೀಠ ಪ್ರಶಸ್ತಿಯ ಅರ್ಹ

ರಾಷ್ಟ್ರೀಯ ಜಲನೀತಿಯೊಂದೇ ಪರಿಹಾರ

ಓ ಬನ್ನಿ ಉಳಿಸೋಣ ಕಾವೇರಿ ನೀರು
ತಟುವಿದರೆ ಗತಿ ನಮಗೆ ನಮ್ಮ ಕಣ್ಣೀರು

ಒಂದು ರಾಷ್ಟ್ರ ಸ್ವತಂತ್ರಗೊಂಡ ಸಂದರ್ಭದಲ್ಲಿ ಅದರ ನಾಯಕ ಸಮರ್ಥನಾಗಿರದಿದ್ದರೆ ಆ ರಾಷ್ಟ್ರ ಎಂಥೆಂತ ದುರಂತಗಳಿಗೆ ಒಳಗಾಗಬಹುದು ಎಂಬುದಕ್ಕೆ ಭಾರತವೇ ಸಾಕ್ಷಿಯಾಗಿದೆ. 'ಚಿಕ್ಕದು ಚೊಕ್ಕವಾದುದು' (Small is beautiful) ಎಂಬ ತತ್ವಕ್ಕೆ ತಿಲಾಂಜಲಿ ಇತ್ತು, ಭೂಸುಧಾರಣೆಯನ್ನು ಬದಿಗೊತ್ತಿ, ಗುಡಿಕೈಗಾರಿಕೆಗಳ ಕೈಕತ್ತರಿಸಿದ್ದರ ಪರಿಣಾಮವಾಗಿ ಭೂಮಾಫಿಯಾ ಭೂತವಾಗಿ ಅಮರಿಕೊಳ್ಳುತ್ತಿದ್ದರೆ ಬೃಹತ್ ಕೈಗಾರಿಕೆಗಳು ಗುಡಿ ಕೈಗಾರಿಕೆಗಳನ್ನು ನಾಶ ಮಾಡಿ ಬಂಡವಾಳ ಶಾಹಿಗಳ ದಂಡು ಹಿಂಡು ಹಿಂಡಾಗಿ ಬೆಳೆಯುತ್ತಿವೆ. ರೈತ ಬೀದಿಪಾಲಾಗುತ್ತಿದ್ದಾನೆ.

ಇಂಥ ಅನೇಕ ಸಮಸ್ಯೆಗಳಲ್ಲಿ ಬಹುಮುಖ್ಯವಾಗಿ ಭಾರತವನ್ನು ಕಾಡುತ್ತಿರುವ ಸಮಸ್ಯೆ ಎಂದರೆ ನೀರು. ನೀರು ರಾಷ್ಟ್ರೀಯ ಸಂಪತ್ತು. ಗಂಗೆಯಿಂದ ಕಾವೇರಿಯವರೆಗೆ ನೂರಾರು ನದಿಗಳು ದೇಶದಲ್ಲಿ ಹರಿದರೂ ನೀರಿನ ಬವಣೆ ಮಾತ್ರ ತಪ್ಪಿಲ್ಲ.

ಬಾಕ್ರಾನಂಗಲ್ ಹಿರಾಕುಡ್ ಮುಂತಾದ ಬೃಹತ್ ಜಲಾಶಯಗಳನ್ನು ಕಟ್ಟುವಲ್ಲಿ ತೋರಿದ ಆಸಕ್ತಿಯನ್ನು ರಾಷ್ಟ್ರೀಯ ಜಲನೀತಿಯನ್ನು ರೂಪಿಸುವಲ್ಲಿ ತೋರಲಿಲ್ಲ. ಅದರ ಪರಿಣಾಮವಾಗಿ ರಾಜ್ಯ ರಾಜ್ಯಗಳ ನಡುವೆ ಪೈಪೋಟಿ ಸಂಘರ್ಷಗಳು ಉಂಟಾಗಿ ಅದರ ಪರಿಣಾಮವಾಗಿ ಮಿತ್ರರಾಗಬೇಕಿದ್ದ ಭಾರತೀಯರು ಪರಸ್ಪರ ವೈರಿಗಳಾಗಿ ಬಿಡುವ ದುರಂತಕ್ಕೆ ಒಳಗಾಗಿದ್ದೇವೆ.

ಇಂಥ ಒಂದು ಸನ್ನಿವೇಶವನ್ನು ಕಾವೇರಿ ನೀರಿನ ಹಂಚಿಕೆಯಲ್ಲಿ ನೀಡಿರುವ ಐತೀರ್ಪಿನಿಂದ ಈಗ ನಾವು ಎದುರಿಸಬೇಕಾಗಿ ಬಂದಿದೆ. ಕರ್ನಾಟಕದಲ್ಲಿ ಕಾವೇರಿ ಚಳವಳಿ ಕಾವೇರಿ ಕೆಲವು ಘಟನೆಗಳು ಅತಿರೇಕ ಎನಿಸಿದರೂ ಅದು ಅನಿವಾರ್ಯ ಹಾಗೂ ಅನಪೇಕ್ಷಣೀಯ ತಮಿಳರ ಮೇಲೆ ಹಲ್ಲೆ ಮಾಡದೆ, ಸಾರ್ವಜನಿಕ ಆಸ್ತಿಪಾಸ್ತಿಗೆ ನಷ್ಟವುಂಟು ಮಾಡದೆ ನಡೆಸುತ್ತಿರುವ ಪ್ರತಿಭಟನೆಗಳು ಮೆಚ್ಚುವಂಥದ್ದು. ಸರ್ಕಾರದ,ಸಂಸದರ ನಡವಳಿಕೆ ಮಾತ್ರ ಖಂಡನೀಯ.

ಈಗ ಅಗತ್ಯ ಆಗಬೇಕಾಗಿರುವ ಅತಿ ಮುಖ್ಯ ಕೆಲಸವೆಂದರೆ:- ೧. ಕೇಂದ್ರ ಸರ್ಕಾರ ತತ್‌ಕ್ಷಣ ರಾಷ್ಟ್ರೀಯ ಜಲನೀತಿಯನ್ನು ರೂಪಿಸುವಂತೆ ಒತ್ತಾಯ ಮಾಡುವುದು. ಅದನ್ನು ರೂಪಿಸುವತನಕ ನ್ಯಾಯ ಮಂಡಳಿ ನೀಡಿರುವ ಐತೀರ್ಪನ್ನು ರದ್ದುಗೊಳಿಸಿ ಯಥಾ ಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗಬೇಕೆಂಬ ದೃಢ ನಿಲುವು ತಾಳುವುದು. ಇದರಿಂದ ಉಭಯ ರಾಜ್ಯಗಳ ನಡುವೆ ಕಾವೇರಿ ಕುರಿತು ೧೮೯೪ ರಿಂದ ೬.೨.೨೦೦೭ ರ ನ್ಯಾಯ ಮಂಡಳಿಯ ಅಂತಿಮ ತೀರ್ಪಿನವರೆಗೆ ಆಗಿರುವ ಒಡಂಬಡಿಕೆಗಳು ವಾದವಿವಾದಗಳು ಅಂತ್ಯ ಕಾಣುತ್ತವೆ.

೨. ರಾಷ್ಟ್ರೀಯ ಜಲನೀತಿಯನ್ನು ನೆಲೆಯಾಗಿ ಇಟ್ಟುಕೊಂಡು ಐತೀರ್ಪನ್ನು ತಿರಸ್ಕರಿಸುವುದು ಅತ್ಯಂತ ಮುಖ್ಯ. ಹಾಗಲ್ಲದೆ ನ್ಯಾಯ ಮಂಡಳಿಯ ತೀರ್ಪನ್ನು ನಾವು ತಿರಸ್ಕರಿಸುತ್ತೇವೆ. ಎಂದರೆ ಮಹಾರಾಷ್ಟ್ರದವರು ಗಡಿ ಸಮಸ್ಯೆಗೆ ಸಂಬಂಧಿಸಿದಂತೆ ಮಹಾಜನ್ ವರದಿಯನ್ನು ತಿರಸ್ಕರಿಸುತ್ತೇವೆ ಎನ್ನುವುದಕ್ಕೆ ಕುಮ್ಮಕ್ಕು ಕೊಟ್ಟಂತಾಗುತ್ತದೆ. ಈ ಸೂಕ್ಷ್ಮತೆಯನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು.

೩. ರಾಷ್ಟ್ರೀಯ ಜಲನೀತಿಯನ್ನು ತಂದರೆ (ಅ) ಗಂಗಾನದಿಯನ್ನು ಕಾವೇರಿಗೆ ಜೋಡಿಸುವ ಯೋಜನೆಯಿಂದ ಬಹುಮಟ್ಟಿಗೆ ರಾಷ್ಟ್ರದ ನೀರಿನ ಸಮಸ್ಯೆಗಳಿಗೆ ಸಮಗ್ರ ಪರಿಹಾರ ಕಂಡುಕೊಳ್ಳಬಹುದು. (ಆ - ಕರ್ನಾಟಕದಲ್ಲಿ ಕಾವೇರಿಗೆ ಮೇಕೆದಾಟುವಿನಲ್ಲಿ ಮತ್ತೊಂದು ಅಣೆಕಟ್ಟು ಕಟ್ಟಿ ನೀರಿನ ಸದುಪಯೋಗ ಮಾಡಿಕೊಳ್ಳಲು ತಮಿಳುನಾಡು ತಕರಾರು ತೆಗೆಯುವುದಾಗಲೀ ಹಾಗೆ ತಮಿಳುನಾಡಿನಲ್ಲಿ ಕಟ್ಟಿದರೆ ಕರ್ನಾಟಕದವರು ತಕರಾರು ತೆಗೆಯಲು ಅವಕಾಶವಿರುವುದಿಲ್ಲ.

೪. ಹೀಗೆ ನಿರ್ಮಿಸುವ ಜಲಾಶಯಗಳಿಂದ ನೀರಿನ ಸದ್ಬಳಕೆಯ ಜೊತೆಗೆ ವಿದ್ಯುತ್ ಉತ್ಪಾದನೆಯನ್ನು ಮಾಡಿಕೊಳ್ಳುವುದರ ಮೂಲಕ ವಿದ್ಯುತ್ ಕೊರತೆಯನ್ನು ಉಭಯ ರಾಜ್ಯಗಳು ತುಂಬಿಕೊಳ್ಳಬಹುದು.

೫. ನ್ಯಾಯಾಧಿಕರಣದ ಈಗಿನ ಐತೀರ್ಪಿಗೆ ಕಾರಣವಾಗಿರುವುದು ಅಚ್ಚುಕಟ್ಟು ಪ್ರದೇಶ ಕರ್ನಾಟಕ ಅಚ್ಚು

ತೆಯನ್ನೇ ಪ್ರಶ್ನಿಸಿದ್ದೂ ಇದೆ. ಅತಿರೇಕದ ಪರಮಾವಧಿ ಎಂಬಂತೆ ಮೈಸೂರಿನಲ್ಲಿ ಒಂದು ಶಾಲಾ ಮಕ್ಕಳ ಕೈಯಲ್ಲಿ ಕಾರ್ನಾಡರ ಪ್ರತಿಕೃತಿ ದಹನ ಮಾಡಿಸಲಾಗಿತ್ತು. ಈ ಕೆಲಸವನ್ನು ಮಕ್ಕಳಿಂದ ಮಾಡಿಸಿದ ಶಿಕ್ಷಕರು ಮುಂದಿನ ದಿನಗಳಲ್ಲಿ ಶಾಲೆಯಲ್ಲಿ ಕಾರ್ನಾಡರ ಬಗ್ಗೆ ಪಾಠ ಮಾಡುವ ಸಂದರ್ಭ ಬಂದಾಗ ಏನು ಮಾಡುತ್ತಾರೆ? ಇದು ಅನುಭವಕ್ಕೆ ನಿಲುಕುವ ಅಂಶವೇ ಹೊರತು, ಊಹೆಗೆ ನಿಲುಕುವಂತಹುದಲ್ಲ. ಮಕ್ಕಳನ್ನು ಬಲವಂತವಾಗಿ ಹೋರಾಟಕ್ಕೆ ತರುವುದೇ ಪ್ರಶ್ನಾರ್ಹವಾದ ನಿಲುವು. ವಿದ್ಯಾರ್ಥಿಗಳು ತಮ್ಮ ಸಂಘಟನಾ ಸಾಮರ್ಥ್ಯದಿಂದ ಯಾವುದೇ ಒಂದು ಸಾಮಾಜಿಕ ವಿವಾದಗಳಿಗೆ ಸ್ಪಂದಿಸುವುದು ಉತ್ತಮ ಬೆಳವಣಿಗೆ. ಆದರೆ ಶಾಲೆಯ ಆಡಳಿತ ವರ್ಗವು ಮಕ್ಕಳನ್ನು ಚಳುವಳಿಗೆ ಕರೆತರುವುದು ಬಾಲಿಶವಾಗುತ್ತದೆ. ಮೈಸೂರಿನಲ್ಲಿ ತಮ್ಮ ಭಾವುಕ ರಾಜ್ಯಪ್ರೇಮವನ್ನು ವ್ಯಕ್ತಪಡಿಸಲು ಕೆಲವು ಶಾಲಾ ಆಡಳಿತ ವರ್ಗಗಳು ಶಾಲಾ ಮಕ್ಕಳನ್ನೂ ಹೋರಾಟಕ್ಕೆ ಕರೆ ತಂದದ್ದು ಚರ್ಚಾಸ್ಪದವೇ.

ಇನ್ನೊಂದೆಡೆ, ಕಾವೇರಿ ಚಳುವಳಿಯ ವಿರುದ್ಧವಾಗಿ ಅಥವಾ ಚಳುವಳಿಗಾರರ ಅಭಿಪ್ರಾಯಕ್ಕಿಂತಲೂ ಭಿನ್ನವಾಗಿ ಯೋಚಿಸುವುದೇ ಮಹಾನ್ ಅಪರಾಧವಾಗುವಂತಹ ಸನ್ನಿವೇಶ ಸೃಷ್ಟಿಯಾಗಿದ್ದುದು ವಿಪರ್ಯಾಸಕರ. ವಾರ್ತಾ ಮತ್ತು ಪ್ರಚಾರ ಇಲಾಖೆಯ ನಿರ್ದೇಶಕ ಆರ್.ವಿ. ತ್ಯಾಗೂರ್‌ರವರ ವಿರುದ್ಧ ನಡೆದ ಆಕ್ರಮಣ ಒಂದು ನಿದರ್ಶನವಾದರೆ, ಮೈಸೂರಿನ ಶೈಕ್ಷಣಿಕ ಸಂಸ್ಥೆ ಪ್ರಥಮ್‌ನ ನಿರ್ದೇಶಕರಾದ ಅಶ್ವಿನಿ ರಂಜನ್‌ರವರ ವಿರುದ್ಧವೂ ಆಕ್ರಮಣ ನಡೆಯಿತು. ಶ್ರೀಯುತ ರಂಜನ್‌ರವರು ಎತ್ತಿದ್ದ ಪ್ರಶ್ನೆ ಎಂದರೆ, ಕಾವೇರಿ ನೀರಿಗಾಗಿ ಈ ಪರಿಯ ಹೋರಾಟ ನಡೆಸುವ ಬದಲು, ಮೂಲಭೂತ ಶಿಕ್ಷಣಕ್ಕಾಗಿ ನಡೆಸಬಹುದಲ್ಲವೇ ಎಂಬ ಗಹನವಾದ ಸಮಸ್ಯೆಯನ್ನು ಕುರಿತಾದದ್ದು. ಅವರೇನೂ ಚಳುವಳಿಗಾರರನ್ನು ಖಂಡಿಸಿರಲಿಲ್ಲ. ಆದಾಗ್ಯೂ ಅವರ ಕಛೇರಿಗೆ ನುಗ್ಗಿ ದಾಂಧಲೆ ನಡೆಸಲಾಯಿತು

ಈ ವೈಯಕ್ತಿಕ ಆಕ್ರಮಣಗಳ ಹಿನ್ನೆಲೆಯಲ್ಲೇ ತಮಿಳು ಟಿ.ವಿ. ಚಾನಲ್‌ಗಳನ್ನು ರದ್ದು ಪಡಿಸಿದ್ದು, ತಮಿಳು ದಿನ ಪತ್ರಿಕೆಗಳನ್ನು ನಿಷೇಧಿಸಿದ್ದು, ತಮಿಳು ಪತ್ರಿಕೆಗಳನ್ನು ಸುಟ್ಟು ಹಾಕಿದ್ದು ಒಂದು ರೀತಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರಹರಣವೇ ಆಗಿದೆ. ಕರ್ನಾಟಕದ ಬಹುತೇಕ ತಮಿಳು ಸಂಘಟನೆಗಳು ಈ ಹೋರಾಟದಲ್ಲಿ ಭಾಗಿಯಾಗಿದ್ದವು. ಹಾಗಿರುವಲ್ಲಿ ಅವರ ಮಾತೃಭಾಷೆಯ ಪತ್ರಿಕೆಯನ್ನು ಓದುವ ಹಕ್ಕನ್ನೂ ಅವರಿಂದ ಕಸಿದುಕೊಳ್ಳುವುದು ಸರ್ವಥಾ ಸಮರ್ಥನೀಯವಲ್ಲ. ವಿಪರ್ಯಾಸವೆಂದರೆ ಒಂದು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಪ್ರಜಾತಂತ್ರ ಮೌಲ್ಯಗಳನ್ನು ಎತ್ತಿಹಿಡಿಯಬೇಕಾದ ಮಾಜಿ ಶಾಸಕರೇ ಈ ಕೃತ್ಯಗಳನ್ನೆಸಗಿದ್ದು.

ಈ ಅಭಿವ್ಯಕ್ತಿ ಸ್ವಾತಂತ್ರಹರಣದ ಹರಿಕಾರರನ್ನು ನಿಯಂತ್ರಿಸುವ ಯಾವುದೇ ಕ್ರಮವನ್ನು ಸರ್ಕಾರ ಕೈಗೊಳ್ಳದಿದ್ದುದು ಸರ್ಕಾರದ ಇಬ್ಬಂದಿತನದ ಚಿಹ್ನೆಯೆಂದೇ ಹೇಳಬಹುದು. ನಿಯಂತ್ರಣದ ಮಾತಾಡಿದರೆ ತಮ್ಮ ಸರ್ಕಾರದ ಜನಪ್ರಿಯತೆ ಎಲ್ಲಿ ಕುಗ್ಗಿ ಹೋಗುವುದೋ ಎಂಬ ಭೀತಿ ಸರ್ಕಾರವನ್ನು ಕಾಡುತ್ತಿರುವಂತಿತ್ತು. ಈ ಸಂದರ್ಭದಲ್ಲಿ ನಾವು ನಿಮಗೆ ನ್ಯಾಯ ಒದಗಿಸಿಕೊಡುತ್ತೇವೆ, ನಮ್ಮ ಸರ್ಕಾರದ ನಿಲುವುಗಳು ಈ ರೀತಿ ಇದೆ, ನಿಮ್ಮ ಚಳವಳಿಗಳನ್ನು ನಿಲ್ಲಿಸಿ ಎಂದು ಹೇಳುವ ನೈತಿಕ ಹೊಣೆಗಾರಿಕೆಯನ್ನು ಸರ್ಕಾರ ಕಳೆದುಕೊಂಡಿದ್ದುದು ಸ್ಪಷ್ಟವಾಗಿತ್ತು. ಒಂದು ಪ್ರಜಾತಾಂತ್ರಿಕ ಸಮಾಜದಲ್ಲಿ ಎಂತಹುದೇ ಸಮಸ್ಯೆ ಎದುರಾದರೂ ಸಹ ಸಾಮಾನ್ಯ ಜನತೆಯ ದೈನಂದಿನ ಚಟುವಟಿಕೆಗಳಿಗೆ ಚ್ಯುತಿ ಬಾರದಂತೆ, ಅವರ ಸಂವಿಧಾನದತ್ತ ಹಕ್ಕುಗಳ ದಮನವಾಗದಂತೆ ನೋಡಿಕೊಳ್ಳುವುದೂ ಚುನಾಯಿತ ಸರ್ಕಾರಗಳ ಕರ್ತವ್ಯವಾಗುತ್ತದೆ. ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರ ಸಂಪೂರ್ಣ ವಿಫಲವಾಗಿತ್ತು.

ಇನ್ನೊಂದೆಡೆ ಅನಿಯಂತ್ರಿತ ಕಾವೇರಿ ಚಳವಳಿ ಕವಲುದಾರಿಯಲ್ಲಿ ಸಾಗಿ, ಪೈಪೋಟಿಗಳಲ್ಲಿ ಪರ್ಯಾವಸಾನಗೊಳ್ಳುವಂತಾಗಿದ್ದುದೂ ವಿಷಾದನೀಯ ಅಂಶವೆ. ಕಾವೇರಿ ತೀರ್ಪಿನ ವಿರುದ್ಧ ಮಾತನಾಡದವರು ಕನ್ನಡಿಗರೇ ಅಲ್ಲ, ಅಥವಾ ಕಾರ್ನಾಡರಂತೆ ತೀರ್ಪನ್ನು ಒಪ್ಪಿಕೊಳ್ಳಿ ಎಂದವರು ಕನ್ನಡ ದ್ರೋಹಿಗಳು ಎಂಬ ನಿಲುವು ತಾಳುವ ಮಟ್ಟಿಗೆ ಚಳವಳಿ ಬೆಳೆದದ್ದು ವಿಪರ್ಯಾಸಕರ. ನ್ಯಾಯಾಧಿಕರಣಕ್ಕೆ ರಾಜಕೀಯ ಲೇಪನ ನೀಡುವುದರ ಹಿಂದೆಯೂ ಇದೇ ರೀತಿಯ ಅಪಾಯ ಅಡಗಿದೆ. ಒಂದು ನಿದರ್ಶನದ ಮೂಲಕ ಹೇಳುವುದಾದರೆ, ಬಾಬ್ರಿ ಮಸೀದಿ ಧ್ವಂಸದ ಪ್ರಕರಣದಲ್ಲಿ ಒಂದು ವೇಳೆ ನ್ಯಾಯಾಲಯವು ಸಂಘ ಪರಿವಾರದ ವಿರುದ್ಧವಾಗಿ ತೀರ್ಪು ನೀಡಿ,

ಕರ್ನಾಟಕ ಹೋರಾಟಕ್ಕೆ ಬದ್ಧವಾಗಿ ಅದೇ ಸಮಯದಲ್ಲಿ ಹೊಂದಾಣಿಕೆಗೂ ಸಿದ್ಧವಾಗಿರುವುದು ಉಭಯ ರಾಜ್ಯಗಳ ಹಾಗೂ ಭಾರತ ಒಕ್ಕೂಟದ ಹಿತದೃಷ್ಟಿಯಿಂದ ಸಮಂಜಸವಾದುದು.

ಕಟ್ಟು ಪ್ರದೇಶವನ್ನು ವಿಸ್ತರಿಸುತ್ತಿಲ್ಲ. ಈ ಜೋಭದ್ರ ನಿದ್ರೆಯಿಂದ ಸರ್ಕಾರ ಕೂಡಲೇ ಹೊರಬರಬೇಕು. ಮತ್ತೊಂದು ಮುಖ್ಯ ಅಂಶವೆಂದರೆ ಬಹಳಷ್ಟು ಅಚ್ಚುಕಟ್ಟು ಪ್ರದೇಶಗಳಲ್ಲಿ ಅನ್ಯಭಾಷಿಗರು ಸಿಂಹ ಪಾಲು ಪಡೆದುಕೊಂಡು ಆಯಕಟ್ಟಿನಲ್ಲಿ ಕುಳಿತಿರುವುದು, ಈ ಬಗ್ಗೆ ಕನ್ನಡಿಗರು ಕ್ರಿಯಾಶೀಲರಾಗಿ ಅರಿತು ಅಡಿ ಇಡಬೇಕು. ಕನ್ನಡಿಗರ ನಿಷ್ಕ್ರಿಯತೆಯಿಂದಾಗಿ ಕರ್ನಾಟಕದ ಬಹುಪಾಲು ಭೂಪ್ರದೇಶಗಳು ಅನ್ಯಭಾಷಿಗರ ಪಾಲಾಗುತ್ತಿರುವುದು ವಿಷಾದನೀಯ. ಕರ್ನಾಟಕದ್ದು ಕೇವಲ ೧೧.೨ ಲಕ್ಷ ಎಕರೆ ಮಾತ್ರ ಅಚ್ಚುಕಟ್ಟು ಪ್ರದೇಶವಿದ್ದರೆ ತಮಿಳುನಾಡು ೨೩ ಲಕ್ಷ ಎಕರೆ ಒಳಗೊಂಡಿದೆ.

೬. ಐತೀರ್ಪಿನಲ್ಲಿರುವ ಮತ್ತೊಂದು ದೋಷವೆಂದರೆ ಅಂತರ್‌ಜಲವನ್ನು ಪರಿಗಣನೆಗೆ ತೆಗೆದುಕೊಳ್ಳದೆ ಇರುವುದು. ಕಾವೇರಿ ಪಶ್ಚಿಮದಿಂದ ಪೂರ್ವಕ್ಕೆ ಹರಿದು ಬಂಗಾಳಕೊಲ್ಲಿ ಸೇರುತ್ತದೆ. ಎಂದರೆ ಭೂಮಿ ತಮಿಳುನಾಡು ಕಡೆಗೆ ಇಳಿಮುಖವಾಗಿದೆ. ಹಾಗಾಗಿ ತಮಿಳುನಾಡಿನಲ್ಲಿ ಹೆಚ್ಚು ಅಂತರ್‌ಜಲದ ಅನುಕೂಲವಿದೆ. ಹೀಗಿದ್ದು ಇದನ್ನು ಪರಿಗಣನೆಗೆ ತೆಗೆದುಕೊಳ್ಳದೆ ತಮಿಳುನಾಡಿಗೆ ಹೆಚ್ಚು ಟಿಎಂಸಿ. ನೀರು ನೀಡಿರುವ ಐತೀರ್ಪು ನ್ಯಾಯ ಸಮ್ಮತವಾದುದಲ್ಲ.

೭. ಕುಡಿಯು ನೀರಿನ ಬಗ್ಗೆ ಗಮನ ಹರಿಸದಿರುವುದು ಐತೀರ್ಪಿನ ಮತ್ತೊಂದು ಮುಖ್ಯ ದೋಷ ಕೊಡಗಿನಿಂದ ಹಿಡಿದು ಮೈಸೂರು; ಮಂಡ್ಯ, ಬೆಂಗಳೂರು ಇತ್ಯಾದಿ ಜನದಟ್ಟಣೆ ಇರುವ ನಗರಗಳಿಗೆ ಅಗತ್ಯವಿರುವಷ್ಟು ನೀರನ್ನು ತೀರ್ಪಿನಲ್ಲಿ ಘೋಷಿಸದೆ ಇರುವುದು. ಖಂಡನೀಯ.

೮. ಮಳೆ ಸಮೃದ್ಧಿಯಾಗಿ ಬಿದ್ದ ವರ್ಷಗಳಲ್ಲಿ ಅದನ್ನು ಸಂಗ್ರಹಿಸಿ ಇಟ್ಟುಕೊಳ್ಳುವ ಯೋಜನೆಗಳನ್ನು ರೂಪಿಸದೆ ಸಮುದ್ರ ಸೇರುತ್ತಿರುವುದನ್ನು ತಡೆಯುವ ಮಾರ್ಗ ಸೂತ್ರಗಳ ಪ್ರಸ್ತಾಪವಿಲ್ಲ. ಅಲ್ಲದೆ ಸಂಗ್ರಹಿಸಿದ ನೀರನ್ನು ಉಭಯ ರಾಜ್ಯಗಳು ಪೋಲು ಮಾಡದೆ ಹನಿಹನಿಯನ್ನು ಸದ್ಬಳಕೆ ಮಾಡಿಕೊಳ್ಳುವ ಯಾವ ನಿರ್ದೇಶನವೂ ಇಲ್ಲ. ಪೋಲಾಗುತ್ತಿರುವ ನೀರಿನ ಪ್ರಮಾಣವನ್ನು ಸಂಗ್ರಹಿಸಿಲ್ಲ. ಹೀಗಾಗಿ ಇದು ದೋಷಪೂರಿತ ತೀರ್ಪು ಆದಕಾರಣ ರಾಜ್ಯಗಳಿಗೆ ನಿರ್ದೇಶನ ನೀಡುವ ದೃಷ್ಟಿಯಿಂದ ಐತೀರ್ಪನ್ನು ನ್ಯಾಯಮಂಡಳಿ ಪುನರ್ ಪರಿಶೀಲಿಸುವ ಅಗತ್ಯವಿದೆ. ಅತ್ತ ಕರ್ನಾಟಕ ಒತ್ತಾಯಿಸಬೇಕು.

೯. ಕಾನೂನು ಬದ್ಧ ಹೋರಾಟ ಮಾಡುತ್ತಲೇ ಸಂಧರ್ಾಕ್ಕೆ ಒತ್ತು ಕೊಟ್ಟ ಆ ಮಾರ್ಗ ಅನುಸರಿಸುವುದು ಉಭಯ ರಾಜ್ಯಗಳ ಹಿತ ದೃಷ್ಟಿಯಿಂದ ಒಳಿತು. 'ಕರ್ನಾ ಟಕದವರ ಕಣ್ಣೀರಿಗೆ ಕಾರಣವಾಗಿ ಕಾವೇರಿ ನೀರು ಪಡೆ ದುಕೊಳ್ಳುವುದು ಹಿತವಾದುದಲ್ಲ ಎನ್ನುವ ತಮಿಳುನಾಡಿನ ಮುಖ್ಯಮಂತ್ರಿ ಹಾಗೂ ಮುತ್ಸದ್ಧಿ ರಾಜಕಾರಣಿಯಾಗಿರುವ ಎಂ. ಕರುಣಾನಿಧಿಯವರ ನಿಲುವು ಮೆಚ್ಚುವಂಥದ್ದು ಹಾಗೂ ಸ್ವಾಗತಾರ್ಹವಾದುದು. ಕನ್ನಡಿಗರೇ ಆದ ಜಯಲಲಿತಾರ ಹೇಳಿಕೆ ರಾಜಕೀಯ ಪ್ರೇರಿತವಾದುದು ಅದರ ಬಗ್ಗೆ ಎಚ್ಚರದಿಂದ ಇರಬೇಕಾದ ಅವಶ್ಯಕತೆ ಇದೆ.

೧೦. ಕಡೆಯದಾಗಿ ಎಂಥ ಸಂದರ್ಭಕ್ಕೂ- ಅಂದರೆ ಅಧಿಕಾರವನ್ನು ಆ ಕ್ಷಣದಲ್ಲೇ ಬಿಟ್ಟು ಕಾವೇರಿ ನೀರಿಗಾಗಿ ಸಮರ್ಪಿಸಿಕೊಳ್ಳುವ-ಸಂಸದರು ಸಿದ್ಧವಾಗಿರಬೇಕಾದ ನೈತಿಕ ನಿಲುವನ್ನು ತಾಳಬೇಕು. ಸಂಸತ್ತಿನಲ್ಲಿ ಪಕ್ಷಭೇದ ಮರೆತು ಐಕ್ಯತೆಯನ್ನು ಪ್ರದರ್ಶಿಸಬೇಕು. ತನ್ಮೂಲಕ ಪ್ರಧಾನಿಗೆ ಮನವರಿಕೆ ಮಾಡಿ ಐತೀರ್ಪು ಗೆಜೆಟ್ಟಿನಲ್ಲಿ ಪ್ರಕಟವಾಗದಂತೆ ಪರಿಣಾಮ ಬೀರುವುದಲ್ಲದೆ. ಉಭಯ ರಾಜ್ಯಗಳ ನ್ಯಾಯಯುತ ಬೇಡಿಕೆಗಳನ್ನು ಬಡಂಬಡಿಕೆಯ ಮೂಲಕ ಸೌಹಾರ್ಧಯುತವಾಗಿ ಬಗೆಹರಿಸುವಲ್ಲಿ ಮಧ್ಯಸ್ತಿಕೆ ವಹಿಸಿಕೊಳ್ಳುವಂತೆ ಮನವೊಲಿಸುವುದು.

ಈ ಹಿನ್ನೆಲೆಯಲ್ಲಿ ಕರ್ನಾಟಕ ಹೋರಾಟಕ್ಕೆ ಬದ್ಧವಾಗಿ ಅದೇ ಸಮಯದಲ್ಲಿ ಹೊಂದಾಣಿಕೆಗೂ ಸಿದ್ಧವಾಗಿರುವುದು ಉಭಯ ರಾಜ್ಯಗಳ ಹಾಗೂ ಭಾರತ ಒಕ್ಕೂಟದ ಹಿತದೃಷ್ಟಿಯಿಂದ ಸಮಂಜಸವಾದುದು.

ಜ. ಹೊ. ನಾರಾಯಣಸ್ವಾಮಿ

ಮಸೀದಿಯನ್ನು ಪುನರ್ನಿರ್ಮಾಣ ಮಾಡಬೇಕೆಂದು ಆದೇಶಿಸಿದರೆ, ಪ್ರಜಾತಾಂತ್ರಿಕ ಸಿದ್ಧಾಂತದಲ್ಲಿ ನಂಬಿಕೆ ಇರುವವರು ಅದನ್ನು ಸ್ವಾಗತಿಸದೆ ಇರುತ್ತಾರೆಯೇ. ಅಂತಹ ಸನ್ನಿವೇಶದಲ್ಲಿ, ಒಬ್ಬ ಹಿಂದೂ ಆಗಿ ಆ ತೀರ್ಪನ್ನು ಒಪ್ಪಿಕೊಳ್ಳಿ ಎಂದು ಹೇಳುವ ಹಕ್ಕು ನಿಮಗಿಲ್ಲ ಎಂದು ಸಂಘಪರಿವಾರ ವಾದಿಸಿದರೆ? ಕಾರ್ನಾಡರ ಸಂಗತಿಯನ್ನೂ ಇದೇ ದೃಷ್ಟಿಯಿಂದ ನೋಡಬೇಕಾಗುತ್ತದೆ.

ಆದರೆ ಕಾವೇರಿ ಹೋರಟದಲ್ಲಿ ಪ್ರಜಾತಾಂತ್ರಿಕ ಲಕ್ಷಣಗಳಿಗಿಂತಲೂ ಹೆಚ್ಚು ಮಾಧ್ಯಮ ಕೇಂದ್ರಿತ ಪ್ರತಿಭಟನೆಗಳೇ ಕಂಡು ಬಂದಿದ್ದು ವಿಷಾದನೀಯ. ಯಾವುದೇ ಒಂದು ಸಂಘಟನೆ, ಪಕ್ಷ ನಾಯಕತ್ವ ನೀಡದೆ ನಾವಿಕನಿಲ್ಲದ ಹಡಗಿನಂತೆ ಸಾಗಿದ/ಸಾಗಿರುವ ಹೋರಾಟದಲ್ಲಿ, ಭಾವನಾತ್ಮಕ ಅಂಸಗಳೇ ಪ್ರಾಧಾನ್ಯತೆ ಗಳಿಸಿ, ಕೊನೆಗೆ ಹೋರಾಟದ ಹಾದಿಯೇ ದಿಕ್ಕು ತಪ್ಪುವ ಸಾಧ್ಯತೆಗಳು ಹೆಚ್ಚಾಗಿವೆ. ಇತ್ತ ಸರ್ಕಾರವೂ ಸಹ ತನ್ನ ನಿಷ್ಕ್ರಿಯತೆಯನ್ನು ಸಾಕಷ್ಟು ಮಟ್ಟಿಗೆ ಪ್ರದರ್ಶಿಸಿದ್ದನ್ನೂ ಕಾಣಬಹುದು. ಕಾವೇರಿ ತೀರ್ಪು ಬಂದ ನಂತರದಲ್ಲಿ ಆರಂಭವಾದ ವಿಧಾನಸಭೆ ಅಧಿವೇಶನದಲ್ಲಿ ಈ ವಿವಾಧ ಪ್ರಸ್ತಾಪವಾಗಲೇ ಇಲ್ಲ. ಬದಲಾಗಿ ಸಭಾಧ್ಯಕ್ಷರ ಚುನಾವಣೆಯೇ ಪ್ರಮುಖ ವಿಷಯವಾಗಿತ್ತು. ೨೦ ದಿನಗಳ ನಂತರ, ಮೂರು ಸರ್ವ ಪಕ್ಷ ಸಭೆ ನಡೆಸಿದ ನಂತರವೂ, ಒಂದು ಸ್ಪಷ್ಟ ನಿಲುವ ತಾಳುವುದರಲ್ಲಿ ಸರ್ಕಾರ ವಿಫಲವಾಗಿದ್ದು ಸರ್ಕಾರದ ನಿಷ್ಕ್ರಿಯತೆಗೆ ಸಾಕ್ಷಿಯಷ್ಟೆ. ಇನ್ನೊಂದೆಡೆ, ಭಾಜಪವಾಗಲೀ, ಕಾಂಗ್ರೆಸ್ ಆಗಲೀ ಕಾವೇರಿ ತೀರ್ಪಿನ ಬಗ್ಗೆ ಒಂದು ಸ್ಪಷ್ಟ ನಿಲುವು ತಾಳದೆ ಹೋದದ್ದು, ಈ ಪಕ್ಷಗಳ ಜನಪರ ಕಾಳಜಿಯನ್ನು ತೋರುತ್ತದೆ. ಈ ಹಿನ್ನೆಲೆಯಲ್ಲಿ ಕಾವೇರಿ ವಿವಾದಕ್ಕೆ ರಾಜಕೀಯವಾಗಿಯಾಗಲೀ, ನ್ಯಾಯಾಂಗದಿಂದಲೇ ಆಗಲಿ ಅಂತಿಮ ತೆರೆ ಬೀಳುತ್ತದೆ ಎಂದು ಭಾವಿಸುವುದು ಗಗನ ಕುಸುಮಕ್ಕೆ ಕೈಹಾಕಿದಂತಾಗುತ್ತದೆ.

ಪರಿಹಾರವೇನು?

ಅಂತರರಾಜ್ಯ ಜಲವಿವಾದ ಕಾಯಿದೆಯನ್ನು ೨೦೦೨ ರಲ್ಲಿ ತಿದ್ದುಪಡಿ ಮಾಡಿದಾಗ ಮುಖ್ಯವಾಗಿ "ಈ ಕಾಯ್ದೆಯಡಿಯಲ್ಲಿ ಸ್ಥಾಪಿಸಲಾದ ನ್ಯಾಯಾಧಿಕರಣದ ಅಂತಿಮ ತೀರ್ಪು ಎಲ್ಲ ರಾಜ್ಯಗಳಿಗೂ ಅನ್ವಯಿಸಲಿದ್ದು, ಈ ತೀರ್ಪಿನ ವಿರುದ್ಧ ಯಾವುದೇ ನ್ಯಾಯಾಲಯದಲ್ಲೂ ಮೊಕದ್ದಮೆ ಹೂಡಲಾಗುವುದಿಲ್ಲ. ಸರ್ವೋಚ್ಛ ನ್ಯಾಯಾಲಯದ ತೀರ್ಪಿಗಿರುವಷ್ಟೇ ಪಾವಿತ್ರ್ಯತೆ, ಪ್ರಾಮುಖ್ಯತೆ ಮತ್ತು ನ್ಯಾಯಿಕ ಮೌಲ್ಯ ನ್ಯಾಯಾಧಿಕರಣದ ಅಂತಿಮ ತೀರ್ಪಿಗೆ ಇರುತ್ತದೆ." ಎಂದು ಹೇಳಲಾಗಿದೆ. ಇದೇ ಕಾಯ್ದೆಯ ಸೆಕ್ಷನ್ ೨೬೨ ರ ಪ್ರಕಾರ ಒಂದು ಬಾರಿ ಪ್ರಕರಣವನ್ನು ನ್ಯಾಯಾಧಿಕರಣಕ್ಕೆ ಒಪ್ಪಿಸಿದ ನಂತರ ಈ ವಿವಾದದಲ್ಲಿ ಸರ್ವೋಚ್ಛ ನ್ಯಾಯಾಲಯಕ್ಕೂ ಮಧ್ಯೆ ಪ್ರವೇಶಿಸುವ ಹಕ್ಕು ಇರುವುದಿಲ್ಲ ಎಂದು ಹೇಳಲಾಗಿದೆ. ತೀರ್ಪಿನಿಂದ ತೃಪ್ತರಾಗದ ರಾಜ್ಯಗಳಿಗೆ ಇರುವ ಒಂದೇ ದಾರಿ ಎಂದರೆ, ನ್ಯಾಯಾಧಿಕರಣಕ್ಕೆ ಮೇಲ್ಮನವಿ ಸಲ್ಲಿಸುವುದು. ಕೆಲವು ಕಾನೂನು ತಜ್ಞರ ಅಭಿಪ್ರಾಯದಲ್ಲಿ ಸಂವಿಧಾನದ ವಿಧಿ ೧೩೬ರ ಅಡಿಯಲ್ಲಿ ರಾಜ್ಯ ಸರ್ಕಾರವು ಸರ್ವೋಚ್ಛ ನ್ಯಾಯಾಲಯದ ಮೊರೆ ಹೋಗಬಹುದಾಗಿದೆ.

ಆದರೆ ಇಲ್ಲಿಯೂ ಕರ್ನಾಟಕಕ್ಕೆ ಇಕ್ಕಟ್ಟಿನ ಪರಿಸ್ಥಿತಿ ಇದೆ. ಒಂದು ವೇಳೆ ಮೇಲ್ಮನವಿ ಸಲ್ಲಿಸಿ, ನ್ಯಾಯಾಧಿಕರಣವು ಎಲ್ಲಾ ಅಂಶಗಳನ್ನೂ ಪರಿಗಣಿಸಿ ಮತ್ತೊಂದು ತೀರ್ಪನ್ನು ನೀಡಿದಲ್ಲಿ, ರಾಜ್ಯ ಸರ್ಕಾರ ಅದನ್ನು ಮನ್ನಿಸಲೇ ಬೇಕಾಗುತ್ತದೆ. ಒಂದು ವೇಳೆ ಆ ತೀರ್ಪಿನಲ್ಲಿ ತಮಿಳುನಾಡಿಗೆ ಇನ್ನೂ ಹೆಚ್ಚಿನ ನೀರನ್ನು ನೀಡಿದರೆ? ಇದು ಯಕ್ಷ ಪ್ರಶ್ನೆಯಾಗಿಯೇ ಉಳಿಯುತ್ತದೆ. ಹಾಗಾಗಿ ಒಂದು ವೇಳೆ ಮೇಲ್ಮನವಿ ಸಲ್ಲಿಸುವುದಾದಲ್ಲಿ, ಅಥವಾ ಮರುವಿಚಾರಣೆ ನಡೆಸುವುದಾದಲ್ಲಿ, ಕರ್ನಾಟಕ ಸರ್ಕಾರವು ಪ್ರಸ್ತುತ ತೀರ್ಪಿನಲ್ಲಿ ಕಂಡುಬರುವ ನ್ಯೂನತೆಗಳನ್ನು, ಮತ್ತು ನ್ಯಾಯಾಧಿಕರಣ ನಿರ್ಲಕ್ಷಿಸಿರುವ ಕೆಲವು ತಾಂತ್ರಿಕ ಅಂಶಗಳನ್ನು ಪ್ರಬಲವಾಗಿ ಮಂಡಿಸಬೇಕಾಗುತ್ತದೆ. ಇದು ಸರ್ಕಾರದ ಮಟ್ಟದಲ್ಲಿ, ನ್ಯಾಯಾಂಗದ ಮೂಲಕ ಬಯಸಬಹುದಾದ ಅಂತಿಮ ತೀರ್ಮಾನ.

ಆದರೆ ಎರಡು ಶತಮಾನಗಳ ಇತಿಹಾಸವಿರುವ ಈ ವಿವಾದ, ಬ್ರಿಟೀಷರು ಬಿಟ್ಟು ಹೋದ ಪರಂಪರೆ. ಭಾರತೀಯ ಇತಿಹಾಸದಲ್ಲಿ ಬ್ರಿಟಿಷರು ತಮ್ಮ ಹಿಂದೆ ಬಿಟ್ಟು ಹೋದ ಯಾವುದೇ ಸಮಸ್ಯೆಯೂ ಪರಿಹಾರ ಕಂಡಿಲ್ಲವೆಂದೇ ಹೇಳಬಹುದು. ಕಾವೇರಿ ವಿವಾದವೂ ಅದೇ ಹಾದಿ ಹಿಡಿಯುವುದರಲ್ಲಿದೆ. ಇಡೀ ಕಾವೇರಿ ನದಿ ನೀರಿನ ಪ್ರಶ್ನೆ ಎರಡು ರಾಜ್ಯಗಳ ರೈತರ, ಸಾಮಾನ್ಯ ಜನತೆಯ ಬದುಕಿಗೆ ಸಂಬಂಧಿಸಿದ್ದು. ನಮ್ಮ ರಾಜ್ಯದಲ್ಲಿ ಉಗಮಿಸುವು

(೩೬ನೇ ಪುಟಕ್ಕೆ)

ಉದ್ದೇಶ ಮರೆತ ವಿಧಾನ ಪರಿಷತ್

೧೯೦೭ ರಲ್ಲಿ ರಚನೆಯಾದ ರಾಜ್ಯ ವಿಧಾನ ಪರಿಷತ್ ಈಗ ೧೦೦ನೇ ವರ್ಷದಲ್ಲಿದೆ. ಇಂಥ ಒಂದು ವಿಶಿಷ್ಟ ಸಂಸ್ಥೆ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ ಕಾರಣಗಳಿಂದ ಸದೃಢವಾಗಿ ಬೆಳೆದು ಬಂದಿದ್ದೇ ಒಂದು ಮಹಾನ್‌ಗಾಥೆ. ಆದರೆ ಮೂಲ ಚಿಂತನೆಗಳಲ್ಲೇ ಹೊಸಕಿ ಆಗಿಂದಾಗ್ಗೆ ತಾತ್ಕಾಲಿಕ ಲಾಭದ ರಾಜಕಾರಣಕ್ಕಾಗಿ ಸಂಸ್ಥೆಯನ್ನು ದುರ್ಬಲಗೊಳಿಸುವ ಪ್ರಯತ್ನ ವಿವಿಧ ಕಾಲ ಘಟ್ಟಗಳಲ್ಲಿ ನಡೆದಿದೆ. ಆಗಿನ ಪ್ರಜಾಪ್ರತಿನಿಧಿ ಸಭೆ ಅಥವಾ ಈಗಿನ ವಿಧಾನ ಸಭೆ ರಚನೆಯಾಗಿದ್ದು ೧೮೮೧ ರಲ್ಲಿ. ಆದರೆ ಇಂಗ್ಲಿಷ್ ಸರ್ಕಾರದ ಕೈಯಲ್ಲೇ ಕಾನೂನು ರಚಿಸುವ ಸಂಪೂರ್ಣ ಅಧಿಕಾರ ಇದಕ್ಕೆ ಕಾರಣ ಈ ಸಭೆ ಕೇವಲ ಸಮಾಲೋಚನಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ರಾಜ್ಯದಲ್ಲಿ ವಿಧಾನ ಮಂಡಲ ಇಲಾಖೆ ಅಸ್ತಿತ್ವಕ್ಕೆ ಬಂದಿದ್ದೇ ೧೮೮೬ ರಲ್ಲಿ.

ಟಿ.ಕೆ. ತ್ಯಾಗರಾಜ್

ಒಂದು ಸಂಸ್ಥೆ ತನ್ನ ಸ್ಥಾಪನೆಗೆ ಕಾರಣವಾದ ಮೂಲೋದ್ದೇಶವನ್ನೇ ಮರೆತರೆ ಅದು ಯಾಕಾದರೂ ಇರಬೇಕು ಎಂಬ ಪ್ರಶ್ನೆ ಎದುರಾಗುತ್ತದೆ. ಅಂಥ ಸಂಸ್ಥೆ ಇರಲೇಬೇಕೆಂದರೆ ಸ್ಥಾಪಿತ ಮಾರ್ಗದಲ್ಲೇ ಅರ್ಥಪೂರ್ಣವಾಗಿ ಉಳಿಯಬೇಕು, ಬೆಳೆಯಬೇಕು.

ಕರ್ನಾಟಕ ವಿದಾನಪರಿಷತ್‌ನಲ್ಲಿ ಅಗಿರುವುದೂ ಅದೇ. ೧೯೦೭ ರಲ್ಲಿ ರಚನೆಯಾದ ರಾಜ್ಯ ವಿಧಾನ ಪರಿಷತ್ ಈಗ ೧೦೦ನೇ ವರ್ಷದಲ್ಲಿದೆ. ಇಂಥ ಒಂದು ವಿಶಿಷ್ಟ ಸಂಸ್ಥೆ ಸಾಮಾಜಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ ಕಾರಣಗಳಿಂದ ಸದೃಢವಾಗಿ ಬೆಳೆದು ಬಂದಿದ್ದೇ ಒಂದು ಮಹಾನ್‌ಗಾಥೆ, ಆದರೆ ಮೂಲ ಚಿಂತನೆಗಳಲ್ಲೇ ಹೊಸಕಿ ಆಗಿಂದಾಗ್ಗೆ ತಾತ್ಕಾಲಿಕ ಲಾಭದ ರಾಜಕಾರಣಕ್ಕಾಗಿ ಸಂಸ್ಥೆಯನ್ನು ದುರ್ಬಲಗೊಳಿಸುವ ಪ್ರಯತ್ನ ವಿವಿಧ ಕಾಲ ಘಟ್ಟಗಳಲ್ಲಿ ನಡೆದಿದೆ.

ಆಗಿನ ಪ್ರಜಾಪ್ರತಿನಿಧಿ ಸಭೆ ಅಥವಾ ಈಗಿನ ವಿಧಾನಸಭೆ ರಚನೆಯಾಗಿದ್ದು ೧೮೮೧ ರಲ್ಲಿ. ಆದರೆ ಇಂಗ್ಲಿಷ್ ಸರ್ಕಾರದ ಕೈಯಲ್ಲೇ ಕಾನೂನು ರಚಿಸುವ ಸಂಪೂರ್ಣ ಅಧಿಕಾರ ಇದಕ್ಕೆ ಕಾರಣ ಈ ಸಭೆ ಕೇವಲ ಸಮಲೋಚನಾ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು. ರಾಜ್ಯದಲ್ಲಿ ವಿಧಾನ ಮಂಡಲ ಇಲಾಖೆ ಅಸ್ತಿತ್ವಕ್ಕೆ ಬಂದಿದ್ದೇ ೧೮೮೬ ರಲ್ಲಿ. ಶಾಸನ ಸಭೆಯ ಎಲ್ಲ ಕಾರ್ಯಕ್ರಮಗಳನ್ನು ವಿಸ್ತರಿಸುವ ನಿಯಂತ್ರಿಸುವುದು ಆಗಿನ ಕಾರ್ಯನಿರ್ವಹಕ ಮಂಡಳಿಯ ಕರ್ತವ್ಯಗಳ ಒಂದು ಭಾಗವಾಗಿತ್ತು. ಅದಕ್ಕೆ ಮೈಸೂರು ರಾಜಸಂಸ್ಥಾನದ ಅಂಕಿತವೂ ಅಗತ್ಯ ಇತ್ತು.

ಬ್ರಿಟಿಷ್ ಇಂಡಿಯಾ ಪ್ರಾಂತ್ಯಗಳಲ್ಲಿ ವಿಧಾನ ಪರಿಷತ್‌ಗಳ ರಚನೆಯಾಗಿದ್ದೇ ಕಾನೂನುಗಳಲ್ಲಿ ರೂಪಿಸುವ ಸಲುವಾಗಿ ಪ್ರತಿನಿಧಿ ಸಭೆಗಳ ಸದಸ್ಯರು ಶಾಸನ ರಚಿಸಲು ತಮಗೆ ಅಧಿಕಾರ ನೀಡಬೇಕು ಅಥವಾ ಕಾನೂನು ರಚಿಸಲು ವಿಧಾನ ಪರಿಷತ್ ರಚಿಸಬೇಕು ಎಂದು ಆಗಿಂದಾಗ್ಗೆ ಒತ್ತಡ ಹೇರಿದ ಫಲವಾಗಿಯೇ ಪರಿಷತ್ ರೂಪುಗೊಂಡಿತ್ತು. ೧೮೯೭ ಮತ್ತು ೧೮೯೦ ರಲ್ಲಿ ನಿಗಧಿತ ಸಂಖ್ಯೆಯ ಅಧಿಕಾರೇತರರನ್ನು ಶಾಸನ ರಚನಾ ಪ್ರಕ್ರಿಯೆಯಲ್ಲಿ ಬಳಸಿಕೊಳ್ಳಲಾಯಿತು. "ಅಧಿಕಾರೇತರ ಸದಸ್ಯರನ್ನು ಬಳಸಿಕೊಂಡು ವಿಧಾನ ಪರಿಷತ್ ರಚಿಸ ಬೇಕು ಈಗಿರುವ ಕಾನೂನು ಬ್ರಿಟಿಷ್ ಮನೋಧರ್ಮಕ್ಕೆ ಅನುಗುಣವಾಗಿರುವುದರಿಂದ ಸ್ಥಳೀಯ ಪರಿಸ್ಥಿತಿಗಳಿಗೆ ತಕ್ಕಂತೆ ಮಾರ್ಪಡಿಸುವ ಅಗತ್ಯ ಇದೆ, ಈ ಹಿನ್ನೆಲೆಯಲ್ಲಿ ಉದ್ದೇಶಿತ ಶಾಸನಗಳ ರಚನೆಗಾಗಿ ವಿಧಾನ ಪರಿಷತ್ ರಚನೆ ಅಗತ್ಯ ಎಂದು ಕೆಲವು ಮನವರಿಕೆ ಮಾಡಿಕೊಟ್ಟರು

೧೮೯೩ರಲ್ಲಿ ಪ್ರತಿನಿದಿ ಸಭೆಯಿಂದ ಮಹಾರಾಜರ ಪರಿಷತ್‌ಗೆ ಓರ್ವ ಸದಸ್ಯ ಅಥವಾ ಸದಸ್ಯರನ್ನೇ ಆಯ್ಕೆ ಮಾಡುವ ವಿಚಾರ ಮತ್ತು ಪ್ರಸ್ತಾಪವಾಯಿತು. ಹೆಚ್ಚುವರಿ ಸದಸ್ಯರನ್ನು ಶಾಸನ ರಚನಾ ಕಾರ್ಯಕ್ಕಾಗಿಯೇ ಆಯ್ಕೆ ಮಾಡಬೇಕೆಂಬ ಒತ್ತಡವೂ ಬಂತು. ಅದಕ್ಕೆ ಆಗಿನ ದಿವಾನರು "ಒಬ್ಬರು ಅಥವಾ ಇಬ್ಬರು ಸದಸ್ಯರನ್ನೇ ಸಮಲೋಚಕ ಸದಸ್ಯರಾಗಿ ಆಯ್ಕೆ ಮಾಡುವ ಬದಲು ಇಡೀ ಪ್ರತಿನಿಧಿ ಸಬೆಯನ್ನೇ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು" ಎಂದು ಪ್ರತಿಕ್ರಿಯಿಸಿದರು ಆಗಿನ ದಿವಾನರಿಗೆ ವಿಧಾನಪರಿಷತ್ ರಚಿಸುವುದಕ್ಕೆ ಒಲವಿರಲಿಲ್ಲ.

ಆದರೆ ಮೈಸೂರಿನ ಜನಸಮುದಾಯ "ಬ್ರಿಟಿಷ್ ಇಂಡಿಯಾ ಮತ್ತು ಟ್ರಾವಂಕೂರ್‌ನಲ್ಲಿರುವಂತೆ ವಿಧಾನ ಪರಿಷತ್ ರಚನೆ ಆಗಲೇ ಬೇಕು. ಈ ಮೂಲಲಕ ಜನರ ಅಗತ್ಯಗಳನ್ನು ಪ್ರತಿನಿಧಿಸುಂತೆ ಮಾಡಬಹುದು" ಎಂದು ಒತ್ತಾಯಿಸಿತು.

ಆಗ ಪ್ರಜಾಪ್ರತಿನಿಧಿಸಭೆಯ ಕೆಲವು ಸದಸ್ಯರು, "ತಮ್ಮ ಸಭೆಯ ೨೭ರ ಸದಸ್ಯರು ಮಾಡುವ ಕೆಲಸವನ್ನು ಕೆಲವೇ ಮಂದಿ ಮಾಡುವುದು ಹೇಗೆ ಸಾಧ್ಯ? ಟ್ರಾವಂಕೂರ್‌ನಲ್ಲಿ ಪ್ರತಿನಿಧಿ ಸಭೆ ಇಲ್ಲದ್ದರಿಂದ ಪರಿಷತ್ ರಚನೆಯಾಗಿದೆ" ಎಂಬ ತಕರಾರು ತೆಗೆದರು.

೧೯೦೧ ರಲ್ಲಿ ವಿಧಾನ ಸಭೆಯಲ್ಲಿ, "ಶಾಸನ ರಚನೆ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರ ಪ್ರತಿನಿಧಿ ಸಭೆಯನ್ನು ಆಹ್ವಾನಿಸಬಹುದು. ಅದು ಸಾಧ್ಯವಿಲ್ಲ ಎಂದಾದರೆ ಮಾತ್ರ ಪರಿಷತ್ ರಚಿಸಬಹುದು" ಎಂಬ ನಿಲುವು ವ್ಯಕ್ತವಾಯಿತು.

ಮೈಸೂರು ಮಹಾರಾಜರು ಈ ಪ್ರಕ್ರಿಯೆ ಚುರುಕುಗೊಳ್ಳುವಂತೆ ಎಚ್ಚರ ವಹಿಸಿದರು. ಕಾರ್ಯನುಭವ, ವಿಶೇಷ ಜ್ಞಾನ ಮತ್ತು ಸ್ಥಳೀಯ ಪರಿಸ್ಥಿತಿ ಅರಿತ ಜನರಿಂದ ಮಾತ್ರ ಕಾಯ್ದೆ ರೂಪಿಸುವುದು ಸಾಧ್ಯ ಎಂಬ ಮಹಾರಾಜರ ನಂಬಿಕೆ ಮತ್ತು ಒತ್ತಡದ ಫಲವಾಗಿ ಬ್ರಿಟಿಷ್ ಸರ್ಕಾರ ೧೯೦೭ರ ಮಾರ್ಚ್ ೬ರಂದು ವಿಧಾನ ಪರಿಷತ್ ರಚನೆಗೆ ನಿರ್ಧರಿಸಿ ಶಾಸನ ಹೊರಡಿಸಿತು.

ನೂತನವಾಗಿ ರಚನೆಯಾದ ವಿಧಾನ ಪರಿಷತ್‌ನಲ್ಲಿ ಐವರು ಅಧಿಕಾರೇತರ ಸದಸ್ಯರು ಐವರು ಅಧಿಕಾರಿ ಸದಸ್ಯರು ಮತ್ತು ಮಹಾರಾಜರ ಕಾರ್ಯಕಾರಿ ಮಂಡಳಿ ಸದಸ್ಯರಿದ್ದರು. ರಾಜ್ಯ ವಿಧಾನ ಪರಿಷತ್ ಮೊದಲು ಸಭೆ ಸೇರಿದ್ದರು ೧೯೦೭ರ ಜುಲೈ ೨೪ರಂದು, ದಿವಾನ್ ವಿ.ಪಿ. ಮಾಧವ ರಾವ್ ಅಧ್ಯಕ್ಷತೆ ವಹಿಸಿದ್ದರು.

ಮೊದಲ ಸಭೆಯಲ್ಲೇ ದಿವಾನರು; "ಸೂರ್ಯ, ಭೂಮಿಯಿಂದ ನೀರು ಪಡೆದು ಅದನ್ನು ಮಳೆಯ ರೂಪದಲ್ಲಿ ಮಾರುಪಟ್ಟು ಹೇಗೆ ಹಿಂದಿರುಗಿಸುತ್ತಾನೋ, ಹಾಗೆ ಮಹಾರಾಜರು ಪ್ರಜೆಗಳ ಹಿತಕ್ಕಾಗಿ ತೆರಿಗೆ ಸಂಗ್ರಹಿಸುತ್ತಾರೆ. ಅದರ ಬಗ್ಗೆ ಯಾವುದೇ ಶಂಕೆ ಇಲ್ಲದೆ ತೆರಿಗೆ ಪಾವತಿಸಬೇಕು" ಎಂದು ಮನವಿ ಮಾಡಿದರು.

"ಜನರ ಬೇಡಿಕೆ ಮತ್ತು ಇಚ್ಛೆಗಳನ್ನು ಸರ್ಕಾರಕ್ಕೆ ಮುಟ್ಟಿಸುವುದು ವಿಧಾನ ಪರಿಷತ್‌ನ ಪ್ರಮುಖ ಪಾತ್ರ ಆಯಾ ಕ್ಷೇತ್ರಗಳ ಪರಿಣತರಿಂದ ಚರ್ಚೆಯಾದ ನಂತರ ಆ ಬಗ್ಗೆ ಸರ್ಕಾರಕ್ಕೆ ಮನವಲಿಕೆ ಮಾಡಿಕೊಡುವುದು ಪರಿಷತ್‌ನ ಜವಾಬ್ದಾರಿ. ಜನರ ನಾಡಿಮಿಡಿತಕ್ಕೆ ತಕ್ಕಂತೆ ತಜ್ಞರ ನೆರವು ಪಡೆದು ಕಾನೂನು ರೂಪಿಸುವುದು ಕೂಡ ಪರಿಷತ್‌ನ ಕೆಲಸ. ಸಮಾಜದ ಎಲ್ಲ ವರ್ಗ ಮತ್ತು ಸ್ತರಗಳ ಹಿತಾಸಕ್ತಿ ಪರಿಷತ್ ಮೂಲಕ ಬಿಂಬಿತವಾಗಬೇಕು" ಎಂಬುದನ್ನು ದಿವಾನರು ಮೊದಲ ಸಭೆಯಲ್ಲೇ ಸ್ಪಷ್ಟಪಡಿಸಿದರು.

ನೂತನವಾಗಿ ರಚನೆಯಾದ ಪರಿಷತ್‌ನಲ್ಲಿ ಕೆಲವು ಸಮುದಾಯಗಳ ಹಿತ ಕಾಪಾಡಲು ಪ್ರತಿನಿಧಿಗಳಿಲ್ಲ ಎಂಬ ಆರೋಪ ಕೇಳಿ ಬಂತು. ಈ ಮೊದಲಿನ ಕಾಯ್ದೆಯಿಂದ ವಂಚನೆಗೊಳಗಾದ ಸಮು

ದಾಯಕ್ಕೆ ಅವಕಾಶ ನೀಡುವುದೂ ಅಗತ್ಯ ಎಂದು ಬ್ರಿಟಿಷ್ ಸರ್ಕಾರಕ್ಕೆ ಮನವರಿಕೆಯಾಯಿತು. ವಕೀಲರು ಸೇರಿದಂತೆ ಬಹುತೇಕ ಸದಸ್ಯರು ಒಂದೇ ವರ್ಗಕ್ಕೆ ಸೇರಿದವರಾಗಿದ್ದುದೂ ಕೂಡಾ ಕೆಲವರ ಅಸಮಾಧಾನಕ್ಕೆ ಕಾರಣವಾಗಿತ್ತು.

ಪರಿಷತ್‌ನ ಆರಂಭದ ದಿನಗಳಲ್ಲಿ ಬಜೆಟ್ ಕುರಿತ ಚರ್ಚೆಗೂ ಪರಿಷತ್‌ಗೆ ಅಧಿಕಾರ ಇರಲಿಲ್ಲ. ಜತೆಗೆ ಅಧಿಕಾರೇತರ ಸದಸ್ಯರನ್ನು ನೇಮಿಸುವ ಬದಲು ಚುನಾಯಿಸಬೇಕೆಂಬ ಒತ್ತಾಯವೂ ಪ್ರಬಲವಾಗಿ ಕೇಳಿ ಬಂತು" ಸದಸ್ಯರ ಗುಣಮಟ್ಟ ಅತಿ ಮುಖ್ಯವಾಗಿರುವುದರಿಂದ ಅಧಿಕಾರೇತರ ಸದಸ್ಯರಾಗಿ ನಿವೃತ್ತ ಅಧಿಕಾರಗಳಲ್ಲೇ ನೇಮಿಸಲಾಗುತ್ತಿದೆ" ಎಂದು ದಿವಾನರು ವಾದಿಸಿದರು.

ದಿವಾನರ ಈ ಹಠದ ಕಾರಣವಾಗಿಯೇ ಪರಿಷತ್‌ಗೆ ಮೊದಲ ಸಲ ನೇಮಕಗೊಂಡವರಲ್ಲಿ ಬಹುತೇಕರು ಅಯ್ಯಂಗಾರ್ ಮತ್ತು ರಾವ್‌ಗಳೇ ಆಗಿದ್ದರು. ಇದಕ್ಕೆ ಅಪವಾದ ಎಂಬಂತೆ ಕೆ.ಪಿ. ಪುಟ್ಟಣ್ಣ ಚೆಟ್ಟಿ ಎಚ್.ಜೆ. ಬಾಬಾರಾವ್ ಬಹದ್ದೂರ್ ಎಂ. ಮುತ್ತಣ್ಣ, ಎಂ. ಕಾಂತರಾಜ ಅರಸು. ಬಿ. ನಾಗಪ್ಪ ಮತ್ತು ಸಯ್ಯೆದ್ ಅಮೀರ್ ಹಸನ್ ಎಂಬ ಹೆಸರುಗಳೂ ಇದ್ದವು.

ರಂಗಸ್ವಾಮಿ ಅಯ್ಯಂಗಾರ್, ಶ್ರೀನಿವಾಸ ಅಯ್ಯಂಗಾರ್, ನರಸಿಂಹೈಯ್ಯಂಗಾರ್, ರಾಜಯ್ಯಂಗಾರ್, ರಂಗೈಯ್ಯಂಗಾರ್‌ಗಳು ಅದೆಷ್ಟೋ ವರ್ಷಗಳ ಕಾಲ ವಿಧಾನ ಪರಿಷತ್‌ನಲ್ಲೇ ಜಾಂಡಾ ಹೊಡೆದಿದ್ದರು, ಅಧಿಕಾರಿಗಳು ಮತ್ತು ವೃತ್ತ ಅಧಿಕಾರಿಗಳು ಬಹುಪಾಲು ಬ್ರಾಹ್ಮಣರೇ ಆಗಿರುತ್ತಿದ್ದ ಕಾರಣ ವಿಧಾನ ಪರಿಷತ್ ಅದೆಷ್ಟೋ ವರ್ಷಗಳ ಕಾಲ ಬ್ರಾಹ್ಮಣ ಸಾಮ್ರಾಜ್ಯವಾಗಿತ್ತು.

೧೩ ಸದಸ್ಯರಿದ್ದ ವಿಧಾನ ಪರಿಷತ್‌ನ ಬಲವನ್ನು ಕನಿಷ್ಠ ೧೫ಕ್ಕೆ ಮತ್ತು ಗರಿಷ್ಠ ೨೧ಕ್ಕೆ ಏರಿಸುವಂತೆ ೧೯೧೪ರಲ್ಲಿ ನಿರ್ಧರಿಸಲಾಯಿತು. ಅಧಿಕಾರೇತರ ಸದಸ್ಯರ ಖಾಲಿ ಬಿದ್ದ ಸ್ಥಾನಗಳನ್ನು ಪರೋಕ್ಷ ಚುನಾವಣೆ ಮೂಲಕ ಆಯ್ಕೆ ಮಾಡುವ ವ್ಯವಸ್ಥೆ ಜಾರಿಗೆ ಬಂತು. ಪ್ರತಿನಿಧಿ ಸಭೆಯ ಶಿಫಾರಸಿನಂತೆ ನೇಮಕ ಮಾಡುತ್ತಿದ್ದ ಸದಸ್ಯರ ಸಂಖ್ಯೆ ಎರಡರಿಂದ ನಾಲ್ಕಕ್ಕೆ ಏರಿತು. ನಾಲ್ಕು ಸದಸ್ಯರನ್ನು ಜಿಲ್ಲೆಗಳಿಂದ ಆಯ್ಕೆ ಮಾಡುವ ಪದ್ಧತಿಯೂ ಬಂತು. ಇದಕ್ಕಾಗಿ ಆಗಿನ ಎಂಟು ಜಿಲ್ಲೆಗಳನ್ನು ಎರಡು ಜಿಲ್ಲೆಗಳ ನಾಲ್ಕು ಗುಂಪುಗಳಾಗಿ ರಚಿಸಲಾಯಿತು. ಪ್ರತಿಯೊಂದು ಗುಂಪಿನಿಂದಲೂ ಪರಿಷತ್‌ಗೆ ಓರ್ವ ಸದಸ್ಯನನ್ನು ಆಯ್ಕೆ ಮಾಡಬೇಕಿತ್ತು. ಈ ಸದಸ್ಯರ ಆಯ್ಕೆಗೆ ಎಲ್ಲ ಜಿಲ್ಲೆಗಳಿಂದ ಮತದಾನದ ಹಕ್ಕು ಪಡೆದಿದ್ದವರ ಸಂಖ್ಯೆ ಕೇವಲ ೧೧,೨೫೦ ಇತ್ತು ಈ ೮ ಸದಸ್ಯರಲ್ಲಿ ತಾಂತ್ರಿಕವಾಗಿ ಈ ಮತದಾರರೇ ಆಯ್ಕೆ ಮಾಡಿದರೂ ಅವರ ನಾಮಕರಣ ಎನ್ನುವ ಶಾಸ್ತ್ರ ಮಾತ್ರ ಸರ್ಕಾರದಿಂದ ನಡೆಯುತ್ತಿತ್ತು ವಿವಿಧ ಪ್ರದೇಶಗಳ ಪ್ರತಿನಿಧಿಗಳು ಪರಿಷತ್‌ನಲ್ಲಿರಬೇಕೆಂಬ ಕಾರಣದಿಂದ ಈ ವ್ಯವಸ್ಥೆ ಜಾರಿಗೆ ಬಂತು.

ಹೆಚ್ಚಿನ ಆಸ್ತಿ ಅಥವಾ ಶೈಕ್ಷಣಿಕ ಅರ್ಹತೆ ಇದ್ದವರು ಮಾತ್ರ ಈ ಚುನಾವಣೆಯಲ್ಲಿ ಸ್ಪರ್ಧಿಸಬಹುದಾಗಿತ್ತು. ೩೦೦ ರೂಪಾಯಿ ಭೂಕಂದಾಯ ಅಥವಾ ೨೫ ರೂಪಾಯಿ ಮೊಹತರ್ಫಾ ಎಂಬ ಆಸ್ತಿ ತೆರಿಗೆ ಅಥವಾ ಇನಾಂದಾರರು ಸ್ಪರ್ಧಿಸಲು ಅರ್ಹರಾಗಿದ್ದರು. ಆದರೆ ಇವರಿಗೆ ಸಾಕಷ್ಟು ಇಂಗ್ಲಿಷ್ ಜ್ಞಾನ ಇರಬೇಕಿತ್ತು. ಜತೆಗೆ ಭಾರತೀಯ ಅಥವಾ ಇಂಗ್ಲೆಂಡ್‌ನ ವಿಶ್ವವಿದ್ಯಾನಿಲಯಗಳಿಂದ ಶಿಕ್ಷಣ ಪಡೆದು ಕನಿಷ್ಠ ಹತ್ತು ವರ್ಷಗಳಾಗಿರಬೇಕಿತ್ತು. ಅದರಂತೆ ಇವರೆಲ್ಲ ಯಾರು? ಸಹಜವಾಗಿಯೇ ಸಿರಿವಂತರು ಮತ್ತು ಅವರನ್ನು ಓಲೈಸುವ ಜ್ಞಾನ ಸಂಪತ್ತಿನ ಮೇಲ್ಜಾತಿಯವರು,

ಪರಿಷತ್‌ನ ಆರಂಭದ ದಿನಗಳಲ್ಲಿ ಬಜೆಟ್ ಕುರಿತ ಚರ್ಚೆಗೂ ಪರಿಷತ್‌ಗೆ ಅಧಿಕಾರ ಇರಲಿಲ್ಲ.

೧೯೧೭ರಲ್ಲಿ ಪರಿಷತ್ ಅವಧಿಯನ್ನು ಎರಡರಿಂದ ಮೂರು ವರ್ಷಗಳಿಗೆ ವಿಸ್ತರಿಸುವಂತೆ ಪ್ರತಿನಿಧಿ ಸಭೇ ಶಿಫಾರಸು ಮಾಡಿ ಅದು ೧೯೧೭ ರಲ್ಲಿ ಕಾರ್ಯರೂಪಕ್ಕೆ ಬಂತು.

೧೯೧೮ ರಲ್ಲಿ ಬಜೆಟ್ ಕುರಿತು ಚರ್ಚಿಸಲು ಹಣಕಾಸು ಸಮಿತಿ ರಚಿಸಲಾಯಿತು. ಅದಕ್ಕೆ ಪರಿಷತ್‌ನಿಂದ ಓರ್ವ ಅಧಿಕಾರೇತರ ಸದಸ್ಯರನ್ನು ಆಯ್ಕೆ ಮಾಡಿ ಕಳಿಸುವಂತೆ ಸೂಚಿಸಲಾಯಿತು.

೧೯೧೯ರಲ್ಲಿ ಪರಿಷತ್ ಸದಸ್ಯರ ಸಂಖ್ಯೆಯನ್ನು ೨೧ ರಿಂದ ೭೦ಕ್ಕೆ ಏರಿಸಲಾಯಿತು. ೧೨ ಅಧಿಕಾರಿ ಸದಸ್ಯರು ಮತ್ತು ೧೮ ಅಧಿಕಾರೇತರ ಸದಸ್ಯರು ಪ್ರತಿಯೊಂದು ಜಿಲ್ಲೆಯಿಂದಲೂ ಓರ್ವ ಸದಸ್ಯನನ್ನು ಆಯ್ಕೆ ಮಾಡುವ ವ್ಯವಸ್ಥೆ ಜಾರಿಗೆ ಬಂತು. ಮೈಸೂರು ವಿಶ್ವವಿದ್ಯಾನಿಲಯಕ್ಕೂ ಕೂಡಾ ಓರ್ವ ಸದಸ್ಯರನ್ನು ಕಳಿಸುವ ಅಧಿಕಾರ ನೀಡಲಾಯಿತು. ಬೌದ್ಧಿಕ ಸಂಪನ್ಮೂಲ ಇರುವಂಥವರೂ ಪರಿಷತ್ ಒಳಹೊಕ್ಕಬೇಕೆಂಬ ಕಾರಣದಿಂದ ಈ ನಿರ್ಧಾರ ಕೈಗೊಳ್ಳಲಾಯಿತು.

ಸ್ಥಳೀಯ ಸಂಸ್ಥೆಗಳಿಂದ ಪರೋಕ್ಷ ಚುನಾವಣೆಯ ಮೂಲಕ ಸದಸ್ಯರನ್ನು ಆಯ್ಕೆ ಮಾಡುವ ಪದ್ಧತಿ ಜನಸಾಮಾನ್ಯರಿಗೆ ಸುತಾರಾಂ ಇಷ್ಟವಿರಲಿಲ್ಲ. ತಮ್ಮೊಂದಿಗೆ ನೇರ ಸಂಪರ್ಕ ಇದ್ದು, ತಮ್ಮ ಕಷ್ಟಸುಖಗಳಲ್ಲಿ ಭಾಗಿಯಾಗುವ ವ್ಯಕ್ತಿಯನ್ನು ಆರಿಸುವ ಅಧಿಕಾರ ಬೇಕೆಂಬ ಒತ್ತಾಯ ಜನ ಸಮುದಾಯದಲ್ಲಿ ಕೇಳಿ ಬಂತು, ಆಗ ಪ್ರತಿನಿಧಿ ಸಭೆಯ ಆಯಾ ಜಿಲ್ಲೆಗಳ ಮತದಾರರೇ ಈ ಸದಸ್ಯರನ್ನು ಆಯ್ಕೆ ಮಾಡುವ ಹಕ್ಕು ಪಡೆದರು. ಈ ಬೆಳವಣಿಗೆಗಳ ಜತೆಯಲ್ಲೇ ಅಭ್ಯಾರ್ಥಿಗಳ ಆಸ್ತಿ ಅರ್ಹತೆ ನಿಯಮಗಳನ್ನು ಸಡಿಲಗೊಳಿಸಲಾಯಿತು. ಸಮಿತಿ ಭೂಕಂದಾಯ ೧೦೦ ರೂಪಾಯಿ ಅಥವಾ ಮಹತರ್ಫಾ ತೆರಿಗೆ ೧೫ ರೂಪಾಯಿ ಪಾವತಿಸುವವರೂ ಪರಿಷತ್ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶ ಪಡೆದರು ಅಂದರೆ ಸ್ಪರ್ಧಿಸುವ ಹಕ್ಕು ಭಾರೀ ಶ್ರೀಮಂತರಿಗಷ್ಟೇ ಅಲ್ಲ ಅನ್ನುವುದು ಇದರ ಹಿಂದಿನ ಪ್ರೇರಣೆಯಾಗಿತ್ತು.

ಆರಂಭದಲ್ಲಿ ಪರಿಷತ್‌ನಲ್ಲಿ ಸಮಯದ ಸದ್ಬಳಕೆಯಾಗುತ್ತಿತ್ತು. ಅರ್ಥಪೂರ್ಣ ಚರ್ಚೆ ನಡೆಯುತ್ತಿತ್ತು. ಸದಸ್ಯರು ಪರಸ್ಪರ ಗೌರವದಿಂದ ಇನ್ನೊಬ್ಬರ ಅಭಿಪ್ರಾಯ, ಚಿಂತನೆಗಳನ್ನು ಸಹನೆಯಿಂದ ಆಲಿಸುತ್ತಿದ್ದರು. ಬಜೆಟ್ ಅಧಿವೇಶನವಂತೂ ಸಾಕಷ್ಟು ಮಾಹಿತಿ ಮತ್ತು ಶೈಕ್ಷಣಿಕ ಪ್ರಚೋದನೆ ಒದಗಿಸುವಂತಿತ್ತು. ದಿವಾನರೇ ಸಭೆಯ ಅಧ್ಯಕ್ಷತೆ ವಹಿಸುತ್ತಿದ್ದರು.

ಪರಿಷತ್‌ನ ಕಲ್ಪನೆ, ಬೆಳವಣಿಗೆಯ ನಿರೀಕ್ಷೆ ಹೇಗಿತ್ತು ಎಂಬುದಕ್ಕೆ ೧೯೧೭ರ ಜೂನ್ ೩೦ ರಂದು ಆರ್ಥಿಕ ಕಾರ್ಯದರ್ಶಿಯಾಗಿದ್ದ ದಿವಾನ್ ಬಹದ್ದೂರ್ ರಾಜಮಂತ್ರ ಪ್ರವೀಣ ಜೆ.ಎಸ್. ಚಕ್ರವರ್ತಿ ಬಜೆಟ್ ಚರ್ಚೆಗೆ ನೀಡಿದ ಲವಲವಿಕೆಯು ಮತ್ತು ವಿಚಾರ ಪ್ರಚೋದಕ ಉತ್ತರವೇ ಸಾಕ್ಷಿಯಾಗಿದೆ.

"It has been our pleasant experience to see this garden of Gadget debate grow more and more beautiful every year and it is gratifying to all of us to note that the older part of the garden has not suffered in any way by the opening of the new. It is true that up to this time our beautiful garden has produced only a variety of flower-same of them fine and fragrant flowers and that we have seem little of fruit. But sir, the garden is yet young and I may assure all earnest lovers of fruit, I am myself one that the fruit will game in one time".

"At any rate we have every reason to feel gratified at the rate at which our garden is growing and expanding year by year. By and by I hope to get from this garden not only the flowers required for worship but also the fruits required for naivedya of the goddess in the temple. It is the sacred, the magnificent the fascinating temple of Mysore fiancée"

ಆದರೆ ಆಗ ಈ ದಿವಾನರು ಕಂಡ ಕನಸು ನನಸಾಗಿದೆಯೇ? ವೈವಿಧ್ಯಮಯ ಸುವಾಸನೆಯ ಹೂವುಗಳು ಪರಿಷತ್ ತೋಟದಲ್ಲಿ ಸುಗಂಧ ಬೀರುತ್ತಿವೆಯೇ? ಆಗ ಅರಳಿದ ಕೆಲವು ಹೂಗಳು ತಕ್ಕ ಫಲ ನೀಡಿವೆಯೇ?

ವಿಧಾನ ಪರಿಷತ್ ಸದಸ್ಯರ ಸಂಖ್ಯೆ ಆಗಿನ ೧೩ ರಿಂದ ಈಗಿನ ೭೫ಕ್ಕೇನೋ ಏರಿತು, ಸ್ಥಳೀಯ ಸಂಸ್ಥೆಗಳಿಂದ ಆಯ್ಕೆ, ವಿಧಾನ ಸಭೆಯಿಂದ ಆಯ್ಕೆ, ಪದವೀಧರ ಮತ್ತು ಶಿಕ್ಷಕ ಕ್ಷೇತ್ರಗಳಿಂದ ಆಯ್ಕೆಯ ಜತೆಗೆ ಸರ್ಕಾರದ ನಾಮಕರಣದವರೆಗೆ ಬೆಳೆಯಿತು.

ವಿಧಾನ ಪರಿಷತ್‌ನ ಆಶಯವಾದರೂ ಏನಿತ್ತು? ವಿಧಾನ ಸಭೆಗೆ ಆಯ್ಕೆಯಾಗಲು ವಂಚಿತರಾದವರು ವಿಧಾನ ಪರಿಷತ್‌ನಲ್ಲಿ ಸ್ಥಾನ ಪಡೆಯಬೇಕಿತ್ತು. ವಂಚಿತರಾದವರು ಎಂದರೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಪ್ರಾದೇಶಿಕ, ರಾಜಕೀಯ ಕಾರಣಗಳಿಂದ ಆಯ್ಕೆಯಿಂದ ವಂಚಿತರಾದವರು ಅವರು ದುರ್ಬಲ ಜಾತಿಯವರಿರಬಹುದು, ಕಲಾವಿದರು. ಸಾಹಿತಿಗಳಿರಬಹುದು, ಶಿಕ್ಷಣ ತಜ್ಞರಿರಬಹುದು, ಕಾನೂನು ಪಂಡಿತರಿರಬಹುದು, ಪ್ರಗತಿಪರ ಚಿಂತಕರಿರಬಹುದು, ಸಮಾಜದ ಒಟ್ಟಾರೆ ಪ್ರಗತಿ ಬಯಸುವ ಆರ್ಥಿಕ ತಜ್ಞರಿರಬಹುದು.

ಸ್ಥಳೀಯ ಸಂಸ್ಥೆಗಳು, ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳು, ವಿಧಾನ ಸಭೆಯಿಂದ ಆಯ್ಕೆಯಾಗುವವರು ಬಹುತೇಕ ರಾಜಕೀಯ ಕಾರಣಗಳಿಗೆ ಆಯ್ಕೆಯಾಗುತ್ತಿದ್ದಾರೆ. ಹನ್ನೊಂದು ಸದಸ್ಯರನ್ನು ಆಯ್ಕೆ ಮಾಡುವ ಅಧಿಕಾರ ಸರ್ಕಾರಕ್ಕಿದ್ದರೂ ಅಲ್ಲೂ ಕೂಡ ಅರ್ಹರು, ಪ್ರತಿಭಾವಂತರು, ದಕ್ಷರು, ಪ್ರಗತಿಪರರು, ಕ್ರಿಯಾಶೀಲರು, ಪ್ರಮಾಣಿಕರು, ದಿಟ್ಟರು, ವೈವಿಧ್ಯಮಯ ಸಂಸ್ಕೃತಿಗಳ ಪ್ರತಿನಿಧಿಗಳು ಸ್ಥಾನ ಪಡೆಯುವುದು ಸಾಧ್ಯವಾಗಿಲ್ಲ.

ಮೇಲ್ಮನೆ ಎಂದು ಕರೆಸಿಕೊಳ್ಳುವ ವಿಧಾನ ಪರಿಷತ್ ಸದ್ಯಕ್ಕೆ ರಾಜಕೀಯ ನಿರಾಶ್ರಿತರ ಗಂಜಿಕೇಂದ್ರವಾಗಿ ಪರಿವರ್ತನೆ ಹೊಂದಿದೆ. ವಿಧಾನ ಸಭಾ ಚುನಾವಣೆಯಲ್ಲಿ ಅವರು ಮಾಡಿದ ತಪ್ಪುಗಳು ಮತ್ತು ಸ್ಥಳೀಯ ಕಾರಣಗಳಿಂದ ಸೋಲನುಭವಿಸಿದವರು, ವಿಧಾನಸೌಧಕ್ಕೆ ಅಲೆದು ಚಪ್ಪಲಿ ಸವೆಸಿಕೊಂಡು ಸುಸ್ತಾದವರು, ಮುಖ್ಯಮಂತ್ರಿಗಳು ಎದುರು ಉದ್ದಂಡ ನಮಸ್ಕಾರ ಹಾಕುವವರು

ವಿಧಾನ ಪರಿಷತ್‌ನಲ್ಲಿ ನಗು ಬೀರುತ್ತಿದ್ದಾರೆ.

ವಿಧಾನ ಪರಿಷತ್‌ನ ಇಂಥ ಎಲ್ಲ ಆಯ್ಕೆ, ನಾಮ ಕರಣಗಳಲ್ಲಿ ಪ್ರಬಲ ಜಾತಿಗಳಾದ ಒಕ್ಕಲಿಗರು, ಲಿಂಗಾ ಯತರು, ಅಲ್ಪಸಂಖ್ಯಾರತೆಂಬ ಹೆಸರಲ್ಲಿ ಮುಸ್ಲಿಮರು ತುಳಿತಕ್ಕೆ ಒಳಗಾದವರೆಂಬ ಕಾರಣಕ್ಕೆ ದಲಿತರು ಮತ್ತು ಬುದ್ಧಿ ಬಲದಿಂದ ಬ್ರಾಹ್ಮಣರು ಸುಲಭವಾಗಿ ಅವಕಾಶ ಗಿಟ್ಟಿಸಿಕೊಳ್ಳುತ್ತಾರೆ. ಆದರೆ ಈ ಸಮುದಾಯಗಳಿಂದಾದರೂ ಅಸಲೀ ಅರ್ಹರು ಸ್ಥಾನ ಪಡೆಯುತ್ತಿದ್ದಾರೆಯೇ? ದಲಿತರಲ್ಲೂ ಅಷ್ಟೇ, ಎಡ ಮತ್ತು ಬಲಗಳ ಪೈಪೋಟಿಯಲ್ಲಿ ಕೊರಚ, ಕಾವಾಳ, ಕಂಬ ಟ್ಟಿಗಳೆಂಬ ಇತರ ದಲಿತ ಸಮುದಾಯಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಕೊಡಗಿನ ಪ್ರಾತಿನಿಧ್ಯದ ಪ್ರಶ್ನೆ ಬಂದಾಗ ಎಂ.ಸಿ. ನಾಣಯ್ಯ, ಎಂ.ಎಂ. ನಾಣಯ್ಯನವರ ಕೊಡವ ಜನಾಂಗಕ್ಕೆ ಮಣೆ ಹಾಕಲಾಗಿದೆಯೇ ಹೊರತು ಕೊಡಗಿನ ಇತರ ಮೂಲನಿವಾಸಿಗಳಾದ ಐರಿ, ಹೆಗ್ಗಡೆ, ಅಮ್ಮ ಕೊಡವರಿಗೆ ಮನ್ನಣೆ ನೀಡಿಲ್ಲ. ಹಾಗೇ ಮಡಿವಾಳರು, ಕ್ಷೌರಿಕರು, ಗಾಣಿಗರು, ಇಂಥ ಎಷ್ಟೋ ಅತ್ಯಂತ ಸಣ್ಣ ಸಮುದಾಯ ಗಳಿಗೆ ಸಾಮಾಜಿಕ ಅನ್ಯಾಯ ಮಾಡುವುದೇ ತಮ್ಮ ಹಕ್ಕೆಂದು ಈವರೆಗಿನ ಆಳುವ ಪ್ರಬಲಗಳು ಭಾವಿಸಿದ್ದಾರೆ.

ಇಂಥ ದುರ್ಬಲ ಜಾತಿಗಳ ಪ್ರತಿನಿಧಿಗಳು, ಕ್ರೀಡಾಪಟುಗಳು, ವಿಜ್ಞಾನಿಗಳು, ತಂತ್ರಜ್ಞರು, ಸಾಹಿತಿ, ಕಲಾವಿದರು, ತಮ್ಮ ಸಾಮರ್ಥ್ಯ, ಪ್ರತಿಭೆ, ಅನುಭವವನ್ನು ರಾಜ್ಯದ ಸರ್ವತೋಮುಖ ಪ್ರಗತಿಗೆ ಧಾರೆ ಎರೆಯಲು ಅವಕಾಶ ನೀಡುವಂತಾಗಬೇಕು.

ಇಂಥ ವಿಧಾನ ಪರಿಷತ್ ಎ.ಕೆ. ಸುಬ್ಬಯ್ಯ ಎಂಬ ಅಪರೂಪದ ರಾಜಕಾರಣಿಯ ಅವಧಿಯಲ್ಲಿ ಜೀವಂತವಾಗಿತ್ತು. ಎಂ.ಸತ್ಯನಾರಾಯಣರಾವ್ ಎಂಬ ಸರಳ, ಸಜ್ಜನ ವ್ಯಕ್ತಿಯೊಬ್ಬರಿಂದ ಗಮನ ಸೆಳೆದಿತ್ತು. ಈಗ ವಿಧಾನ ಪರಿಷತ್ ವಿಶೇಷ ಅಧಿಕಾರವನ್ನೇನೂ ಪಡೆದಿಲ್ಲ. ವಿಧಾನ ಸಭೆ ಅಂಗೀಕರಿಸಿದ ಮಸೂದೆಯನ್ನು ಪರಿಷತ್ ತಿರಸ್ಕರಿಸಿದರೂ ಅದು ವಿಧಾನಸಭೆಗೆ ವಾಪಸಾಗಿ ಅಂಗೀಕರವಾಗುತ್ತದೆ.

ಭಾರತದ ೨೯ ರಾಜ್ಯಗಳಲ್ಲಿ ಉತ್ತರ ಪ್ರದೇಶ, ಮಹಾರಾಷ್ಟ್ರ, ಕರ್ನಾಟಕ, ಬಿಹಾರ, ಜಮ್ಮು ಮತ್ತು ಕಾಶ್ಮೀರದಲ್ಲಿ ಮತ್ತೆ ವಿಧಾನ ಪರಿಷತ್ ಇದೆ. ಆಂಧ್ರ ಪ್ರದೇಶ ಮತ್ತು ತಮಿಳುನಾಡಿನಲ್ಲಿ ಹಿಂದೆ ಇತ್ತಾದರು ರಾಜಕೀಯ ಕಾರಣಗಳಿಂದ ರದ್ದಾಗಿದೆ. ಇಂಥ ವಿಧಾನ ಪರಿಷತ್ ಕೇವಲ ಬಿಳಿಯಾನೆ ಆಗಿರುವುದಲಿಂದ ಅದನ್ನು ರದ್ದುಪಡಿಸಿ ಎಂದು ವಾಟಾಳ್ ನಾಗರಾಜ್ ಈ ಹಿಂದೆ ಆಗಿಂದಾಗ್ಗೆ ದನಿ ಎತ್ತಿದ್ದರು, ವಿಚಿತ್ರ ಎಂದರೆ ಇದೇ ವಾಟಾಳ್ ವಿಧಾನ ಸಭೆ ಚುನಾವಣೆಯಲ್ಲಿ ಸೋತಾಗ ವಿಧಾನ ಪರಿಷತ್ ಪ್ರದೇಶಿಸಲು ವಿಫಲ ಪ್ರಯತ್ನ ನಡೆಸಿ ಅಚ್ಚರಿ ಹುಟ್ಟಿಸಿದ್ದರು.

ಈ ನೆಲದ ಎಲ್ಲ ಸಂಸ್ಕೃತಿಗಳ ಮಿಲನ, ಪ್ರತಿಭ ಸಂಗಮ, ವೈವಿಧ್ಯಮಯ ಅನುಭಾವಗಳ ಚರ್ಚೆಯ ಮಂಟಪವಾಗಲು ವಿಧಾನ ಪರಿಷತ್ ಹೊಸ ರೀತಿಯಲ್ಲಿ ಕಂಗೋಳಿಸಬೇಕು. ರಾಜಕೀಯ ವ್ಯವಸ್ಥೆ ಅದಕ್ಕಾಗಿ ಸಿದ್ಧವಾಗಬೇಕು. □

Statement about ownership and other particulars about newspaper

FORM IV

1.	Place of Publication	:	Bangalore
2.	Periodicity of its publication	:	Monthly
3.	Printer's Name	:	**S.R. Govindu**
	Nationality		Indian
	Address		63,Anjananagar, Vishwaneedam Post, Bangalore-560 091
4.	Publisher's Name	:	**S.R. Govindu**
	Nationality		Indian
	Address		3,Anjananagar, Vishwaneedam Post, Bangalore-560 091
5.	Editor's Name	:	**Indudhara Honnapura**
	Nationality		Indian
	Address		402,1st main,2nd Block, HBR Layout, Bangalore-560 043
6.	Name and address of individuals who own the newspaper and partners and share holders holding more than one percent of the total capital	:	Spoorthidhama, 63, Anjananagar, Vishwaneedam Post, Bangalore-560 091 (Sole proprietors)

I, S.R. Govindu, hereby declare that the particulars given above are true to the best of my knowledge and belief.

Sd/-
S.R. Govindu
Publisher

Date: 28-02-2006

ಗೋಧ್ರಾ ಹತ್ಯಾಕಾಂಡ

(೭ನೇ ಪುಟದಿಂದ)

ಗಳನ್ನೆತ್ತಿದರೆ ಗುಜರಾತ್‌ನ ಗೌರವಕ್ಕೆ ಧಕ್ಕೆಯಾಗುತ್ತದೆ. ಮಾನವ ಹಕ್ಕುಗಳ ಉಲ್ಲಂಘನೆ, ನರ್ಮದಾ ಅಣೆಕಟ್ಟಿನಿಂದ ನಿಜವಾಗಿ ಲಾಭ ಯಾರಿಗೆ ಎಂಬಿತ್ಯಾದಿ ಕೆಲವು ಪ್ರಶ್ನೆಗಳನ್ನು ಸದೆ ಬಡಿಯುವುದಕ್ಕೆ 'ಗುಜರಾತಿ ಗೌರವ' ನೆಪವಾಗಿಬಿಟ್ಟಿದೆ. ಪ್ರೊಪಾಗ್ಯಾಂಡಾ ಮೂಲಕ ಗುಜರಾತಿ ಮಧ್ಯಮವರ್ಗದವರನ್ನು ಎಷ್ಟು ಪರಿವರ್ತಿಸಲಾಗಿದೆಯೆಂದರೆ ಅವರು ಪರ್ಯಾಯ ಧೋರಣೆಯನ್ನು ಆಲಿಸಲೂ ಸಹನೆ ಕಳೆದುಕೊಂಡುಬಿಟ್ಟಿದ್ದಾರೆ. ನರ್ಮದಾ ಬಚಾವೋ ಆಂದೋಲನದ ಕಛೇರಿಗೆ ದಾಳಿ ನಡೆಯುವುದಕ್ಕೆ ಮತ್ತು ಮೇಧಾ ಪಾಟ್ಕರ್ ಗುಜರಾತ್‌ಗೆ ಕಾಲಿಟ್ಟರೆ ಹಲ್ಲೆ ಯತ್ನ ನಡೆಸುವುದಕ್ಕೆ ಇದೇ ಕಾರಣ. ಮತ್ತು ಚಿತ್ರ ಮಂದಿರದ ಮಾಲೀಕರು 'ಪರ್ಜಾನಿಯಾ'ದಂತಹ ಚಲನಚಿತ್ರಗಳನ್ನು ಪ್ರದರ್ಶಿಸಲು ಭಜರಂಗ ದಳದ ಭಯದಿಂದ ಹಿಂಜರಿಯುತ್ತಾರೆ. ಯಾಕೆಂದರೆ ಪೊಲೀಸರು ತಮಗೆ ರಕ್ಷಣೆ ಒದಗಿಸುತ್ತಾರೆಂಬ ನಂಬಿಕೆಯೇ ಅವರಿಗಿಲ್ಲ. ಸ್ಪಷ್ಟವಾಗಿ ಹೇಳುವುದಾದರೆ ಇದು ಸೀಮಿತ ಪ್ರಜಾಪ್ರಭುತ್ವ

ಎಂ. ಎಸ್. ಗೋಲ್ವಾಲ್ಕರ್‌ನ ಸೈದ್ಧಾಂತಿಕ ನಿಲುವಿನಿಂದ ಪ್ರೇರಣೆ ಪಡೆದುಕೊಂಡ ರಾಜಕೀಯ ಪಕ್ಷದಿಂದ ನಾವು ಇನ್ನೇನು ತಾನೆ ನಿರೀಕ್ಷಿಸಲು ಸಾಧ್ಯ? ಗೋಲ್ವಾಲ್ಕರ್ ೧೯೩೯ರಲ್ಲಿ ಬರೆದ ತನ್ನ 'ವಿ, ಅವರ್ ನೇಷನ್‌ಹುಡ್ ಡಿಫೈನ್ಡ್' ಕೃತಿಯಲ್ಲಿ ಈ ರೀತಿ ಹೇಳಿದ್ದಾನೆ: "ವಿದೇಶಿ ವರ್ಣಗಳು ಹಿಂದೂಸ್ಥಾನದಲ್ಲಿ ಹಿಂದುಗಳ ಮತ್ತು ಹಿಂದು ಸಂಸ್ಕೃತಿಯ ವೈಭವೀಕರಣ ಅಥವಾ ಹಿಂದು ರಾಷ್ಟ್ರದ ಹೊರತು ಬೇರೇನನ್ನೂ ಯೋಚಿಸುವಂತಿಲ್ಲ. ಅವರು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಂಡು ಹಿಂದು ವರ್ಣದ ಜತೆ ಬೆರೆತು ಹೋಗಬೇಕು ಅಥವಾ ಅವರು ಇಲ್ಲಿ ನೆಲೆಸಬೇಕೆಂದರೆ ಹಿಂದೂ ರಾಷ್ಟ್ರದ ಅಡಿಯಾಳುಗಳಾಗಿ, ಏನನ್ನೂ ನಿರೀಕ್ಷಿಸದೆ, ಯಾವುದೇ ಸೌಕರ್ಯಗಳನ್ನು ಪಡೆಯದೆ, ಮೀಸಲಾತಿ ಪಡೆಯದೆ– ನಾಗರಿಕ ಹಕ್ಕುಗಳನ್ನೂ ಪಡೆಯದೆ ನೆಲೆಸಬೇಕು." ಗುಜರಾತ್ ಇಂದು ಮಹಾತ್ಮ ಗಾಂಧೀಜಿಯವರ ಹಿಂದು–ಮುಸ್ಲಿಂ ಭ್ರಾತೃತ್ವದ ಹಾಗೂ ಕೋಮು ಸೌಹಾರ್ದದ ಪ್ರಯೋಗಶಾಲೆಯಾಗದೆ, ಗೋಲ್ವಾಲ್ಕರ್ ವಿಚಾರಧಾರೆಯ ಪ್ರಯೋಗ ಶಾಲೆಯಾಗಿ ಪರಿವರ್ತಿತವಾಗಿದೆ. ಈ ನಿಟ್ಟಿನಲ್ಲಿ ಸಂಘ ಪರಿವಾರ ಯಾವುದೇ ಅಂಜಿಕೆಯನ್ನೂ ವ್ಯಕ್ತಪಡಿಸುವುದಿಲ್ಲ. "ಹಿಂದು ರಾಷ್ಟ್ರಕ್ಕೆ ಸ್ವಾಗತ" ಎಂಬ ಫಲಕಗಳನ್ನು ರಾಜ್ಯಾದ್ಯಂತ ರಾರಾಜಿಸುತ್ತಿವೆ. ಆದರೆ ಎಲ್ಲರಿಗೂ ಇಲ್ಲಿ ಸ್ವಾಗತವಿಲ್ಲ ಎಂಬುದು ಕೂಡ ಇಲ್ಲಿ ಅರ್ಥಗರ್ಭಿತ. ಗುಜರಾತ್‌ನಲ್ಲಿ ಬಹಳಷ್ಟು ಮಂದಿ ಇನ್ನೂ ಅಂಧಕಾರದಲ್ಲಿಯೇ ಬದುಕುತ್ತಿದ್ದಾರೆ. ಬೆಳಕಿಗಾಗಿ ಕಾಯುತ್ತಲೇ ಇದ್ದಾರೆ.

ಸೌಜನ್ಯ 'ದಿ ಹಿಂದೂ'

ದಲಿತರು ಮತ್ತು ಕೋಮುವಾದ

ಕೋಮುವಾದ, ಮೂಲಭೂತವಾದ ಮತಾಂದತೆಗಳು, ಪರಮತ ಅಸಂಹಿಷ್ಣತೆ ಪರಧರ್ಮದ್ವೇಷ, ಬೆಳೆಸುತ್ತವೆ. ನಂತರ ನಡೆದ ಕೋಮು ಹಿಂಸಾಚಾರದಲ್ಲಿ ಮತೀಯ ಉನ್ಮಾದಕ್ಕೆ ಅಮಾಯಕ ಬಡಜನರು ಬಲಿಯಾಗುತ್ತಾರೆ. ಇಂತಹ ಕೋಮುಗಲಭೆಗಳಲ್ಲಿ ಹಣೆಗೆ ಕುಂಕುಮ ತಲೆಗೆ ಕೇಸರಿ ಬಟ್ಟೆ ಕಟ್ಟಿಕೊಂಡು, ಕೈಯಲ್ಲಿ ತ್ರಿಶೂಲ ತಲವಾರು ಸೀಮೆಎಣ್ಣೆ. ಬೆಂಕಿ ಪೊಟ್ಟಣ ಹಿಡಿದುಕೊಂಡು ಜೈ ಶ್ರೀರಾಮ, ಭಾರತ್ ಮಾತಾಕಿ ಜೈ ಎನ್ನುತ್ತಾ ಮುಂಚೂಣಿಯಲ್ಲಿರುವವರು ದಲಿತರು ಸಾವು ನೋವು ಆಗುವುದು ಜೈಲು ಸೇರುವುದು ಈ ವರ್ಗದವರೇ ಆಗಿರುತ್ತಾರೆ. ಬ್ರಾಹ್ಮಣರು ಮೇಲು ಜಾತಿಯವರು ಸಭೆ ಸಮಾರಂಭಗಳಲ್ಲಿ ಬಂದು ಭಾಷಣ ಮಾಡಿ ಜನರ ಭಾವನೆಗಳನ್ನು ಕೆರಳಿಸಿ ತ್ರಿಶೂಲ ತಲವಾರುಗಳನ್ನು ಕೊಟ್ಟು ಮುಂದಿನ ಸಭೆಗಳಿಗೆ ಹೋಗುತ್ತಾರೆ.

ನರಸಿಂಹ ಗುಂಜಹಳ್ಳಿ

ದಲಿತ ಎಂಬುದು ಜಾತಿಯಲ್ಲ. ಯಾವ ಜನಸಮುದಾಯ ನೂರಾರು ವರ್ಷಗಳಿಂದ ಸಾಮಾಜಿಕ-ಆರ್ಥಿಕ, ರಾಜಕೀಯವಾಗಿ ಶೋಷಣೆಗೊಳಪಟ್ಟಿರುವ ಜಾತಿ ವಿಂಗಡನೆಗಳ ಚಾತುವರ್ಣ ಪದ್ಧತಿಯಲ್ಲಿ ಸೇರಿಸಲ್ಪಡದಿದ್ದ ಜಾತಿಬಾಹಿರ (out cost) ಎಂದು ಗುರುತಿಸಿರುವ ಜನಸಮುದಾಯಕ್ಕೆ "ದಲಿತ" ಎನ್ನುವರು. ಒಟ್ಟಾರೆ ದಲಿತ ಪರಿಶಿಷ್ಟ ಎಂದರೆ ಜಾತಿ-ಮತಧರ್ಮ ನಿರಪೇಕ್ಷ (ಸೆಕ್ಯುಲರ್) ಪದಗಳೇ ವಿನಾಃ ಜಾತಿಯಲ್ಲ. ದಲಿತರು ಮತ್ತು ಆದಿವಾಸಿಗಳು ತಮ್ಮ ಹೊಟ್ಟೆಪಾಡಿನ ವಿಷಯ ಬಿಟ್ಟು ಬೇರೇನೂ ಆಲೋಚನೆ ಮಾಡಲಾರದಷ್ಟು ಶ್ರಮಜೀವಿಗಳು. ಇಂತವರಲ್ಲಿ ಸಂಘಪರಿವಾರ ಕೋಮುವಾದಿ ಮನಸ್ಥಿತಿ ಉಂಟುಮಾಡಿ ಮತಾಂದತೆ ಬೆಳಸಿ ಪಕ್ಕದ ಮನೆಯ ಮುಸ್ಲಿಂರನ್ನು ಅತ್ಯಾಚಾರ ಮಾಡಿ. ಹತ್ಯೆ ಮಾಡುವಂತೆ ಉತ್ತೇಜಿಸುತಿದ್ದಾರೆ.

ಇಪ್ಪತ್ತನೆಯ ಶತಮಾನದಲ್ಲಿ ಜ್ಯೋತಿ ಬಾಪುಲೆ, ಮಿನಾಲಾಲ್ ಹರಿಕಾರ ಶಾಹು ಮಹಾರಾಜರಂತಹ ನಾಯಕರ ಹೋರಾಟದಿಂದ ಶೂದ್ರ-ದಲಿತರಲ್ಲಿ ಹಕ್ಕು ಪ್ರಜ್ಞೆ ಮತ್ತು ಸ್ವಾಭಿಮಾನ ಬದುಕು ಜಾಗ್ರತವಾಗುತ್ತಲಿತ್ತು ಇದರಿಂದ ಬ್ರಾಹ್ಮಣರು ಮತ್ತು ಮೇಲು ಜಾತಿಯವರು ಆತಂಕಗೊಂಡು ದಲಿತರ ಸ್ವಾಭಿಮಾನ ಬದುಕನ್ನು ನಾಶಮಾಡುವುದಕ್ಕೆ ೧೯೨೫ ರಲ್ಲಿ ಮಹಾರಾಷ್ಟ್ರದ ನಾಗಪುರದಲ್ಲಿ ಚಿತ್ಪಾವನ ಬ್ರಾಹ್ಮಣರು ವಿಜಯದಶಮಿ ದಿನದಂದು "ಹಿಂದುಗಳ ರಕ್ಷಣೆ ಎಂಬ ಹೆಸರಲ್ಲಿ K.R.S.S. ಅನ್ನು ಡಾ|| ಕೇಶವ ಬಲರಾಮ ಹೆಡ್ಗೆವಾರ್ ಸ್ಥಾಪಿಸಿದರು. K.R.S.S. ಪ್ರಮುಖ ಉದ್ದೇಶ ಜಾತಿವ್ಯವಸ್ಥೆ, ಅಸ್ಪೃಶ್ಯತೆ ಕಾಪಾಡಿಕೊಂಡು ಬರುವುದು. ಮತ್ತು ಆಧುನಿಕ ಶಿಕ್ಷಣ ಪ್ರಭಾವದಿಂದ ಮತ್ತು ಮತಾಂತರದಿಂದ ಜಾತಿ ಪದ್ಧತಿಯಿಂದ ಹೊರ ಹೋಗುತ್ತಿರುವ ದಲಿತರನ್ನು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಂಡು ಬೌದ್ಧಿಕ ಶ್ರಮದಿಂದ ಬದುಕುವ ಬ್ರಾಹ್ಮಣ್ಯ ಯಜಮಾನಿಕೆಯನ್ನು ಪು:ನ ಸ್ಥಾಪಿಸುವುದು. ಇದಕ್ಕೆ ಬೇಕಾಗುವ ಜನರ ಬೆಂಬಲಕ್ಕಾಗಿ ಎಲ್ಲಾ ಜಾತಿಯ ಜನರನ್ನು ಒಳಗೊಳ್ಳುವ ಹಿಂದು (ಪರ್ಶಿಯನ್ನರು ಸಿಂಧುನದಿಯ ಇಚೆಗೆ ವಾಸಿಸುವ ಜೈನರು ಬೌದ್ಧರು. ಮಹ್ಮದಿಯರು ಕ್ರಿಶ್ಚಿಯನ್ನರು ಸಿಖ್ಖರು ಶೂದ್ರ-ದಲಿತರು ಭಾರತದಲ್ಲಿರುವ ಎಲ್ಲಾ ಜಾತಿಯ ಜನರನ್ನು ಹಿಂದುಗಳು ಎಂದು ಕರೆದರು. ಆದರೆ ಸಂಘಪರಿವಾರ ಹಿಂದು ಎಂಬ ಪದದ ಅರ್ಥವನ್ನು ಸಂಕುಚಿತಗೊಳಿಸಿದೆ) ಎಂಬ ಪದವನ್ನು ಉಪಯೋಗಿಸಿಕೊಂಡಿತು. ಆದುದರಿಂದ ಹಿಂದು ಧರ್ಮವು ಮುಸ್ಲಿಂರ-ಕ್ರಿಶ್ಚಿನ್ನರಿಂದ ಅಪಾಯಕ್ಕೆ ಒಳಗಾಗಿದೆ ಎಂದು ನಮ್ಮಲ್ಲಾ ಕಷ್ಟಗಳಿಗೇ ಮುಸ್ಲಿಂ-ಕ್ರಿಶ್ಚಿಯನ್ನರೇ ಕಾರಣ ಎಂದು ಹೇಳುತ್ತಾ ಬಹು ಸಂಖ್ಯಾತ ಜನರು ಒಂದಾಗಲು ಮುಸ್ಲಿಂ-ಕ್ರಿಶ್ಚಿಯನ್ನರು-ಕಮ್ಯೂನಿಸ್ಟರು (ಸೈದ್ಧಾಂತಿಕವಾಗಿ ಬಹಳ ಪ್ರಬಲವಾದ ಶತ್ರು) ಎಂಬ ಹುಸಿ ಶತ್ರುವನ್ನು ನಿರ್ಮಿಸಿ. ದಲಿತರ ಕೆಳಜಾತಿಗಳ ದಾರಿದ್ರ್ಯಕ್ಕೆ ಕಾರಣವಾಗಿರುವ ಜಾತಿಪದ್ಧತಿ. ಅಸ್ಪೃಶ್ಯತೆ. ಜಮಿನ್ದಾರಿಪದ್ಧತಿಗಳನ್ನು ಮರೆಮಾಚಿತು.

೧೯೮೦-೯೦ರ ದಶಕದಲ್ಲಿ ಹಿಂದುತ್ವ ಮುಂಚೂಣಿಗೆ ಬರುತ್ತಿದ್ದಂತೆ ಮೂಲಭೂತವಾದಿ ಶಕ್ತಿಗಳ ಹೊಡೆತದಿಂದ ದಲಿತ ಸಾಹಿತ್ಯ ಬಂಡಾಯ ಸಾಹಿತ್ಯ ದಸಂಸ ಜನಪರ ಹೋರಾಟಗಳ ಸಂಘಟನಾತ್ಮಕ ರಾಜಕೀಯ ಶಕ್ತಿ ಸರ್ವನಾಶವಾಯಿತು. ಹಾಗು ಜಾಗತಿಕರಣ ಪ್ರಭಾವದಿಂದ ದಲಿತ ವಿರೋಧಿ ಶಕ್ತಿಗಳು ಜಾತಿ ಮತಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಈ ದೇಶದಲ್ಲಿ ಬಹಳ ಪ್ರಬಲವಾಗಿ ಬೆಳೆದವು. ಜಾಗತಿಕರಣದ ನವ ಆರ್ಥಿಕ ನೀತಿಗಳಿಂದ ಸರಕಾರಿ ಹುದ್ದೆಗಳ ಕಡಿತವಾಗಿರುವುದಿರಂದ ಮೀಸಲಾದ ಹುದ್ದೆಗಳು ಭರ್ತಿಯಾಗದೇ ಇರುವುದರಿಂದ ಶಿಕ್ಷಣ ಕ್ಷೇತ್ರದಲ್ಲಿ ಅದಿಕ ಶುಲ್ಕ ಇವುಗಳಿಂದ ದಲಿತ ಜನ ಸಮುದಾಯಗಳಲ್ಲಿ ಬಡತನ, ನಿರುದ್ಯೋಗ ಹೆಚ್ಚಾಗಿ ಬಹಳ ಇಕ್ಕಟ್ಟಿನಲ್ಲಿ ಸಿಲುಕಿತು ಇಂತಹ ಸಂದರ್ಭದಲ್ಲಿ ದಲಿತರ ನಾಯಕತ್ವ ಅಧಿಕಾರ ಆಸೆಯಿಂದ ಭ್ರಷ್ಟಚಾರಗೊಂಡಿರುವುದರಿಂದ ನಾಯಕತ್ವವಿಲ್ಲದೆ ದಲಿತ ಸಮುದಾಯ ಕೋಮುವಾದಿಗಳ ಜೊತೆ ಸೇರಿದರು. ಸಂಘಪರಿವಾರದವರು ದಲಿತ-ಆದಿವಾಸಿಗಳನ್ನು ಹಿಂದುಳಿದ ವರ್ಗದವರನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡು ಮೇಲು ಜಾತಿಯವರ ವಿರುದ್ಧ ಹೋರಾಡಲು ಸಂಘಟಿತರಾಗದಂತೆ ತಡೆ ಹಿಡಿದು ಅನ್ಯಧರ್ಮ ದ್ವೇಷ ಬೆಳಸಿ ಧಾರ್ಮಿಕ ಪ್ರತ್ಯೇಕತೆಯನ್ನು ಹುಟ್ಟು ಹಾಕಿತು.



ಕೌಟಿಲ್ಯನ ಅರ್ಥಶಾಸ್ತ್ರ ಮನುವಿನ ಮನುಸ್ಮೃತಿ, ಗೋಳ್ವಾಲಕರ ಚಿಂತನ ಗಂಗಾ (A Bunch of thoughts) ಈ ಬ್ರಾಹ್ಮಣರ ಪಠ್ಯಮಸ್ತಕಗಳು ಕೆಳಜಾತಿಗಳು ದಲಿತರು ಮೇಲು ಜಾತಿಗಳಿಗೆ ಅಧಿನಾಗಿರಬೇಕೆಂದು ಜಾತಿವ್ಯವಸ್ಥೆ. ಅಸ್ಪೃಶ್ಯತೆ (ಸಂಘಪರಿವಾರದ ಗೋಳ್ವಾಲಕರ್ ಜಾತಿವ್ಯವಸ್ಥೆ, ಅಸ್ಪೃಶ್ಯತೆ ವಿರುದ್ಧ ಹೋರಾಟ

ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದಾರೆ) ಶಾಶ್ವತವಾಗಿರ [illegible] ಸಾಗುತ್ತವೆ ಮತ್ತು ಬೆವರು ಸುರಿಸಿ ದುಡಿಯದೇ ಕೇವಲ ಬೌದ್ಧಿಕ ಜ್ಞಾನದಿಂದ ಬದುಕುತ್ತಿರುವ ವರ್ಗಗಳ ಹಿತಾಸಕ್ತಿಗಾಗಿ ಶೋಷಿತ ಜನ ಸಮುದಾಯಗಳ ಮೇಲೆ ನಡೆಯುವ ದೌರ್ಜನ್ಯ ದಮನ ಶೋಷಣೆ ದ್ರೋಹಗಳನ್ನು ಮಾನ್ಯಗೊಳಿಸಲು ಮತೀಯ ಗಲಭೆಗಳು, ರಕ್ತಪಾತ ಉಂಟುಮಾಡುತ್ತದೆ ಇದರ ಕಾರ್ಯ ಸಾಧನೆಗಾಗಿ ದಲಿತ-ಆದಿವಾಸಿಗಳನ್ನು ತನ್ನ ದಾಳಗಳನ್ನಾಗಿ ಉಪಯೋಗಿಸಿಕೊಳ್ಳುತ್ತಿದೆ. ಸಾಮಾಜಿಕವಾಗಿ-ರಾಜಕೀಯ ಸಾಂಸ್ಕೃತಿಕ ಹಾಗೂ ಆರ್ಥಿಕ ಸೌಲಭ್ಯಗಳು ದಲಿತರಿಗೆ ಇಂದು ನ್ಯಾಯಯುತವಾಗಿ ತಲುಪದೇ ಬಡತನದಿಂದ ನರಳುತ್ತಿದ್ದಾರೆ. ಅನಕ್ಷರತೆಯಿಂದ ಬಳಲುತ್ತಿದ್ದಾರೆ. ಇವುಗಳಿಂದ ಬಿಸಿನೆತ್ತರ ಯುವಜನರಲ್ಲಿ ಉಂಟಾಗಿರುವ ಅಸಹನೆ ಹತಾಶೆ. ಆಕ್ರೋಶ. ಕೋಪವನ್ನು ಸಂಘಪರಿವಾರದವರು ತೋರಿಸಿರುವ ತನ್ನ ಕಣ್ಣೆದುರಿಗೆ ಕಾಣುವ ಮುಸ್ಲಿಂ (ಮತೀಯ ಗಲಭೆಗಳಲ್ಲಿ)ರ ಮೇಲೆ ಸುಲಭವಾಗಿ ಹೊರಹಾಕುತ್ತಾರೆ. ಕೋಮುಗಲಭೆಗಳು ದಲಿತ ಸಮುದಾಯಗಳ ಸಾಂಸ್ಕೃತಿಕ ಮನಸ್ಸನ್ನು ಸರ್ವನಾಶ ಮಾಡಿ ದಲಿತ ಸಮುದಾಯಗಳನ್ನು ಗೊಂದಲಕ್ಕೆ ಒಳಪಡಿಸುತ್ತದೆ.

ಕೋಮುವಾದ, ಮೂಲಭೂತವಾದ ಮತಾಂದತೆಗಳು, ಪರಮತ ಅಸಂಹಿಷ್ಣತೆ ಪರಧರ್ಮದ್ವೇಷ, ಬೆಳೆಸುತ್ತವೆ. ನಂತರ ನಡೆದ ಕೋಮು ಹಿಂಸಾಚಾರದಲ್ಲಿ ಮತೀಯ ಉನ್ಮಾದಕ್ಕೆ ಅಮಾಯಕ ಬಡಜನರು ಬಲಿಯಾಗುತ್ತಾರೆ. ಇಂತಹ ಕೋಮುಗಲಭೆಗಳಲ್ಲಿ ಹಣೆಗೆ ಕುಂಕುಮ ತಲೆಗೆ ಕೇಸರಿ ಬಟ್ಟೆ ಕಟ್ಟಿಕೊಂಡು, ಕೈಯಲ್ಲಿ ತ್ರಿಶೂಲ ತಲವಾರು ಸೀಮೆಎಣ್ಣೆ. ಬೆಂಕಿ ಪೊಟ್ಟಣ ಹಿಡಿದುಕೊಂಡು ಜೈ ಶ್ರೀರಾಮ, ಭಾರತ್ ಮಾತಾಕಿ ಜೈ ಎನ್ನುತ್ತಾ ಮುಂಚೂಣಿಯಲ್ಲಿರುವವರು ದಲಿತರು ಸಾವು ನೋವು ಆಗುವುದು ಜೈಲು ಸೇರುವುದು ಈ ವರ್ಗದವರೇ ಆಗಿರುತ್ತಾರೆ. ಬ್ರಾಹ್ಮಣರು ಮೇಲು ಜಾತಿಯವರು ಸಭೆ ಸಮಾರಂಭಗಳಲ್ಲಿ ಬಂದು ಭಾಷಣ ಮಾಡಿ ಜನರ ಭಾವನೆಗಳನ್ನು ಕೆರಳಿಸಿ ತ್ರಿಶೂಲ ತಲವಾರುಗಳನ್ನು ಕೊಟ್ಟು ಮುಂದಿನ ಸಭೆಗಳಿಗೆ ಹೋಗುತ್ತಾರೆ. ಆರ್ಥಿಕವಾಗಿ ಸಾಮಾಜಿಕವಾಗಿ ಸಾಂಸ್ಕೃತಿಕವಾಗಿ ಪ್ರಬಲವಾಗಿರುವ ಬ್ರಾಹ್ಮಣ ಹಾಗೂ ಮೇಲುಜಾತಿಯವರು ಈಗ ರಾಜಕೀಯವಾಗಿ ಪ್ರಬಲವಾಗಿ ಬೆಳೆಯಲು ಧರ್ಮವನ್ನು ಬಳಸಿಕೊಂಡು ವೈದಿಕ ರಾಜಕಾರಣ ತರುತ್ತದೆ. ಭಾರತೀಯತೆ ಹಿಂದುತ್ವ ಧರ್ಮಗಳ ಮೂಲಕ ಎಲ್ಲರನ್ನು ಒಟ್ಟುಗೂಡಿಸಿ ರಾಜಕೀಯ ಅಧಿಕಾರ ಪಡೆದ ನಂತರ ಕೊನೆಗೆ ದಲಿತರು-ಆದಿವಾಸಿಗಳ ಮಧ್ಯ ಆಳವಾದ ದ್ವೇಷ ಬಿತ್ತಿ ಒಬ್ಬರನ್ನೊಬ್ಬರು ತಾವೇ ಹತ್ಯೆ ಮಾಡಿಕೊಳ್ಳುವಂತೆ ಮಾಡಿದರೂ ದಲಿತರೂ-ಆದಿವಾಸಿಗಳು ಈ ದೇಶಗಳ ಮೂಲ ನಿವಾಸಿಗಳಲ್ಲಾ ಎಂದು, ಅಲ್ಪಸಂಖ್ಯಾತರನ್ನು ಹೊರಗಡೆಯಿಂದ ಬಂದವರೆಂದು ಹೇಳಿದರೂ ಆಶ್ಚರ್ಯ ಪಡೆಯಬೇಕಾಗಿಲ್ಲ.

೧೯೯೦ ದಶಕದಲ್ಲಿ ಸಂಘಪರಿವಾರವು ರಾಮಜನ್ಮ ಚಳುವಳಿ ರಥೆಯಾತ್ರೆಗಳ ಮೂಲಕ ಜಾತಿಯುತ ಕೋಮು ವೈಷಮ್ಯ ವಿಷಬೀಜವನ್ನು ಅಮಾಯಕ ಜನರಲ್ಲಿ ಬಿತ್ತಿತ್ತು. B.J.P. ನೇತೃತ್ವದ NDA ಸರಕಾರದ ಮೂಲಭೂತವಾದಿಗಳು ಡಿಸೆಂಬರ್-೬ ೧೯೯೨ ರಂದು ಡಾ॥ ಬಿ.ಆರ್. ಅಂಬೇಡ್ಕರ್ ಪರಿನಿರ್ವಾಹಿತಾದಿನದಂದು ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದರೂ. ಸಂವಿಧಾನವನ್ನು

> ಕೋಮುವಾದವು ಮುಸ್ಲಿಂ ಕ್ರಿಶ್ಚಿಯನ್ನರಿಗಿಂತ ದಲಿತರಿಗೆ ಬಹಳ ಅಪಾಯಕಾರಿ ಏಕೆಂದರೆ ಮಾದರ ಚೆನ್ನಯ್ಯ ಡೋಹರ ಕಕ್ಕಯ್ಯ ಮಂಟೆಸ್ವಾಮಿ ಮಲೆಮಾದೇಶ್ವರ ಶಾಹು ಮಹಾರಾಜು ಜ್ಯೋತಿಬಾಪುಲೆ ಬುದ್ಧ ಬಸವಣ್ಣ ಅಂಬೇಡ್ಕರ್ ಕಾರ್ಲ್ ಮಾರ್ಕ್ಸ್ ಹೋರಾಟಗಳಿಂದ ದಲಿತರಲ್ಲಿ ಮೂಡಿರುವ ಸ್ವಾಭಿಮಾನ ಪ್ರಜ್ಞೆಯನ್ನು ನಾಶಮಾಡಿ ಪುನಾಃ ವರ್ಣಾಶ್ರಮ ಧರ್ಮದ ಚೌಕಟ್ಟಿನೊಳಗೆ ಬ್ರಾಹ್ಮಣ್ಯಯಜಮಾನ್ಯ ಸಂಸ್ಕೃತಿ ಅಧೀನಕ್ಕೆ ದೂಡುತ್ತದೆ ಮತ್ತು ಹಿಂದೂ ಮೂಲಭೂತವಾದಿಗಳು ಮುಸ್ಲಿಮರ ಹಾಗು ಕ್ರಿಶ್ಚಿಯನ್ನರ ಮೇಲೆ ದಾಳಿ ಮಾಡಿದರೆ ಈ ದೇಶದ ಪ್ರಜಾತಂತ್ರವಾದಿಗಳು ಹಾಗೂ ಅರಬ್ ರಾಷ್ಟ್ರಗಳು ಮತ್ತು ಕ್ರಿಶ್ಚಿಯನ್ನರ ರಾಷ್ಟ್ರಗಳು ಪರಿವಾರದವರ ದಾಳಿಯನ್ನು ವಿರೋಧಿಸುತ್ತವೆ. ಆದರೆ ದಲಿತರ ಮೇಲೆ ಮತಾಂದರು ದಾಳಿ ಮಾಡಿದರೆ ಈ ದೇಶದ ಸೆಕ್ಯುಲರ್ ಪ್ರಜಾಪ್ರಭುತ್ವದ ನಿಷ್ಠೆಯಿರುವವರು ಮಾತ್ರ ವಿರೋಧಿಸುತ್ತಾರೆ.

ಮರುಪರಿಶೀಲನೆ ಮಾಡಲು ಹೊರಟರು. ಮತ್ತು ಬುದ್ಧ ಮುಗುಳು ನಗುತ್ತಿದ್ದಾನೆಂದು ಹೇಳಿ ಬುದ್ಧಪೂರ್ಣಿಮೆ ದಿನದಂದು ಪೊಖ್ರಾನ್‌ನಲ್ಲಿ ಅಣುಬಾಂಬು ಸ್ಫೋಟಿಸಿದರು. ಈ ಮೇಲಿನ ಅಂಶಗಳನ್ನು ವಿಶ್ಲೇಷಣೆ ಮಾಡಿ ನೋಡಿದರೆ ಮುಸ್ಲಿಮರಿಗೆ ನೇರವಾಗಿ ಮತ್ತು ದಲಿತರಿಗೆ ಪರೋಕ್ಷವಾಗಿ ಬೆದರಿಕೆಯನ್ನು ತೋರಿಸುತ್ತಾ ಡಾ॥ ಬಿ.ಆರ್. ಅಂಬೇಡ್ಕರ್‌ರವರ ಹೋರಾಟದ ತತ್ವಗಳನ್ನು ವಿರೋಧಿಸುತ್ತಾ ಮೂಲಭೂತವಾದಿಗಳ ಮನುಧರ್ಮ ಶಾಸ್ತ್ರಕ್ಕೆ ಬಲವಾದ ಹೊಡೆತ ಕೊಟ್ಟಿರುವ ಡಾ॥ ಬಿ.ಆರ್. ಅಂಬೇಡ್ಕರರು ಬರೆದಿರುವ ಸಂವಿಧಾನದ ಪ್ರಸ್ತಾವನೆಯಲ್ಲಿ ಘೋಷಿತವಾಗಿರುವ ಸಮಾಜವಾದಿ-ಜಾತಿ ಮತಧರ್ಮ ನಿರಪೇಕ್ಷ (ಸೆಕ್ಯುಲರ್) ಸಮಾಜ ಸಂಸ್ಕೃತಿ ನಿರ್ಮಾಣ ಅಂಶಗಳನ್ನು ನಾಶ ಮಾಡಿ ಹಿಂದು ಜಾತಿ-ಮತಧರ್ಮವಾದಿ ರಾಷ್ಟ್ರ ನಿರ್ಮಾಣ ಮತ್ತು ವರ್ಣಶ್ರಮ ಪದ್ಧತಿ ಜಾರಿಗೆ ತರುವುದೇ ಸಂಘಪರಿವಾರದವರ ಬಹಳ ಮುಖ್ಯವಾದ ಗುರಿಯಾಗಿದೆ. ಆದುದರಿಂದ ದಲಿತ-ಜನಪರ ಹೋರಾಟಗಳನ್ನು ಮಹಿಳಾ ಹೋರಾಟಗಳನ್ನು ಸಂಘ ಪರಿವಾರದವರು ದಾರಿ ತಪ್ಪಿಸಿ ಜಾತಿ-ಮತಧರ್ಮವಾದಿ ಹೋರಾಟಗಳಾಗಿ ರೂಪಿಸುತ್ತಿದ್ದಾರೆ. ನಮ್ಮ ದೇಶದಲ್ಲಿ ಹಿಂದು ಮೂಲಭೂತವಾದಿ ಶಕ್ತಿಗಳು ಬೆಳೆಯುವುದರಿಂದ ನಮ್ಮ ದೇಶವು ಹಿಂದು ಜಾತಿ-ಮತಧರ್ಮವಾದಿ ರಾಷ್ಟ್ರವಾಗುವುದರಿಂದ ಪುರೋಹಿತಶಾಹಿ ರಾಜಕಾರಣ ಸೃಷ್ಟಿಯಾಗುವುದರಿಂದ ದಲಿತರ ಸ್ಥಾನ ಎಲ್ಲಿರುತ್ತದೆ? ಈ ವಿಷಯವನ್ನು ದಲಿತರು ಬಹಳ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ.

ಕೋಮುವಾದವು ಮುಸ್ಲಿಂ ಕ್ರಿಶ್ಚಿನ್ನರಿಗಿಂತ ದಲಿತರಿಗೆ ಬಹಳ ಅಪಾಯಕಾರಿ ಏಕೆಂದರೆ ಮಾದರ ಚೆನ್ನಯ್ಯ ಡೋಹರ ಕಕ್ಕಯ್ಯ ಮಂಟೆಸ್ವಾಮಿ ಮಲೆಮಾದೇಶ್ವರ ಶಾಹು ಮಹಾರಾಜು ಜ್ಯೋತಿಬಾಪುಲೆ ಬುದ್ಧ ಬಸವಣ್ಣ ಅಂಬೇಡ್ಕರ್ ಕಾರ್ಲ್ ಮಾರ್ಕ್ಸ್ ಹೋರಾಟಗಳಿಂದ ದಲಿತರಲ್ಲಿ ಮೂಡಿರುವ ಸ್ವಾಭಿಮಾನ ಪ್ರಜ್ಞೆಯನ್ನು ನಾಶಮಾಡಿ ಪುನಾಃ ವರ್ಣಾಶ್ರಮ ಧರ್ಮದ ಚೌಕಟ್ಟಿನೊಳಗೆ ಬ್ರಾಹ್ಮಣ್ಯ ಯಜಮಾನ್ಯ ಸಂಸ್ಕೃತಿ ಅಧೀನಕ್ಕೆ ದೂಡುತ್ತದೆ ಮತ್ತು ಹಿಂದೂ ಮೂಲಭೂತವಾದಿಗಳು ಮುಸ್ಲಿಮರ ಹಾಗು ಕ್ರಿಶ್ಚಿಯನ್ನರ ಮೇಲೆ ದಾಳಿ ಮಾಡಿದರೆ ಈ ದೇಶದ ಪ್ರಜಾತಂತ್ರವಾದಿಗಳು ಹಾಗೂ ಅರಬ್ ರಾಷ್ಟ್ರಗಳು ಮತ್ತು ಕ್ರಿಶ್ಚಿಯನ್ನರ ರಾಷ್ಟ್ರಗಳು ಪರಿವಾರದವರ ದಾಳಿಯನ್ನು ವಿರೋಧಿಸುತ್ತವೆ. ಆದರೆ ದಲಿತರ ಮೇಲೆ ಮತಾಂದರು ದಾಳಿ ಮಾಡಿದರೆ ಈ ದೇಶದ ಸೆಕ್ಯುಲರ್ ಪ್ರಜಾಪ್ರಭುತ್ವದ ನಿಷ್ಠೆಯಿರುವವರು ಮಾತ್ರ ವಿರೋಧಿಸುತ್ತಾರೆ.

ಸಂಘ ಪರಿವಾರದವರು ಹಿಂದುಗಳೆಲ್ಲಾ ಒಂದು-ಹಿಂದುಗಳೆಲ್ಲಾ ಒಂದು ಎಂದು ಹೇಳುತ್ತಾರೆ. ಸ್ವಾತಂತ್ರ್ಯ ಬಂದು ೬೦ ವರ್ಷಗಳಾದರೂ ಇನ್ನು ನಮ್ಮ ದೇಶದಲ್ಲಿ ಹಲವಾರು ಹಳ್ಳಿ ನಗರಗಳಲ್ಲಿ ಸವರ್ಣಿಯರ ಬಾವಿ, ಬೊರ್‌ವೆಲ್, ಕೆರೆ, ನೀರನ್ನು ಮುಟ್ಟುವಂತಿಲ್ಲ ಹಳ್ಳಿಗಳಲ್ಲಿ ಹೋಟೆಲ್‌ಗಳಲ್ಲಿ ಸವರ್ಣೀಯರೊಂದಿಗೆ ಕುಳಿತುಕೊಂಡು Tea, coffee ಕುಡಿವಂತಿಲ್ಲ. ಎಷ್ಟೋ ದೇವಸ್ಥಾನಗಳಿಗೆ ಇಂದಿಗೂ ಒಳಗೆ ಪ್ರವೇಶವಿಲ್ಲ. ಪ್ರತಿ ವರ್ಷ ನೂರಾರು ಹಿಂದು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಕಂಬಾಲಪಲ್ಲಿ ದಲಿತರ ಸಜೀವದಹನ, ಮಹಾರಾಷ್ಟ್ರದ ಖೈರ್ಲಂಜಿ ಘಟನೆ ಬಿಜಾಪುರ ಜಿಲ್ಲೆಯ ಕಡಕೋಳ ಘಟನೆ ಅಂಬೇಡ್ಕರ್ ಪ್ರತಿಮೆಗೆ ಅವಮಾನ ಇವುಗಳ ವಿರುದ್ಧ ಎಂದಾದರೂ ಸಂಘ ಪರಿವಾರದವರು ದನಿ ಎತ್ತಿದ ನಿದರ್ಶನಗಳು ಇಲ್ಲ. ಏಕೆಂದರೆ ಈ ಎಲ್ಲಾವುಗಳನ್ನು ಮಾಡಿದ್ದು ಮೇಲುಜಾತಿಯವರು ಹಾಗು ಆಳುವವರ್ಗಗಳು ಆದುದರಿಂದ ಸಂಘಪರಿವಾರ ಮೇಲುನೋಟಕ್ಕೆ ದಲಿತ-ಆದಿವಾಸಿಗಳನ್ನು ಅಪ್ಪಿಕೊಳ್ಳುತ್ತಾ ಆಳದಲ್ಲಿ ದಲಿತ-ಆದಿವಾಸಿಗಳನ್ನು ದ್ವೇಷಿಸುತ್ತಾ ಈ ದೇಶದ ಮೇಲು ಜಾತಿಯವರ, ಮತ್ತು ಆಳುವರ್ಗದ ಹಿತಾಸಕ್ತಿಯನ್ನು ರಕ್ಷಿಸುತ್ತದೆ. ಹಾಗು ಈ ಸಮಾಜದಲ್ಲಿ ಅಸಮಾನತೆ ಶೋಷಣೆ ಮತ, ಮೌಢ್ಯ. ಇವತ್ತಿನವರೆಗೂ ಶಾಶ್ವತವಾಗಿ ಮುಂದುವರೆಯಲು ಪುರೋಹಿತಶಾಹಿಗಳೇ ಕಾರಣ ಆದುದರಿಂದ ಹಿಂದುತ್ವವಾದಿಗಳ ಘೋಷಣೆ ಬೂಟಾಟಿಕೆ ಅಲ್ಲವೆ..?

ದಲಿತರಲ್ಲಿ ತಿಳುವಳಿಕೆ ಉಂಟಾಗಿದೆ. ಸಮಾನತೆ ಕೇಳುತ್ತಿದ್ದಾರೆ. ವಿದ್ಯಾವಂತರಾಗುವುದನ್ನು ಸ್ವಾಭಿಮಾನಿಯಾಗಿ ಬದುಕನ್ನು ಮೇಲುಜಾತಿಯವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಆದುದರಿಂದ ಮೇಲುಜಾತಿಯವರು ತಮ್ಮ ಆಕ್ರೋಶವನ್ನು ದಲಿತರ ಸಜೀವ ದಹನಗಳ ದಲಿತ ಮಹಿಳೆಯರ ಬೆತ್ತಲೆ ಮೆರವಣಿಗೆಗಳ ಅತ್ಯಾಚಾರಗಳ ಖೈರ್ಲಂಜಿ ಘಟನೆಗಳ ಡಾ॥ ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಅವಮಾನಗಳು ಮಾಡುವುದರ ಮೂಲಕ ತೀರಿಸಿಕೊಳ್ಳುತ್ತಿದ್ದಾರೆ. ಅಂದರೆ ೨೧ನೇ ಶತಮಾನದಲ್ಲಿ ಜಾತಿ ಪ್ರಜ್ಞೆ ಇನ್ನೂ ಜೀವಂತವಾಗಿದೆ ಎಂದರ್ಥ. ಇದರ ಬಗ್ಗೆ

ಸಂಘ ಪರಿವಾರ ಎಂದೂ ಕೂಡ ತುಟಿ ಬಿಚ್ಚದೇ ಗೋಹತ್ಯೆ ವಿರುದ್ಧ ಇಡೀ ಪ್ರಪಂಚಕ್ಕೆ ಕೇಳುವ ರೀತಿಯಲ್ಲಿ ಬಾಯಿ ಬಡುಕೊಳುತ್ತಿದೆ. ಇಂದು ಗೋವುಗಳನ್ನು ಮಾರಾಟ ಮಾಡುವುದು ಮತ್ತು ತಿನ್ನುವುದು ದಲಿತರು [ವೇದಗಳ ಕಾಲದಲ್ಲಿ ಆರ್ಯರು ದನದ ಮಾಂಸ ತಿನ್ನುತ್ತಿದ್ದರು. ಈ ವಾಕ್ಯವನ್ನು ಇತಿಹಾಸದ ಪುಸ್ತಕಗಳಿಂದ BJP ನೇತೃತ್ವದ NDA ಸರಕಾರದ ಮಾನವ ಸಂಪನ್ಮೂಲ ಸಚಿವ ಮುರಳಿ ಮನೋಹರ ಜೋಷಿ ತೆಗಿಸಿದ್ದಾರೆ] ಎಂದು ಈ ಪ್ರಪಂಚಕ್ಕೆ ಗೊತ್ತು. ಆದರೂ ಹಿಂದುತ್ವವಾದಿಗಳು ಈ ವಿಷಯವನ್ನು ಈ ಜಗತ್ತಿಗೆ ಸಾರಲು ಹೊರಟಿದೆ. ೨೦೦೨ ರಲ್ಲಿ ಹರಿಯಾಣದ ಝುಜ್ಜರುನಲ್ಲಿ ದಲಿತರು ಹಸುವನ್ನು ಸಾಯಿಸಿ ಚರ್ಮವನ್ನು ಸುಲಿದರೆಂದು ಆರೋಪಿಸಿ ೫ ದಲಿತ ಯುವಕರನ್ನು ಪೋಲಿಸ್ ಸ್ಟೇಷನ್ ಮುಂದೆಯೇ ಸಂಘ ಪರಿವಾರದವರೂ ಕೊಲೆಗೈದರೂ ವಸುದೇವ ಕುಟುಂಬಕ ಎಂದು ಬೊಗಳುವ ಪರಿವಾರದವರಿಗೆ ದಲಿತರ ಪ್ರಾಣಕಿಂತ ಹಸುವಿನ ಪ್ರಾಣವೇ ಮುಖ್ಯವಾಗಿರುವುದು ದುರದೃಷ್ಟ

ಸಂಘಪರಿವಾರದವರು ಹಿಂದುಗಳನ್ನು ದೇವತ ಮನುಷ್ಯರು–ಮುಸ್ಲಿಮರು ರಾಕ್ಷಸರು ಎಂಬ ಭಾವನೆಯನ್ನು ಸಾಮಾನ್ಯ ಜನರಲ್ಲಿ ಬೆಳೆಸುತ್ತಿದ್ದಾರೆ. ಆದರೆ ಕಂಬಾಲಪಲ್ಲಿ ಬೆಲ್ಚಿ, ಕಾರಂಬೇಡು. ಪೀಪಾ ಖೈರ್ಲಂಜಿಗಳಲ್ಲಿ ಹಿಂದು ದಲಿತರ ಸಜೀವ ದಹನ, ದಲಿತ ಸ್ತ್ರೀಯರ ಬೆತ್ತಲೆ ಮೆರವಣಿಗೆಗಳು ಅತ್ಯಾಚಾರ ನಡೆಸಿರುವುದು ಹಿಂದುಗಳೇ (ಮೇಲುಜಾತಿಯವರು) ವಿನಾಃ ಮುಸ್ಲಿಂ–ಕ್ರಿಶ್ಚಿಯನ್ನರಲ್ಲ. ಸಾಮಾಜಿಕನ್ಯಾಯ. ಸಮಾನತೆ, ಮಾನವೀಯತೆ ಬಯಸಿದ ಚಾರ್ವಾಕರು. ಬುದ್ಧ, ಬಸವಣ್ಣ, ಶರಣರು, ಕನಕ ಏಕಲವ್ಯ, ಶಂಭೂಕರನ್ನು ಪುರೋಹಿತಶಾಹಿವರ್ಗ ತುಳಿದಿದೆ ಹಾಗು ಸಾವಿರಾರು ವರ್ಷಗಳಿಂದ ಶೂದ್ರ–ದಲಿತ–ಆದಿವಾಸಿಗಳನ್ನು ಮಹಿಳೆಯರನ್ನು ತುಳಿಯುತ್ತಾ ಬಂದಿರುವುದು ಬ್ರಾಹ್ಮಣ್ಯದ ಇನ್ನೊಂದು ಮುಖವೇ ಹಿಂದು ಧರ್ಮ ಹೊರತು ಮುಸ್ಲಿಂ–ಕ್ರಿಶ್ಚಿಯನ್ ಧರ್ಮಗಳಲ್ಲ. ಹಾಗು ಜಾತಿವ್ಯವಸ್ಥೆ ಅಸ್ಪೃಶ್ಯತೆಯಿಂದ ಹಿಂದುಧರ್ಮ (ವರ್ಣಶ್ರಮಧರ್ಮ) ಕೂಡಿದೆ. ವರ್ಣಭೇದ, ಜಾತಿಭೇದ ಅಸ್ಪೃಶ್ಯತೆಯಿಂದ ಶೂದ್ರ–ದಲಿತರ ಮೇಲೆ ಹಿಡಿತ ಸಾಧಿಸಿರುವ ಬ್ರಾಹ್ಮಣ್ಯ ಪ್ರಜ್ಞೆಯಿಂದ ಸೃಷ್ಟಿಯಾಗಿರುವ "ಮನುಸ್ಮೃತಿ" ಶ್ರೇಣಿಕೃತ ಜಾತಿವ್ಯವಸ್ಥೆ ಸಮರ್ಥಿಸುವ ಗೋಳ್ವಾಲ್ಕರ್‌ನ "ಚಿಂತನ ಗಂಗಾ"ವೇ ಹೊರತು ಕುರಾನ್, ಬೈಬಲ್‌ಗಳಲ್ಲ. ಎನ್ನುವುದು ಸಂಘಪರಿವಾರದೊಳಗೆ ಇರುವ ಶೂದ್ರ–ದಲಿತ–ಆದಿವಾಸಿಗಳು ಅರ್ಥಮಾಡಿಕೊಳ್ಳಬೇಕು. ನಾವೆಲ್ಲಾ ಒಂದು –ಹಿಂದುಗಳೆಲ್ಲಾ ಒಂದು ಎಂದು ಹೇಳುವ ಸಂಘಪರಿವಾರದವರು ದಲಿತರಿಗೆ ಹಿಂದುಳಿದ ವರ್ಗದವರಿಗೆ ಕೊಡುತ್ತಿರುವ ಮೀಸಲಾತಿಯನ್ನು ವಿರೋಧಿಸುತ್ತದೆ. ೧೯೯೦ರ ದಶಕದಲ್ಲಿ ಮಂಡಲ ಕಮಿಷನ್ ಶಿಫಾರಸ್ಸಗಳನ್ನು ಜಾರಿಗೆ ತಂದು ಕೆಳಜಾತಿಗಳಿಗೆ ಸಮಾನ ಅವಕಾಶ ಕೊಡಲು ಹೊರಟಾಗ ಪರಿವಾರದವರು ರಾಮಜನ್ಮ ಚಳುವಳಿ ರಥಯಾತ್ರೆ, ನೆಪತೆಗೆದು ಮೇಲ್ಜಾತಿ ನಿರುದ್ಯೋಗಿ ಯುವಕರನ್ನು ಎತ್ತಿಕಟ್ಟಿ ಹಿಂಸಾಚಾರ ಸೃಷ್ಟಿಸಿ ಮಂಡಲವರದಿಯನ್ನು ಮೂಲೆಗೆ ತಳ್ಳಿತು. ಮತ್ತು ಕಳೆದ ವರ್ಷ ದಲಿತರಿಗೆ ಹಿಂದುಳಿದ ವರ್ಗದವರಿಗೆ ಉನ್ನತ ಶಿಕ್ಷಣದಲ್ಲಿ ಮೀಸಲಾತಿ ಕೊಡುವುದನ್ನು ವಿರೋಧಿಸಿ ಪರಿವಾರವು ಚಳುವಳಿ ನಡೆಸಿತು.

ಹಿಂದು ರಾಷ್ಟ್ರ ಸ್ಥಾಪನೆಯಾಗದಂತೆ ಯಾವುದೇ ಬೆಲೆ ತೆತ್ತಾದರೂ ತಡೆಯಬೇಕೆಂದು ಹೇಳಿದ ಡಾ॥ ಬಿ.ಆರ್. ಅಂಬೇಡ್ಕರ್‌ರವರ ವ್ಯಾಖ್ಯಾವನ್ನು ಪರಿವಾರದವರು ತಿರುಚಿ ಅಂಬೇಡ್ಕರ್ ರಾಮಮಂದಿರ ನಿರ್ಮಾಣ, ಹಿಂದು ರಾಷ್ಟ್ರನಿರ್ಮಾಣ ಅವರ ಆಶಯವಾಗಿತ್ತು ಎಂದು ಸುಳ್ಳು ಹೇಳುತ್ತಾ ದಲಿತರನ್ನು ದಲಿತರನ್ನು ಓಟುಬ್ಯಾಂಕ್‌ಗಾಗಿ, ಹಿಂದು ರಾಷ್ಟ್ರ ನಿರ್ಮಾಣಕ್ಕಾಗಿ ತನ್ನತ್ತ ಸೆಳೆದುಕೊಳ್ಳುವ ಪ್ರಯತ್ನ ನಡೆಸಿದೆ. ವಿರಾಟ್/ವಿಶಾಲ ಹಿಂದು ಸಮಾಜೋತ್ಸವಗಳಲ್ಲಿ ಹಿಂದುತ್ವ ವಿರೋಧಿಗಳಾದ, ಸೆಕ್ಯುಲರ್‌ವಾದಿಗಳಾದ ಬುದ್ಧ, ಬಸವ, ಅಂಬೇಡ್ಕರ್, ನಾರಾಯಣಗುರುಗಳಿಗೆ ಹಿಂದುತ್ವದ ಕೇಸರಿ ಹೊದಿಸಿ ಶೂದ್ರ–ದಲಿತ–ಆದಿವಾಸಿ ಚಳುವಳಿಯ ಸಾಮರ್ಥ್ಯವನ್ನು ಸಂಪೂರ್ಣವಾಗಿ ನಾಶಮಾಡಿ ದಲಿತರನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಂಡು ರಾಜಕೀಯ ಅಧಿಕಾರ ಪಡೆದು ಹಿಂದು ರಾಷ್ಟ್ರ ಸ್ಥಾಪನೆ ಮಾಡಲು ಸಂಚು ನಡೆಸಿದೆ. ಆದುದರಿಂದ ಅಫ್ಘನಿಸ್ತಾನದಲ್ಲಿ ತಾಲಿಬಾನ್‌ಗಳು, ಬುದ್ಧನ ಮೂರ್ತಿಗಳನ್ನು ಕೇಡವಿದಾಗ ಸಂಘಪರಿವಾರವು ವಿರೋಧಿಸಿತು.

ದಲಿತ ಜನಸಮುದಾಯ ಡಾ॥ ಬಿ.ಆರ್. ಅಂಬೇಡ್ಕರ್‌ರನ್ನು ಈಗಾಗಲೇ ನಮ್ಮ "ಆರಾಧ್ಯ ದೇವತೆ" ಎಂದು ನಂಬಿದ್ದಾರೆ. ಈ ನಂಬಿಕೆಯನ್ನು ಸರ್ವನಾಶ ಮಾಡುವ ಹುನ್ನಾರದಿಂದ ಸಂಘ ಪರಿವಾರದ ಅರುಣಶೌರಿ 'ಹುಸಿದೇವತೆಗಳ ಆರಾಧನೆ' (ಈ ಪುಸ್ತಕದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಬಗ್ಗೆ ಅಸಹನೆಯಿಂದ ಬರೆಯಲಾಗಿದೆ) ಎಂಬ ಪುಸ್ತಕವನ್ನು ಬರೆದಿದ್ದಾರೆ ಹಾಗೂ ಇದೇ ಸಂದರ್ಭದಲ್ಲಿ ದಲಿತರು ಸಂಘ ಪರಿವಾರದಿಂದ ದೂರ ಸರಿಯದಂತೆ ಇನ್ನೊಂದು ಕಡೆ ಅಂಬೇಡ್ಕರ್ ಮಹಾನ್ ವ್ಯಕ್ತಿತ್ವವುಳ್ಳವರು ಎಂದು ಹೇಳುತ್ತಿದ್ದಾರೆ. ಅಂದರೆ ಅಂಬೇಡ್ಕರರನ್ನು ಒಂದು ಕಡೆ ಅಪಮಾನಗೊಳಿಸಿ ಇನ್ನೊಂದು ಕಡೆ ಸಂಘ ಪರಿವಾರದಲ್ಲಿ ಸ್ಥಾನಕಲ್ಪಿಸುವ (ಹಿಂದು ಸಮಾಜೋತ್ಸಗಳನ್ನು ಅಂಬೇಡ್ಕರ್ ಭಾವ ಚಿತ್ರ ಬಳಸಿದ್ದು) ಪ್ರಯತ್ನ ಮಾಡುತ್ತದೆ. ನೂರಾರು ವರ್ಷಗಳಿಂದ ದಲಿತ ಆದಿವಾಸಿಗಳನ್ನು ಹಿಂದುತ್ವದ ಉಪಕರಣಗಳಂತೆ ಬಳಸಿಕೊಂಡಂತೆ ಇಂದು ಅಂಬೇಡ್ಕರ್, ಬುದ್ಧ, ಬಸವ, ನಾರಾಯಣಗುರುಗಳನ್ನು ಹೈಜಾಕ್ ಮಾಡಿ ಬಳಸಿಕೊಳ್ಳುತ್ತಿದ್ದಾರೆ.

ಅದನ್ನು ವಿರೋಧಿಸಿದ್ದು ಬುದ್ಧನ ಮೇಲೆ ಇದ್ದ ಅಭಿಮಾನದಿಂದಲ್ಲ ಅದನ್ನು ಮಾಡಿದ್ದು ತಾಲಿಬಾನ್(ಮುಸ್ಲಿಂ)ಗಳು ಎಂದು ಸಾರುತ್ತ ಭೌದ್ಧ ದಲಿತರನ್ನು ತನ್ನ ತೆಕ್ಕೆಯೊಳಗೆ ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ಭೌದ್ಧಧರ್ಮ ಹಿಂದುಧರ್ಮ (ವೈಧಿಕಧರ್ಮದ) ವಿರುದ್ಧ ಬಂಡೆದ್ದ ಧರ್ಮವಾಗಿದೆ. ಆದುದರಿಂದ ಬ್ರಾಹ್ಮಣವಾದವು ಈಗಲೂ ಅದನ್ನು ವಿರೋಧಿಸುತ್ತದೆ. ದಲಿತ ಜನಸಮುದಾಯ ಡಾ॥ ಬಿ.ಆರ್. ಅಂಬೇಡ್ಕರ್‌ರನ್ನು ಈಗಾಗಲೇ ನಮ್ಮ "ಆರಾಧ್ಯ ದೇವತೆ" ಎಂದು ನಂಬಿದ್ದಾರೆ.

ಈ ನಂಬಿಕೆಯನ್ನು ಸರ್ವನಾಶ ಮಾಡುವ ಹುನ್ನಾರದಿಂದ ಸಂಘ ಪರಿವಾರದ "ಅರುಣಶೌರಿ ಹುಸಿದೇವತೆಗಳ ಆರಾಧನೆ (ಈ ಪುಸ್ತಕದಲ್ಲಿ ಡಾ॥ ಬಿ.ಆರ್. ಅಂಬೇಡ್ಕರ್ ಬಗ್ಗೆ ಅಸಹನೆಯಿಂದ ಬರೆಯಲಾಗಿದೆ) ಎಂಬ ಪುಸ್ತಕವನ್ನು ಬರೆದಿದ್ದಾರೆ ಹಾಗೂ ಇದೇ ಸಂದರ್ಭದಲ್ಲಿ ದಲಿತರು ಸಂಘ ಪರಿವಾರದಿಂದ ದೂರಸರಿಯದಂತೆ ಇನ್ನೊಂದು ಕಡೆ ಡಾ॥ ಬಿ.ಆರ್. ಅಂಬೇಡ್ಕರ್ ಮಹಾನ್ ವ್ಯಕ್ತಿತ್ವವುಳ್ಳವರು ಎಂದು ಹೇಳುತ್ತಿದ್ದಾರೆ. ಅಂದರೆ ಡಾ॥ ಬಿ.ಆರ್. ಅಂಬೇಡ್ಕರರನ್ನು ಒಂದು ಕಡೆ ಅಪಮಾನಗೊಳಿಸಿ ಇನ್ನೊಂದು ಕಡೆ ಸಂಘ ಪರಿವಾರದಲ್ಲಿ ಸ್ಥಾನಕಲ್ಪಿಸುವ (ಹಿಂದು ಸಮಾಜೋತ್ಸಗಳನ್ನು ಅಂಬೇಡ್ಕರ್ ಭಾವ ಚಿತ್ರ ಬಳಸಿದ್ದು) ಪ್ರಯತ್ನ ಮಾಡುತ್ತದೆ. ನೂರಾರು ವರ್ಷಗಳಿಂದ ದಲಿತ ಆದಿವಾಸಿಗಳನ್ನು ಹಿಂದುತ್ವದ ಉಪಕರಣಗಳಂತೆ ಬಳಸಿಕೊಂಡಂತೆ ಇಂದು ಡಾ॥ ಬಿ.ಆರ್. ಅಂಬೇಡ್ಕರ್, ಬುದ್ಧ, ಬಸವ, ನಾರಾಯಣಗುರುಗಳನ್ನು ಹೈಜಾಕ್ ಮಾಡಿ ಬಳಸಿಕೊಳ್ಳುತ್ತಿದ್ದಾರೆ.

ದಲಿತರು ಶತಶತಮಾನಗಳಿಂದ ಹೋರಾಟ ಮಾಡಿ ವರ್ಣಾಶ್ರಮ ಪದ್ಧತಿಯಿಂದ ಬಿಡುಗಡೆಗೊಂಡು ನಿಟ್ಟುಸಿರು ಬಿಡುವಷ್ಟರಲ್ಲಿ ಜಾಗತೀಕರಣ ಎಂಬ ಪೆಡಂಭೂತ ದಲಿತರ ಮನೆ ಬಾಗಿಲ ಮುಂದೆ ಬಂದು ಕುಂತಿದೆ. ಇನ್ನೇನೂ ಜಾಗತೀಕರಣ ವಿರುದ್ಧ ಚಳುವಳಿ ರೂಪಿಸಬೇಕು ಎನ್ನುವಷ್ಟರಲ್ಲಿ ಸಂಘ ಪರಿವಾರವು ದಲಿತರ ಹೋರಾಟ ಪ್ರಜ್ಞೆಯನ್ನು ಸಂಘಟನಾತ್ಮಕ ರಾಜಕೀಯ ಶಕ್ತಿಯನ್ನು ನಾಶಮಾಡಿ ನಮ್ಮೆಲ್ಲಾ ಸಮಸ್ಯೆಗಳಿಗೆ ಅಂದರೆ ಹಸಿವು ಬಡತನ ಜಾತೀಯತೆ ಅಸ್ಪೃಶ್ಯತೆ ಮತಾಂತರ ಭಯೋತ್ಪಾದ ಇನ್ನಿತರ ಜನರ ದಿನ ನಿತ್ಯದ ಬದುಕಿನ ಸಮಸ್ಯೆಗಳಿಗೆ ಮತಾಂಧರು ಫ್ಯಾಸಿಸ್ಟ್ ಹಿನ್ನಲೆಯಲ್ಲಿ ಗ್ರಹಿಸಿ ಈ ಸಮಸ್ಯೆಗಳಿಗೆ "ಹಿಂದುತ್ವ"ವೇ ಎಂದು ಹೇಳುತ್ತಿದ್ದಾರೆ. ಹಿಂದುತ್ವದ ರಾಜಕಾರಣದ ಹಿಂದೆ ಧರ್ಮ ಹಿತಸಕ್ತಿಯಿಲ್ಲ ಜಾತಿ, ವರ್ಗ, ಹಿತಾಸಕ್ತಿ ಇದೆ ಹಿಂದುತ್ವ ಇತರರಿಗಿಂತಲೂ ದಲಿತರಿಗೆ ಬಹಳ ಅಪಾಯಕಾರಿ ಏಕೆಂದರೆ ಹಿಂದುತ್ವವು ದಲಿತರ ಅಸ್ತಿತ್ವ ಏಕತೆ ಸಂಸ್ಕೃತಿಗಳನ್ನು ಧ್ವಂಸ ಮಾಡಿ ಮೇಲು, ಕೀಳು, ತಾರತಮ್ಯ ಪ್ರಜ್ಞೆ, ವೈದಿಕ ಪ್ರಜ್ಞೆ ಶಾಶ್ವತವಾಗಿರಲು ಸಹಾಯ ಮಾಡುತ್ತದೆ.

ಡಾ॥ ಬಿ.ಆರ್. ಅಂಬೇಡ್ಕರ್‌ರವರು ಹಿಂದುಧರ್ಮ ಅಸ್ಪೃಶ್ಯರಿಗೆ ನರಕವಾಗಿದೆ ಎಂದು ತಿಳಿದುಕೊಂಡು ಭೌದ್ಧ ಧರ್ಮಕ್ಕೆ ಮತಾಂತರ ಹೊಂದಲು ಕರೆಕೊಟ್ಟರು. ದಲಿತರ ಮೇಲೆ ಹೇರಲಾಗಿರುವ ಅವಮಾನ, ಅನ್ಯಾಯದಿಂದ ಬಿಡುಗಡೆ ಹೊಂದಲು ಬದುಕಿನಲ್ಲಿ ಸಾರ್ಥಕತೆ ಕಂಡುಕೊಳ್ಳಲು ಸಾಮಾಜಿಕ ಉನ್ನತಿಗಾಗಿ ಸ್ವ ಇಚ್ಛೆಯಿಂದ ದಲಿತರು ಭೌದ್ಧಧರ್ಮ, ಕ್ರಿಶ್ಚಿಯನ್ ಧರ್ಮಗಳಿಗೆ ಮತಾಂತರಗೊಂಡರು. ದಲಿತರು ಯಾವುದೇ ಆಮೀಷ, ಬಲಾತ್ಕಾರ

ಎಂಬ ಮತಾಂತರಗಳಲ್ಲಿ ಜನರಿಂದ ಜಾತಿವಾದಿಗಳು ಭಯಗೊಂಡು ದಲಿತರು ಮತಾಂತರ ಮೂಲಕ ಜಾತಿ ವ್ಯವಸ್ಥೆಯಿಂದ ಹೊರ ಹೋಗುತ್ತಿರುವುದನ್ನು ನೋಡಿ ನಡುಗು ತೋಡಗಿದರು. ದಲಿತರ ಮೇಲೆ ನಡೆಯುತ್ತಿರುವ ಅತ್ಯಾಚಾರ ದೌರ್ಜನ್ಯ ದಬ್ಬಾಳಿಕೆಗಳ ವಿರುದ್ಧ ಎಂದು ಮಾತನಾಡದ ಕೋಮುವಾದಿಗಳು ದಲಿತರು ಮತಾಂತರ ಹೊಂದಿದ್ದರೆ ಮಾತ್ರ ಮಾತನಾಡುತ್ತಿದೆ. ಒಂದು ವೇಳೆ ಮತಾಂತರಗೊಂಡವರನ್ನು ಪುನಃ ಹಿಂದುಧರ್ಮಕ್ಕೆ ಮರಳಿ ಬಂದರೆ ಅವರನ್ನು ಯಾವ ಜಾತಿಗೆ ಯಾವ ಸ್ಥಾನಮಾನ ಕೊಡಲಾಗುತ್ತದೆ.?

ಕೋಮುವಾದಿಗಳು "ಹಿಂದು" ಎಂಬ ಪದ ಭಾರತದಲ್ಲಿ ರಾಷ್ಟ್ರವಾಚಕ ಪದವಾಗಿದೆಯೇ ಹೊರತು ಸಂಪ್ರಾದಾಯ, ಪಂಥ ವಾಚಕವಲ್ಲ ಎಂದು ಮತ್ತು "ಹಿಂದು" ಒಂದು "ಸಂಸ್ಕೃತಿ" "ಜೀವನ" ಪದ್ಧತಿ ಮತ್ತು ಒಂದು "ಸಮಾಜ" ಎಂದು ಹೇಳುತ್ತಾ ಈ ದೇಶವನ್ನು ವರ್ಣಾಶ್ರಮ ಧರ್ಮದ ಚೌಕಟ್ಟಿನೊಳಗೆ ತಂದು ವರ್ಣವ್ಯವಸ್ಥೆ ಜಾರಿಗೆ ತಂದು ಈ ದೇಶವನ್ನು ಹಾಗೂ ಕಮ್ಯುನಿಷ್ಟರು ಅಡ್ಡಿಯಾಗಿದ್ದಾರೆ. ಆದುದರಿಂದ ಅವರುಗಳ ವಿರುದ್ಧ ದೇಶ ಪ್ರೇಮದ ಹೆಸರಲ್ಲಿ ಹಿಂದುಗಳಲ್ಲಿ ದ್ವೇಷ ಕೆರಳಿಸಿ ಮತೀಯಗಲಭೆಗಳು ಸೃಷ್ಟಿಸಿ ಹಿಂದುಗಳಿಂದ ಮುಸ್ಲಿಂ-ಕ್ರಿಶ್ಚಿಯನ್, ಕಮ್ಯುನಿಷ್ಟರನ್ನು ಪ್ರತ್ಯೇಕಿಸುತ್ತಿದ್ದಾರೆ.

ವಿಶಾಲವಾದ ಪ್ರಜಾತಾಂತ್ರಿಕ ದೇಶವನ್ನಾಗಿ ಕಟ್ಟಬೇಕಾದರೆ ದಲಿತರಿಗೆ ಸಾಮಾಜಿಕ ನ್ಯಾಯ ಸಿಗಬೇಕು. ಆಗ ಮಾತ್ರ ಸಂವಿಧಾನದಲ್ಲಿರುವ ಸಮಾಜವಾದಿ ಜಾತಿ ಮತಧರ್ಮ ನಿರಪೇಕ್ಷಕ್ಕೆ ಅರ್ಥವಿರುತ್ತದೆ ಹಾಗೂ ಎಲ್ಲಾ ಬಡ ಹಿಂದು-ಮುಸ್ಲಿಂ-ಕ್ರಿಶ್ಚಿಯನ್‌ರಲ್ಲಿ ಉದಾರವಾದಿ ಹೋರಾಟದ ಅಲೆ ಏಳಬೇಕಾಗಿದೆ. ಆಗ ಮಾತ್ರ ಜನ ಕೇಂದ್ರೀತ ರಾಷ್ಟ್ರೀಯವಾದ ಪ್ರಬಲವಾಗಿ ಮತಿಯ ಹಿಂದುತ್ವ-ಹಿಂದು ಮೂಲಭೂತ ರಾಜಕಾರಣವನ್ನು ಸರ್ವನಾಶ ಮಾಡಬಹುದು ನಂತರ ಜನಪರರು ಪರಮತ ಸಂಹಿಷ್ಣತೆಯನ್ನು ವೈವಿಧ್ಯತೆಯಲ್ಲಿ ಐಕ್ಯತೆಯನ್ನು ಬಹು ಸಂಸ್ಕೃತಿಯಲ್ಲಿ ಐಕ್ಯತೆಯನ್ನು ಸಾರಬೇಕು ಆಗ ಮಾತ್ರ ಸೌಹರ್ದನಾಡು ಕಟ್ಟಬಹುದು. □

ಪು(ಪ)ಣ್ಯ ಕೋಟಿ



ಬಹಳಷ್ಟು ಮಹಿಳೆಯರು
ಇತಿಹಾಸದ್ದುದ್ದಕ್ಕೂ
"ಖಂಡವಿದೆ ಕೋ,
ಮಾಂಸವಿದೆ ಕೋ!'
ಎಂದು ಅರ್ಪಿಸಿಕೊಂಡು
ಬದುಕಿನ ಪು(ಪ)ಣ್ಯ ಕೋಟಿಗಳು!!

ಡಾ॥ ಸಿ.ಪಿ.ಕೆ

ಮತ್ತೆ ಕಾವೇರಿದ ಕಾವೇರಿ

(೨೯ನೇ ಪುಟದಿಂದ)

ದೆಂಬ ಕಾರಣ ಒಡ್ಡಿ ಕಾವೇರಿ ನಮ್ಮದು, ನಮ್ಮ ಹಕ್ಕು ಎಂದು ವಾದಿಸುವುದು ತಪ್ಪಾಗುತ್ತದೆ. ಒಂದು ಗಣತಂತ್ರ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ನಾವು ಯಾವುದೇ ನೈಸರ್ಗಿಕ ಸಂಪತ್ತು ಇಡೀ ರಾಷ್ಟ್ರದ ಸ್ವತ್ತೆಂದೇ ಪರಿಗಣಿಸಬೇಕಾಗುತ್ತದೆ. ಈ ನೈಸರ್ಗಿಕ ಸಂಪತ್ತನ್ನು ಹಂಚಿಕೊಂಡು ಸೌಹಾರ್ದತೆಯಿಂದ ಬಾಳುವುದನ್ನು ಪರಿಗಣಿಸಬೇಕಾಗುತ್ತದೆ.

ನ್ಯಾಯಾಂಗದಿಂದಾಗಲೀ, ಎಲ್ಲವನ್ನೂ ತಮ್ಮ ಅಧಿಕಾರದ ಸುಭದ್ರತೆಯ ದೃಷ್ಟಿಯಿಂದಲೇ ನೋಡುವ ರಾಜಕೀಯ ಪಕ್ಷಗಳಿಂದಾಗಲೀ, ಈ ವಿವಾದ ಪರಿಹಾರವಾಗುತ್ತದೆ ಎಂದು ಹೇಳಲಾಗುವುದಿಲ್ಲ. ಈ ಸಮಸ್ಯೆಗೆ ಜನರೇ ಪರಿಹಾರ ಕಂಡುಕೊಳ್ಳಬೇಕಾಗಿದೆ. ೨೦೦೨ ರ ಕಾವೇರಿ ಗಲಬೆಗಳ ನಂತರದಲ್ಲಿ ಎರಡೂ ರಾಜ್ಯದ ರೈತ ಸಂಘಟನೆಗಳು ಕಾವೇರಿ ಕುಟುಂಬ ಎಂಬ ವೇದಿಕೆಯನ್ನಾರಂಭಿಸಿ, ಪರಸ್ಪರ ಚರ್ಚೆಗಳ ಮೂಲಕ ನೀರಿನ ಹಂಚಿಕೆಯನ್ನು ಪರಿಹರಿಸಿಕೊಳ್ಳುವ ಮಾರ್ಗ ಅನುಸರಿಸಿದ್ದುದು ಸ್ವಾಗತಾರ್ಹ ಕ್ರಮವಾಗಿದ್ದು, ಪ್ರಸ್ತುತ ಈ ಮಾರ್ಗವೇಕೋ ಕಾಣದಾಗುತ್ತಿದೆ. ಇಡೀ ಕಾವೇರಿ ಸಮಸ್ಯೆ ಉದ್ಭವಿಸುವುದು ಮಳೆಯ ಪ್ರಮಾಣ ಕಡಿಮೆಯಾದಾಗ ಮಾತ್ರ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡರೆ, ಇಂತಹ ಅಭಾವದ ಸಮಯದಲ್ಲಿ ಎರಡೂ ರಾಜ್ಯಗಳಲ್ಲಿನ ನೀರಿನ ಲಭ್ಯತೆಯ ಪ್ರಮಾಣವನ್ನಾಧರಿಸಿ. ಯಾವ ರೀತಿಯ ಬೆಳೆಯನ್ನು ಬೆಳೆಯಬೇಕೆಂದು ರೈತರೇ ನಿರ್ಧರಿಬಹುದು.

ಕರ್ನಾಟಕದಿಂದ ತಮಿಳುನಾಡಿಗೆ ಹರಿಯುವ ನೀರಿನಲ್ಲಿ ಶೇ. ೩೦ ರಷ್ಟು ಸೋರಿಕೆ ಕಂಡುಬರುತ್ತಿದೆ ಎಂದು ನೀರಾವರಿ ತಜ್ಞರು ಹೇಳಿದ್ದಾರೆ. ಈ ಕುರಿತು ಕ್ರಮ ಕೈಗೊಂಡು, ಈ ಸೋರಿಕೆಯನ್ನು ನಿಲ್ಲಿಸುವಂತೆ ಎರಡೂ ರಾಜ್ಯಗಳ ಸರ್ಕಾರಗಳನ್ನು ಒತ್ತಾಯಿಸುವುದು ರೈತ ಸಂಘಟನೆಗಳ ಕರ್ತವ್ಯ. ಜಲಾಶಯಗಳಲ್ಲಿನ ಹೂಳಿನ ಪ್ರಮಾಣವನ್ನು ಅಳೆದು, ಹೂಳು ತೆಗೆಸುವ ಕಾರ್ಯವನ್ನೂ ಸರ್ಕಾರ ಶೀಘ್ರಗತಿಯಲ್ಲಿ ಮಾಡಬೇಕಾಗುತ್ತದೆ. ಬರಗಾಲದ ಪರಿಸ್ಥಿತಿಯಲ್ಲಿ ನೀರನ್ನು ಯಾವ ಪ್ರಮಾಣದಲ್ಲಿ ಹಂಚಿಕೊಳ್ಳಬೇಕೆಂದು ನಿರ್ಧರಿಸಲು ಒಂದು ಶಾಶ್ವತವಾದ ಸಮಿತಿಯನ್ನು ರಚಿಸುವುದು ಇಂದು ಅತ್ಯವಶ್ಯವಾಗಿದೆ. ಈ ಸಮಿತಿಯಲ್ಲಿ ನೀರಾವರಿ ತಜ್ಞರು, ತಾಂತ್ರಿಕ ವಿಶೇಷ ತಜ್ಞರು, ರೈತ ಮುಖಂಡರು, ಕೃಷಿ ವಿಜ್ಞಾನಿಗಳು ಮುಂತಾದವರು ಇರುವುದು ಲೇಸು. ರಾಜಕೀಯ ಶಕ್ತಿಗಳನ್ನು ಹೊರಗಿಡುವುದು ಇನ್ನೂ ಉತ್ತಮ.

ಈ ಸೂತ್ರಗಳ ಉದ್ದೇಶವೆಂದರೆ, ರೈತ ಸಮುದಾಯದ ರಕ್ಷಣೆ. ಇಂದು ಇಡೀ ರೈತ ಸಮುದಾಯವೇ ಬಿಕ್ಕಟ್ಟನ್ನು ಎದುರಿಸುತ್ತಿದೆ. ಭಾರೀ ಜಮೀನ್ದಾರರೂ, ಕಾಫಿ, ಅಡಿಕೆ ಬೆಳೆಯುವ ಪ್ಲಾಂಟೇಷನ್ ಮಾಲೀಕರೂ ಸಹ ಇಂದು ಜಾಗತೀಕರಣದ ಬಿರುಗಾಳಿಗೆ ಸಿಲುಕಿ ಕಂಗಾಲಾಗಿದ್ದಾರೆ. ಕಾವೇರಿ ಜಲಾನಯನ ಪ್ರದೇಶದ ವೈಶಿಷ್ಟ್ಯವೆಂದರೆ ಇಲ್ಲಿನ ಬಹುತೇಕ ರೈತರು ಸಣ್ಣ ಮತ್ತು ಮಧ್ಯಮ ರೈತರೇ ಆಗಿದ್ದಾರೆ. ವ್ಯವಸಾಯ ಮಾಡಲಾಗದೆ ತಮಿಳುನಾಡಿನಿಂದ ಕರ್ನಾಟಕಕ್ಕೆ ಮತ್ತು ಇಲ್ಲಿಂದ ಆಂಧ್ರ ಪ್ರದೇಶಕ್ಕೆ ಕೂಲಿಗಾಗಿ ವಲಸೆ ಹೋಗುವವರ ರೈತರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಲೇ ಇದೆ. ಸರ್ಕಾರದ ಬೆಂಬಲವಿಲ್ಲದೆ, ಸಾಲದ ಬಾಧೆ ತಾಳಲಾರದೆ, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ರೈತರ ಸಂಖ್ಯೆಯೂ ಹೆಚ್ಚಾಗುತ್ತಲೇ ಇದೆ. ಈ ರೈತರ ಹೊಲ ಗದ್ದೆಗಳಲ್ಲಿ ದುಡಿಯುವ ಕೃಷಿ ಕಾರ್ಮಿಕರ ಪಾಡು ಇನ್ನೂ ಹೇಳತೀರದಾಗಿದೆ. ಕಾವೇರಿ ಜಲಾನಯನ ಪ್ರದೇಶದ ರೈತರು ಒಂದು ವರ್ಷ ಮಳೆ ಬೆಳೆ ಇಲ್ಲದೆಯೂ ಬದುಕುಳಿಯುವ ಸಾಮರ್ಥ್ಯ ಹೊಂದಿದ್ದಾರೆ. ಆದರೆ ಒಣ ಭೂಮಿಯಲ್ಲಿ ಮಳೆಯಾಧಾರಿತ ಕೃಷಿಯನ್ನೇ ಆಧರಿಸಿದ ಹಲವಾರು ಜಿಲ್ಲೆಗಳಲ್ಲಿ ರೈತರು ಕಂಗಾಲಾಗುತ್ತಿದ್ದಾರೆ. ಅವರನ್ನು ಕುರಿತೂ ರೈತ ಸಮುದಾಯ ಯೋಚಿಸಬೇಕಾಗುತ್ತದೆ. ಕಾವೇರಿ ವಿವಾದ ಸೃಷ್ಟಿಸುವ ಭಾವನಾತ್ಮಕ ಸನ್ನಿವೇಶದಲ್ಲಿ ಮೈಮರೆತರೆ ಈ ಎಲ್ಲಾ ಅಂಶಗಳೂ ನಿರ್ಲಕ್ಷಕ್ಕೊಳಗಾಗುತ್ತವೆ.

ನದಿ ನೀರಿನ ಹಂಚಿಕೆಯಲ್ಲಿ ವಿಷಯದಲ್ಲಿ ಇಂದು ದೇಶದ ರೈತ ಸಮುದಾಯದ ಐಕ್ಯತೆಯನ್ನು ಒಡೆಯುವ ಸಂಚು ಕೂಡ ನಡೆಯುತ್ತಿದೆ ಎಂಬ ಸೂಕ್ಷ್ಮವಾದ ಸಂಗತಿಯನ್ನು ನಾವಿಂದು ಗಮನಿಸಬೇಕಾಗಿದೆ. "ಪ್ರಾಣ ಕೊಟ್ಟೇವು ಕಾವೇರಿ ಬಿಡೆವು" "ರಕ್ತ ಕೊಟ್ಟೇವು ಕಾವೇರಿ ಕೊಡೆವು" ಎಂಬ ಘೋಷಣೆಗಳಲ್ಲಡಗಿರುವ ಭಾವನಾತ್ಮಕ ಹುರುಪು, ರೈತರನ್ನು ಕಾಪಾಡುವುದಿಲ್ಲ ಎಂಬ ಅಂಶವನ್ನು ನಾವು ಮನಗಾಣಬೇಕಾಗಿದೆ. ಯಾವುದೇ ಕನ್ನಡಪರ ಸಂಘಟನೆಗಳೂ ಇದುವರೆವಿಗೂ ರೈತರ ಪರವಾಗಿ ಹೋರಾಟಕ್ಕಿಳಿದಿಲ್ಲ. ರೈತರು ಆತ್ಮಹತ್ಯೆ ಮಾಡಿಕೊಂಡಾಗ, ರೈತರ ಭೂಮಿಯನ್ನು ಮಾಫಿಯಾಗಳು ಕಸಿದುಕೊಂಡಾಗ, ತಾವು ಬೆಳೆದ ಫಸಲಿಗೆ ಬೆಲೆ ಸಿಗಲಿಲ್ಲವೆಂದು ರಸ್ತೆಯಲ್ಲಿ ಚೆಲ್ಲಿ ಹೋರಾಡಿದಾಗ, ವ್ಯವಸಾಯ ಮಾಡಲಾಗದೆ ಅಸಹಾಯಕರಾಗಿ ವಲಸೆ ಹೋಗಿ, ನಗರಗಳಲ್ಲಿ ಕಟ್ಟಡ ಕಾರ್ಮಿಕರಾಗಿ ದುಡಿಯುವಾಗ, ಯಾವುದೇ ಕನ್ನಡ ಪರ ಸಂಘಟನೆಗಳು, ವೀರ ಕನ್ನಡ ಹೋರಾಟಗಾರರು ಉರುಳು ಸೇವೆಗಳನ್ನು ಮಾಡಲಿಲ್ಲ. ಆದರೆ ಕಾವೇರಿ ವಿವಾದ ಉದ್ಭವಿಸಿದಾಗ ಅವರ ರೈತ ಪರ ಕಾಳಜಿ ಧುತ್ತೆಂದು ಪ್ರತ್ಯಕ್ಷವಾಗುತ್ತದೆ. ಏಕೆಂದರೆ ಕಾವೇರಿಯ ಮಡಿಲಲ್ಲಿ ಕನ್ನಡ ಭಾಷಾಭಿಮಾನದ ಸುಳಿ ಹೆಚ್ಚಾಗಿದೆ. ಈ ಸುಳಿಗೆ ಸಿಲುಕಿದಲ್ಲಿ ರೈತರ ಬಾಳು ನಿತ್ಯದ ಗೋಳಾಗುತ್ತದೆ. ಜಾಗತೀಕರಣದ ವಿರುದ್ಧ, ಬಂಡವಾಳಶಾಹಿಗಳ ವಿರುದ್ಧ, ಸಾಮ್ರಾಜ್ಯಶಾಹಿಗಳ ವಿರುದ್ಧ, ವ್ಯವಸ್ಥಿತವಾಗಿ ಹೋರಾಟ ರೂಪಿಸಲು ರೈತ ಸಮುದಾಯ ಮುಂದಾಳತ್ವ ವಹಿಸಬೇಕಾಗಿದೆ. ಈ ಹೋರಾಟದಲ್ಲಿ ರೈತಾಪಿ ವರ್ಗವು ಕೃಷಿ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುವತ್ತ ಗಮನ ಹರಿಸಬೇಕಾಗಿದೆ. ಈ ಧ್ಯೇಯದಿಂದ ಹೋರಾಡಿದಲ್ಲಿ, ಕಾವೇರಿ ವಿವಾದಕ್ಕೆ ಶಾಶ್ವತ ಪರಿಹಾರ ಸಾಧ್ಯವಾಗುತ್ತದೆ. □

ಒಬ್ಬ ದಲಿತ ವಿದ್ಯಾರ್ಥಿಗೆ ತಿಂಗಳಿಗೆ ಎಷ್ಟು ಹಣ ದೊರೆಯುತ್ತದೆ? ಹಾಸ್ಟೆಲ್ ವ್ಯವಸ್ಥೆ ಇಲ್ಲದೆ ೧೨ನೇ ತರಗತಿಯಲ್ಲಿರುವ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿ ತಿಂಗಳಿಗೆ ರೂ.೧೪೦ ಅಥವಾ ದಿನಕ್ಕೆ ರೂ. ೪.೬೬ನ್ನು ಪಡೆಯುತ್ತಾನೆ/ಳೆ. ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳು ದಿನಕ್ಕೆ ರೂ.೭.೮೩ನ್ನು ಪಡೆಯುತ್ತಾರೆ. ವೈದ್ಯಕೀಯ, ಇಂಜಿಯರಿಂಗ್, ಮ್ಯಾನೇಜ್‌ಮೆಂಟ್ ಮುಂತಾದ ಉನ್ನತ ಶಿಕ್ಷಣದಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ದಿನಕ್ಕೆ ೧೧ ರೂ ದೊರೆತರೆ, ಅದೇ ಹಾಸ್ಟೆಲ್‌ನಲ್ಲಿರುವವರು ದಿನಕ್ಕೆ ೨೪.೬೬ನ್ನು ಪಡೆಯುತ್ತಾರೆ. ಇದೇ ಬಜೆಟ್‌ನಲ್ಲಿ ಚಿದಂಬರಂ ಒಂದು ಲಕ್ಷ ಹಾಗೂ ಮೆರಿಟ್ ಸ್ಕಾಲರ್‌ಶಿಪ್ ಅನ್ನು ತಿಂಗಳಿಗೆ ೫೦೦ ರೂಗಳಂತೆ ದಿನಕ್ಕೆ ೧೬.೬೬ ರೂಗಳನ್ನು ೯,೧೦, ೧೧ನೇ ತರಗತಿಗಳಲ್ಲಿ ಓದುತ್ತಿರುವವರಿಗೆ ಅವರ ಜಾತಿಯನ್ನು ಪರಿಗಣಿಸದೆ ನೀಡಲಾಗುತ್ತಿದೆ.

ಅನು: ಡೊಮಿನಿಕ್. ಡಿ

ಜಾಗತೀಕರಣವು ದೇಶಗಳನ್ನು ಹತ್ತಿರಕ್ಕೆ ತಂದಿದೆ. ಅದು ಐಟಿಯಲ್ಲಿ ಕ್ರಾಂತಿಯನ್ನುಂಟುಮಾಡಿದರೆ, ಜನಾಂಗೀಯವಾದವನ್ನು ಜಗತ್ತು ಇಂದು ಸಾಮಾಜಿಕ ಸಮಸ್ಯೆಯಾಗಿ ಚರ್ಚಿಸುತ್ತಿದೆ. ನಿಧಾನವಾಗಿಯಾದರೂ ಜಾತಿಯೂ ಸಹ ಚರ್ಚೆಗೆ ಬಂದೇಬರುತ್ತದೆ. ಭಾರತವು ಶೀಘ್ರದಲ್ಲೇ ಹೊಸ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಲ್ಲಿದ್ದು ಅದನ್ನು ಚಪ್ಪಾಳೆಯ ಮೂಲಕ ಕೊಂಡಾಡುವಾಗ, ದೇಶವು ಸಾಮಾಜಿಕ ಅಡಿಟಿಂಗ್‌ಗೆ ಒಳಗಾಗುವುದರಲ್ಲಿ ಸಂದೇಹವಿಲ್ಲ.

೨ನೇ ಮಹಾಯುದ್ಧದ ನಂತರ ಅಮೆರಿಕಾವು ಜಗತ್ತಿನ ಅತಿ ದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿತ್ತು. ಆದರೆ ೬೦ರ ದಶಕದ ಹೊತ್ತಿಗೆ ಅಲ್ಲಿ ಜನಾಂಗೀಯ ಪ್ರಶ್ನೆ ಬಹುಮುಖ್ಯ ಸಂಗತಿಯಾಗಿ ಬಿಟ್ಟಿತು. ಇದರಿಂದ ಮುಜುಗರಕ್ಕೊಳಗಾದ ಅಮೆರಿಕಾವು ಉತ್ತರಗಳಿಗೆ ಹುಡುಕಾಡತೊಡಗಿತು. ಅದೇ ರೀತಿಯಲ್ಲಿ ಜಗತ್ತೂ ಸಹ ಭಾರತೀಯರಿಗೆ ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತದೆ:

- ದಲಿತರಲ್ಲಿ ಇನ್ನೂ ಸಹ ಅರ್ಧದಷ್ಟು ಜನ ಏಕೆ ಅನಕ್ಷರಸ್ತರಾಗಿಯೇ .ಉಳಿದಿದ್ದಾರೆ?
- ದಲಿತರಲ್ಲಿ ಇನ್ನೂ ಸಹ ಅರ್ಧದಷ್ಟು ಜನ ಭೂರಹಿತ ಕೃಷಿಯಾಳುಗಳಾಗಿಯೇ ಉಳಿದಿದ್ದು ದಿನಕ್ಕೆ ಒಂದು ಡಾಲರ್‌ಗಿಂತ ಕಮ್ಮಿ ಕೂಲಿಯನ್ನು ಪಡೆಯುತ್ತಿದ್ದಾರೆ ಏಕೆ?
- ದಲಿತರಿಗೇಕೆ ಇನ್ನೂ ಇಂಗ್ಲಿಷ್ ಮಾಧ್ಯಮಶಾಲೆಗಳು ಮುಚ್ಚಿಕೊಂಡಿವೆ?
- ಭಾರತೀಯ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ದಲಿತರೇಕೆ ಒಂದು ಕಂಪನಿಯನ್ನೂ ಸಹ ಹೊಂದಲಾಗಿಲ್ಲ?
- ಇಂದಿಗೂ ಸಹ ಮಾರುಕಟ್ಟೆಯಲ್ಲಿ ದಲಿತರ ಬ್ರಾಂಡ್‌ನಲ್ಲಿ ಒಂದು ಪದಾರ್ಥವೂ ಇಲ್ಲವೇಕೆ?
- ದಲಿತರೇಕೆ ಬಾಲಿವುಡ್‌ನ ಭಾಗವಾಗಲಿಲ್ಲ?
- ದಲಿತರೇಕೆ ಮಾಧ್ಯಮ ಶ್ರಮಶಕ್ತಿಯ ಭಾಗವಾಗಲಿಲ್ಲ?
- ದೇಶದ ಯಾವುದೇ ವಿತ್ತ ಮಂತ್ರಿಗಳಾಗಲೀ ದಲಿತ ಬುದ್ಧಿಜೀವಿಗಳನ್ನು ಸಂಪರ್ಕಿಸಿಲ್ಲ ಏಕೆ?
- ಭಾರತೀಯರ ಅದೃಷ್ಟವನ್ನು ಬರೆಯುವ ಪ್ರಧಾನಮಂತ್ರಿ ಕಛೇರಿಯಿಂದ ದಲಿತರೇಕೆ ಹೊರ ಉಳಿದಿದ್ದಾರೆ?
- ಇಲ್ಲಿಯವರಿಗೆ ದಲಿತರಲ್ಲಿ ಅಂತರ್‌ಜಾತಿ ವಿವಾಹವಾಗಿರುವವರ ಬಗ್ಗೆ ಜನಗಣತಿಯೇಕೆ ನಡೆದಿಲ್ಲ?

ಈ ಪ್ರಶ್ನೆಗಳಿಗೆ ಭಾರತೀಯರ ಸಿದ್ಧ ಉತ್ತರವೆಂದರೆ ಇನ್ನೂ ದಲಿತರು ಅರ್ಹರಾಗಿಲ್ಲ ಮತ್ತು ಅದಕ್ಕೆ ದಲಿತರೇ ಜವಾಬ್ದಾರಿ. ಈ ಉತ್ತರಗಳಿಂದ ಜಗತ್ತಿನ ಸಾರ್ವಜನಿಕ ಧ್ವನಿ ತೃಪ್ತಿಯಾಗುವುದೇ? ಭಾರತದ ಸಂವಿಧಾನ ಶಿಲ್ಪಿಯಾದರೂ ಯಾರು? ಒಬ್ಬ ದಲಿತನೇಕೆ ಭಾರತದ ರಾಷ್ಟ್ರಪತಿಯಾದ? ಮತ್ತೊಬ್ಬ ದಲಿತನು ಹೇಗೆ ಭಾರತೀಯ ಪ್ರಧಾನ ನ್ಯಾಯಧೀಶನಾದ? ದಲಿತರಲ್ಲಿ ಸಾವಿರಾರು ಮಂದಿ ಇಂಜನಿಯರ್ಸ್, ಡಾಕ್ಟರ್ಸ್, ವಿಜ್ಞಾನಿಗಳು ಹೇಗಾದರು? ಇವರೆಲ್ಲಾ ಸಾರ್ವಜನಿಕ ವಲಯದಲ್ಲಿ ಅದ್ಭುತವಾಗಿ ಕಾರ್ಯ ನಿರ್ವಹಿಸುತ್ತಿಲ್ಲವೇ? ಇದಕ್ಕೆ ಉತ್ತರ "ಸಕಾರಾತ್ಮಕ ಕ್ರಿಯೆ" ಎಂದಾದರೇ ಇತರ ವಲಯಗಳಲ್ಲೇಕೆ ಈ ಸಕಾರಾತ್ಮ ಕ್ರಿಯೆಯನ್ನು ವಿಸ್ತರಿಸಲಾಗಿಲ್ಲ.

ಚಂದ್ರಭಾನ್ ಪ್ರಸಾದ್

ದಲಿತ್ ಡೈರಿ

ಹಾಲಿವುಡ್‌ನಲ್ಲಿ ಕಪ್ಪು ನಟ-ನಟಿಯರು ಇಲ್ಲವೇ? ಅಮೆರಿಕಾದ ಮಾಧ್ಯಮಗಳಲ್ಲಿ ಕಪ್ಪುಜನರ ಪ್ರಾತಿನಿಧ್ಯವನ್ನು ಅಮೆರಿಕನ್ ಸೊಸೈಟಿ ಫಾರ್ ನ್ಯಾಸ್ ಎಡಿಟರ್ಸ್ ಎತ್ತಿಹಿಡಿಯಲ್ಲಿಲ್ಲವೇ? ಅಮೆರಿಕಾದಲ್ಲಿನ ಅನೇಕ ಕಾರ್ಪೋರೇಟ್ ಕಛೇರಿಗಳು "ವೈವಿಧ್ಯತೆ/ಸಕಾರಾತ್ಮಕ" ನೀತಿಯಡಿ ಪ್ರತ್ಯೇಕ ಇಲಾಖೆಗಳನ್ನು ಹೊಂದಿದ್ದು ನೇಮಕಾತಿಗಳ ಉಸ್ತುವಾರಿಯನ್ನು ಮಾಡುತ್ತಿಲ್ಲವೇ? ಜಾಗತಿಕ ನಾಯಕರು ಮತ್ತು ಸಾರ್ವಜನಿಕ ಅಭಿಪ್ರಾಯ ರೂಪಿಸುವವರು ಈ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಭಾರತ ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ನೀಡಬೇಕಿದೆ.

ಈ ಚರ್ಚೆ ಗಾಢವಾಗುತ್ತಿದ್ದಂತೆ, ಜಗತ್ತಿನ ಯಾವುದೇ ಮೂಲೆಯಿಂದಲಾದರೂ, "ಜಾತಿ ಪದ್ಧತಿಯ ನಿರ್ಮೂಲನೆ" ಪುಸ್ತಕವನ್ನು ಗಾಂಧಿ ಬರೆಯದೆ ಡಾ. ಅಂಬೇಡ್ಕರ್ ಮಾತ್ರ ಬರೆದರು ಏಕೆ? ಏಕೆಂದರೆ ಗಾಂಧಿ ಜಾತಿ ಪದ್ಧತಿಯ ಬಲಿಪಶುವಾಗಿರಲಿಲ್ಲ ತಾನೆ? "ಬುದ್ಧನು ಸೂಚಿಸಿದ ಮಾರ್ಗದಲ್ಲಿ ನೆಹರು ನಡೆಯದೆ ಡಾ. ಅಂಬೇಡ್ಕರ್ ಮಾತ್ರ ನಡೆದರು ಏಕೆ?" ಎಂದು ಜಗತ್ತು ಕೇಳಬಹುದು. ಅದಕ್ಕೆ ಕಾರಣ ನೆಹರು ಹಿಂದೂ ಧರ್ಮದಿಂದ ಅವಮಾನಕ್ಕೆ ತುತ್ತಾಗಿಲ್ಲ ತಾನೆ?

ದಿನ ಕಳೆದಂತೆ ಜಗತ್ತು ಕಿರಿದಾಗಿ, ಸಮಾಜಗಳು ಬಹಳಷ್ಟು ಹತ್ತಿರವಾಗುತ್ತಿವೆ. "ಪಾವಿತ್ರ್ಯ"ದ ಸೋಗಿನಲ್ಲಿ ಭಾರತೀಯ ಸಮಾಜ ತನ್ನ ರಹಸ್ಯಗಳನ್ನು ತನ್ನಲ್ಲೇ ಹೆಚ್ಚು ದಿನ ಮುಚ್ಚಿಡಲಾಗುವುದಿಲ್ಲ. ಎಲ್ಲಾ ಗುಟ್ಟುಗಳು ಹೊರಬಿದ್ದು ಜಗತ್ತಿಗೆ ತಿಳಿದೇ ತಿಳಿಯುತ್ತದೆ. ಅಸ್ಪೃಶ್ಯತೆ ವಿಷಕಾರಿ ಸಂಗತಿ ಜಗತ್ತನ್ನು ಬೆಚ್ಚಿ ಬೀಳಿಸುತ್ತದೆ. ಆಗ "ದಕ್ಷಿಣ ಏಷ್ಯಾ ಏಕೆ ಈ ಭೂಮಿ ಎಂಬ ಗ್ರಹದಲ್ಲಿ ಇದೆ" ಎಂದು ಜಗತ್ತು ಈ ಮಾತೃಭೂಮಿಯ ಬಗ್ಗೆ ಅನುಕಂಪ ವ್ಯಕ್ತಪಡಿಸೀತು. ಭಾರತ ಇಂಥ ಮುಜುಗರದ ಪರಿಸ್ಥಿತಿ ಎದುರಾಗುವ ಮೊದಲೇ ಭಾರತೀಯರು ಕೆಲವು ಮುಖ್ಯವಾದ ಪ್ರಶ್ನೆಗಳನ್ನು ಎದುರಿಸಲೇಬೇಕಾಗುತ್ತದೆ: ಅವರೇಕೆ ಜಾತಿ ಪದ್ಧತಿಯನ್ನು ಆಚರಣೆಗೆ ತಂದರು? ಗೋ... ಹಿಂದಿನ ಕಾಲದಿಂದಲೂ ಅದು ಬಂದುಬಿಟ್ಟಿದೆ ಎಂದು ಹೇಳಿ ಅದನ್ನು ಮುಚ್ಚಿಡಲಾಗುವುದಿಲ್ಲ. ಹಾಗಾದರೆ ವರ್ತಮಾನದಲ್ಲೇಕೆ ಈ ವಿಷಕಾರಕ ಪದ್ಧತಿ ಅಸ್ತಿತ್ವದಲ್ಲಿದೆ? ಈ ಜಾತಿ ಪದ್ಧತಿಯನ್ನು ಬೇರು ಸಹಿತ ಕಿತ್ತೊಗೆಯದೆ ಭಾರತಕ್ಕೆ ಸುವರ್ಣ ಭವಿಷ್ಯ ಎಂಬುದು ಇದೆಯಾ? ಎಂದು ಭಾರತೀಯರು ತಮ್ಮನ್ನು ಪ್ರಶ್ನಿಸಿಕೊಳ್ಳಬೇಕಿದೆ. ಭಾರತೀಯ ಪ್ರಧಾನ ವಾಹಿನಿಯು ಈ ಪ್ರಶ್ನೆಗಳನ್ನು ಕೇಳಿಕೊಳ್ಳುವ ದಿನ ಬಂತೆಂದರೆ ಅಂದು ಈ ಭಾರತ ವಾಸಿಸಲು ಯೋಗ್ಯ ಎನಿಸಿತು.

ಒಂದು ಸಣ್ಣ ನಿರ್ಣಯದಿಂದ ಜಾತಿ ಸಮಾಜವನ್ನು ಪ್ರತ್ಯೇಕಿಸಿಬಿಡಬಹುದು. ಆಗ ಜಾತಿ ಪದ್ಧತಿ ಆಚರಣೆಯಲ್ಲಿ ನಿಲ್ಲುವುದಾದರೂ ಹೇಗೆ? ಈ ನಿಟ್ಟಿನಲ್ಲಿ ದಲಿತ್ ಡೈರಿ ಒಂದು ಕ್ಲಾಸಿಕ್ ಪ್ರಕರಣವಾಗಿದೆ. ದಿ ಪಾಯನೀಯರ್ ದಿನ ಪತ್ರಿಕೆಯಲ್ಲಿ ದಲಿತ್ ಅಂಕಣ ಬರಬೇಕು ಎಂದು ಡಾ. ಚಂದನ್ ಮಿತ್ರ ನಿರ್ಣಯಿಸಿದ ಎರಡೇ ವಾರದಲ್ಲಿ ದಲಿತ್ ಡೈರಿ ಉದಯಿಸಿತು. ಇಂದು ದಿನಪತ್ರಿಕೆಗಳು/ಟಿವಿ ಮಾಧ್ಯಮಗಳು ದಲಿತ ಅಂಕಣಕಾರರು ಅಗತ್ಯ ಎಂದಲ್ಲಿ ಅವರಿಗೆ ಅನೇಕ ಮಂದಿ

ಜಾತಿ ನಿರ್ಮೂಲಗೊಳಿಸಿ

ಅಂಬೇಡ್ಕರ್ ಮಾನದಂಡದಲ್ಲಿ ನಮ್ಮ ಪ್ರಜ್ಞೆಯನ್ನು ಅಳತೆಮಾಡಿ

ದೊರೆಯುತ್ತಾರೆ. ಒಬ್ಬ ಸಿನೇಮಾ ತಯಾರಕ/ನಿರ್ದೇಶಕ ದಲಿತ ನಟನನ್ನು ಹುಡುಕುವುದು ಕಷ್ಟವೇನಲ್ಲ. ಒಂದು ಮಿಲಿಯ ದಲಿತರು ತಯಾರಿಸುವ ಪದಾರ್ಥಗಳನ್ನು ಕೊಳ್ಳಲು ನಿರ್ಧಾರ ಮಾಡಿದಾಕ್ಷಣ ನೂರಾರು ಮಂದಿ ದಲಿತ ಮಿಲಿಯನೇರ್‌ಗಳನ್ನು ತಯಾರಿಸಬಹುದಲ್ಲವೇ? ಅವರಹಿಂದೆಯೇ ಒಬ್ಬ ದಲಿತ ಬಿಲಿಯನೇರ್ ಬಂದು ಬಿಡುತ್ತಾನೆ. ಆದರೆ ಜಾತಿ ಪದ್ಧತಿಯ ಈ ಭಾರತ ಅಂಥ ದ್ದನ್ನು ಸಹಿಸಲಾದೀತೆ? ಅಂಬೇಡ್ಕರ್‌ರವರಲ್ಲಿಗೆ ವಾಪಸ್ಸಾ ಗೋಣ.

ದಲಿತರನ್ನು ಪ್ರತ್ಯೇಕಿಸುವ ಪ್ರಸ್ತುತ ಭಾರತೀಯ ಪ್ರಧಾನವಾಹಿನಿಯ ಈ ತರ್ತು ಸನ್ನಿವೇಶದಲ್ಲಿ ನಾವು ನಮಗೇ ಕೆಲವು ಪ್ರಶ್ನೆಗಳನ್ನು ಹಾಕಿಕೊಳ್ಳಬೇಕಿದೆ: "ಬಾಬಾ ಸಾಹೇಬ್ ಅಂಬೇಡ್ಕರ್ ಏನು ಹೋರಾಟ ಮಾಡಿ ಸಾಧಿಸಿ ನಮಗೆ ನೀಡಿದ್ದರೋ ಅದಕ್ಕೆ ಅಂಬೇಡ್ಕರೋತ್ತರ ದಲಿತರು ಏಕೆ ಕಿಂಚಿತ್ತೂ ಸೇರಿಸಲಾಗಿಲ್ಲ?"

ಇದಕ್ಕೆ ನನ್ನ ಉತ್ತರವೆಂದರೆ, ದಲಿತ ಚಳುವಳಿ ಅಭಿಜಾತ ಅಂಬೇಡ್ಕರ್ ಸಿದ್ಧಾಂತದಿಂದ ಪಕ್ಕಕ್ಕೆ ಸರಿದಿರುವುದೇ ಆಗಿದೆ. ಹೊಲ-ಗದ್ದೆಗಳಲ್ಲಿ ಬೆಳೆಯುವ ಕಳೆಯಂತೆ ಅಂಬೇಡ್ಕರೇತರರ ವಿಚಾರಗಳು ನಮ್ಮ ಪ್ರಜ್ಞೆಯನ್ನು ಹೊಕ್ಕಿವೆಯಲ್ಲದೆ ನಮ್ಮ ದಲಿತ ನಾಯಕರ ದಿಕ್ಕನ್ನು ಬದಲಿಸಿದೆ. ಕೆಲವೊಮ್ಮೆ ಈ ಕಳೆ ವಿಷಕಾರಕ ಅಲ್ಲದಿದ್ದರೂ ಅದು ಬೆಳೆದು ನಿಜವಾದ ಪೈರನ್ನು ಮರೆಮಾಚಬಹುದಾಗಿದೆ. ಬಹುಷಃ ನಮಗೂ ಅದೇ ಆಗಿರಬಹುದೆಂದು ಕಾಣುತ್ತದೆ. ಆದ್ದರಿಂದಲೇ ನಾವು ಬಾಬಾ ಸಾಹೇಬ್ ಅಂಬೇಡ್ಕರ್ ತಂದುಕೊಟ್ಟ ಹಕ್ಕುಗಳನ್ನು ರಕ್ಷಿಸಿಕೊಳ್ಳಲಾಗುತ್ತಿಲ್ಲ.

ಹೀಗಿರುವಲ್ಲಿ ಅಂಬೇಡ್ಕರ್ ಮಾನದಂಡದಲ್ಲಿ ನಮ್ಮ ಪ್ರಜ್ಞೆಯನ್ನು ಅಳತೆ ಮಾಡಿ ನೋಡೋಣ:

- ಬಾಬಾ ಸಾಹೇಬ್‌ರವರು ಒಬ್ಬ ಸಮಾಜವಾದಿಯೇ ಅಥವಾ ಕಮ್ಯುನಿಷ್ಟ್ ಪಂಥಕ್ಕೆ ಸೇರಿದವರೇ?

ತಮ್ಮ ಪುಸ್ತಕ "ರಾಜ್ಯಗಳು ಮತ್ತು ಅಲ್ಪಸಂಖ್ಯಾತರು" ಎನ್ನುವ ಕೃತಿಯಲ್ಲಿ ರಾಜ್ಯ ಪ್ರಣೀತ ಸಮಾಜವಾದಕ್ಕೆ ಬಾಬಾ ಸಾಹೇಬ್ ಕರೆಯಿತ್ತಿದ್ದರು. ಆದರೆ ೧೯೫೧ರ ವೇಳೆಗೆ ಅವರು ಬಂಡವಾಳಶಾಹಿ ವ್ಯವಸ್ಥೆಗಾಗಿ ವಾದ ಮಾಡಿದ್ದರು. ಪರಿಶಿಷ್ಟ ಜಾತಿ ಒಕ್ಕೂಟ (೧೯೫೧)ದ ಪ್ರಣಾಳಿಕೆಯ ಕರಡು ರೂಪವನ್ನು ಅವರು ಸಿದ್ಧಪಡಿಸುವಾಗ ಹೀಗೆಂದು ಬರೆದಿದ್ದರು: "ಪಾರ್ಟಿಯ ನೀತಿಯು ಕಮ್ಯುನಿಸಂ ಅಥವಾ ಸಮಾಜವಾದ, ಗಾಂಧಿವಾದ ಅಥವಾ ಇತರೆ ಯಾವುದೇ ಸಿದ್ಧಾಂತ ಅಥವಾ ಐಡಿಯಾಲಜಿಗೆ ಬದ್ಧರಾಗಿರುವುದು ಅಲ್ಲ" (ಪು.೩೮೮, ಸಂ.೧೭, ಭಾಗ-೧). ಈ ಸಾಲುಗಳ ಒಳಹೊಕ್ಕು ನೋಡಿದರೆ ಗಾಂಧಿವಾದವನ್ನು ಕಮ್ಯುನಿಸಂ/ಸಮಾಜವಾದದೊಡನೆ ಬಾಬಾ ಸಾಹೇಬ್ ಸಮೀಕರಿಸಿದ್ದಾರೆ.

ಆರ್ಥಿಕತೆಯ ಬಗ್ಗೆ ಅವರು ಹೀಗೆಂದು ಬರೆಯುತ್ತಾರೆ: ಎಲ್ಲಿ ಒಂದು ಕೈಗಾರಿಕೆಯನ್ನು ರಾಷ್ಟ್ರೀಕರಿಸುವುದು ಅಗತ್ಯವೋ ಅಂತಡೆ ಪರಿಶಿಷ್ಟ ಜಾತಿಗಳ ಒಕ್ಕೂಟ ಅಂಥ ರಾಷ್ಟ್ರೀಯ ಉಸ್ತುವಾರಿಯನ್ನು ಬೆಂಬಲಿಸುತ್ತದೆ. ಎಲ್ಲಿ ಖಾಸಗಿ ಉದ್ಯಮ ಅಗತ್ಯವಿದ್ದು ರಾಷ್ಟ್ರಿಯ ಉಸ್ತುವಾರಿ ಅಗತ್ಯವಿಲ್ಲವೋ ಅಂತೆಡೆ ಖಾಸಗಿ ಉದ್ಯಮವನ್ನು ಬೆಳೆಯಗೊಡಬೇಕು" (ಪು.೩೯೧, ಸಂ. ೧೭, ಭಾಗ-೧). ಯಾವಾಗ ಜಗತ್ತಿನ ಅರ್ಧದಷ್ಟು ರಾಷ್ಟ್ರಗಳು ಕೆಂಪಾಗಿ ಮಾರ್ಪಟ್ಟಿದ್ದವೋ ಆ ಸಂದರ್ಭದಲ್ಲಿ ಈ ಸಾಲುಗಳನ್ನು ದಾಖಲಿಸಿದ್ದು ಎನ್ನುವುದನ್ನು ಗಮನಿಸಬೇಕಿದೆ. ಅಲ್ಲದೆ ಕೃಷಿಯ ಬಗ್ಗೆ ಹೀಗೆಂದಿದ್ದಾರೆ:

- ಕೃಷಿಯನ್ನು ಯಂತ್ರೀಕರಿಸಬೇಕಿದೆ. ಎಲ್ಲಿಯವರೆಗೆ ಕೃಷಿಯು ಅನಾದಿಕಾಲದ ಪದ್ಧತಿಯಲ್ಲೇ ಇರುತ್ತದೋ ಅಲ್ಲಿಯವರೆಗೆ ಅದು ಯಾವ ಸಮೃದ್ಧಿಯನ್ನು ಕಾಣಲಾಗದು.
- ಯಾಂತ್ರೀಕೃತ ಕೃಷಿ ಸಾಧ್ಯವಾಗಬೇಕಾದರೆ ಸಣ್ಣ ಹಿಡುವಳಿದಾರಿಕೆಯನ್ನು ದೊಡ್ಡ ಹಿಡುವಳಿದಾರಿಕೆಯನ್ನಾಗಿ ಮಾಡಬೇಕು.
- ಇಳುವರಿಯನ್ನು ಹೆಚ್ಚಿಸಲು ಗೊಬ್ಬರ ಮತ್ತು ಆರೋಗ್ಯಕರ ಬೀಜವನ್ನು ಒದಗಿಸುವುದು ಮುಖ್ಯ (p392, Vol.17, Part 1). ತನ್ನ ಪ್ರಣಾಳಿಕೆಯಲ್ಲಿ ತ್ವರಿತ ಗತಿಯಲ್ಲಿ ಭಾರತದ ಕೈಗಾರೀಕರಣ ಆಗ ಬೇಕೆನ್ನುತ್ತಾರೆ.

ಈ ಬರವಣಿಗೆಯ ನೈಜತೆಯನ್ನು ಅರಿತಲ್ಲಿ ಅವರು ಭಾರತಕ್ಕೆ ಬಂಡವಾಳಶಾಹಿ ಪದ್ಧತಿಯನ್ನು ಬಯಸಿದ್ದರೆಂದೇ ಹೇಳಬೇಕಾಗುತ್ತದೆ. ಐದುವರೆ ದಶಕಗಳ ಹಿಂದೆ ಹೇಳಿದ ಅವರ ಮಾತುಗಳನ್ನು ಗಮನಿಸಿದಲ್ಲಿ ದಲಿತ ನಾಯಕತ್ವವು ಬಹಳ ಹಿಂದೆಯೇ CII/ASSOCHAM/ FICCI (ಭಾರತೀಯ ಕೈಗಾರಿಕೆಗಳ ಒಕ್ಕೂಟಗಳು)ಗಳೊಡನೆ ಸಂಪರ್ಕ ಬೆಳೆಸಿ, ಹೀಗೆಂದು ಹೇಳಬೇಕಿತ್ತು, "ನಾವು ಸಾಮಾಜಿಕ ಸ್ನೇಹಿತರು, ನಮ್ಮನ್ನು ನಿಮ್ಮೊಡನೆ ಸೇರಿಸಿಕೊಳ್ಳಿ, ನಾವು ನಿಮ್ಮ ಶ್ವೇತ ಬಾವುಟವನ್ನು ಎತ್ತಿಹಿಡಿಯುತ್ತೇವೆ." ದುರದೃಷ್ಟ ಸಂಗತಿಯೆಂದರೆ ಅಂಬೇಡ್ಕರೋತ್ತರ ದಲಿತರು ತಮ್ಮ ಪ್ರಜ್ಞಾ ಪಾತಾಳಿಯಲ್ಲಿ ಬಂಡವಾಳಶಾಹಿಯ ವಿರುದ್ಧ ಹೋರಾಡುತ್ತಾ, ವಾಸ್ತವದಲ್ಲಿ ದಲಿತರನ್ನು ಅವಮಾನಿಸುವ ಊಳಿಗಮಾನ್ಯ-ಜಾತಿ ಪದ್ಧತಿಯನ್ನೇ ಬೆಂಬಲಿಸಿದರಲ್ಲವೇ?

ಅವರ ಕಾಲದಲ್ಲಿ ಜಾಗತೀಕರಣದ ವಿದ್ಯಮಾನ ಇರಲಿಲ್ಲವಾದ್ದರಿಂದ ಅದರ ಬಗ್ಗೆ ಹೇಳುವುದು ಕಷ್ಟ. ಆದರೆ ಅವರೊಬ್ಬ ಅದ್ವಿತೀಯ ದಾರ್ಶನಿಕನಾಗಿ ಜಾಗತೀಕರಣದ ಬಗ್ಗೆ ಸಾಕಷ್ಟು ಸೂಚನೆಗಳನ್ನು ನೀಡಿದ್ದಾರೆ. "ಅಮೆರಿಕಾ ಮತ್ತು ಭಾರತದೊಡನೆಯ ವೈರತ್ವಕ್ಕೆ ಕಮ್ಯುನಿಸ್ಟ್ ಚೀನಾವನ್ನು ಬೆಂಬಲಿಸುತ್ತಿರುವುದೇ ಆಗಿದೆ. ಇದರ ಪರಿಣಾಮವಾಗಿ ಭಾರತಕ್ಕೆ ಅಗತ್ಯವಾದ ಹಣಕಾಸು ಮತ್ತು ತಾಂತ್ರಿಕ ನೆರವನ್ನು ಅಮೆರಿಕಾದಿಂದ ಪಡೆಯಲಾಗಿಲ್ಲ" ಎಂದು ಅಂಬೇಡ್ಕರರವರು ಬರೆದಿದ್ದಾರೆ. (ಪು.೩೯೬, ಸಂ.೧, ಭಾಗ -೧)

ಬಂಡವಾಳಶಾಹಿ ವ್ಯವಸ್ಥೆ ಇಲ್ಲದ ದೇಶಗಳಲ್ಲಿ ಅಮೆರಿಕಾವನ್ನು ದೆವ್ವದಂತೆ ಬಿಂಬಿಸಲಾಗಿದ್ದನ್ನು ವಿರೋಧಿಸಿ ೧೯೫೧ರ ಸುಮಾರಲ್ಲೇ ಅಂಬೇಡ್ಕರರವರು ಅಮೆರಿಕಾದ ನೆರವನ್ನು ಪಡೆಯಲು ಒತ್ತಾಯಿಸಿದ್ದರು. ಹೀಗಿರುವಲ್ಲಿ ಜಾಗತೀಕರಣದ ಬಗ್ಗೆ ಅವರ ನಿಲುವೇನು ಎಂಬುದನ್ನು ಊಹಿಸಬಹುದು. ೧೯೯೧ರಲ್ಲೇ ಅಂದಿನ ವಿತ್ತ ಮಂತ್ರಿಯಾಗಿದ್ದ ಮನಮೋಹನ್ ಸಿಂಗ್ ಜಾಗತೀಕರಣವನ್ನು ಆಹ್ವಾನಿಸಿದ್ದರು. ಇದನ್ನು ಕಂಡಾಗಲೇ ದಲಿತರು ಆತನಲ್ಲಿ ಹೀಗೆಂದು ವಿನಂತಿಸಿಕೊಳ್ಳಬೇಕಿತ್ತು: "ಮಾನ್ಯರೇ ನಾವು ನಿಮ್ಮ ಬೆಂಬಲಕ್ಕಿದ್ದೇವೆ. ದಯವಿಟ್ಟು ಜಾಗತೀಕರಣದಲ್ಲಿ ನಮ್ಮ ಪಾಲನ್ನು ನಿಗದಿ ಮಾಡಿ".

ಅಂಬೇಡ್ಕರರವರು ಅಮೆರಿಕಾ ವಿರೋಧಿ ಬಣದಲ್ಲಿದ್ದರೇ?

"ಸಂಯುಕ್ತ ರಾಜ್ಯಗಳ ಭಾರತ" (United States of India) ಎಂದೇ ಭಾರತವನ್ನು ಅಂಬೇಡ್ಕರರವರು ಸಂಬೋಧಿಸಿದ್ದರು. ಅವರು ತಮ್ಮ ರಾಜಕೀಯ ಪಕ್ಷವನ್ನು "ಭಾರತೀಯ ರಿಪಬ್ಲಿಕನ್ ಪಕ್ಷ" ಎಂದು ಕರೆದದ್ದಾರೂ ಏಕೆ? ದುರದೃಷ್ಟ ಸಂಗತಿ ಎಂದರೆ ಅಂಬೇಡ್ಕರೋತ್ತರ ದಲಿತರು ಪ್ರಜ್ಞಾಪೂರ್ವಕವಾಗಿ ಅಮೆರಿಕಾವನ್ನು ವಿರೋಧಿಸುತ್ತಾ, ಅಪ್ರಜ್ಞಾಪೂರ್ವಕವಾಗಿ ಸಾಂಪ್ರದಾಯಿಕ ಭಾರತವನ್ನು ಬೆಂಬಲಿಸುವತ್ತಾ ಹೆಜ್ಜೆ ಇಟ್ಟಿದ್ದಾರೆ.

ಬಾಬಾ ಸಾಹೇಬ್ ಅಂಬೇಡ್ಕರವರು ಭಾ.ರಿ.ಪ.ಕ್ಕೆ ಕರಡು ಪ್ರತಿಯನ್ನು ಆಂಗ್ಲ ಭಾಷೆಯಲ್ಲಿ ಬರೆದಿದ್ದು, ಅದನ್ನು ಒಂದು ವರ್ಷದ ನಂತರ ಡಿ.ಟಿ. ಮದನ್ ಮರಾಠಿಗೆ ಅನುವಾದಿಸಿದ್ದರು. ಆದರೂ ಅನೇಕ ದಲಿತರು ನಮ್ಮ ಇಂಗ್ಲಿಷ್ ದೇವತೆಯ ಬಗ್ಗೆ ಸಿಟ್ಟಾಗಿದ್ದಾರೆ.

ಕಾಲದೊಡನೆ ಬೌದ್ಧ ಧರ್ಮ ನಿರಂತರತೆಯನ್ನು ಕಂಡುಕೊಂಡಂತೆ ಅಂಬೇಡ್ಕರಿಸಂ ಸಹ ಕಾಲದೊಡನೆ ಓಡುತ್ತಿದೆ.

ಜಾಗತೀಕರಣದ ಈ ಯುಗದಲ್ಲಿ ನಾವು ತೆರೆದ ಮನಸ್ಸಿನಿಂದ ಡಾ. ಅಂಬೇಡ್ಕರ್‌ರವರ ಬಳಿ ಸಾಗಿ ಉತ್ತರ ಪಡೆದುಕೊಳ್ಳಬೇಕಿದೆ.

ಡಾ. ಮನಮೋಹನ್ ಸಿಂಗ್‌ಜಿ,
ಭಾರತದ ಪ್ರಧಾನಮಂತ್ರಿಗಳು
ದೆಹಲಿ.

ಮಾನ್ಯರೇ,

ವಿಶ್ವ ಸಂಸ್ಥೆಯ ಭಾಗವಾಗಿರುವ ವಿಶ್ವ ಬ್ಯಾಂಕ್‌ನ ಬಗ್ಗೆ ಯಾರಿಗೂ ಪರಿಚಯ ಬೇಕಾಗಿಲ್ಲ. ನಿಮಗೆ ಗೊತ್ತಿ

ಬಾಬಾ ಸಾಹೇಬರು ಜಾಗತೀಕರಣದ ವಿರುದ್ಧವಾಗಿದ್ದರೇ?

ವಿಶ್ವಬ್ಯಾಂಕ್ ಅನುಸರಿಸಿ

ರುವಂತೆ ೧೯೪೪ರಲ್ಲಿ ಅದು ಸ್ಥಾಪನೆಯಾದಾಗಿನಿಂದಲೂ ಅದು ಕಮ್ಮಿ ಬಡ್ಡಿಗೆ ಸಾಲ ನೀಡುತ್ತಾ ಬಂದಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಕೆಲವೊಮ್ಮೆ ಬಡ್ಡಿ ರಹಿತ ಸಾಲವನ್ನೂ ನೀಡುತ್ತಿದೆ. ಅದಲ್ಲದೆ ಆ ದೇಶಗಳಿಗೆ ತಂತ್ರ ಜ್ಞಾನವನ್ನು ಸಹ ನೀಡುತ್ತಾ ಬಂದಿದೆ. ಇದೊಂದು ಅಭಿವೃದ್ಧಿ ಹೊಂದಿದ ದೇಶಗಳ ಚಾರಿಟಿ/ನೆರವು ಒದಗಿಸುವ ಸಂಸ್ಥೆಯಾಗಿ ಅಭಿವೃದ್ಧಿಶೀಲ ದೇಶಗಳ ಅರ್ಥಶಾಸ್ತ್ರಜ್ಞರಿಗೆ ಸ್ಫೂರ್ತಿಯ ಕೇಂದ್ರವೂ ಹೌದು. ವಾಷಿಂಗ್ಟನ್ ಡಿಸಿಯಲ್ಲಿ ತನ್ನ ಪ್ರಧಾನ ಕಛೇರಿಯನ್ನು ಹೊಂದಿರುವ ವಿಶ್ವ ಸಂಸ್ಥೆಯು ಅಮೆರಿಕಾದ ಜನಾಂಗೀಯ ಸಂಬಂಧಗಳಲ್ಲೂ ಮುಖ್ಯವಾದ ಕಾರ್ಯವನ್ನು ಮಾಡಿದೆ.

ಚಾರಿತ್ರಿಕವಾಗಿ ಅಮೆರಿಕಾದ ಪ್ರಜ್ಞೆಯಲ್ಲಿ ಕಪ್ಪುಜನ, ಹಿಸ್ಪಾನಿಯನ್ನರು, ಸ್ಥಳೀಯರು, ಏಶಿಯಾದವರು ಮತ್ತು ಅಲ್ಪಸಂಖ್ಯಾತರೆಲ್ಲರೂ ಅಮೆರಿಕಾದ ಬಂಡವಾಳಶಾಹಿಯಲ್ಲಿ ಫಲಾನುಭವಿಗಳಾಗಿರಬೇಕು. ಈ ಹಂಚಿಕೊಂಡ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತ ಸರಬರಾಜುದಾರರು ತಮ್ಮ ನ್ಯೆಜ ಪಾಲನ್ನು ಪಡೆಯುವಂತೆ ವಿಶ್ವ ಸಂಸ್ಥೆಯು ನೋಡಿಕೊಂಡಿದೆ. ಹಾಗೆಯೇ ಮಹಿಳೆಯರು ಮತ್ತು ಅಂಗವಿಕಲರು ಸಹ ಈ ಸರಬರಾಜಿನಲ್ಲಿ ಒಳಗೊಂಡಿದ್ದಾರೆ. ಅದಕ್ಕಾಗಿ ವಿಶ್ವ ಬ್ಯಾಂಕ್ ಏನು ಮಾಡುತ್ತಿದೆ ಎಂಬುದಕ್ಕೆ ಕೆಳಗಿನ ನಿದರ್ಶನಗಳನ್ನು ಕಾಣಬಹುದು:

- ವಿಶ್ವ ಬ್ಯಾಂಕ್
- ಸರಬರಾಜು ವೈವಿಧ್ಯತೆ

ಸರಬರಾಜು ವೈವಿದ್ಯತೆಯ ಕಾರ್ಯಕ್ರಮ ವೆಬ್‌ಸೈಟ್ ನೋಡಿಕೊಳ್ಳುವ ಕಾರ್ಪೊರೇಟ್ ಬೇಡಿಕೆ ಪೂರೈಕಾ ವಿಭಾಗಕ್ಕೆ ಬನ್ನಿ. ತನ್ನ ವಾಷಿಂಗ್‌ಟನ್ ಕಛೇರಿಗಳು ಮತ್ತು ದೇಶದ್ಯಾಂತ ಇರುವ ಕಛೇರಿಗಳಿಗೆ ವಿವಿಧ ಸರಕು-ಪದಾರ್ಥ ಸೇವೆಗಳನ್ನು ಪೂರೈಸಲು ಗುತ್ತಿಗೆಯನ್ನು ನೀಡುತ್ತದೆ. ಇದಕ್ಕಾಗಿ ಪ್ರತಿವರ್ಷವೂ ವಿಶ್ವಬ್ಯಾಂಕ್ $೬೦೦ ಮಿಲಿಯನ್ ಖರ್ಚುಮಾಡುತ್ತದೆ. ಅಲ್ಪಸಂಖ್ಯಾತರು, ಮಹಿಳೆಯರು ಹಾಗೂ ಅಂಗವಿಕಲರು ವ್ಯಾಪಾರದಲ್ಲಿ ಸಮಾನವಾಗಿ ಭಾಗವಹಿಸುವಂತೆ ಮಾಡಿ ಅವರ ವ್ಯಾಪಾರವನ್ನು ವೃದ್ಧಿ ಗೊಳಿಸುವುದುಕ್ಕೆ ವಿಶ್ವಬ್ಯಾಂಕ್ ಬದ್ಧವಾಗಿದೆ. ಈ ಅಂಗ ಸಂಸ್ಥೆಗಳಲ್ಲೇ ಗುತ್ತಿಗೆ ಮತ್ತು ಉಪಗುತ್ತಿಗೆ ನೀಡುವುದನ್ನು ಪ್ರೋತ್ಸಾಹಿಸಲಾಗುತ್ತದೆ. ಇದರಿಂದಾಗಿ ಅವಕಾಶಗಳು ತೆರೆದುಕೊಂಡು ಅಲ್ಪಸಂಖ್ಯಾತರು, ಮಹಿಳೆಯರು ಮತ್ತು ಅಂಗವಿಕಲರು ವಾಣಿಜ್ಯ ಉದ್ಯಮಗಳನ್ನು ನಡೆಸಲು ಸಾಧ್ಯವಾಗಿದೆ.

ಈ ವೆಬ್‌ಸೈಟ್‌ಗೆ ನೀವು ಹೊಸಬರಾಗಿದ್ದಲ್ಲಿ ಈ ಸರಾಬರಾಜು ವೈವಿದ್ಯತೆಯ ಬಗ್ಗೆ ಅಲ್ಲಿರುವ ಇತರ ಸಂಪರ್ಕ ಜಾಲಗಳನ್ನು ದಯವಿಟ್ಟು ಗಮನಿಸಬೇಕಾಗುತ್ತದೆ.

ಸರಬರಾಜು ವಿಭಾಗ:

ಮೇಲೆ ವಿವರಿಸಿದ ಸರಬರಾಜು ವೈವಿಧ್ಯತೆಯ ವಿಭಾಗವು ವಿಶ್ವಬ್ಯಾಂಕ್ ವಾಣಿಜ್ಯ ಗುಂಪು ಎಲ್ಲಾ ಸರಬರಾಜು ಗುಂಪುಗಳೊಡನೆ ಸ್ಪರ್ಧಾತ್ಮಕವಾಗಿ ವ್ಯವಹರಿಸುವಂತೆ ಉಸ್ತುವಾರಿವಹಿಸಿಕೊಳ್ಳುತ್ತದೆ. ತಮ್ಮ ಕಂಪನಿಯ ಬೆಳವಣಿಗೆಯನ್ನು ಸಾಧಿಸಲು ಕೆಳಗಿನ ಸೂಚನೆಗಳನ್ನು ಅನುಸರಿಸಲು ವಿನಂತಿಸಿಕೊಳ್ಳಲಾಗಿದೆ:

ಸರಬರಾಜುದಾರರನ್ನು ಆಯ್ಕೆ ಮಾಡಲು ಸೂಚನೆಗಳು:

- ಉತ್ತಮ ಹಿನ್ನೆಲೆಯನ್ನು ಹೊಂದಿದವರು
- ಸಾಕಷ್ಟು ಬಂಡವಾಳ ಹೊಂದಿರುವವರು
- ಪೂರೈಕಾ ಅಗತ್ಯಗಳಿಗೆ ಸಾಮರ್ಥ್ಯ ಇರುವವರು
- ಸಂಸ್ಥೆಯನ್ನು ನಿಭಾಯಿಸಲು ಅನುಭವ, ಲೆಕ್ಕಪತ್ರ, ಕಾರ್ಯಾಚರಣೆ ನಿಯಂತ್ರಣ ಮತ್ತು ತಾಂತ್ರಿಕ ಕೌಶಲ್ಯಗಳನ್ನು ಉಳ್ಳವರು
- ಅವಶ್ಯವಾದ ಉತ್ಪಾದನೆಯನ್ನು, ನಿರ್ಮಾಣ ಮತ್ತು ತಾಂತ್ರಿಕ ಸಲಕರಣೆಗಳನ್ನು ಪಡೆಯಲು ಸಾಮರ್ಥ್ಯ ಇರುವವರು
- ಉನ್ನತ ಮಟ್ಟದ ನೈತಿಕ ಮತ್ತು ಕಾನೂನಾತ್ಮಕ ಸಾಮರ್ಥ್ಯ ಹೊಂದಿದವರು
- ತಾವು ಅಲ್ಪಸಂಖ್ಯಾತರು, ಮಹಿಳೆಯರ ಒಡೆತನದಲ್ಲಿರುವ ವಾಣಿಜ್ಯ ಕಂಪನಿ ಅಥವಾ ಸ್ವತಃ ಅಂಗವಿಕಲ ಒಡೆತನದ ಸಂಸ್ಥೆ ಎಂದು ತೃತೀಯ ವ್ಯಕ್ತಿಯಿಂದ ಪ್ರಮಾಣ ಪತ್ರ ಹೊಂದಿರುವವರು

> **ಸರಬರಾಜು ವೈವಿದ್ಯತೆಯ ಕಾರ್ಯಕ್ರಮ ವೆಬ್‌ಸೈಟ್ ನೋಡಿಕೊಳ್ಳುವ ಕಾರ್ಪೊರೇಟ್ ಬೇಡಿಕೆ ಪೂರೈಕಾ ವಿಭಾಗಕ್ಕೆ ಬನ್ನಿ. ತನ್ನ ವಾಷಿಂಗ್‌ಟನ್ ಕಛೇರಿಗಳು ಮತ್ತು ದೇಶದ್ಯಾಂತ ಇರುವ ಕಛೇರಿಗಳಿಗೆ ವಿವಿಧ ಸರಕು-ಪದಾರ್ಥ ಸೇವೆಗಳನ್ನು ಪೂರೈಸಲು ಗುತ್ತಿಗೆಯನ್ನು ನೀಡುತ್ತದೆ. ಇದಕ್ಕಾಗಿ ಪ್ರತಿವರ್ಷವೂ ವಿಶ್ವಬ್ಯಾಂಕ್ $೬೦೦ ಮಿಲಿಯನ್ ಖರ್ಚುಮಾಡುತ್ತದೆ. ಅಲ್ಪಸಂಖ್ಯಾತರು, ಮಹಿಳೆಯರು ಹಾಗೂ ಅಂಗವಿಕಲರು ವ್ಯಾಪಾರದಲ್ಲಿ ಸಮಾನವಾಗಿ ಭಾಗವಹಿಸುವಂತೆ ಮಾಡಿ ಅವರ ವ್ಯಾಪಾರವನ್ನು ವೃದ್ಧಿ ಗೊಳಿಸುವುದುಕ್ಕೆ ವಿಶ್ವ ಬ್ಯಾಂಕ್ ಬದ್ಧವಾಗಿದೆ. ಈ ಅಂಗ ಸಂಸ್ಥೆಗಳಲ್ಲೇ ಗುತ್ತಿಗೆ ಮತ್ತು ಉಪಗುತ್ತಿಗೆ ನೀಡುವುದನ್ನು ಪ್ರೋತ್ಸಾಹಿಸಲಾಗುತ್ತದೆ.**

ಗುತ್ತಿಗೆ ಹಿಡಿಯುವ ಸರಬರಾಜುದಾರರನ್ನು ಆಯ್ಕೆ ಮಾಡುವ ಹಕ್ಕನ್ನು ವಿಶ್ವ ಬ್ಯಾಂಕ್ ಉಳಿಸಿಕೊಳ್ಳುತ್ತದೆ. ಅಂದರೆ ಎಲ್ಲರೊಡನೆ ವ್ಯವಹಾರ ಮಾಡುವುದಕ್ಕೆ ವಿಶ್ವ ಬ್ಯಾಂಕ್ ಭರವಸೆ ನೀಡುವುದಿಲ್ಲ.

ಅಂದರೆ ಎಲ್ಲವೂ ಸಮಾನವಾಗಿರುವಾಗ ಚಾರಿತ್ರಿಕವಾಗಿ ವಂಚಿತವಾದ ಗುಂಪುಗಳ ಸರಬರಾಜುದಾರರಿಗೆ ಅವಕಾಶ ನೀಡುವುದನ್ನು ವಿಶ್ವಬ್ಯಾಂಕ್ ಇಚ್ಛಿಸುತ್ತದೆ.

ಇನ್ನೂ ಒಂದು ಹೆಜ್ಜೆ ಮುಂದೆ ಸಾಗಿ ಬ್ಯಾಂಕ್ ಹೇಳುವುದೇನೆಂದರೆ ಪ್ರಧಾನವಾಹಿನಿಯಲ್ಲಿರುವ ಸರಾಬರಾಜುದಾರರು ವೈವಿಧ್ಯತೆಯ ನಿಯಮವನ್ನು ಅನುಸರಿಸುವಂತೆ ಒತ್ತಾಯಿಸುತ್ತದೆ.

ಪ್ರಧಾನವಾಹಿನಿಯ ಸರಬರಾಜುದಾರರಿಂದ ವಿಶ್ವ ಬ್ಯಾಂಕ್ ನಿರೀಕ್ಷಿಸುವುದೇನೆಂದರೆ:

- ವಿಶ್ವಬ್ಯಾಂಕ್ ಗುಂಪು
- ಸರಬರಾಜು ವೈವಿಧ್ಯತೆಯನ್ನಳವಡಿಸಿಕೊಂಡ ಕಂಪನಿಯ ಅರ್ಹತೆ

ಅಂದರೆ ಒಬ್ಬ ಸರಬರಾಜುದಾರ ನೇಮಕಾತಿಯಲ್ಲಿ ವೈವಿಧ್ಯತೆಯ ನೀತಿ ಅನುಸರಿಸದಿದ್ದಲ್ಲಿ ವಿಶ್ವಬ್ಯಾಂಕ್‌ನ ಸರಾಬರಾಜು ಗುತ್ತಿಗೆಯನ್ನು ಪಡೆಯಲು ಅರ್ಹನಾಗಿರುವುದಿಲ್ಲ.

ಮಾನ್ಯ ಪ್ರಧಾನಮಂತ್ರಿಗಳೇ,

ಹಂಚಿಕಾ ಬಂಡವಾಳಶಾಹಿ ಪದ್ಧತಿಯಲ್ಲಿ ವಿಶ್ವ ಬ್ಯಾಂಕ್ ನಂಬುವುದಾದರೆ ಹಾಗೂ ಆ ನಿಟ್ಟಿನಲ್ಲಿ ಚಾರಿತ್ರಿಕವಾಗಿ ವಂಚಿತರಾದವರಿಗೆ ಆದ್ಯತೆ ನೀಡುವುದಾದರೆ ಭಾರತೀಯ ಸರ್ಕಾರವೂ ಸಹ ಏಕೆ ಅದನ್ನು ಅನುಸರಿಸಬಾರದು? ಭಾರತೀಯ ರಾಜ್ಯಾಂಗವು ಸರಕು ಮತ್ತು ಸೇವೆಗಳ ಬಹು ದೊಡ್ಡ ಗ್ರಾಹಕವಾಗಿರುವುದರಿಂದ ಚಾರಿತ್ರಿಕವಾಗಿ ದಲಿತರು/ಆದಿವಾಸಿಗಳು ಆ ವಾಣಿಜ್ಯ ಮತ್ತು ಉದ್ಯಮಶೀಲತೆಯಿಂದ ದೂರವೇ ಉಳಿಯುವಂತೆ ಮಾಡಲಾಗಿರುವುದನ್ನು ಸರಿ ಪಡಿಸಲು ಆಗುವುದಿಲ್ಲವೆ?

ಡಬ್ಬಲ್ ಸ್ಟಾಂಡರ್ಡ್

ಫೆಬ್ರವರಿ ೨೦೦೭ರಲ್ಲಿ ಅಮೆರಿಕಾ ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆಯ (USAID) ಆಡಳಿತಾಧಿಕಾರಿಯಾದ ರ್‍ಯಾಂಡಲ್ ತೋಬಿಯಸ್ ಮಾಧ್ಯಮ ಪ್ರತಿನಿಧಿಗಳಿಗೆ ಹೀಗೆಂದಿದ್ದ, "ಭಾರತ ಈಗ ಡೋನರ್ ದೇಶ ಆಗಿರುವುದರಿಂದ ಅದಕ್ಕೆ ಇನ್ನು ಮುಂದೆ ಅಮೆರಿಕಾವು ನೆರವು ನೀಡುವುದನ್ನು ನಿಲ್ಲಿಸಲು ನಿರ್ಧರಿಸಿದೆ"

ಫೆಬ್ರವರಿ ೨೮,೨೦೦೭ರಲ್ಲಿ ಹಣಕಾಸು ಮಂತ್ರಿ ಪಿ.ಚಿದಂಬರಮ್ ತನ್ನ ಬಜೆಟ್ ಮಂಡನೆಯ ಸಂದರ್ಭದಲ್ಲಿ ರ್‍ಯಾಂಡಲ್ ತೋಬಿಯಸ್ ಹೇಳಿದ್ದನ್ನು ನಿಜವಾಗಿಸಿಯೇ ಬಿಟ್ಟ, ಶೀಘ್ರವಾಗಿ ಬೆಳೆಯುತ್ತಿರುವ ಭಾರತದಲ್ಲಿ ಅಧಿಕವಾದ ಹಣವಿದ್ದು ಅದನ್ನು ಏನು ಮಾಡಲಾಗದೆ ಸಮುದ್ರಕ್ಕೆ ಬಿಸಾಡಿದಂತೆ (ಹಿಂದೆ ಅಮೆರಿಕಾವೂ ಅಹ ಅಧಿಕವಾದ ಗೋಧಿಯನ್ನು ಪೆಸಿಫಿಕ್ ಸಾಗರಕ್ಕೆ ಎಸೆದಿ

...ತಿ) ಕಾಣುತ್ತದೆ. ಬಜೆಟಿನಲ್ಲಿ ಚಿದಂಬರಂ "ಅಧಿಕ ಮೊತ್ತದ ಸ್ಟಾಕ್"ನ್ನು ಬಿಸಾಡಿದ್ದಾನೆಂದು ಕಾಣುತ್ತದೆ. ಈ ಕೆಳಗಿನ ಸಂಗತಿಗಳನ್ನು ಗಮನಿಸಿ:

- ಗೊಬ್ಬರಗಳಿಗೆ ಸಬ್ಸಿಡಿ: ರೂ.೨೨,೪೨೨ ಕೋಟಿ
- ಸರ್ವಶಿಕ್ಷ ಅಭಿಯಾನ ರೂ.೧೦,೬೭೧ ಕೋಟಿ
- ಮಧ್ಯಾಹ್ನದ ಊಟ ಯೋಜನೆ ರೂ. ೭,೩೨೪ ಕೋಟಿ

ಅಂದರೆ ರೂ ೪೦,೪೧೭ ಕೋಟಿಯನ್ನು ಈ ಮೂರು ಯೋಜನೆಗಳಲ್ಲಿ ಮುಳುಗಿಸಲಾಗಿದೆ. ಇಂಥ ಆರ್ಥಿಕ ನೀತಿಯ ಬಗ್ಗೆ ಸಂದೇಹ ಹುಟ್ಟುವುದಿಲ್ಲವೇ?

ಅನುಕೂಲಸ್ಥರಾಗಿರುವ ಜಮೀನ್ದಾರರು ಈ ಗೊಬ್ಬರಗಳಿಗೆ ನೀಡಿದ ಸಬ್ಸಿಡಿಯನ್ನು ಕಬಳಿಸಲಿದ್ದಾರೆ. ಸರ್ವಶಿಕ್ಷ ಅಭಿಯಾನ ಎನ್ನುವುದು ಅಧಿಕಾರಶಾಹಿಯ ಲೂಟಿಕೋರತನವನ್ನಷ್ಟೇ ಬಲಪಡಿಸುತ್ತದೆ. ದಶಕಗಳ ಹಿಂದೆ ತಮಿಳುನಾಡು ಆರಂಭಿಸಿದ ಮಧ್ಯಾಹ್ನದ ಊಟ ಯೋಜನೆಯು ಮಧ್ಯವರ್ತಿಗಳ ದಂಧೆಯಲ್ಲಿ ಮುಳುಗಿದೆ. ಆದರೂ ಆ ರಾಜ್ಯದಲ್ಲಿ ಶಾಲೆ ಬಿಡುವ ಮಕ್ಕಳ ಸಂಖ್ಯೆ ಮಾತ್ರ ರಾಷ್ಟ್ರೀಯ ಸಂಖ್ಯೆಯಷ್ಟೇ ಇದೆ!

ಭಾರತ ಸರ್ಕಾರದ ಬಳಿ ಅಧಿಕ ಹಣ ಇರುವುದರಿಂದ ಅದು ಖುಷಿ ಬಂದಂತೆ ಖರ್ಚುಮಾಡಬಹುದಾಗಿದೆ. ದಲಿತರ/ಆದಿವಾಸಿಗಳ ಶಿಕ್ಷಣಕ್ಕೆ ವಿಶೇಷ ಗಮನ ಹರಿಸಲು ಸಂವಿಧಾನಾತ್ಮಕ ಸೂಚನೆ ಇರುವುದರಿಂದ ಈ ಅತ್ಯಧಿಕವಾದ ಹಣದಲ್ಲಿ ದಲಿತರ ಶಿಕ್ಷಣಕ್ಕಾಗಿ ಒಂದು ಭಾಗ ಖರ್ಚು ಮಾಡಬಹುದಾಗಿತ್ತಲ್ಲವೇ? ಭಾರತದಲ್ಲಿ ದಲಿತರ ವಿಮೋಚನೆ ಅಡಗಿರುವುದೇ ಶಿಕ್ಷಣವನ್ನು ಒಂದು ಪ್ರಧಾನ ಸಾಧನವನ್ನಾಗಿ ಬಳಸುವುದರಲ್ಲಿ. ಆದ್ದರಿಂದಲೇ ದಲಿತರಲ್ಲಿ ಒಂದು ದೊಡ್ಡ ಗುಂಪು ಈ ಶಿಕ್ಷಣವನ್ನು ಬಳಸಿ ಮುಕ್ತಿಯನ್ನು ಪಡೆದಿರುವುದನ್ನು ಕಾಣಬಹುದು. ಈ ಉನ್ನತಿಯಲ್ಲಿ ಮೆಟ್ರಿಕ್ ನಂತರದ ಶಿಕ್ಷಣಕ್ಕೆ ಭಾರತ ಸರ್ಕಾರ ನೀಡಿದ ಶಿಷ್ಯವೇತನವೇ ಪ್ರಮುಖ ಕಾರಣವಾಗಿತ್ತು.

ಈ ಶಿಷ್ಯ ವೇತನವನ್ನು ೧೯೫೧ರಲ್ಲಿ ಆರಂಭಿಸಿ ಅದಕ್ಕಾಗಿ ಹಣವನ್ನು ರಾಜ್ಯಗಳಿಗೆ ಒದಗಿಸಲಾಗಿ ಅದನ್ನು ಅಂಚೆ ವ್ಯಕ್ತಿ ಹಂಚುವಂತೆ ಪಿಯುಸಿ ಶಿಕ್ಷಣದಿಂದಲೇ ದಲಿತ ವಿದ್ಯಾರ್ಥಿಗಳಿಗೆ ಹಂಚಲಾಗುತ್ತಿತ್ತು. ಇಂಥ ಶಿಷ್ಯ ವೇತನವನ್ನು ೧೯೫೧ರಲ್ಲಿ ಒಟ್ಟು ೧೬೬೪ ದಲಿತ ವಿದ್ಯಾರ್ಥಿಗಳು ಪಡೆದಿದ್ದರು. ಇಂದು ಅಂತಹ ವಿದ್ಯಾರ್ಥಿಗಳ ಸಂಖ್ಯೆ ಎರಡು ಮಿಲಿಯನ್ ದಾಟಿದೆ.

ವರ್ಷದಲ್ಲಿ ಎರಡು ಬಾರಿ ನೀಡುವ ಈ ಶಿಷ್ಯ ವೇತನ ಮೊದಲ ತಲೆಮಾರಿನ ಯಾವುದೇ ದಲಿತ ವ್ಯಕ್ತಿ ಆಡಳಿತ ಸೇವೆ, ಡಾಕ್ಟರ್, ಇಂಜಿನಿಯರ್ ಅಥವಾ ಶಿಕ್ಷಕನಾಗಲು ಬಳಕೆಯಾಗಿದೆ ಎಂದರೆ ಅಚ್ಚರಿಯಾದೀತು. ಆದ್ದರಿಂದ ಈ ಸರ್ಕಾರಿ ಯೋಜನೆಯಿಂದ ಮಿಲಿಯ ದಲಿತರು ಪ್ರಯೋಜನ ಪಡೆದಿದ್ದಾರೆ.

ಹೀಗಿರುವಾಗ ಅದು ಮನೆ ಮಾತಾಗಿ ಬಡದಲಿತರಿಗಾಗಿಯೇ ಇದ್ದುದ್ದಾಗಿದೆ. ಯಾವ ಕುಟುಂಬಗಳ ಮಾಸಿಕ ಆದಾಯ ರೂ.೮,೩೩೩ಕ್ಕೆ ಮೀರದಂತಿರುವವರಿಗೆ ಅಥವಾ ವಾರ್ಷಿಕ ಆದಾಯ ಒಂದು ಲಕ್ಷ ಇರುವವರು ಮಾತ್ರ ಈ ಸ್ಕಾಲರ್‌ಶಿಪ್‌ನ ಫಲಾನುಭವಿಗಳಾಗುತ್ತಾರೆ.

ಮತ್ತೊಂದು ರೀತಿಯಲ್ಲಿ ಹೇಳುವುದಾದರೆ ೧೫ ವರ್ಷಗಳ ಸೇವೆ ಸಲ್ಲಿಸಿರುವ ಕೆಳ ಹಂತದ ಗುಮಾಸ್ತನಾಗಿರುವ ವ್ಯಕ್ತಿಯ ಮಕ್ಕಳು ಆ ಶಿಷ್ಯವೇತನಕ್ಕೆ ಯೋಗ್ಯರಲ್ಲ. ಹೀಗಿರುವಾಗ ಅತ್ಯಧಿಕ ಹಣದ ಸ್ಟಾಕ್ ಇಟ್ಟುಕೊಂಡಿರುವ ಚಿದಂಬರಂ ಈ ಬಜೆಟ್‌ನಲ್ಲಿ ಆ ಸ್ಕಾಲರ್‌ಶಿಪ್ ಯೋಜನೆಯನ್ನು ಹೇಗೆ ಮಾನ್ಯ ಮಾಡಿದ್ದಾರೆ?

ಜನಸಾಮಾನ್ಯರ ವಿತ್ತ ಮಂತ್ರಿ ಎಂದು ಹೆಸರು ಪಡೆದಿರುವ ಚಿದಂಬರಂ ಈ ಸ್ಕಾಲರ್‌ಶಿಪ್ ಯೋಜನೆಗಾಗಿ ಮೀಸಲಿಟ್ಟಿರುವ ಹಣವೆಂದರೆ ರೂ.೬೧೧ ಕೋಟಿಯಷ್ಟೆ!

ಹಾಗಾದರೆ ಈಗ ನಾವು ಲೆಕ್ಕಾಚಾರ ಮಾಡಿ ಒಬ್ಬ ದಲಿತ ವಿದ್ಯಾರ್ಥಿಗೆ ತಿಂಗಳಿಗೆ ಎಷ್ಟು ಹಣ ದೊರೆಯುತ್ತದೆಯೆಂದು ಹಾಸ್ಟೆಲ್ ವ್ಯವಸ್ಥೆ ಇಲ್ಲದೆ ೧೨ನೇ ತರಗತಿಯಲ್ಲಿರುವ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿ ತಿಂಗಳಿಗೆ ರೂ.೧೪೦ ಅಥವಾ ದಿನಕ್ಕೆ ರೂ.೪.೬೬ನ್ನು ಪಡೆಯುತ್ತಾನೆ/ಳೆ. ಹಾಸ್ಟೆಲ್‌ಗಳಲ್ಲಿರುವ ವಿದ್ಯಾರ್ಥಿಗಳು ದಿನಕ್ಕೆ ರೂ.೭.೮೩ನ್ನು ಪಡೆಯುತ್ತಾರೆ. ವೈದ್ಯಕೀಯ, ಇಂಜಿಯರಿಂಗ್, ಮ್ಯಾನೇಜ್‌ಮೆಂಟ್ ಮುಂತಾದ ಉನ್ನತ ಶಿಕ್ಷಣದಲ್ಲಿ ತೊಡಗಿರುವ ವಿದ್ಯಾರ್ಥಿಗಳಿಗೆ ದಿನಕ್ಕೆ ೧೧ ರೂ ದೊರೆತರೆ, ಅದೇ ಹಾಸ್ಟೆಲ್‌ನಲ್ಲಿರುವವರು ದಿನಕ್ಕೆ ೨೪.೬೬ನ್ನು ಪಡೆಯುತ್ತಾರೆ.

ಇದೇ ಬಜೆಟ್‌ನಲ್ಲಿ ಚಿದಂಬರಂ ಒಂದು ಲಕ್ಷ ಹಾಗೂ ಮೆರಿಟ್ ಸ್ಕಾಲರ್‌ಶಿಪ್ ಅನ್ನು ತಿಂಗಳಿಗೆ ೫೦೦ ರೂಗಳಂತೆ ದಿನಕ್ಕೆ ೧೬.೬೬ ರೂಗಳನ್ನು ೯,೧೦,೧೧ನೇ ತರಗತಿಗಳಲ್ಲಿ ಓದುತ್ತಿರುವವರಿಗೆ ಅವರ ಜಾತಿಯನ್ನು ಪರಿಗಣಿಸದೆ ನೀಡಲಾಗುತ್ತಿದೆ.

ಅಂದರೆ ದಲಿತ ವಿದ್ಯಾರ್ಥಿಗಳು ೧೧ ಮತ್ತು ೧೨ನೇ ತರಗತಿಯಲ್ಲಿ ಅಭ್ಯಾಸ ಮಾಡುತ್ತಿರುವಾಗ ಅವರಿಗೆ ದೊರಕುವ ಹಣ ರೂ.೪.೬೬ ದಿನವೊಂದಕ್ಕೆ ಪಡೆದರೆ Means-Cum-Merit ಯೋಜನೆಯಲ್ಲಿ ವಿದ್ಯಾರ್ಥಿಯೊಬ್ಬನಿಗೆ ದಿನಕ್ಕೆ ರೂ.೧೬.೬೬ ದೊರೆಯುತ್ತದೆ. ಇಲ್ಲಿ ಇರುವ ಸಮಸ್ಯೆ ಎಂದರೆ ಎರಡು ರೀತಿಯ ಜನಕ್ಕೆ ಒಂದು ದೇಶ ಎರಡು ಕಾನೂನು!

ಸ್ವಲ್ಪ ಯೋಚಿಸಿ. ಯುಪಿಎ ಸರ್ಕಾರ ಹೃದಯಹೀನವಾಗುತ್ತಿದೆಯಾ? ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಮತ್ತು ಚಿದಂಬರಂರನ್ನು ೧೦, ಜನಪತ್‌ಗೆ ಕರೆದು ಈ ವ್ಯತ್ಯಾಸ ಹೇಗಾಯಿತೆಂದು ವಿವರಣೆಯನ್ನು ಪಡೆಯಬೇಕು ಎಂದರೆ ಅದು ಸೋನಿಯಾ ಗಾಂಧಿಯಿಂದ ತುಂಬಾ ನಿರೀಕ್ಷಿಸಿದಂತೆ ಆಗುತ್ತದೆಯೇ?

ಮಾನ್ಯ ವಿತ್ತ ಮಂತ್ರಿಯವರೇ,

ನೀವು ಮಧ್ಯಾಹ್ನದ ಊಟ ಯೋಜನೆಗಾಗಿ ರೂ.೭,೩೨೩ ಕೋಟಿಯನ್ನು ಈ ಬಜೆಟ್‌ನಲ್ಲಿ ಮೀಸಲಿಟ್ಟಿದ್ದೀರಿ. ಆದರೆ ದಲಿತ/ಆದಿವಾಸಿಗಳಿಗಾಗಿ ರೂಪಿಸಲಾದ ಭಾರತದ ಯಶಸ್ವೀ ಸಾರ್ವಜನಿಕ ಯೋಜನೆಯಾದ ಮೆಟ್ರಿಕ್ ನಂತರದ ಸ್ಕಾಲರ್‌ಶಿಪ್ ಯೋಜನೆಗೆ ಕೇವಲ ೬೧೧ ಕೋಟಿ ರೂ.ಗಳನ್ನು

ಈ ಆಹಾರ ಟ್ರಾಪ್‌ನ್ನು ಕೊನೆಗೊಳಿಸಿ

ಮೀಸಲಿಟ್ಟಿದ್ದೀರಿ.

ಮಧ್ಯಾಹ್ನ ಊಟ ಯೋಜನೆಯನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಸಮರ್ಥಿಸಿಕೊಳ್ಳುತ್ತಾ ಈ ತರ್ಕವನ್ನು ಮಂಡಿಸುತ್ತದೆ: "ಈ ಕಾರ್ಯಕ್ರಮವು ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಿಸುವ ಉದ್ದೇಶವನ್ನು ಹೊಂದಿದ್ದು ವಿದ್ಯಾರ್ಥಿ ದಾಖಲಾತಿ, ಮತ್ತು ಹಾಜರಾತಿಯನ್ನು ಹೆಚ್ಚಿಸುತ್ತದೆ. ಹಾಗೆಯೇ ಅದು ಮಕ್ಕಳ ಪೌಷ್ಟಿಕತೆಯನ್ನು ಹೆಚ್ಚಿಸುತ್ತದೆ"

ನಿಮ್ಮ ಅಭಿಪ್ರಾಯದಲ್ಲಿ ಆಹಾರ ಬಡಮಕ್ಕಳನ್ನು ಶಾಲೆಗೆ ಆಕರ್ಷಿಸುತ್ತದೆ. ಹಾಗಾದರೆ ಈ ಕೆಳಗಿನ ಅಂಶಗಳನ್ನು ಪರಿಗಣಿಸಿ:

– ೧೯೯೮–೯೯ ಅವಧಿಯಲ್ಲಿ ಶಾಲೆಗೆ ಹೋಗುತ್ತಿದ್ದ ೬–೧೧ ವರ್ಷ ವಯಸ್ಸಿನ ೨.೨೨ ಕೋಟಿ ದಲಿತ ಮತ್ತು ೧.೦೯ ಕೋಟಿ ದಲಿತ ಮಕ್ಕಳಿದ್ದರು.

– ಅವರಲ್ಲಿ ೧.೯೫ ಕೋಟಿ ದಲಿತರು ಮತ್ತು ೯೩ ಲಕ್ಷ ಆದಿವಾಸಿ ಮಕ್ಕಳು ಈಗಾಗಲೇ ಶಾಲೆಯಲ್ಲಿದ್ದವರು. (ಖಜಟಜಭಿಣಜಜ ಇಜಣಭಿಚಿ–ಣಾಂಟಚಿಟ ಖಣಚಿಣಖಣಭಿ, ೧೯೯೮–೯೯, ಓಜತಿ ಆಜಟ್ಝು, ೨೦೦೦). ಅಂದರೆ ಈ ಅಂಕಿ–ಅಂಶಗಳು ಮೆಟ್ರಿಕ್ ಪೂರ್ವದ ಯೋಜನೆಯ ದಿನಗಳಿಗೆ ಸಂಬಂಧಿಸಿದ್ದು.

ವಿತ್ತ ಮಂತ್ರಿಯವರೇ, ಯಾವಾಗ ಮೆಟ್ರಿಕ್ ಯೋಜನೆ ಇರಲಿಲ್ಲವೋ ಆಗ ದಲಿತ/ಆದಿವಾಸಿ ಮಕ್ಕಳ ಶಾಲಾ ದಾಖಲಾತಿ ಶೇ. ೧೦೦ಕ್ಕೆ ಹತ್ತಿರವಾಗಿತ್ತು, ಇದನ್ನು ಹೇಗೆ ವಿವರಿಸುತ್ತಿರಾ?

ಈ ಅಂಕಿ–ಅಂಶಗಳು ತೋರಿಸುವುದೇನೆಂದರೆ, ೧. ದಲಿತ/ಆದಿವಾಸಿ ಪೋಷಕರಿಗೆ ಶಿಕ್ಷಣದ ಮೌಲ್ಯ ತಿಳಿದಿದೆ, ೨. ಅವರರೆಲ್ಲಾ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಗಂಭೀರವಾಗಿ ಯೋಚಿಸುತ್ತಾರೆ. ಆದ್ದರಿಂದ ಮಕ್ಕಳನ್ನು ಶಾಲೆಗೆ ಕಳುಹಿಸುವುದು ಶಿಕ್ಷಣಕ್ಕಾಗಿಯೇ ಹೊರತು ಆಹಾರಕ್ಕಾಗಿ ಅಲ್ಲ.

ಶಾಲೆಯಲ್ಲಿ ವಿದ್ಯಾರ್ಥಿಗಳ ಉಳಿದುಕೊಳ್ಳುವಿಕೆ (Retention)ಯನ್ನು ಮತ್ತೊಂದು ಕಾರಣವಾಗಿ ಮಧ್ಯಾಹ್ನದ ಊಟ ಯೋಜನೆಗೆ ನೀಡಲಾಗಿದೆ. ಈ ಕೇಳಗಿನ ಅಂಶಗಳನ್ನು ಗಮನಿಸಿ:

– ೧೯೯೮–೯೯ ಅವಧಿಯಲ್ಲಿ ಶಾಲೆಗೆ ಹೋಗುತ್ತಿದ್ದ ದಲಿತ ಮಕ್ಕಳು ೯೮.೮೧ ಲಕ್ಷ ಮತ್ತು ೪೯ ಲಕ್ಷ ಆದಿವಾಸಿ ಮಕ್ಕಳು ೧೧–೧೪ ವಯಸ್ಸಿನವರಾಗಿದ್ದರು. (VI-VIII)

– ಅವರಲ್ಲಿ ೬೧.೩೫ ಲಕ್ಷ ದಲಿತ ಮಕ್ಕಳು ಮತ್ತು ೨೫.೫೬ ಮಂದಿ ಆದಿವಾಸಿ ಮಕ್ಕಳು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಾಖಲಾತಿಯನ್ನು ಪಡೆದಿದ್ದರು (VI-VIII)

ಈ ಅಂಕಿ–ಅಂಶ ವಿತ್ತ ಮಂತ್ರಿಗಳೇ ಶಾಲೆಯಲ್ಲಿ ಉಳಿದುಕೊಳ್ಳುತ್ತಾರೆನ್ನುವ ನಿಮ್ಮ ಗ್ರಹಿಕೆಯನ್ನು ಶಾಲೆ ತೊರೆಯುವ ಮಕ್ಕಳು ಅಧಿಕ ವಾಗಿರುವುದರಿಂದ ನಿಮ್ಮ ಮಧ್ಯಾಹ್ನದ ಯೋಜನೆ ಕೇವಲ ಪ್ರಾಥಮಿಕ ಶಾಲಾ ಹಂತಕ್ಕಷ್ಟೇ.

ಮಧ್ಯಾಹ್ನ ಊಟ ಯೋಜನೆಯನ್ನು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ಸಮರ್ಥಿಸಿಕೊಳ್ಳುತ್ತಾ ಆ ಯೋಜನೆಯ ಧ್ಯೇಯ ಹೀಗಿದೆ ಎಂದು ಹೇಳುತ್ತೀರಿ: "ಆಹಾರ ಉಡುಗೋರೆಯ ಮೂಲಕ ವಂಚಿತ ಸಮುದಾಯಗಳ ಬಡ ಮಕ್ಕಳು ಶಾಲೆಗೆ ನಿತ್ಯ ಹೋಗುವಂತೆ ಪ್ರೋತ್ಸಾಹಿಸುವುದು ಮತ್ತು ತರಗತಿಯಲ್ಲಿ ಅವರ ಏಕಾಗ್ರತೆಯನ್ನು ಹೆಚ್ಚಿಸುವುದು" ಇದು ಸ್ವಲ್ಪ ವಿಚಿತ್ರ ಎನಿಸುತ್ತದೆ.

ಪೌಷ್ಟಿಕತೆಯ ಬಗ್ಗೆ ಯೋಚಿಸುವಾಗ ನೀವು ಎಂಥ ಆಹಾರವನ್ನು ಈ ಶಾಲೆಗಳಲ್ಲಿ ನೀಡಲಾಗುತ್ತದೆ ಎನ್ನುವುದರ ಬಗ್ಗೆ ಪರಿಶೀಲಿಸಿದ್ದೀರೇನು? ರಾಜಧಾನಿ ನಗರಗಳಲ್ಲೇ ಆ ಊಟವನ್ನು ತಿಂದ ಮಕ್ಕಳು ಅಸ್ವಸ್ಥರಾಗುತ್ತಿರುವ ಬಗ್ಗೆ ವರದಿಗಳು ಬರುತ್ತಿರುವಾಗ ಹಳ್ಳಿಗಾಡಿನ ಬಗ್ಗೆ ಯೋಚಿಸಬೇಕೆ?

ಇನ್ನು ಶಾಲೆಯಲ್ಲಿ ಉಳಿಯುವಿಕೆಯ ಬಗ್ಗೆ ಮಾತಾನಾಡುವುದಾದರೆ ನಿಮ್ಮ ವರದಿಯಲ್ಲೇ ಶಿಕ್ಷಣದ ಬಗ್ಗೆ ದೊರೆಯುವ ಈ ಅಂಕಿ–ಅಂಶಗಳು ನಿಮ್ಮ ಮಾತನ್ನು ಅಲ್ಲಗಳೆಯುತ್ತವೆ. ಪ್ರಾಥಮಿಕ ಹಂತದಲ್ಲಿ (I-V) ಶಾಲೆ ಬಿಡುವ ಮಕ್ಕಳ ಸಂಖ್ಯೆ ಶೇ.೪೨.೩೯ರಷ್ಟಿದೆ. ಅದು ಹಿರಿಯ ಪ್ರಾಥಮಿಕ ಶಾಲೆಗೆ ಹೋಗುವಾಗ ಶೇ.೫೬.೮೨ಕ್ಕೇರುತ್ತದೆ.

ವಿತ್ತ ಮಂತ್ರಿಗಳೇ ನೀವೇಕೆ ಹಿರಿಯ ಪ್ರಾಥಮಿಕ ಶಾಲಾ ಡ್ರಾಪ್‌ಔಟ್ ಬಗ್ಗೆ ಯೋಚಿಸುತ್ತಿಲ್ಲ? ಅಲ್ಲಿ ಕೆಲವು ಕಾರಣಗಳಿವೆ:

– ಹಳ್ಳಿಗಳಲ್ಲಿ ಬಡ ಜನರಿಗೆ ವರ್ಷದಲ್ಲಿ ಆರು ತಿಂಗಳು ಕೆಲಸ ಸಿಗುವುದು ಕಷ್ಟವಾಗಿದೆ. ಬಿತ್ತನೆ ಮತ್ತು ಕೋಯ್ಲಿನ ಸಂದರ್ಭದಲ್ಲಿ ಕುಟುಂಬದ ಎಲ್ಲರೂ ಕೆಲಸ ಮಾಡಿದರೆ ಉಳಿದ ಆರು ತಿಂಗಳನ್ನು ಹೇಗೂ ನಿಭಾಯಿಸಿಕೊಳ್ಳಬಹುದು.

– ೬–೧೧ ವಯಸ್ಸಿನ ಮಕ್ಕಳು ಉದ್ಯೋಗದಲ್ಲಿ ತೊಡಗಿಸಿಕೊಳ್ಳಲಾಗುವುದಿಲ್ಲ. ಆದರೆ ಅವರು ಯಾವಾಗ ೧೧ ವರ್ಷ ದಾಟುತ್ತಾರೋ ಆಗ ಅವರನ್ನು ದುಡಿಮೆಗೆ ಹಚ್ಚಿಬಿಡಬಹುದು.

– ಹಳ್ಳಿಗಳಲ್ಲಿ ಬಿತ್ತನೆ ಮತ್ತು ಕೋಯ್ಲಿನ ಕಾಲದಲ್ಲಿ ಶೈಕ್ಷಣಿಕ ಕಾಲಮಾನದೊಡನೆ ಸಂಘರ್ಷ ಏರ್ಪಡುತ್ತದೆ. ಉದಾಹರಣೆಗೆ ಶಾಲೆ ಆರಂಭವಾಗುವಾಗ (ಜುಲೈನಲ್ಲಿ) ಭತ್ತ ನಾಟಿ ಮಾಡಲಾಗುತ್ತದೆ. ಭತ್ತ ಕೋಯ್ಲು ಮಾಡುವಾಗ ಗೋಧಿ ಭಿತ್ತಲಾಗುತ್ತದೆ. ಆ ಸಮಯದಲ್ಲಿ ಶಾಲೆಯಲ್ಲಿ ಅರ್ಧ ವಾರ್ಷಿಕ ಪರೀಕ್ಷೆಗಳು ನಡೆಯುತ್ತವೆ. ಹಾಗೆಯೇ ಗೋಧಿ ಮತ್ತು ಜೋಳವನ್ನು ಕೊಯ್ಯುವಾಗ ಅಚಿತಿಮ ಪರೀಕ್ಷೆಗಳು ನಡೆಯುತ್ತವೆ. ಇದು ನೇರವಾಗಿ ಶಿಕ್ಷಣದ ಮೇಲೆ ಪರಿಣಾಮ ಬೀರುತ್ತದೆ.

ಈ ಕಾರಣದಿಂದ ಮಕ್ಕಳಿಗೆ ದಿನವೊಂದಕ್ಕೆ ೩ ರೂ. ಪರಿಹಾರವಾಗಿ ಪೋಷಕರಿಗೆ ನೀಡಿದಲ್ಲಿ ಮಕ್ಕಳು ಶಾಲೆ ಬಿಡುವುದನ್ನು ತಪ್ಪಿಸಿದಂತಾಗುತ್ತದೆ. ಅದಕ್ಕಾಗಿ ವರ್ಷಕ್ಕೆ ೫೦೦೦ ಕೋಟಿ ರೂ.ಗಳಾಗುತ್ತದೆ.

ಆದರೆ ನೀವು ೭,೩೨೪ ಕೋಟಿ ರೂ.ಗಳನ್ನು ಮಧ್ಯಾಹ್ನದ ಊಟ ಯೋಜನೆಗಾಗಿ ಖರ್ಚು ಮಾಡುತ್ತೀರಿ. ಅದನ್ನು ಯಾರೂ ಕೇಳಿರಲಿಲ್ಲ. ವಿತ್ತ ಮಂತ್ರಿಗಳೇ ಮಧ್ಯಾಹ್ನದ ಊಟ ಯೋಜನೆಯು ಮಕ್ಕಳ ಪ್ರಾಥಮಿಕ ಶಿಕ್ಷಣದ ಕಲಿಕೆಗೆ ಅಡ್ಡಿಯಾಗುತ್ತಿದೆಯೆಂದು ನಿಮಗೆ ತಿಳಿದಿದೆಯಾ? ಈ ಯೋಜನೆ ಮಕ್ಕಳ ರುಚಿಯನ್ನು ತೀವ್ರವಾಗಿ ಬದಲಾಯಿಸುತ್ತಿದೆ. ಈ ಮಧ್ಯಾಹ್ನದ ಊಟ ಯೋಜನೆಗೆ ಮೊದಲು ಮಕ್ಕಳು ಶಿಕ್ಷಣಕ್ಕಾಗಿ ಶಾಲೆಗೆ ಹೋಗುತ್ತಿದ್ದರು.

ಈಗ ಶಾಲೆಗಳಿಗೆ ಹೋಗುವುದು ಊಟಕ್ಕಾಗಿ. □

ಸಂವಾದ

ಚಂದಾದಾರರಲ್ಲಿ ಮನವಿ

'ಸಂವಾದ' ಪ್ರತಿ ತಿಂಗಳ ಮೊದಲನೆ ವಾರದೊಳಗಾಗಿ ತಮಗೆ ತಲುಪುತ್ತದೆ. ಹಾಗೇನಾದರೂ ಮೊದಲನೆಯ ವಾರದ ಒಳಗಾಗಿ ತಮಗೆ ಪತ್ರಿಕೆ ಸಿಗದಿದ್ದರೆ, ದಯವಿಟ್ಟು ನಿಮ್ಮ ಮನೆ ವ್ಯಾಪ್ತಿಗೆ ಬರುವ ಅಂಚೆ ಕಛೇರಿಯಲ್ಲಿ ಒಮ್ಮೆ ವಿಚಾರಿಸಿ – ಪತ್ರಿಕೆ ತಲುಪದಿರುವ ಬಗೆಗೆ ಅಂಚೆ ಕಛೇರಿಗೆ ಲಿಖಿತ ದೂರು ನೀಡಿ ಅವರ ಪ್ರತಿಯೊಂದನ್ನು ನಮಗೆ ಕಳುಹಿಸಬೇಕಾಗಿ ಕೋರುತ್ತೇವೆ.

ನವೀಕರಣ

ಈಗಾಗಾಲೇ ಚಂದಾ ಅವಧಿ ಮುಗಿದಿರುವ ಚಂದಾದಾರರು ಹೊಸ ವರ್ಷದ ಚಂದಾ ಹಣವನ್ನು ನೀಡುವ ಮೂಲಕ ನವೀಕರಿಸಿಕೊಳ್ಳಬೇಕು. ಚಂದಾ ಅವಧಿ ಮುಗಿಯುವ ೨–೩ ತಿಂಗಳ ಮೊದಲೇ ಈ ಕುರಿತು ಚಂದಾದಾರರಿಗೆ ಮಾಹಿತಿ ನೀಡಲಾಗುವುದು. ಅವಧಿ ಮುಗಿದ ಕೂಡಲೇ ಚಂದಾ ನವೀಕರಣ ಮಾಡಿಕೊಳ್ಳದವರಿಗೆ 'ಸಂವಾದ'ವನ್ನು ಕಳುಹಿಸಲಾಗುವುದಿಲ್ಲ. ಅದುದರಿಂದ ಚಂದಾ ಅವಧಿ ಮುಗಿದಿರುವ ಎಲ್ಲರೂ ಕೂಡಲೇ ನವೀಕರಣ ಮಾಡಿಕೊಳ್ಳಬೇಕೆಂದು ವಿನಂತಿಸುತ್ತೇವೆ. ನಿಮಗೆ ಪತ್ರಿಕೆ ಕಳುಹಿಸುವಾಗ ಅಂಟಿಸುವ ವಿಳಾಸದ ಚೀಟಿಯ ಮೇಲೆ ನಿಮ್ಮ ಚಂದಾ ಅವಧಿಯನ್ನು ನಮೂದಿಸಲಾಗಿರುತ್ತದೆ. ದಯವಿಟ್ಟು ಗಮನಿಸಿ.

ಪತ್ರ ಬರೆಯುವಾಗ ತಪ್ಪದೇ ನಿಮ್ಮ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

–ವ್ಯವಸ್ಥಾಪಕರು

ಮನುಜಂಗೆ ವಿನಯವೇ ಭೂಷಣ

ಬುದ್ಧಾಯಣ

೨೦

ಅನಾಥಪಿಂಡಿಕನಿಗೆ ಬುದ್ಧ ಕೋಸಲಕ್ಕೆ ಬಂದು ರಾಜಧಾನಿಯಾದ ಶ್ರಾವಸ್ತಿಯ ಚೇತನ ವನದಲ್ಲಿ ತಂಗಿದ್ದಾನೆಂಬ ವಿಷಯ ತಿಳಿದು ಬಹು ಸಂತೋಷವಾಯಿತು. ಬುದ್ಧನನ್ನು ಕಂಡು ತನ್ನ ಗೌರವ ಮತ್ತು ವಂದನೆ ಯನ್ನು ಸಲ್ಲಿಸುವ ಸಲು ವಾಗಿ ಬುದ್ಧನನ್ನು ಸಂಧಿಸಿ ಆತನಿಗೆ ಅಪಾರ ಭಕ್ತಿ ಮತ್ತು ಶ್ರದ್ಧೆಯಿಂದ ವಂದಿಸಿ ಅವನ ಸಮೀಪ ಕುಳಿತು, ಅವನ ಮನದಲ್ಲಿ ಮನೆ ಮಾಡಿದ ಕೆಲವು ವಿಷಯಗಳ ಬಗ್ಗೆ ಬುದ್ಧ ನಲ್ಲಿ ಹೀಗೆ ಪ್ರಶ್ನಿಸಿದ; 'ಗುರುದೇವಾ, ಮನುಷ್ಯರು ತಮ್ಮ ನಡವಳಿಕೆಯಲ್ಲಿ ಕಲಿಯಬೇಕಾದ ಮುಖ್ಯ ಸಂಗತಿ ಏನು?'

ಸಿ. ಎಚ್. ರಾಜಶೇಖರ್

ಅನಾಥಪಂಡಿಕ ಬುದ್ಧನ ಅನುಯಾಯಿ. ಉಪಾಸಕ, ಪೋಷಕ ಮತ್ತು ಮಹಾದಾನಿ ಆತ ಕೋಸಲದ ದೊರೆ ಪಸೇನದಿಯ ಆಸ್ಥಾನದಲ್ಲಿ ಕೋಶಾಧಿಕಾರಿ ಆಗಿದ್ದವನು ಬಡವರು ಮತ್ತು ಅನಾಥ ಮಕ್ಕಳ ಆಶ್ರಯದಾತನಾಗಿದ್ದ. ರಾಜನಿಂದಲೂ ಪ್ರಜೆಗಳಿಂದಲೂ ಸದ್ಗುಣ ಸಂಪನ್ನ ಎಂದು ಕರೆಸಿಕೊಂಡವನು. ಸ್ವತಃ ಆಗರ್ಭ ಶ್ರೀಮಂತ. ಅವನ ಶ್ರೀಮಂತಿಕೆಗೆ ಒಂದು ಸಣ್ಣ ನಿದರ್ಶನವೆಂದರೆ, ರಾಜಕುಮಾರ ಚೇತನನಿಂದ ಚೇತನವನವನ್ನು ಕೊಂಡು ಅಲ್ಲಿ ಬುದ್ಧನಿಗಾಗಿ ಮತ್ತು ಅವನ ಭಿಕ್ಷು ಸಹೋದರರು ತಂಗಲು ಅನುಕೂಲವಾಗಲೆಂದು ಒಂದು ವಿಹಾರ ನಿರ್ಮಿಸಿ ಬುದ್ಧನಿಗೆ ದಾನವಾಗಿ ಕೊಡಲು ನಿರ್ಧರಿಸಿದ.

ರಾಜಕುಮಾರ ಚೇತನನಿಗೆ ತನ್ನ ಚೇತನವನದ ಮೇಲೆ ಎಲ್ಲಿಲ್ಲದ ಪ್ರೀತಿ ಚೇತನವನವನ್ನು ಕೊಡಲಾರೆ ಎಂದ ಬದಲು 'ಈ ಚೇತನವನದ ನೆಲದ ತುಂಬ ಚಿನ್ನದ ನಾಣ್ಯವನ್ನು ಹಾಸಿ ಭರ್ತಿ ಮಾಡಿದರೆ ಮಾತ್ರ ಆ ವನವನ್ನು ಮಾರಬಲ್ಲೆ' ಎಂದು ಷರತ್ತನ್ನು ವಿಧಿಸಿದ. ಈ ಷರತ್ತನ್ನು ಮನ್ನಿಸಿದ ಅನಾಥಪಿಂಡಿಕ ಚೇತನವನದ ನೆಲಹಾಸಿನ ತುಂಬ ಚಿನ್ನದ ನಾಣ್ಯವನ್ನು ಹಾಸಿದ. ಆಗ ಚೇತನನಿಗೆ ಅನ್ನಿಸಿತು. ಅನಾಥಪಿಂಡಿಕನ ಉದ್ದೇಶ ಘನವಾದುದ್ದು ಮತ್ತು ದೂರ ದೃಷ್ಟಿಯುಳ್ಳದ್ದು ಎಂದು. ಆಗ ತನ್ನ ತಪ್ಪಿಗಾಗಿ ಕ್ಷಮೆ ಕೇಳಿ ಚೇತನವನದ ನೆಲ ನಿನ್ನದು. ಆದರೆ ಅಲ್ಲಿರುವ ಮಾವಿನ ಮರಗಳು ನನ್ನವೆಂದು ಬುದ್ಧನಿಗೆ ದಾನ ಮಾಡಿದ ನಂತರ ಅನಾಥಪಿಂಡಿಕ ಆ ಚೇತನವನದಲ್ಲಿ ಭವ್ಯವೂ ವಿಶಾಲವೂ ಆದ ಬೌದ್ಧ ವಿಹಾರವೊಂದನ್ನು ಕಟ್ಟಿಸಿ ಬುದ್ಧನಿಗೆ ದಾನ ಮಾಡಿ ಕೀರ್ತಿವಂತನಾದ.

ಅಂತಹ ಅನಾಥಪಿಂಡಿಕನಿಗೆ ಬುದ್ಧ ಕೋಸಲಕ್ಕೆ ಬಂದು ರಾಜಧಾನಿಯಾದ ಶ್ರಾವಸ್ತಿಯ ಚೇತನ ವನದಲ್ಲಿ ತಂಗಿದ್ದಾನೆಂಬ ವಿಷಯ ತಿಳಿದು ಬಹು ಸಂತೋಷವಾಯಿತು. ಬುದ್ಧನನ್ನು ಕಂಡು ತನ್ನ ಗೌರವ ಮತ್ತು ವಂದನೆಯನ್ನು ಸಲ್ಲಿಸುವ ಸಲುವಾಗಿ ಬುದ್ಧನನ್ನು ಸಂಧಿಸಿ ಆತನಿಗೆ ಅಪಾರ ಭಕ್ತಿ ಮತ್ತು ಶ್ರದ್ಧೆಯಿಂದ ವಂದಿಸಿ ಅವನ ಸಮೀಪ ಕುಳಿತು. ಅವನ ಮನದಲ್ಲಿ ಮನೆ ಮಾಡಿದ ಕೆಲವು ವಿಷಯಗಳ ಬಗ್ಗೆ ಬುದ್ಧನಲ್ಲಿ ಹೀಗೆ ಪ್ರಶ್ನಿಸಿದ;

'ಗುರುದೇವಾ, ಮನುಷ್ಯರು ತಮ್ಮ ನಡವಳಿಕೆಯಲ್ಲಿ ಕಲಿಯಬೇಕಾದ ಮುಖ್ಯ ಸಂಗತಿ ಏನು?'

'ಎಲೈ ಅನಾಥಪಿಂಡಿಕನೇ, ವಿನಯವೇ ಸರಿ! ಅದು ವಿವೇಕದ ಮತ್ತೊಂದು ರೂಪ. ವಿದ್ಯೆ ಮತ್ತು ಜ್ಞಾನದ ಕೊಡುಗೆ ಧರ್ಮದ ಮೂಲ. ವಿನಯವಂತನೇ ನಿಜ ಜ್ಞಾನಿ. ಅವನು ಎಲ್ಲಿಯೂ ಸಲ್ಲುತ್ತಾನೆ. ಅವನೇ ಜಾಗೃತ ಮತ್ತು ಪ್ರಜ್ಞಾವಂತ. ಈ ಜಗದ ನಶ್ವರತೆಯನ್ನು ಬೇರೆಲ್ಲರಿಗಿಂತ ಚೆನ್ನಾಗಿ ಅರಿತವನು. ಹಾಗಾಗಿ ಮನುಷ್ಯನಿಗೆ ವಿನಯವೇ ಭೂಷಣ'.

'ಗುರುದೇವಾ ಗೃಹಸ್ಥನಾದವನು ಬಯಸುವ ಸಂತೋಷದಾಯಕ ಮತ್ತು ಹಿತಕರವಾದರೂ ಗಳಿಸಲು ಕಷ್ಟವಾದಂತ ವಸ್ತುಗಳು ಯಾವುವು?'

'ಅನಾಥಪಿಂಡಿಕನೇ, ನಿಯಮಬದ್ಧವಾದ ಸಂಪತ್ತು ಗಳಿಕೆ ನಿಮ್ಮ ಸಂಬಂಧಿಗಳೂ ಸಹ ಸಕ್ರಮವಾಗೇ ಸಂಪತ್ತು ಗಳಿಸುವಂತೆ ನೋಡಿಕೊಳ್ಳಬೇಕು. ಬಹಳ ಕಾಲ ಬದುಕಿ ದೀರ್ಘಾಯುಷ್ಯವನ್ನು ಅನುಭವಿಸಬೇಕು ಅದನ್ನು ಪಡೆಯಲು ನಾಲ್ಕು ಕ್ರಮಗಳಿವೆ ಅವೆಂದರೆ; ವಿಶ್ವಾಸ. ಸದಾಚಾರ ಔದಾರ್ಯ ಮತ್ತು ಜ್ಞಾನ'.

'ಗುರುದೇವಾ, ವಿಶ್ವಾಸದ ಅಗತ್ಯವೇನು? ಅದರ ಸ್ವರೂಪವೇನು? ಅದನ್ನು ಪಡೆಯುವ ಬಗೆ ಹೇಗೆ?

'ಅನಾಥಪಿಂಡಿಕನೇ, ವಿಶ್ವಾಸದ ಮೂಲ ಇರುವುದು ಜ್ಞಾನದಲ್ಲಿ ತನ್ನನ್ನು ತಾನು ಅರಿತವನಲ್ಲಿ ಮಾತ್ರ ವಿಶ್ವಾಸ ಮೂಡಲು ಸಾಧ್ಯ ಅಂತವನು ಆಚರದಲ್ಲಿಯೂ ವಿಚಾರದಲ್ಲಿಯೂ ಪರಿಪೂರ್ಣನೂ ಪವಿತ್ರನೂ ಆಗಿರುವ ಇವನೇ ಮನುಕುಲದ ಪ್ರಶಿಕ್ಷಕ. ಯಾರು ತನಗೆ ತಾನೇ ಗುರುವಾಗಿರುತ್ತಾನೋ ಅವನಲ್ಲಿ ಮಾತ್ರ ಆತ್ಮವಿಶ್ವಾಸ ಮತ್ತು ನಂಬಿಕೆ ಮೂಡಲು ಸಾಧ್ಯ. ಅವನೇ ಸರ್ವ ಶ್ರೇಷ್ಠ ಜ್ಞಾನಿ'

'ಗುರುದೇವಾ, ಸಂಪತ್ತು ಗಳಿಸುವಲ್ಲಿ ಸದಾಚಾರದ ಅಗತ್ಯವೇನು?'

'ಅನಾಥ ಪಿಂಡಿಕನೇ, ಸದಾಚಾರವೆಂಬುದು ಮನುಷ್ಯನಿಗೆ ವರವಿದ್ದಂತೆ ಕೊಲ್ಲದಿರುವುದು ಕಳ್ಳತನ ಮಾಡದಿರುವುದು ವ್ಯಭಿಚಾರ ಮಾಡದಿರುವುದು. ಸುಳ್ಳು ಹೇಳದಿರುವುದು, ಮದ್ಯಪಾನ ಮಾಡದಿರುವುದು, ಇದು ಮನುಷ್ಯನ ಸದಾಕಾಲದ ರಕ್ಷಾಕವಚ'.

'ಗುರುದೇವಾ, ಔದಾರ್ಯ ವರವೇನು?'

'ಅನಾಥಪಿಂಡಿಕನೇ, ಗೃಹಸ್ಥನು ಔದಾರ್ಯದ ಮೂಲಕ ದೋಷವೆಂಬ ಕಳಂಕದಿಂದ ಮುಕ್ತನಾಗಿರುತ್ತಾನೆ. ಉದಾರನೂ, ಕೊಡುಗೈ ವೀರನೂ ಆಗಿರುತ್ತಾನೆ. ಕಾಣಿಕೆಗಳನ್ನೂ ಕೊಡುವ ಮೂಲಕ ಆನಂದ ಪಡೆಯುತ್ತಾನೆ. ಒಳ್ಳೆಯವನೆಂಬ ಕಾರಣದಿಂದ ಬೇಡಿಸಿಕೊಳ್ಳುವವನೂ ಮತ್ತು ಕಾಣಿಕೆಗಳನ್ನು ಕೊಡುವುದುಕ್ಕೆ ತನ್ನನ್ನು ಮುಡಿಪಾಗಿಟ್ಟುಕೊಂಡವನೂ ಆಗಿರುತ್ತಾನೆ'.

'ಗುರುದೇವಾ, ಜ್ಞಾನದ ವರದಾನಗಳೇನು?'

'ಅನಾಥಪಿಂಡಿಕನೇ, ಜ್ಞಾನದಿಂದ ಲೋಭ, ದೋಷ, ಕೇಡಿನ ಮೂಲ. ಸೋಮಾರಿತನ, ಅಸಡ್ಡೆ, ಚಂಚಲತೆ, ಆವೇಶ ಮತ್ತು ಸಂಶಯಗಳನ್ನು ನೀಗಿಕೊಳ್ಳುತ್ತಾನೆ ಈ ಮೂಲಕ ಚಿತ್ತ ಶುದ್ಧಿಯನ್ನು, ಚಿತ್ತ ಶಾಂತತೆಯನ್ನು ಪಡೆದುಕೊಳ್ಳುತ್ತಾನೆ. ಅಂತವನು ಮಹಾವಿವೇಕಿಯೂ, ಅತಿಶಯ ಜ್ಞಾನವುಳ್ಳವನು ಸ್ಪಷ್ಟ ದೃಷ್ಟಿ ಮತ್ತು ಸಂಪೂರ್ಣ ಅರಿವುಳ್ಳ ವ್ಯಕ್ತಿ ಆಗುತ್ತಾನೆ. ಹೀಗೆ ನೈತಿಕತೆಯಿಂದಲೂ, ಶ್ರಮದಿಂದಲೂ, ತೋಳ್ಬಲ ಮತ್ತು ಬೆವರಿನಿಂದಲೂ ಸಕ್ರಮವಾಗಿ ಗಳಿಸಿದ ಸಂಪತ್ತು ಒಂದು ಮಹಾನ್ ವರವೇ ಹೌದು. ಅಂತಹ ಗೃಹಸ್ಥನು ಸುಖ ಸಂತೋಷವನ್ನು ಕಾಪಾಡಿಕೊಳ್ಳುತ್ತಾನೆ. ತನ್ನ ನಂಬಿದವರನ್ನು ರಕ್ಷಿಸುತ್ತಾನೆ'.

'ಗುರುದೇವಾ, ವೃದ್ಧ ತಂದೆ ತಾಯಿಗಳಿಗೆ ಮಗನು ತೋರುವ ವಿನಯ ಮತ್ತು ಕರ್ತವ್ಯಗಳೇನು?'

'ಅನಾಥಪಿಂಡಿಕನೇ. ಬದುಕಿನ ಮೂಲ ತತ್ತ್ವವೇ ಪಡೆಯುವುದು ಮತ್ತು ಕೊಡುವುದು! ಬಾಲ್ಯದಿಂದ ಯೌವನಾವಸ್ಥೆಯ ತನಕ ತಂದೆ ತಾಯಿಗಳು ಮಗನನ್ನು ಸಾಕಿ ಸಲಹುತ್ತಾರೆ. ತಮ್ಮ ಪ್ರೀತಿಯನ್ನು ಧಾರೆ ಎರೆದಿರುತ್ತಾರೆ. ಅವನು ದುಷ್ಕೃತ್ಯ ಮಾಡುವಾಗ ಅವನನ್ನು ನಿಯಂತ್ರಿಸುತ್ತಾರೆ. ಸದ್ಗುಣ ಬೆಳೆಸಿಕೊಳ್ಳಲು ಉಪದೇಶಿಸು

ತ್ತಾರೆ. ಅವನ ಉದ್ಯೋಗದಲ್ಲಿ ಅವನಿಗೆ ಶಿಕ್ಷಣ ನೀಡುತ್ತಾರೆ. ಅವನಿಗೆ ಯೋಗ್ಯ ವಧುವನ್ನು ಆಯ್ಕೆ ಮಾಡಿ ಮದುವೆ ಮಾಡುತ್ತಾರೆ. ಕಾಲ ಬಂದಾಗ ಅವನಿಗೆ ತಮ್ಮ ವಂಶದ ಆಸ್ತಿಯನ್ನು ವಹಿಸಿಕೊಡುತ್ತಾರೆ. ಆದ್ದರಿಂದ ಮಗನಾದವನು ವೃದ್ಧ ತಂದೆ ತಾಯಿಗಳಿಗೆ ಆಶ್ರಯ ನೀಡಬೇಕು. ಅವನ ಪಾಲಿನ ಕರ್ತವ್ಯ ಮಾಡಬೇಕು ಕುಲದ ಸಂಪ್ರದಾಯವನ್ನು ಮಾರ್ಯದೆಯನ್ನು ಕಾಪಾಡಬೇಕು. ಪಡೆದುದ್ದನ್ನು ಕೊಡುವ ಮೂಲಕ ಋಣಮುಕ್ತನಾಗಬೇಕು. ಅವನೇ ವಿವೇಕಿ ಮತ್ತು ವಿಮುಕ್ತ!'

'ಗುರುದೇವಾ, ಶಿಷ್ಯನಾದವನು ತನ್ನ ಗುರುವಿಗೆ ತೋರುವ ವಿನಯ ಮತ್ತು ಕಾಣಿಕೆ ಏನು?'

'ಅನಾಥಪಿಂಡಿಕನೇ, ಗುರುವಿನ ಪ್ರೀತಿ ಮತ್ತು ಕೊಡುಗೆ ಅಪಾರವಾದದ್ದು. ಗುರುವಿನ ಮನಸ್ಸು ಸದಾ ಕಾಲವೂ ಯೋಗ್ಯ ಶಿಷ್ಯನನ್ನು ಅರಸುತ್ತಿರುತ್ತದೆ. ಆದ್ದರಿಂದ ಶಿಷ್ಯನು ಗುರುವು ಬಂದಾಗ ಎದ್ದುನಿಂತು ನಮಸ್ಕರಿಸಿ ಆಜ್ಞೆಗಾಗಿ ಕಾಯಬೇಕು. ಕಲಿಯುವಾಸಕ್ತಿ ತೋರಿಸಬೇಕು. ಗುರುವಿನ ಬೋಧನೆಯನ್ನು ಗಮನವಿಟ್ಟು ಕೇಳಬೇಕು. ತಿಳಿಯದ ವಿಷಯವನ್ನು ಮತ್ತೊಮ್ಮೆ ತಿಳಿಯಬೇಕು. ಸರಿ ಕಂಡಿದ್ದನ್ನು ಎಂದು, ತಪ್ಪು ಕಂಡಿದ್ದನ್ನು ತಪ್ಪೆಂದು ವಾದಿಸಿ ಚರ್ಚಿಸಬೇಕು. ಯಾವುದೇ ವಿಷಯವನ್ನು ಸಮರ್ಪಕವಾಗಿ ಅರ್ಥೈಸಿಕೊಳ್ಳಬೇಕು. ತಾನು ಕಲಿಯಲು ತೊಡಗಿದ ವಿಷಯದಲ್ಲಿ ಕಠಿಣ ಪರಿಶ್ರಮ ವಹಿಸಿ ಪರಿಪೂರ್ಣನಾಗಬೇಕು. ಏಕೆಂದರೆ ಗುರುವು ತಾನು ಪ್ರತಿಕ್ಷಣ ಪಡೆದ ಪೂರ್ಣ ಜ್ಞಾನವನ್ನು ಶಿಷ್ಯನಿಗೆ ಧಾರೆ ಎರೆಯಲು ಕಾತರಿಸುತ್ತಿರುತ್ತಾನೆ. ತನ್ನ ಶಿಷ್ಯ ಯಾವುದಕ್ಕೆ ಅಂಟಿಕೊಳ್ಳುತ್ತಾನೋ ಅದಕ್ಕೆ ಚನ್ನಾಗಿ ಅಂಟಿಕೊಳ್ಳುವಂತೆ ಮಾಡುತ್ತಾನೆ. ಅವನ ಗೆಳೆಯರು ಹಾಗೂ ಸಂಗಡಿ ಮುಂದೆ ಅವನನ್ನು ಪ್ರಶಂಸಿಸುತ್ತಾರೆ. ಅವನಿಗೆ ಎಲ್ಲ ಕಡೆಯಲ್ಲೂ ರಕ್ಷಣೆ ಸಿಗುವಂತೆ ಮಾಡುತ್ತಾರೆ. ಇಂತಹ ಗುರುವಿನ ಸೇವೆ ಮಾಡಬೇಕು. ಕಲಿತ ವಿದ್ಯೆ ಮತ್ತು ವಿನಯಕ್ಕೆ ತಾನೂ ಭೂಷಣನೆಂದು ಸಾಭೀತುಪಡಿಸಬೇಕು. ಗುರುವಿನಿಂದ ಪಡೆದ ಪ್ರತಿಕ್ಷಣವನ್ನು ನೂರಾರು ಜನರಿಗೆ ಮತ್ತೆ ಧಾರೆ ಎರೆದು ಅವರ ದುಃಖ ನಿವಾರಣೆ ಮಾಡಬೇಕು. ಇದೇ ಗುರುವಿಗೆ ಸಲ್ಲಿಸುವ ನಿಜ ಕಾಣಿಕೆ'.

'ಗುರುದೇವಾ, ಗಂಡನಾದವನು ತನ್ನ ಹೆಂಡತಿಗೆ ತೋರುವ ವಿನಯ, ಸಮಾನತೆ ಮತ್ತು ಪ್ರೀತಿ ಹೇಗಿರಬೇಕು?'

'ಎಲೈ ಅನಾಥಪಿಂಡಿಕನೇ, ದಾಂಪತ್ಯದ ಯಶಸ್ವಿಗೆ ಹೆಂಡತಿಯೇ ಮುಖ್ಯ ಕಾರಣ. ಎಲ್ಲಿ ಹೆಣ್ಣಿಗೆ ಬೆಲೆ ಇಲ್ಲವೋ? ಎಲ್ಲಿ ನೆಲೆ ಇಲ್ಲವೋ? ಸಮಾನತೆಗೆ ಅರ್ಥವಿಲ್ಲವೋ? ಅಲ್ಲಿ ಸಂಸಾರ ಹರಿದಗೂಡು. ಯಾವುದೇ ಕಾರಣಕ್ಕೂ ಗಂಡನಿಗಿಂತ ಹೆಣ್ಣೇ ಹೆಚ್ಚು ದಕ್ಷಳು ಮತ್ತು ದೂರದೃಷ್ಟಿಯುಳ್ಳವಳು. ಆದ್ದರಿಂದ ಹೆಂಡತಿಗೆ ಮಾರ್ಯಾದೆ, ಸೌಜನ್ಯ ನಿಷ್ಠೆ ಮತ್ತು ಗೌರವ ಸಲ್ಲಿಸುವ ಮೂಲಕ ಆದರಿಸಬೇಕು. ಏಕೆಂದರೆ ಹೆಂಡತಿಯು ಗಂಡನನ್ನು ಪ್ರೀತಿಸುತ್ತಾಳೆ. ತನ್ನ ಮತ್ತು ತನ್ನ ಗಂಡನ ಕಡೆಯ ಬಂಧುಗಳಿಗೆ ಆದರಾತಿಥ್ಯವನ್ನು ಕೊಡುವ ಮೂಲಕ ನಿಷ್ಠೆ ತೋರಿಸುತ್ತಾಳೆ. ಅವನು ತಂದುದನ್ನು ಕಾಪಾಡುವ ಮೂಲಕ ತನ್ನ ಶ್ರಮ ಮತ್ತು ಕೌಶಲ್ಯವನ್ನು ಪ್ರದರ್ಶಿಸುತ್ತಾಳೆ. ತನ್ನ ವಶದ ಕುಡಿಯನ್ನು ರಕ್ಷಿಸಿ ಬೆಳೆಸುತ್ತಾಳೆ. ಸಂಪತ್ತನ್ನು ವೃದ್ಧಿಸುತ್ತಾಳೆ. ಮನೆಗೆ ಕಾವಲಾಗಿ ಕುಲಕ್ಕೆ ಕೀರ್ತಿವಂತಳಾಗಿ ಗಂಡನ ಬಾಳಿಗೆ ಸದಾ ಬೆಳಕಾಗಿರುತ್ತಾಳೆ. ಈಕೆಯ ಸೇವೆಯೇ ಬದುಕಿಗೊಂದು ಘನತೆ'



'ಗುರುದೇವಾ, ಸಭ್ಯ ಗೃಹಸ್ಥನೊಬ್ಬನು ತನ್ನ ಸ್ನೇಹಿತರು ಮತ್ತು ಸಂಗಡಿಗರೊಂದಿಗೆ ಹೇಗೆ ವರ್ತಿಸಬೇಕು?

'ಎಲೈ ಅನಾಥಪಿಂಡಿಕನೇ. ಔದಾರ್ಯ, ಸೌಜನ್ಯ, ಸಂವೃದ್ಧಿ ಮತ್ತು ಸಮಾನತೆಯಿಂದ ಅವರನ್ನು ಕಾಣಬೇಕು. ನುಡಿದಂತೆ ನೆಡೆಯಬೇಕು. ಉಪಚರಿಸಬೇಕು. ಏಕೆಂದರೆ ಅವನ ಸ್ನೇಹಿತರು ಮತ್ತು ಆಪ್ತರು ಅವನನ್ನು ಪ್ರೀತಿಸುತ್ತಾರೆ. ಆಪತ್ತಿನಲ್ಲಿ ರಕ್ಷಿಸುತ್ತಾರೆ. ಕಷ್ಟ ಮತ್ತು ಸಂಕಟದ ಸಮಯದಲ್ಲಿ ಆಶ್ರಯ ನೀಡುತ್ತಾರೆ. ಅವನ ಕುಟುಂಬಕ್ಕೆ ದಾಕ್ಷಿಣ್ಯ ತೋರಿಸುತ್ತಾರೆ.'

'ಗುರುದೇವಾ, ಧಣಿ ಮತ್ತು ನೌಕರರ ಸ್ನೇಹ ಸಂಬಂಧ ಮತ್ತು ವಿನಯ ಹೇಗಿರಬೇಕು?'

'ಎಲೈ ಅನಾಥಪಿಂಡಿಕನೇ, ಧಣಿಯು ತನ್ನ ನೌಕರರ ಶಕ್ತಿ ಸಾಮರ್ಥ್ಯಕ್ಕೆ ಅನುಗುಣವಾಗಿ ಕೆಲಸಗಳನ್ನು ಕೊಡುವುದರ ಮೂಲಕವೂ, ಅವರು ಅನಾರೋಗ್ಯಕ್ಕೆ ತುತ್ತಾದಾಗ ಉಪಚರಿಸುವುದರ ಮೂಲಕ ನೆರವು ನೀಡಬೇಕು. ಅವರೊಡನೆ ಅಪರೂಪದ ಭಕ್ಷ್ಯಗಳನ್ನು ಹಂಚಿಕೊಳ್ಳಬೇಕು. ಆಗಾಗ್ಗೆ ಅವರಿಗೆ ಬಿಡುವು ಕೊಡುವ ಕೊಡುವ ಮನಸ್ಸಿನ ವ್ಯಾಕುಲವನ್ನು ನೀಗಿಕೊಳ್ಳಲು ರಜೆಯನ್ನು ಕೊಡುವ ಮೂಲಕ ನೋಡಿಕೊಳ್ಳಬೇಕು. ಏಕೆಂದರೆ ನೌಕರರು ತಮ್ಮ ಒಡೆಯನನ್ನು ಪ್ರೀತಿಸುತ್ತಾರೆ! ತನ್ನ ಧಣಿಗಿಂತ ಬೇಗ ಏಳುತ್ತಾರೆ. ಅವನು ಮಲಗಿದ ನಂತರ ಅವರು ವಿರಮಿಸುತ್ತಾರೆ. ಧಣಿ ಕೊಟ್ಟ ಕೊಡುಗೆಯಲ್ಲಿಯೇ ಅವರು ತೃಪ್ತಿ ಪಡುತ್ತಾರೆ. ಚೆನ್ನಾಗಿ ಕೆಲಸ ಮಾಡುತ್ತಾರೆ. ಅವನನ್ನು ಶ್ಲಾಘಸುತ್ತಾರೆ. ಮತ್ತು ಅವನ ಕೀರ್ತಿಯನ್ನು ಹರಡುತ್ತಾರೆ.

'ಗುರುದೇವಾ, ಕುಲೀನರಾದ ಗೃಹಸ್ಥನು ಧರ್ಮ ಬೋಧಕರಾದ ಭಿಕ್ಷು ಸಹೋದರರನ್ನು ಹೇಗೆ ಕಾಣಬೇಕು?

'ಎಲೈ ಅನಾಥಪಿಂಡಿಕನೇ, ಕಾಯಾ, ವಾಚ ಮನಸ್ಸಾ ಒಲವು ತೋರುವ ಮೂಲಕ. ಅವರಿಗಾಗಿ ತನ್ನ ಮನೆ ಬಾಗಿಲು ಸದಾ ತೆರೆದಿಟ್ಟಿರುವ ಮೂಲಕ. ತಾತ್ಕಾಲಿಗ ಅಗತ್ಯಗಳನ್ನು ಪೂರೈಸುವ ಮೂಲಕ, ಅವರನ್ನು ನೋಡಿಕೊಳ್ಳಬೇಕು. ಏಕೆಂದರೆ, ಧರ್ಮ ಬೋಧಕರು ಗೃಹಸ್ಥನನ್ನು ದುಷ್ಕೃತ್ಯ ಮಾಡದಂತೆ ತಡೆ ಹಿಡಿಯುತ್ತಾರೆ. ಸುಕೃತ್ಯ ಮಾಡುವಂತೆ ಒತ್ತಾಯಿಸುತ್ತಾರೆ. ದಯಾಭಾವದಿಂದ ಅವನನ್ನು ಪ್ರೀತಿಸುತ್ತಾರೆ. ಅವನು ಕೇಳಿರದ ವಿಷಯಗಳನ್ನು ಬೋಧಿಸುತ್ತಾರೆ. ಅದಕ್ಕಿಂತ ಮುಖ್ಯವಾಗಿ ಈಗಾಗಲೇ ಅವನು ತಿಳಿದಿರುವುದನ್ನು ಅವರು ತಿದ್ದಿ ಶುದ್ಧ ಮಾಡುತ್ತರೆ'.

'ಗುರುದೇವಾ, ನಮ್ಮ ತೀರ್ಮಾನಗಳು ಹೇಗಿರಬೇಕು?'

'ಎಲೈ ಅನಾಥಪಿಂಡಿಕನೇ, ತೀರ್ಮಾನಗಳ ಮೇಲೆಯೇ ಬದುಕು ನಿಂತಿದೆ. ಆಯ್ಕೆಯ ಮೇಲೆಯೇ ಬದುಕು ನಿಂತಿದೆ. ನಾವು ಒಳಿತನ್ನು ಆಯ್ದುಕೊಂಡರೆ. ಒಳಿತಿನ ಪ್ರತಿನಿಧಿ ಆಗುತ್ತೇವೆ. ಕೇಡನ್ನು ಆಯ್ಕೆ ಮಾಡಿಕೊಂಡರೆ ಕೇಡಿನ ಪ್ರತಿನಿಧಿ ಆಗುತ್ತೇವೆ. ಎಲ್ಲ ಕಾಳಕ್ಕೂ ಮನಜರಿಗೆ ಸಲ್ಲುವುದು ಒಳಿತು ಮಾರ! ಆದ್ದರಿಂದ ನಾವು ಸತ್ಯ ಮತ್ತು ಧರ್ಮವನ್ನು, ವಿದ್ಯೆ ಮತ್ತು ವಿವೇಕವನ್ನು ವಿವೇಚನೆ ಮತ್ತು ವಿನಯವನ್ನು, ನನ್ನ ಮತ್ತು ಇತರರ ಒಳಿತೆಂದು ತೀರ್ಮಾನಿಸಬೇಕು. ಇದು ಒಮ್ಮೆ ಬಿಸಾಡಿದ್ದನ್ನು ತಂದು ನಿಲ್ಲಿಸಿದಂತಾಗುತ್ತದೆ. ಅವ್ಯಕ್ತವಾದುದನ್ನು, ವ್ಯಕ್ತ ವಾದುದನ್ನು, ವ್ಯಕ್ತ ಪಡಿಸಿದಂತಾಗುತ್ತದೆ. ಗೊತ್ತುಗುರಿ ಇಲ್ಲದೆ ತಿರುಗುತ್ತಿದ್ದವರಿಗೆ ದಾರಿ ತೋರಿಸಿದಂತಾಗುತ್ತದೆ. ಕತ್ತಲಲ್ಲಿ ಇದ್ದವರಿಗೆ ದೀಪ ಹಚ್ಚಿದಂತೆಯೂ ಕಣ್ಣಿಲ್ಲದವರಿಗೆ ಕಣ್ಣು ಕೊಟ್ಟಂತೆಯೂ ಆಗುತ್ತದೆ' ಎಂದನು ಬುದ್ಧ. ಈ ಮಾತುಗಳಿಂದ ಪ್ರಭಾವಿತನಾದ ಪೂಜ್ಯನಾತ ಪಿಂಡಿಕನು ಹೀಗೆ ತನ್ನ ಕೃತಜ್ಞತೆಯನ್ನು ಅರ್ಪಿಸಿದ;

'ಪ್ರಭು ನಿಮ್ಮ ವಾದ ಅದ್ಭುತ ಪ್ರಭು ಅದ್ಭುತ...! ನಿಮ್ಮ ಚಿಂತನೆ ಸುಂದರ ಪ್ರಭು, ಸುಂದರ...!! ನಿಮ್ಮ ಸಾನಿಧ್ಯವೇ ಜ್ಞನದ ದೇಗುಲ...!!!' ಎಂದು ನಮಿಸಿದ.

□

'SAMVADA' Kannada Monthly, Apr 2007 RNI-KAR KAN/2002/9246 CPMG/KA/BGW-706/2006-08
Office of Posting: RAJAJINAGAR HO, Date of Posting: 27-28 of Every Month

ಸುಂದರ ಕರ್ನಾಟಕಕ್ಕೆ ಸುವರ್ಣ ಮಹೋತ್ಸವ

ಸುಮಾರು ೨೦೦೦ ವರ್ಷಗಳ ಇತಿಹಾಸ ಕನ್ನಡಿಗರದು. ನಾನಾ ಕಾರಣಗಳಿಂದಾಗಿ ಬೇರೆ ಬೇರೆ ಭಾಗಗಳಲ್ಲಿ ಚದುರಿ ಹೋಗಿದ್ದ ಕನ್ನಡಿಗರು ಮತ್ತೆ ನವೆಂಬರ್ ೧, ೧೯೫೬ ರಂದು ಒಂದಾದರು. ಇದು ಏಕೀಕೃತ ಕರ್ನಾಟಕ ಉದಯವಾದ ಸುದಿನ. ಈ ಸಾಧನೆಗಾಗಿ ಆಲೂರು ವೆಂಕಟರಾಯರಾದಿಯಾಗಿ ಅಸಂಖ್ಯಾತ ಸಾಹಿತಿಗಳು, ಕಲಾವಿದರು ಮತ್ತು ವಿವಿಧ ರಂಗಗಳ ಗಣ್ಯರು ಹಾಗೂ ಜನಸಮುದಾಯದ ಪರಿಶ್ರಮ ಮತ್ತು ತ್ಯಾಗವಿದೆ. ಇವರೆಲ್ಲರಿಗೂ ಇಂದು ನಮ್ಮ ನಮನ.

ಕರ್ನಾಟಕ –೫೦ ವರ್ಷಗಳ ಒಂದು ಅವಲೋಕನ

* ಸರ್ಕಾರದ ಆಡಳಿತ ನಿರ್ವಹಣೆಗಾಗಿ ವಿನೂತನ ಶೈಲಿಯ ವಿಧಾನಸೌಧದ ನಿರ್ಮಾಣ.
* "ಉಳುವವನಿಗೆ ಭೂಮಿ" ಕಾಯಿದೆಯನ್ನು ಜಾರಿಗೊಳಿಸಿದ ಭಾರತದ ಮೊದಲ ರಾಜ್ಯ.
* ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪ್ರತ್ಯೇಕ ಆಯೋಗ ರಚಿಸಿ, ರಾಷ್ಟ್ರಕ್ಕೆ ಮಾದರಿಯಾದ ರಾಜ್ಯ.
* ಆಡಳಿತ ವಿಕೇಂದ್ರೀಕರಣದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಯಶಸ್ವಿಯಾಗಿ ಜಾರಿಗೆ ತಂದ ಮೊಟ್ಟ ಮೊದಲ ಮಾದರಿ ರಾಜ್ಯ.
* ಸಾಕ್ಷರತೆಯಲ್ಲಿ ಗಣನೀಯ ಸಾಧನೆ–ಕೇವಲ ಶೇ. ೨೪ ರಷ್ಟಿದ್ದ ಸಾಕ್ಷರತೆ ಈಗ ಶೇ. ೭೧ಕ್ಕೆ ಏರಿಕೆ.
* ಮಹಿಳೆಯರಿಗೆ ಉದ್ಯೋಗ ಮತ್ತು ಆಡಳಿತದಲ್ಲಿ ಮೀಸಲಾತಿ.
* ನೀರಾವರಿ ಸಾಮರ್ಥ್ಯ– ೨೩.೮೪ ಲಕ್ಷ ಹೆಕ್ಟೇರ್ ಜಮೀನಿಗೆ ನೀರಾವರಿ ಸೌಲಭ್ಯ.
* ವಿಶ್ವ ಸಂಸ್ಥೆಯ ಪ್ರಶಂಸೆ ಮತ್ತು ಪ್ರಶಸ್ತಿಗೆ ಪಾತ್ರವಾದ "ಭೂಮಿ" ಯೋಜನೆಯಡಿ ರೈತರಿಗೆ ಕಂಪ್ಯೂಟರ್ ಮೂಲಕ ಪಹಣಿ ವಿತರಿಸಿದ ಪ್ರಪ್ರಥಮ ರಾಜ್ಯ.

ಕರ್ನಾಟಕ ಸುವರ್ಣ ಮಹೋತ್ಸವದ ಈ ಶುಭ ಸಂದರ್ಭದಲ್ಲಿ ನಮ್ಮ ನಾಡಿನ ಅಪೂರ್ವ ಸಂಸ್ಕೃತಿ ಮತ್ತು ಭವ್ಯ ಪರಂಪರೆಯನ್ನು ಎತ್ತಿ ಹಿಡಿಯೋಣ. ಅದರ ಉಜ್ವಲ ಬೆಳಕಿನಲ್ಲಿ ರಾಜ್ಯದ ಭವ್ಯ ಭವಿಷ್ಯವನ್ನು ರೂಪಿಸಲು ಕಂಕಣಬದ್ಧರಾಗೋಣ.

ಕರ್ನಾಟಕ ವಾರ್ತೆ
Karnataka Information